ಇದುವೇ ಜೀವನ

# ಸಾಕ್ಷರತೆ

# TRUE EDUCATION

# ಸಾಹಿತ್ಯ

ಡಾ॥ ಸಿ. ರಾಮಸ್ವಾಮಿ M.B.B.S., Ph.D., ( U.S.A. )

ಪುನರ್ಜನ್ಮ ಸಂಶೋಧನ ಕೇಂದ್ರ

# ಇದುವೇ ಜೀವನ ಸಾಕ್ಷರತೆ
## ಸಂಗೀತ ಶಾಸ್ತ್ರದ ಸೌರಭ !
## ಕನ್ನಡ ಸಾಹಿತ್ಯದ ಮಕರಂದ !!
## ಮಾನವ ಸಂಸ್ಕೃತಿಯ ಸಂವೇದ !!!

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುನರ್ಜನ್ಮ ಪ್ರಕಾಶನದ ಈ ಸಂಗೀತ–ಸಾಹಿತ್ಯ–ಸಂಸ್ಕೃತಿಯ ಪ್ರಚಾರ ।
ವಿಶ್ವ ಸಾಹಿತ್ಯದ ವಿಶ್ವ ಮಾನವ ಸಂಸ್ಕೃತಿಯ ಝೇಂಕಾರ ॥
ಇದುವೇ ಕನ್ನಡ ಸಾಹಿತ್ಯದ ಶೃಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುನರ್ಜನ್ಮ ಸಂಶೋಧನ ಕೇಂದ್ರದ ಈ ಜನ್ಮಾಂತರ ಜ್ಞಾನಸಾರ ।
ಸರ್ವಧರ್ಮಗಳ ಸಹಿಷ್ಣುತೆಗೆ ನೀಡಲಿದೆ ವಿನೂತನ ಆಧಾರ ॥
ಇದುವೇ ಭಾರತ ಸಂಸ್ಕೃತಿಯ ಶೃಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುರಾತನ ಕಾಲದ ಈ ಪುನರ್ಜನ್ಮ ಸುಜ್ಞಾನ ಸುವಿಚಾರ ।
ಮಾನವ ಕುಲಕ್ಕೆ ನೀಡಲಿದೆ ವಿನೂತನ ವಿಶ್ವಶಾಂತಿಯ ಆಧಾರ ॥
ಇದುವೇ ವಿಶ್ವಶಾಂತಿಗೆ ವಿವೇಕಯುತ ನಿರ್ಧಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಪುನರ್ಜನ್ಮ ಸಂಶೋಧನ ಕೇಂದ್ರದ ಈ ಪುನರ್ಜನ್ಮ ಜ್ಞಾನಸಾರ ।
ಸರ್ವದೇಶ ಧರ್ಮಗಳಿಗೂ ನೀಡಲಿದೆ ಸುಖಿನೋಭವ ಸಾಕ್ಷಾತ್ಕಾರ ॥
ಇದುವೇ ಮಾನವ ಬದುಕಿನ ಬಾಳಬಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥
ಜನುಮ ಜನುಮ ಜ್ಞಾನದ ಈ ಮಾನವ ಅಂತರ್‌ಜ್ಞಾನ ಸಂಸ್ಕಾರ ।
ವಿಶ್ವಜನತೆಗೆ ನೀಡಲಿದೆ ದಿವ್ಯ ಆತ್ಮಜ್ಞಾನದ ಸುಜ್ಞಾನ ಸಾಕ್ಷಾತ್ಕಾರ ॥
ಇದುವೇ ಮಾನವ ಜೀವನ ಅಂತಿಮ ಸಾಕ್ಷಾತ್ಕಾರ ॥

ಡಾ॥ ಸಿ. ರಾಮಸ್ವಾಮಿ.

# ಸಾಹಿತ್ಯ ಮಕರಂದ
# ಸಾಕ್ಷಾರತೆಯ ಎರಡನೇಯ ಭಾಗ

ಡಾ|| ಸಿ. ರಾಮಸ್ವಾಮಿ.


– ಲೇಖಕರು –

**ಡಾ|| ಸಿ. ರಾಮಸ್ವಾಮಿ M.B.B.S., Ph.D. ( U.S.A. )**

ಲೇಖಕ – ಸಂಪಾದಕ – ಪುನರ್ಜನ್ಮ ಸಂಶೋಧಕ

ನಿರ್ದೇಶಕ

**ಪುನರ್ಜನ್ಮ ಸಂಶೋಧನ ಕೆಂದ್ರ**

ನಂ. 101, ಶ್ರೀ ಅಪಾರ್ಟ್ ಮೆಂಟ್ಸ್, ಕೃಷ್ಣ ಅಡ್ಡರಸ್ತೆ,

ಬಸವನಗುಡಿ, ಬೆಂಗಳೂರು – 500 004.



– ಪ್ರಕಾಶಕರು –

ಶ್ರೀಮತಿ ಬಿ.ಎಲ್. ಮಂಗಳಗೌರಿ. B.Sc., B.Ed.

**ಪುನರ್ಜನ್ಮ ಪ್ರಕಾಶನ**

ನಂ. 101, ಶ್ರೀ ಅಪಾರ್ಟ್ ಮೆಂಟ್ಸ್, ಕೃಷ್ಣ ಅಡ್ಡರಸ್ತೆ,

ಬಸವನಗುಡಿ, ಬೆಂಗಳೂರು – 500 004.

ದೂರವಾಣಿ : 2661 5449

# ಸಾಹಿತ್ಯ ಶಾಸ್ತ್ರದ ಮಕರಂದ
# ಸಾಕ್ಷಾರತೆಯ ಎರಡನೇಯ ಭಾಗ

ಡಾ॥ ಸಿ. ರಾಮಸ್ವಾಮಿ.

**PUBLISHER**
**Smt. B. L. Mangala Gowri.** B.Sc. B.Ed.
**PUNARJANMA PUBLICATIONS**

**COPYRIGHT BY PUBLISHER / AUTHOR**
( Subjected to Bangalore Jurisdiction )

**First Edition :** August 2013
**COPIES : Unlimited** Free distribution
Through E-Mail ; Web site & Print media

**PRICE :** Free distribution only

ವಿಶ್ವಮಾನವ ಸಂಸ್ಕೃತಿಯ ಸಾಕ್ಷರತೆ = ಸಂಗೀತ – ಸಾಹಿತ್ಯ – ಸಂಸ್ಕೃತಿ,
ಸಾರ್ಥಕತೆ – ಸಾಕ್ಷಾತ್ಕಾರ – ಜೀವನ್ಮುಕ್ತಿ
ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ
ಮನಸ್ಸಿನ ರಹಸ್ಯ – ಮನೋರೋಗಗಳ ರಹಸ್ಯ – ಸೃಷ್ಟಿಯ ರಹಸ್ಯ
ಮಾನವ ಜನಾಂಗದ ಪುನರುತ್ಥಾನ ಮತ್ತು ವಿಶ್ವಶಾಂತಿ ಸ್ಥಾಪನೆ
ಈ ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನ ಸಂದೇಶವನ್ನೂ
ಮತ್ತು
ವಿಶ್ವಶಾಂತಿಯ ಅಮರ ಆದೇಶವನ್ನೂ ಮಾನವಜನಾಂಗದಲ್ಲಿ ಪ್ರಸರಿಸುವ ಉದ್ದೇಶದಿಂದ
ಪುನರ್ಜನ್ಮ ಸಂಶೋಧನ ಕೇಂದ್ರದ ಈ ಉಚಿತ ಪ್ರಕಟಣೆ.

**GRAPHIC DESIGNER Smt. R. Sushma CRISSP VISIONS**

**PUBLISHED BY: PUNARJANMA PRAKASHNA,**
**Shree apartments, Krishna Road Cross**
**Basavanagudi, Bangalore - 560 004.**
**Karnataka I N D I A**

# ಪರಿವಿಡಿ


| ಅಧ್ಯಾಯ | ವಿವರ | ಪುಟ |
|---|---|---|
| ಇದುವೇ ಜೀವನ ಸಾಕ್ಷರತೆ | | 1 |
| ಆಧ್ಯಾತ್ಮಿಕ ಕ್ರಾಂತಿಯಿಂದ ವಿಶ್ವಶಾಂತಿ | | 2 |
| ಸಾಕ್ಷರತೆ | | 3 |
| ಪರಿವಿಡಿ | | 5 |
| ಮೊದಲಮಾತು | | 7 |
| ಮುನ್ನುಡಿ | | 9 |
| ನಿವೇದನೆ | | 12 |
| ಕೃತಜ್ಞತೆ | | 14 |
| ಅರ್ಪಣೆ–ಸಮರ್ಪಣೆ | | 15 |
| ವಿಶ್ವಮಾನವ ಸಂಸ್ಕೃತಿ ಕನ್ನಡ ಕಹಳೆ ಮೊಳಗಲಿ | | 16 |
| ಸ್ವಾಗತ–ಸುಸ್ವಾಗತ | | 17 |


## ಸಾಹಿತ್ಯ ಮಕರಂದ


| | |
|---|---|
| 1. ಸಾಹಿತ್ಯ | 18 |
| 2. ಕವಿ | 22 |
| 3. ಕಾವ್ಯ | 24 |
| 4. ಅಕ್ಷರಲಿಪಿ – ಕನ್ನಡಲಿಪಿ | 30 |
| 5. ಅಕ್ಷರ | 35 |
| 6. ಅಕ್ಷರತೆ | 37 |
| 7. ಭಾಷೆ | 38 |
| 8. ವ್ಯಾಕರಣ | 42 |
| 9. ಪುಸ್ತಕಗಳು | 52 |
| 10. ಗ್ರಂಥಗಳು | 54 |
| 11. ಕನ್ನಡ ನುಡಿ | 56 |
| 12. ಕನ್ನಡ ಸಾಹಿತ್ಯ | 57 |
| 13. ಸುಭಾಷಿತ | 84 |
| 14. ಗಾದೆಗಳು | 99 |

15. ಕಾದಂಬರಿಗಳು 104

16. ಕನ್ನಡ ಭಾಷೆ 108

17. ಕನ್ನಡದಲ್ಲಿ ವಿಚಾರ ಸಾಹಿತ್ಯ 121

18. ಕನ್ನಡದಲ್ಲಿ ವಿಶ್ವಕೋಶಗಳು 127

19. ಆಧುನಿಕ ಸಾಹಿತ್ಯ 135

20. ಛಂದಸ್ಸು 140

21. ವಿಮರ್ಶೆ 144

22. ಸೌಂದರ್ಯ 148

23. ಕನ್ನಡ ನಾಡಿನ ಭೂ ಸ್ವರ್ಗದಲ್ಲಿ ಡಾ॥ ರಾಮು–ಡಾ॥ ಶೀಲ ! ! ! 151

# ಮೊದಲ ಮಾತು

## ಪ್ರಿಯ ಓದುಗರೇ,

ಕನ್ನಡ ಸಾಹಿತ್ಯ ಪರಿಷತ್ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಅನೇಕ ಜಿಲ್ಲೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಮತು ್ತವಿಶ್ವಸಾಹಿತ್ಯ ಸಮ್ಮೇಳನಗಳನ್ನು ನಡೆಸುತ್ತಿರುವುದು. ಇದ್ದನ್ನೆಲ್ಲ ನೋಡಿದ ನಾನು, ನನ್ನ ಮಾತೃಭಾಷೆಯಾದ ಕನ್ನಡದ ಉದ್ಧಾರಕ್ಕೆ ಏನು ಮಡಿದ್ದೇನೆ ? ಎಂದು ಮತ್ತೆ ಮತ್ತೆ ಪ್ರಶ್ನಿಸಿಕೊಂಡೆನು.

"ತಿಳಿದಿರುವ ಜ್ಞಾನವನ್ನು ಮತ್ತೊಬ್ಬರಿಗೆ ತಿಳಿಸುವುದೇ ಮಾನವ ಜೀವನ"

– ತತ್ತ್ವಜ್ಞಾನಿ ಅರಿಸ್ಟಾಟಲ್

## ಮಾನವ ನುಡಿ

ಮನುಷ್ಯ ದೀಪವಾದರೂ ಆಗಬೇಕು, ಕನ್ನಡಿಯಾದರೂ ಆಗಬೇಕು. ಒಂದು ಬೆಳಕನ್ನು ಕೊಡುತ್ತದೆ. ಮತ್ತೊಂದು ಅದನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಬ್ಬರೂ ದೀಪ ಆಗದೆ ಹೋಗಬಹುದು, ಆದರೆ ಕನ್ನಡಿಯಾಗಬಹುದು.

## ಹಣ – ಆಸ್ತಿ

ಮನುಷ್ಯರು ತಾವು ಸಂಪಾದಿಸಿದ ಹಣ ಮತ್ತು ಆಸ್ತಿಯನ್ನು ಬೇರೆಯವರಿಗೆ ಕೊಡಬಹುದು. ಆ ಹಣ ಮತ್ತು ಆಸ್ತಿಯನ್ನು ಬೇರೆಯವರಿಗೆ ಅವರು ಒಂದು ಸಾರಿ ದಾನಮಾಡಿದರೆ ಅವು ಅವರಿಗೆ ಒಂದು ಸಾರಿ ಮಾತ್ರ ಉಪಯೋಗವಾಗಿ ನಂತರ ಮತ್ತೊಮ್ಮೆ ಉಪಯೋಗಕ್ಕೆ ಬರುವುದಿಲ್ಲ. ಪುಸ್ತಕ ಜ್ಞಾನ ಓದುಗರ ಮನಸ್ಸಿನಲ್ಲಿ ಎಂದಿಗೂ ಬತ್ತದೆ ಅವರ ಜ್ಞಾನವನ್ನು ಬೆಳಗಿಸುತ್ತಿರುತ್ತದೆ.

ಜ್ಞಾನಜ್ಯೋತಿಯ ಪುಸ್ತಕಗಳು ಬೇರೆ ಎಲ್ಲಾ ಉಡುಗೊರೆಗಳಿಗಿಂತ ಅತ್ಯುತ್ತಮ ಉಡುಗೊರೆಗಳು.

ಅದಕ್ಕೆ ನಾನು ನನ್ನ 40 ವರ್ಷಗಳ ಸಾಧನೆ – ಶೋಧನೆ – ಸಂಶೋಧನೆಗಳ, ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನಸಾರವನ್ನು, "ಧಾರ್ಮಿಕಪ್ರಜ್ಞೆ ಮತ್ತು ಧರ್ಮಸಹಿಷ್ಣುತೆ"ಯನ್ನು ಎತ್ತಿಹಿಡಿದಿರುವ ಮಾನವ ಸಂಸ್ಕೃತಿಯ ಶಿಖರಪ್ರಾಯವಾದ ಸುವರ್ಣಕರ್ನಾಟಕದ ಕನ್ನಡ ಸಂಸ್ಕೃತಿಯನ್ನು ಮತ್ತೆ ಬೆಳಗಿಸುವ ಉದ್ದೇಶದಿಂದ ಕಸ್ತೂರಿಯಾದ ಕನ್ನಡಭಾಷೆಯಲ್ಲಿ, ಮಕರಂದವಾದ ಕನ್ನಡ ಸಾಹಿತ್ಯದಲ್ಲಿ, ಮುಂದಿನ ಸತ್ಯಯುಗದ ಅಂದರೆ ಸುವರ್ಣಯುಗದ ಈ ಪಂಚಮ ಜ್ಞಾನವೇದಗಳನ್ನು ಹೃದಯ ತುಂಬಿ ರಚಿಸಿದೆ.

ಈ ಪುನರ್ಜನ್ಮ ಜ್ಞಾನ ವೇದಗಳು ಕಲಿಯುಗದ ವೇದ ಮತ್ತು ಉಪನಿಷತ್‌ಗಳಂತೆ ನಮ್ಮ ಮಾನವ ಜನಾಂಗಕ್ಕೆ ದಾರಿದೀಪಗಳಾಗಿವೆ.

1. ಸಾಕ್ಷರತೆ = ಸಂಗೀತ – ಸಾಹಿತ್ಯ – ಸಂಸ್ಕೃತಿ – True Education
2. ಸಾರ್ಥಕತೆ = ನಿಜಜೀವನ ದರ್ಶನ – ಸಂದರ್ಶನ – ಸಂಮ್ಮಿಲನ – Right Living
3. ಸಾಕ್ಷಾತ್ಕಾರ = ದಿವ್ಯಆತ್ಮಜ್ಞಾನ ದರ್ಶನ – ಸಂದರ್ಶನ – ಸಂಮ್ಮಿಲನ ಸಿದ್ಧಿ – Self Realization
4. ಮನಸ್ಸಿನ ಮತ್ತು ಮನೋರೋಗಗಳ ರಹಸ್ಯಗಳ ಸಂಶೋಧನೆ–ಈ ಶತಮಾನದ ಮಹಾ ಸಂಶೋಧನೆ
   = Mystery of Mind & Mental diseases
5. ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ = ಪ್ರಕೃತಿಯ ಮತ್ತು ಸೃಷ್ಟಿಯ ರಹಸ್ಯ.
   = Research on Reincarnation and Survival of Soul

ಹಾಗೂ

ವಿಶ್ವಶಾಂತಿ ಸ್ಥಾಪನೆ ಮತ್ತು ಮಾನವ ಜನಾಂಗದ ಪುನರುತ್ಥಾನ

– Establish World Peace and Resuscitate Humanity

ವಿಶ್ವಮಾನವ ಸಂಸ್ಕೃತಿಯನ್ನು ಬೆಳಗಿಸುವ ಉದ್ದೇಶದಿಂದ ಈ ಸತ್ಕೃತಿಗಳನ್ನು ನಮ್ಮ ಪುನರ್ಜನ್ಮ ಸಂಶೋಧನ ಕೇಂದ್ರವು ಪ್ರಕಟಿಸಿ, ಉಚಿತವಾಗಿ ಮನುಕುಲಕ್ಕೆ ವಿಶ್ವ ಅಂತರ್‌ಜಾಲದ ( Internet ) ಮೂಲಕ ನೀಡುತ್ತಿದೆ. ನನ್ನ ಹಾಗೆ ಪ್ರತಿಯೊಬ್ಬ ಕನ್ನಡಿಗರೂ ಹಾಗೂ ಉಳಿದ ಮಾನವರೂ ತಾವು ಒಬ್ಬ ಮಾನವರಾಗಿ ಅವರವರ ಭಾಷೆಗೆ ಹಾಗೂ ಮಾನವ ಜನಾಂಗಕ್ಕೆ ಏನು ಮಾಡಿದ್ದೇವೆ ? ಎಂಬ ಪ್ರಶ್ನೆಯನ್ನು ತಾವೇ ಹಾಕಿಕೊಂಡು ಉತ್ತರ ನೀಡಿದರೆ " ಭಾಷೆ ಬೆಳೆಯುತ್ತದೆ, ಭಾಷೆ ಉಳಿಯುತ್ತದೆ, ವಿಶ್ವಮಾನವ ಸಂಸ್ಕೃತಿ ಬೆಳೆಗುತ್ತದೆ."

ಉರಿಯುತ್ತಿರುವ ಒಂದೇ ಒಂದು ಸೊಡರು ಜ್ಯೋತಿಯಿಂದ ನಾವು ಪ್ರಪಂಚಕ್ಕೆಲ್ಲಾ ಬೆಳಕನ್ನು ನೀಡುವಷ್ಟು ಅಸಂಖ್ಯಾತ ಸೊಡರುಗಳನ್ನು, ಅಂದರೆ ದೀಪಗಳನ್ನು ಹೊತ್ತಿಸಬಹುದು. ಈಗ ಈ ಶತಮಾನದ ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನಸಾರಾಮೃತವನ್ನೊಳಗೊಂಡ ಈ ಐದು ಸತ್ಕೃತಿಗಳು ಮಾನವ ಜನಾಂಗಕ್ಕೆ ಎಲ್ಲಾ ಉಡುಗೊರೆಗಳಿಗಿಂತ ಸರ್ವಶ್ರೇಷ್ಠವಾದ ಅತ್ಯುತ್ತಮ ಉಡುಗೊರೆಗಳೇ !!! ಓದಿ ಹೇಳಿ ?

ಈ ಕೃತಿಗಳನ್ನು ರಚಿಸುವಾಗ ನನಗೆ ಉಂಟಾದ ರಸಾಸ್ವಾದನೆಯಿಂದ ಬಂದಿರುವ ರಸಸುಖದಲ್ಲಿ ಒಂದಿನಿತನ್ನಾದರೂ ಇದನ್ನು ಓದುವವರು ಸವಿದು ಅವರಿಗೆ ಈ ಎಲ್ಲಾ ಜ್ಞಾನ ಉಂಟಾಯಿತೆಂದು ಗೊತ್ತಾದರೆ ಈ ಸತ್ಕೃತಿಗಳು ಸಾರ್ಥಕವಾದವೆಂದು ಭಾವಿಸುತ್ತೇನೆ. ಈ ಕೃತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಟೀಕೆ–ಟಿಪ್ಪಣಿಗಳಿದ್ದಲ್ಲಿ ಅದನ್ನು ಲಖಿತ ಮೂಲಕ ಅಥವಾ ಈ ಕೆಳಕಂಡ ಈ–ಮೇಲ್ ಮೂಲಕ ಲೇಖಕರಿಗೆ ತಿಳಿಸಬಹುದು.

**E-mail : reincarnationresearchcentre@gmail.com**

ಬುದ್ಧಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ

–ಭಗವಾನ್ ಬುದ್ಧ

**( Triple Gems of Buddhism )**

ಸಂಗೀತಂ ಶರಣಂ ಗಚ್ಛಾಮಿ
ಸಾಹಿತ್ಯಂ ಶರಣಂ ಗಚ್ಛಾಮಿ
ಸಂಸ್ಕೃತಿ ಶರಣಂ ಗಚ್ಛಾಮಿ

–ಡಾ॥ ಸಿ. ರಾಮಸ್ವಾಮಿ

**( Triple Gems of Humanity )**

# ಮುನ್ನುಡಿ

ಓದಿ ವಿಷಯವನ್ನು ಗ್ರಹಿಸಿಕೊಳ್ಳುವುದರ ಜೊತೆಗೆ ನಿತ್ಯಜೀವನಕ್ಕೆ ಸಂಬಂಧಪಟ್ಟ ಲೌಕಿಕ ವಿಷಯವನ್ನು ಸರಳವಾದ ಶೈಲಿಯಲ್ಲಿ ಬರೆಯುವ ಅಕ್ಷರಜ್ಞಾನವನ್ನು ಹೊಂದುವುದು ಅಕ್ಷರತೆ ಅಂದರೆ ಲಿಟರಸಿ ಎನ್ನುತ್ತೆವೆ. ಆ ಅಕ್ಷರತೆಯ ಅಕ್ಷರಜ್ಞಾನವನ್ನು ತಿಳಿದವನನ್ನು ಅಕ್ಷರಸ್ಥನೆನ್ನುತ್ತಾರೆ ಅಂದರೆ ಲಿಟರೆಟ್ ಎನ್ನುತ್ತೇವೆ.

ಆ ಸಾಕ್ಷರತೆ ಮಾನವನನ್ನು ಸುಶಿಕ್ಷಿತನನ್ನಾಗಿ ಮಾಡುತ್ತದೆ ಅಂದರೆ ಸುಸಂಸ್ಕೃತನನ್ನಾಗಿ ಮಾಡುತ್ತದೆ. ಇಂದಿನ ವಿದ್ಯಾರ್ಥಿಗಳಿಗೆ ದೊರೆಯುವ ಶಿಕ್ಷಣ ಕೇವಲ ಸರ್ಕಾರೀಯ ಅಥವ ಖಾಸಗಿ ಉದ್ಯೋಗವನ್ನು ಪಡೆದು ಹೊಟ್ಟೆ ಹೊರೆದುಕೊಳ್ಳವ ಗುರಿಯನ್ನು ಹೊಂದಿ, ಇದರಿಂದ ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಿದೆ.

ಇಂದಿನ ಈ ರೀತಿಯ ದಾರಿತಪ್ಪಿದ ಶಿಕ್ಷಣ(Education)ನಮ್ಮ ಇಂದಿನ ಮಾನವ ಜೀವನವನ್ನು ಅಧಃಪಥನಕ್ಕೆ ತಳ್ಳಿದೆ. **Education** ಎಂಬ ಪದವು ಲ್ಯಾಟಿನ್ ಭಾಷೆಯ **Educare** ಎಂಬ ಪದದ ಉತ್ಪತ್ತಿ. ಇದರ ಅರ್ಥ ದಾರಿತೋರಿಸು, ಅಭಿವೃದ್ಧಿಪಡಿಸು ಎಂದಾಗುತ್ತದೆ. ಶಿಕ್ಷಣ ಎನ್ನುವುದು ಬೆಳವಣಿಗೆ, ಅಭಿವೃದ್ಧಿಗಳಿಗೆ ಅನ್ವಯಿಸುವ ಪದ.

ನಿಜವಾದ ಶಿಕ್ಷಣವೆಂದರೆ ಕೇವಲ ವಿದ್ಯಾದಾನವಲ್ಲ ಅದು ಜ್ಞಾನದಾನವಾಗಬೇಕು. ಅಂದರೆ ವಿದ್ಯಾರ್ಥಿಗೆ ದೊರೆಯುವ ಶಿಕ್ಷಣ ಕೇವಲ ಹೊಟ್ಟೆ ಹೊರೆದುಕೊಳ್ಳುವ ಗುರಿಯನ್ನು ಹೊಂದಿರುವ ಶಿಕ್ಷಣವಾಗಬಾರದು.

ಸರ್ಕಾರಿ ಉದ್ಯೋಗವನ್ನು ಪಡೆದು ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಬಾರದು. ಶಿಕ್ಷಣವೆಂದರೆ ಕೇವಲ ಗ್ರಂಥಗಳ ಅಧ್ಯಯನವೂ ಅಲ್ಲ. ವಿಷಯಗಳ ಸಂಗ್ರಹಣೆಯೂ ಅಲ್ಲ. ನಿಜವಾದ ಶಿಕ್ಷಣ ವ್ಯಕ್ತಿಯನ್ನು ಮಾನವನನ್ನಾಗಿಸುವ ಶಿಕ್ಷಣ ಆಗಿರಬೇಕು. ಅಂತಹ ಮಾನವನ ಹಾಗೂ ಮಾನವೀಯ ಗುಣಗಳು ಅಭಿವೃದ್ಧಿಯಾಗಲು ತಕ್ಕ ಅವಕಾಶ ಮುಕ್ತವಾಗಿ ಶಿಕ್ಷಣದಲ್ಲಿ ದೊರೆಯಬೇಕು.

ಮನುಷ್ಯ ಮೊದಲು ಮಾನವನಾಗಿರಬೇಕು. ನಂತರ ಅವನು ವಿಜ್ಞಾನಿಯೋ, ವೈದ್ಯನೋ, ಇಂಜಿನಿಯರೋ, ವಕೀಲನೋ, ಕವಿಯೋ, ಕಲಾವಿದನೋ, ತತ್ವಶಾಸ್ತ್ರಜ್ಞನೋ ಮತ್ತೊಂದೋ ಆಗಬಹುದು.

ಹಾಗಾದರೆ ಶಿಕ್ಷಣದ ಮಹತ್ತರ ಉದ್ದೇಶ ಏನಾಗಿರಬೇಕು ?

ಶಿಕ್ಷಣಕ್ಕೆ ಮಹತ್ವ ಬರುವುದು ಅದನ್ನು ನೀಡುವ ಉದ್ದೇಶ, ಗುರಿ ಹಾಗೂ ವಿಧಾನಗಳಿಂದ ಮಾತ್ರ.. ಶಿಕ್ಷಣವೆಂದರೆ ಕೇವಲ ವಿದ್ಯಾದಾನವೇ ? ಅದು ಕೇವಲ ವಿದ್ಯಾದಾನವಾಗಿದ್ದರೆ ಇಂದಿನ ಸಾಮಾಜಿಕ ರಾಷ್ಟ್ರೀಯ ಹಾಗೂ ವೈಯಕ್ತಿಕ ಬದುಕು ಏಕೆ ಹದಗೆಡಬೇಕಾಗಿತ್ತು? ಲೌಕಿಕ ಬದುಕು ಉತ್ತಮಗೊಳ್ಳುತ್ತದೆ ಯೆಂದು ಕಂಡು ಬಂದರೂ ಮಾನವೀಯ ಬದುಕು ದಿನದಿಂದ ದಿನಕ್ಕೆ ಹದಗೆಡುತ್ತಾ ಇದೆ.

ವಿದ್ಯಾವಂತರ ಸಂಖ್ಯೆ ಹೆಚ್ಚಿದಷ್ಟು ಚಾರಿತ್ರ್ಯ ಹಾಗೂ ಮಾನವ ಸಂಬಂಧಗಳು ನಿಧಾನವಾಗಿ ಮಾಯವಾಗುತ್ತವೆ. ಜೀವನದ ಸೌಲಭ್ಯಗಳು ಹೆಚ್ಚಿದಷ್ಟು ಜೀವಿಗಳ ಬಾಂಧವ್ಯ ಮರೆಯಾಗುತ್ತಿದೆ. ಅಂದರೆ ನಮಗೆ ದೊರೆಕುತ್ತಿರುವ ಶಿಕ್ಷಣ ದೋಷಪೂರ್ಣವಾಗಿರಬೇಕು ಅಥವಾ ಅರ್ಥಪೂರ್ಣವಾಗಿಲ್ಲದಿರಬೇಕು.

ಸಮಾಜದ ಸಂಘಟನೆಯಲ್ಲಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಮಾನವನ ಶಿಕ್ಷಣ ಒಂದು ಪ್ರಮುಖ ಪ್ರಕ್ರಿಯೆ. ನಿಜವಾದ ಶಿಕ್ಷಣವೆಂದರೆ ಮನುಷ್ಯನ ಇಚ್ಛಾಶಕ್ತಿಯನ್ನು ಸರಿಯಾದ ಮತ್ತು ಸಮರ್ಥವಾದ ರೀತಿಯಲ್ಲಿ ಬಳಸುವಂತೆ ತರಬೇತಿ ನೀಡುವುದು. ವ್ಯಕ್ತಿಯಲ್ಲಿ ಸುಪ್ತವಾಗಿ ಅಡಗಿರುವ ಜ್ಞಾನ ಸಂಪತ್ತನ್ನು ಉತ್ತಮ ಪರಿಸರದಲ್ಲಿ ವೀಕ್ಷಿಸುವಂತೆ ಮಾಡಿ ವ್ಯಕ್ತಿಯಲ್ಲಿ ಶಿಸ್ತು, ಚತುರತೆ, ಸ್ವಾತಂತ್ರ್ಯ ಹಾಗೂ ವಿಧೇಯತೆ ಭಾವನೆಯನ್ನು ಬೆಳೆಸುವುದೇ ಶಿಕ್ಷಣ.

ನಿಜವಾದ ದೈಹಿಕ ಬೌದ್ಧಿಕ ಹಾಗೂ ಭಾವನಾತ್ಮಕ ದೃಷ್ಟಿಗಳಿಂದ ವ್ಯಕ್ತಿಯು ಸಮನಾಗಿ ಬದಲಾವಣೆ ಹೊಂದುತ್ತ, ಬೆಳವಣಿಗೆ ಹಾಗೂ ಅಭಿವೃದ್ಧಿಗಳನ್ನು ಸಾಧಿಸುತ್ತಾನೆ. ಇದನ್ನೇ ಶಿಕ್ಷಣ ಎನ್ನಬಹುದು.

ಜೀವನ ಪರ್ಯಂತ ಗಳಿಸುವ ಅನುಭವವೇ ಶಿಕ್ಷಣ. ನಿಜವಾದ ಶಿಕ್ಷಣ ಒಬ್ಬ ಕಾರ್ಯಗತ ವ್ಯಕ್ತಿಯಲ್ಲಿ ಪರಿವರ್ತನೆಯನ್ನುಂಟು ಮಾಡುತ್ತದೆ. ಇದೊಂದು ಜೀವನ ಪರ್ಯಂತ ನಡೆಯುವ ಕ್ರಿಯೆ. ಅದು ಹುಟ್ಟುಗುಣಗಳನ್ನು ವಿನಾಶಮಾಡುತ್ತದೆ. ಉತ್ತಮ ಜೀವನ ನಡೆಸಲು ಸಹಾಯಕವಾಗುತ್ತದೆ. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತವಾಗುತ್ತದೆ. ಮನುಷ್ಯನಲ್ಲಿ ಆಗಲೇ ಇರುವ ಮಾನವೀಯತೆಯ ಬೆಳವಣಿಗೆಯ ಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ಶಿಕ್ಷಣ.

ಶಿಕ್ಷಣ ಪಡೆದ ವ್ಯಕ್ತಿಯು ಹೃದಯದಲ್ಲಿ ಅಪರಿಮಿತ ಅನುಕಂಪ ಭಾವನೆಯನ್ನು ಕಾರ್ಯಗತಗೊಳಿಸುವ ದಕ್ಷತೆ ಹಾಗೂ ಹಿಡಿದ ಕಾರ್ಯವನ್ನು ಬಿಡದೆ ಸಾಧಿಸಬಲ್ಲ ಎದೆಗಾರಿಕೆ ಹೊಂದಿರಬೇಕು.

## ಇಂದಿನ ಶಿಕ್ಷಣವನ್ನು ನೀವು ಸಂಸ್ಕಾರಯುತವನ್ನಾಗಿ ಮಾಡಬೇಕು

ಸಂಸ್ಕಾರವೆಂಬುದು ಜೀವನದ ಕ್ರಮ. ಸಾಮಾಜಿಕ ಪರಂಪರೆ ಮತ್ತು ಸಾಮಾಜಿಕ ವಿಧಾನಗಳು ವ್ಯಕ್ತಿಯ ದೇಹಕ್ಕೆ ಸೌಂದರ್ಯಕ್ಕೆ ಒಂದು ಕಡೆ ಮೆರಗು ನೀಡಿದರೆ ಮತ್ತೊಂದೆಡೆ ಸಂಗೀತ, ಕಲೆ, ಶಿಲ್ಪಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದವುಗಳ ಬೆಳವಣಿಗೆ ಮನಸ್ಸಿಗೆ ನೆಮ್ಮದಿ ನೀಡುತ್ತವೆ.

ಮಕ್ಕಳ ಗಮನವನ್ನು ಸಂಸ್ಕಾರವೆಂಬ ಶಬ್ದಾರ್ಥದ ಕಡೆಗೆ ಸೆಳೆದರೆ ಮಾತ್ರ ಅವರು ತಮ್ಮ ನಡುವಳಿಕೆಗಳನ್ನು ಸುಧಾರಿಸಿಕೊಂಡು ಉನ್ನತಿಕರಿಸುತ್ತಾರೆ. ಸುಸಂಸ್ಕೃತವಾದ ಒಬ್ಬ ವ್ಯಕ್ತಿ ಬೆಲೆಕಟ್ಟಲಾಗದಂತಹ ಅತ್ಯುನ್ನತ ಮೌಲ್ಯವುಳ್ಳ ಸಮಾಜದ ಬಹುದೊಡ್ಡ ಆಸ್ತಿ.

ಸಂಸ್ಕಾರವು ಒಂದು ರಾಷ್ಟ್ರದ ಜೀವನಾಡಿಯ ಪ್ರತೀಕ. ಆದ್ದರಿಂದಲೇ ಒಂದೊಂದು ರಾಷ್ಟ್ರವು ತನ್ನ ಸಾಂಸ್ಕೃತಿಕ ಹೆಸರನ್ನು ಹೇಳತ್ತಾ ಬಂದುದೆ.

ಉದಾ : ಭಾರತೀಯ ಸಂಸ್ಕೃತಿ, ಬ್ರಿಟಿಷ್ ಸಂಸ್ಕೃತಿ, ಅಮೇರಿಕಾಸಂಸ್ಕೃತಿ, ಜಪಾನ್ ಸಂಸ್ಕೃತಿ, ಇತ್ಯಾದಿ.

ಒಂದು ಜನಾಂಗದ ವೇಷ ಭೂಷಣಗಳು, ನಡವಳಿಕೆಗಳು ಆಚಾರ ವಿಚಾರಗಳು ಅವರ ಜ್ಞಾನ ಸಂಪತ್ತು, ಪ್ರತಿಭೆ, ನಾಗರಿಕ ಜನರ ಅಭಿಪ್ರಾಯ ಭವನೆಗಳೆಲ್ಲವೂ ಒಳಗೊಂಡಿರುವುದನ್ನು ಸಂಸ್ಕೃತಿ ಅಥವಾ ಸಂಸ್ಕಾರ ಎನ್ನುತ್ತೇವೆ.

ಒಂದು ಜನಾಂಗದ ಸತತವಾದ ವ್ಯವಸಾಯದಿಂದ ಉದ್ಭವಿಸಿದ ಅನುಭವವೇ ಸಂಸ್ಕಾರ. ಒಂದು ಜನಾಂಗ ತನ್ನ ಮುಂದಿನ ಜನಾಂಗಕ್ಕೆ ಈ ಸಂಸ್ಕಾರವನ್ನು ವರ್ಗಾಯಿಸುತ್ತಾ ಹೋಗುತ್ತದೆ. ಜೀವನದ ಉತ್ತಮ ಸಂಸ್ಕಾರ ವ್ಯಕ್ತಿಯ ಅತ್ಯಂತ ಸೂಕ್ಷ್ಮ ನಡುವಳಿಕೆಗಳನ್ನು ಮತ್ತು ವೈಯಕ್ತಿಕ ವರ್ತನೆಗಳನ್ನು ವ್ಯಕ್ತಪಡಿಸುತ್ತದೆ. ಸುಸಂಸ್ಕೃತನಾದ ವ್ಯಕ್ತಿ ಆದರ್ಶ ಭಾವನೆಯನ್ನು, ಕಲೆಯನ್ನು ಮೆಚ್ಚುವನಲ್ಲದೆ ವಿಶಾಲವಾದ ಮಾನವೀಯತೆಯಿಂದ ಕೂಡಿದ ಆಸಕ್ತಿಯನ್ನು ಹೊಂದಿ ಸಮಾಜ ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ.

ನಿಜವಾದ ಶಿಕ್ಷಣದ ಕಾರ್ಯವೆಂದರೆ ವ್ಯಕ್ತಿಯನ್ನು ಸಂಸ್ಕಾರವುಳ್ಳವನನ್ನಾಗಿ ಮಾಡುವುದು. ಸತ್ ಚಿಂತನೆಗೆ ಸತ್ ಕಾರ್ಯಕ್ಕೆ ಸದ್ ವರ್ತನೆಗಳು ಪ್ರೇರಕ ಶಕ್ತಿಯಾಗಿ ನಿಲ್ಲುವುದೇ ದಿವ್ಯ ಸಂಸ್ಕೃತಿಯ ಲಕ್ಷಣ. ನಿಜವಾದ ಶಿಕ್ಷಣ ವ್ಯಕ್ತಿಗೆ ಸಂಸ್ಕಾರವನ್ನು ನೀಡುತ್ತದೆ. ಸಂಸ್ಕಾರವೇ ಶಿಕ್ಷಣ, ಶಿಕ್ಷಣವೇ ಸಂಸ್ಕಾರ.

ವ್ಯಕ್ತಿಯು ಜನನದಿಂದ ಮರಣದವರೆಗೆ ವಿವಿಧ ರೀತಿಯ ಸಂಸ್ಕಾರಗಳಿಗೆ ಒಳಗಾಗುತ್ತಾನೆ. ಹುಟ್ಟು, ಮುಂಜಿ, ಮದುವೆ, ಹಾಗೂ ಮರಣ ಇತ್ಯಾದಿಗಳಲ್ಲಿ ಸಂಸ್ಕಾರವೇ ಪ್ರಧಾನ. ಸಂಸ್ಕಾರ ವ್ಯಕ್ತಿಯ ಜೀವನವನ್ನು ಪಾವನವನ್ನಾಗಿ ಮಾಡುತ್ತದೆ.

ಸಂಸ್ಕಾರ ನಿರ್ಜೀವ ವಸ್ತುಗಳಲ್ಲಿ ದೈವೀಶಕ್ತಿಯನ್ನು ತುಂಬುತ್ತದೆ. ನಿರ್ಜೀವ ವಸ್ತುಗಳಿಗೆ ಸಂಸ್ಕಾರ ಕೊಡುತ್ತೇವೆ. ಅವುಗಳನ್ನು ಪೂಜ್ಯನೀಯವಾಗಿ ಆರಾಧಿಸುತ್ತೇವೆ. ಶಿಕ್ಷಣ ಮಾನವರಲ್ಲಿ ಸಂಸ್ಕಾರಯುಕ್ತ ಕ್ರಿಯೆಗಳನ್ನು ಪೂರೈಸಿ ವ್ಯಕ್ತಿಯನ್ನು ಪೂಜ್ಯನೀಯವಾಗಿ ಮಾಡುತ್ತದೆ.

ಶಿಕ್ಷಣ ಮತ್ತು ಸಂಸ್ಕಾರಗಳೆರಡೂ ಮನುಷ್ಯನಿಗೆ ಇಂದು ಅನಿವಾರ್ಯವಾಗಿದೆ. ಪೂಜ್ಯ ಮತ್ತು ಪಾವನ ಶಕ್ತಿಯ ಪ್ರತೀಕವೇ ಸಂಸ್ಕಾರ. ಸಂಸ್ಕಾರ ಮತ್ತು ಶಿಕ್ಷಣ ಮಕ್ಕಳನ್ನು ಶಕ್ತಿಯುತರನ್ನಾಗಿ ಹಾಗೂ ಪಾವನರನ್ನಾಗಿ ಮಾಡುತ್ತವೆ.

ನಿಜವಾದ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳ ಕಾರ್ಯ ಇಂದು ಅತಿ ಮಹತ್ವದು. ಜೀವನದ ನೆಮ್ಮದಿಗಾಗಿ ವಿವಿಧ ರಂಗಗಳಲ್ಲಿ ಕಾರ್ಯವೆಸಗಲು ಯೋಗ್ಯ ನಾಯಕರನ್ನು ರೂಪಿಸುವ ಹೊಣೆ ವಿಶ್ವವಿದ್ಯಾಲಯಗಳ ಪವಿತ್ರ ಕರ್ತವ್ಯವಾಗಬೇಕು.

ಅತ್ಯುತ್ತಮ ಶಿಕ್ಷಣ–ತರಬೇತಿ ಪಡೆದ ಯುವಜನ ನಿರ್ಮಾಣ ವಿಶ್ವವಿದ್ಯಾನಿಲಯಗಳ ಗುರಿಯಾಗಬೇಕು. ಈ ಶಿಕ್ಷಣ ಕೇವಲ ವಿದ್ಯಾರ್ಥಿಗಳಿಗೆ ಸೀಮಿತವಾಗಬಾರದು. ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾಗುವ ಜ್ಞಾನ ದೇಶದ ನಾಡಿನಾಡಿಯಲ್ಲೆಲ್ಲ ಪ್ರವಹಿಸುವಂತಾಗಬೇಕು. ಆಗ ಮಾತ್ರ ವಿಶ್ವವಿದ್ಯಾನಿಲಯದ ಅಸ್ತಿತ್ವ ಸಾರ್ಥಕವಾಗುತ್ತದೆ. ಇದರಿಂದ ಒಟ್ಟಾರೆ ವೈಯಕ್ತಿಕ ಮತ್ತು ಸಮಾಜದ ಬಾಳು ಸುಖಮಯವಾಗುತ್ತೆ.

**ಈಪವಿತ್ರ ಕರ್ತವ್ಯವನ್ನು ನೇರವೇರಿಸಲು ವಿಶ್ವವಿದ್ಯಾಲಯಗಳು ಜ್ಞಾನದಾನ ಮತ್ತು ಪ್ರಸಾರದ ಜೊತೆಗೆ ಸಂಗೀತ, ಸಾಹಿತ್ಯ, ಸಂಸ್ಕೃತಿಯ ಪೋಷಣೆಮಾಡಬೇಕು.**

# ನಿವೇದನೆ

ಧರೆಗಿಳಿದು ಬಂದ
ವಿಶ್ವಮಾನವರೆಲ್ಲರಿಂದ
ಮೂಡಿಹುದು ನೋಡಿ
ಮುನ್ನುಡಿಯ ಈ ಮೋಡಿ
ದಿವ್ಯ ಪ್ರಾರ್ಥನೆಯ ತಾ ಮಾಡಿ
ಭವ್ಯ ಸುಸ್ವಾಗತವ ತಾ ನೀಡಿ
ಮಾನವ ಜೀವನದ ಸಾರ್ಥಕತೆಯ ಪರಿಚಯಿಸುತ್ತ ತಾ ಓಡಿ
ನವ್ಯ ನಿವೇದನೆಯ ಈ ಮುನ್ನುಡಿ ಹೇಗಿದೆ ಓದಿ ನೋಡಿ ॥

ಸಾರ್ಥಕತೆ : ಜೀವನ ದರ್ಶನ – ಜೀವನ ಸಂದರ್ಶನ – ಜೀವನ ಸಂಮ್ಮಿಲನ ಸತ್ಕೃತಿಯ ಆರಂಭದ ಅಮೃತ ಘಳಿಗೆಯಲ್ಲಿ ಆಕಾಶದಿಂದ ದೇವದೇವತೆಗಳು, ಋಷಿಮುನಿಗಳು ಹೂಮಳೆಗರೆದು ತಮ್ಮ ಅಭಯ ಹಸ್ತದಿಂದ ಆಶೀರ್ವಾದ ಮಾಡುತ್ತಿರುವುದನ್ನು ನೋಡಿ ಆನಂದಪರವಶನಾಗಿ ನನ್ನ ಕಲ್ಪನೆಯ ನೈಜ ಕನಸು ಮತ್ತು ನನಸುಗಳ ಈ ಸಾರ್ಥಕತೆ ಕೃತಿ ಹೇಗೆ ವಿರಚಿತವಾಗಿ ಮೂಡಿ ಬರಬೇಕೆಂಬ ಹೆಬ್ಬಯಕೆಯನ್ನು ನಯ, ವಿನಯ, ಒಲುಮೆ, ನಲ್ಮೆಯಿಂದ ನಿವೇದಿಸುತ್ತಿದ್ದೇನೆ.

ಕಸ್ತೂರಿಯಂತೆ ಕಂಪನ್ನು ಬೀರುವ ಕನ್ನಡ ಭಾಷೆಯ ನುಡಿಮುತ್ತುಗಳಲ್ಲಿ ಈ ಸಾರ್ಥಕತೆ ಮೂಡಿ ಬರಲಿ. ಹಿಂದಿನ ಕಾಲದ ಸಾಹಿತಿಗಳು, ವಿದ್ವಾಂಸರು, ವಿಮರ್ಶಕರು, ಕವಿಪುಂಗವರು, ವ್ಯಾಕರಣಕಾರರು, ಅಲಂಕಾರಶಾಸ್ತ್ರಜ್ಞರು, ಪಂಡಿತರು ಎತ್ತಿ ಹಿಡಿದಿರುವ ಆದರ್ಶಗಳನ್ನು, ವಿಚಾರಲಹರಿಗಳನ್ನು, ಕಾವ್ಯ ಲಕ್ಷಣಗಳನ್ನು, ಗ್ರಹಿಸಿ, ಆ ಸತ್ಕವಿಗಳಿಗೆಲ್ಲ ನಮಿಸಿ ಅವರ ಆದರ ಪ್ರಶಂಸೆಗೆ ಪಾತ್ರವಾಗುವಂತೆ ರಮಣೀಯ ಕಾವ್ಯಧರ್ಮದಿಂದ, ಕಾವ್ಯ ಕೃಷಿಯಿಂದ ಈ ಸತ್ಕೃತಿ ರಚಿತವಾಗಲಿ.

ವಿಶ್ವಮಾನ್ಯವಾದ ಪಾತ್ರಸೃಷ್ಟಿ, ಆಕರ್ಷಕ ಕಥಾವಸ್ತು, ಉತ್ತಮೋತ್ತಮ ಪಾತ್ರ ಪೋಷಣೆ, ಕುಶಲ ಸಂಭಾಷಣೆ, ಹೃದಯಸಂಗಮ ರಸಭಾವ ನಿರೂಪಣೆ, ಮನೋಹರವಾದ ಶೈಲಿ, ಪ್ರತಿಭಾಮಯವಾದ ವರ್ಣನೆ, ಉದಾರವೂ, ಗಂಭೀರವೂ, ಉಜ್ವಲವೂ ಆದ ಭಾವಗಳು, ಕಿವಿಗಿಂಪಾದ ಶಬ್ಧಾಲಂಕಾರಗಳು, ಚಿತ್ತ ಪರಿಪಾಕವನ್ನುಂಟು ಮಾಡುವ ನೀತಿಬೋಧೆ, ಜೊತೆಗೆ ವಿದ್ವಾಂಸರನ್ನು, ಜಾಣರನ್ನು, ರಸಿಕರನ್ನು, ಸಾಹಿತಿಗಳನ್ನು, ಕಲಾವಿದರನ್ನು ಮೆಚ್ಚಿಸುವ ಮಾಣಿಕ್ಯದಂತ ಮಾತುಗಳು, ರಸವತ್ತಾದ ಪದಪುಂಜಗಳು, ಸರಸವಾದ ಉಕ್ತಿಗಳ ಚಮತ್ಕಾರ, ಭಕ್ತಿಯ ಆವೇಶ, ಓಜಸ್ಸು, ತೇಜಸ್ಸುಗಳಿಂದ ತುಂಬಿ ತುಳುಕುವ ಕಥಾಕಥನ, ಭಾಷಾ ಮಾಧುರ್ಯ ಶೈಲಿ ಇವೆಲ್ಲವುಗಳ ಸಮೀಕರಣದಿಂದ ಮೈಗೂಡಿ, ಈ ಸಾರ್ಥಕತೆಯ ಕೃತಿ ಮೂಡಿಬರಲಿ.

ಈ ಸಾರ್ಥಕತೆ ಕೃತಿ ವಿನೂತನವಾದ, ನಿತ್ಯನೂತನವಾದ, ನವಚೇತನವನ್ನು ಬಾಳಿಗೆ ನೀಡುವ ಲೌಕಿಕ ಮತ್ತು ಪಾರಮಾರ್ಥಿಕ ಸತ್ವಗಳಿಂದ, ತಾತ್ವಿಕ ವಿಷಯಗಳಿಂದ, ಸಿದ್ಧಾಂತಗಳ ಖನಿಯಾಗಿ, ಸ್ಫಟಿಕದಂತೆ, ವಿಚಾರಧಾರೆಗಳನ್ನು, ಪ್ರತಿಬಿಂಬಿಸುತ್ತ, ರಸಧಾರೆಗಳ ಬುಗ್ಗೆಗಳನ್ನು, ರಸಕಾರಂಜಿಗಳನ್ನು, ಸ್ಫುರಿಸುತ್ತ, ಮಾನವನ

ಬಾಳಿನ ಅಂತರಿಕ ಹಾಗೂ ಬಹಿರಂಗ ಜೀವನದ ಕಿಲುಬನ್ನು ಶುದ್ಧಿಗೊಳಿಸುತ್ತಾ ಮಾನವ ವಾತಾವರಣವನ್ನು ಪರಿಶುದ್ಧಿಗೊಳಿಸಿ, ಜೀವನವನ್ನು ಪಾವನಗೊಳಿಸಲಿ.

ಈ ಸಾರ್ಥಕತೆ ಕಾವ್ಯಪ್ರಪಂಚದ ಕಲ್ಪವೃಕ್ಷವಾಗಿ, ರಸಿಕರ ಕಾಮಧೇನುವಾಗಿ, ಸಹೃದಯರ ಚಿಂತಾಮಣಿಯಾಗಿ, ಸೃಜನಶೀಲ ವಿಚಾರಧಾರೆಗಳಿಂದ ಮೂಡಿಬರಲಿ. ಪುಷ್ಪ ಸಮುದಾಯದಲಿ ಗುಲಾಬಿ ಹೂವುಗಳ ಹಾಗೆ ಸೊಬಗು ಸುವಾಸನೆಗಳೆರಡನ್ನೂ ಏಕಕಾಲದಲ್ಲಿ ಪಡೆದು ಮೆರೆಯುವ ಭಾಗ್ಯ, ಕಾವ್ಯ ಸಮುದಾಯದಲ್ಲಿ ಈ ಸಾರ್ಥಕತೆಗೆ ದೊರೆಯಲಿ.

ಕರ್ನಾಟಕ ಕವಿಗಳೆಂಬ ಮಾವಿನ ತೋಪಿನ ವಸಂತಮಾಸವೆಂಬ ಕೋಗಿಲೆ ಆಹ್ಲಾದಕರವಾಗಿ ಹಾಡಿದಂತೆ ಈ ಶ್ರೇಷ್ಠವೂ, ಪವಿತ್ರವೂ ಆದ ಸಾರ್ಥಕತೆಯು ಸಮಸ್ತ ವಿದ್ವನ್ಮಂಡಲಿಯು ವಿನಯದಿಂದ ಮೆಚ್ಚಿ ನಲಿಯುವಂತೆ ಮೂಡಿ ಬರಲಿ. ಈ ಸಾರ್ಥಕತೆಯ ಮಕರಂದವು ರಸಿಕರೆಂಬ ಗಿಳಿಗಳನ್ನೂ, ಗಮಕಿಗಳೆಂಬ ಕೋಗಿಲೆಗಳನ್ನೂ, ಸಹೃದಯರೆಂಬ ದುಂಬಿಗಳನ್ನೂ, ಜಿಜ್ಞಾಸುಗಳೆಂಬ ಜೀವ ಕೋಟಿಗಳನ್ನು ಸದಾ ತನ್ನೆಡೆಗೆ ಬರಮಾಡಿಕೊಳ್ಳಲಿ. ಓದುಗರೆಂಬ ದುಂಬಿಗಳು ಈ ಸಾರ್ಥಕತೆಯೆಂಬ ಹೂವಿನ ಮಧುರವಾದ ಮಕರಂದವನ್ನು ಹೀರಿ, ವಿದ್ವಾಂಸರ ಸಭೆಯೆಂಬ ಸರೋವರದಲ್ಲಿ ಸುಲಲಿತವಾಗಿ ಝೇಂಕರಿಸಲಿ.

ಹೃದಯ ಸಂವೇದನೆಯಂತೆ, ಸಂದೇಶದಂತೆ ಸತ್ಯತೆಯು ಸಾಬೀತಾಗಿ ಮಾನವಮತದ ವಿಶ್ವಪಥದ ಹಿರಿಮೆಗರಿಮೆಗಳನ್ನು ಸಾರುವ ಮಹಾಮೇರು ಕಾವ್ಯವಾಗಿ, ಕಾವ್ಯ ಪ್ರಪಂಚದಲ್ಲಿ ಸಾರ್ಥಕತೆ ಬೆಳಗಲಿ.

ಈ ಸಾರ್ಥಕತೆಯು ಭಾರತೀಯ ಸಂಸ್ಕೃತಿಯ ಅಳತೆಗೋಲಾಗಿ ಭಾವಿಸಲ್ಪಟ್ಟು, ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಜನಪ್ರಿಯವಾಗಿ, ಭಾರತೀಯ ಕಾವ್ಯಾಮೃತವನ್ನು ಪಾನ ಮಾಡಬೇಕೆಂದು ಬಯಸುವ ವಿಶ್ವದ ಸಮಸ್ತ ಕೋಟಿಮಾನವರಿಗೂ ಹಾಲಿನ ಹೊಳೆಯಾಗಲಿ, ಅಮೃತ ಸಾಗರವಾಗಲಿ, ವಿಶ್ವಮಾನವರ, ಭಾರತೀಯರ ಹಾಗೂ ಕನ್ನಡಿಗರ ಅಭಿಮಾನವನ್ನು ಕೆರಳಿಸಿ, ಕನ್ನಡ ಸಾಹಿತ್ಯದ ಶೆಹನಾಯ್ ಊದಿ, ಕನ್ನಡ ಕಹಳೆ ಮೊಳಗಲಿ. ಈ ಸಾರ್ಥಕತೆಯ ಕೀರ್ತಿಲತೆ ಕನ್ನಡ ನಾಡಿನಲ್ಲೆಲ್ಲಾ ಹಬ್ಬಿ, ಭಾರತದೇಶದಲ್ಲೆಲ್ಲಾ ಹರಡಿ, ವಿಶ್ವದಾದ್ಯಂತ ವ್ಯಾಪಿಸಲಿ.

ಡಾ|| ಸಿ. ರಾಮಸ್ವಾಮಿ

ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ,

ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೂಡುತ್ತದೆ,

ಕನ್ನಡಕ್ಕಾಗಿ ಕಿರು ಬೆರಳೆತ್ತಿದ್ದರೂ ಸಾಕು,

ಅದೇ ಗೋವರ್ಧನ ಗಿರಿಯಾಗುತ್ತದೆ.

– ಕನ್ನಡದ ಕಂಪು ಕುವೆಂಪು

ಸಂಗೀತಕ್ಕಾಗಿ ಕೊರಳೆತ್ತು, ನಿನ್ನ ಕಂಠಸ್ವರ ಕಾಮಧೇನುವಾಗುತ್ತದೆ.
ಸಾಹಿತ್ಯಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.
ಸಂಸ್ಕೃತಿಗಾಗಿ ಕಿರು ಬೆರಳೆತ್ತಿದ್ದರೂ ಸಾಕು,
ವಿಶ್ವ ಶಾಂತಿಗೆ ನಾಂದಿಯಾಗುತ್ತದೆ.

ಡಾ|| ಸಿ. ರಾಮಸ್ವಾಮಿ

# ಕೃತಜ್ಞತೆ

ಸಾಕ್ಷಾರತೆಯ ಎರಡನೇಯ ಭಾಗ " ಸಾಹಿತ್ಯ " ಈ ಸತ್ಕೃತಿಯ ರಚನೆಯಲ್ಲಿ ಕನ್ನಡ ಹಾಗೂ ಆಂಗ್ಲಭಾಷೆಯ ಹಲವಾರು ಗ್ರಂಥಗಳಿಂದ ಪ್ರಯೋಜನ ಪಡೆದಿದ್ದೇನೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಿರಿಯರ-ಹಿರಿಯರ ಅನೇಕ ಜೀವನಾನುಭವಗಳನ್ನು ಕೇಳಿ, ಓದಿ ತಿಳಿದುಕೊಂಡಿರುವುದನ್ನು ಈ ಬರಹದಲ್ಲಿ ಬಳಸಿ ಕೊಂಡಿದ್ದೇನೆ.

ಅನೇಕ ಮಹನೀಯರ ಸದ್ಗ್ರಂಥಗಳ ಸದ್ವಿಚಾರಗಳನ್ನು ಅಳವಡಿಸಿಕೊಂಡಿರುತ್ತೇನೆ. ಆಯಾಯ ಸಂದರ್ಭಗಳಲ್ಲಿ ಗ್ರಂಥ-ಗ್ರಂಥಕರ್ತರ ಹೆಸರುಗಳನ್ನು ವಿಶದವಾಗಿ ಸೂಚಿಸಬಯಸಿದ್ದೆ. ಆದರೆ ಆ ಗ್ರಂಥ-ಗ್ರಂಥಕರ್ತರ ಹೆಸರುಗಳನ್ನು ಸ್ಥಳಾವಕಾಶದ ಕೊರತೆಯಿಂದ ಅಲ್ಲಲ್ಲೇ ಸೂಚಿಸಲು ಸಾಧ್ಯವಾಗಿಲ್ಲ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಈ ಸತ್ಕೃತಿಯ ಹಸ್ತಪ್ರತಿಯನ್ನು ಓದಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಶದ್ಧೆಯಿಂದ ಸಕಾಲದಲದಲ್ಲಿ ಬಿ.ಕೆ. ಮರಿಯಪ್ಪ ಧರ್ಮಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಶ್ರೀ ಎನ್. ಪುಟ್ಟರುದ್ರರವರಿಗೂ, ಲಾಲಾಬಾಗ್ ಸಾಹಿತಿಯೆಂದೇ ಹೆಸರುವಾಸಿಯಾದ ಶ್ರೀಯುತ ಮಂಚಯ್ಯ ಹಾಗೂ ಶ್ರೀ ಎಂ.ಆರ್. ನರೇಂದ್ರರವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಈ ಪ್ರಕಟಣೆಯ ಮುನ್ನಡೆಯನ್ನು ಆಗಿಂದಾಗ್ಗೆ ವಿಚಾರಿಸಿ, ಅನೇಕ ರೀತಿಯ ಸಹಾಯಮಾಡಿ ಪ್ರೋತ್ಸಾಹಿಸಿದ ಪುನರ್ಜನ್ಮ ಸಂಶೋಧನಾ ಕೇಂದ್ರದ ಅಭಿಮಾನಿಗಳಾದ ಶ್ರೀ ಎಸ್.ರಮೇಶ್, ಶ್ರೀ ಎಮ್.ಎಸ್. ರಾಮಯ್ಯ ಇತ್ಯಾದಿ ಸಹೃದಯರಿಗೆ ನನ್ನ ಅನಂತ ಧನ್ಯವಾದಗಳು.

ಈ ಸತ್ಕೃತಿಯನ್ನು ಹೊರತರಲು ನನ್ನೊಡನೆ ಬಾಗಿಗಳಾದ ನನ್ನ ಧರ್ಮಪತ್ನಿ ಶ್ರೀಮತಿ ಬಿ.ಎಲ್. ಮಂಗಳಗೌರಿ, ನನ್ನ ಸುಪುತ್ರಿಯರಾದ ಶ್ರೀಮತಿ ಆರ್. ಸೌಮ್ಯ, ಶ್ರೀಮತಿ ಆರ್. ಸುಷ್ಮ, ಕುಮಾರಿ ಆರ್.ಸುಷುಪ್ತಿ ಇವರುಗಳು ನೀಡಿದ ಸಹಕಾರವನ್ನು ನಾನು ಎಂದೆಂದಿಗೂ ಮರೆಯಲಾರೆ. ವಾನೀಗ ಅವರ ಸಹಾಯವನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ.

ಡಾ॥ ಸಿ. ರಾಮಸ್ವಾಮಿ

"ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿಯುವುದು
ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು"

– ಕನ್ನಡದ ಕಂಪು ಕುವೆಂಪು

" ಪುನರ್ಜನ್ಮ ಸಂಶೋಧಕ ರಚಿಸಿದನೆಂದರೆ
ಕಲಿಯುಗ ಕೃತಯುಗವಾಗುವುದು
ವಿಶ್ವಮಾನವ ಧರ್ಮ ಉದಯಿಸುವುದು
ಭೂಲೋಕದಲ್ಲಿ ಸಾಕ್ಷತ್ಕಾರ ಜ್ಞಾನ ಮಿಂಚುವುದು "

ಡಾ॥ ಸಿ. ರಾಮಸ್ವಾಮಿ

# ಅರ್ಪಣೆ– ಸಮರ್ಪಣೆ

ಸಂಪತ್ತಿನ ಸಂಗ್ರಹದಲ್ಲಿ, ಸಲ್ಲದ ಸಲ್ಲಾಪದಲ್ಲಿ,
ಸಂಕಷ್ಟಗಳ ಸುಳಿಯಲ್ಲಿ ಸದಾ ಸುತ್ತುತ್ತಾ
ಸಂತೃಪ್ತರಾಗಿರುವ ಸಾಮಾನ್ಯರಿಗೆ,

ಸಿದ್ಧಹಸ್ತರಾಗಿ ಸಹಾಯ ಸಹಕಾರಗಳನ್ನು ಸಂವತ್ಸರಗಳಿಂದ
ಸನ್ಮಾರ್ಗದಿಂದ ಸದಾ ನೀಡುತ್ತಾ ಸತ್ಸಂಗದ ಸದ್ವಿಚಾರಗಳಿಂದ
ಸರ್ವರನ್ನೂ ತಮ್ಮೆಡೆಗೆ ಸೆಳೆಯುತ್ತಿದ್ದ

ನನ್ನ ಪರಮಪೂಜ್ಯ ಮಾತಾಪಿತೃಗಳಾದ
ಶ್ರೀಮತಿ ಸಿದ್ದಮ್ಮ ಮತ್ತು ಶ್ರೀ ಚನ್ನೇಗೌಡರ



ಪಾದಾರವಿಂದಗಳಿಗಳಿಗೆ

ಗೌರವ ಹೃತ್ಪೂರ್ವಕ

## ಅರ್ಪಣೆ – ಸಮರ್ಪಣೆ

## ವಿಶ್ವಮಾನವ ಸಂಸ್ಕೃತಿಯ ಕನ್ನಡದ ಕಹಳೆ ಮೊಳಗಲಿ

ಕನ್ನಡದ ರವಿ ತಾ ಮೂಡಿ ಬಂದ ಬೆಳಕನ್ನು ತಾ ತಂದಾ
ವಿದ್ಯೆಯ ಕಲಿತು ವಿದ್ಯೆಯ ಕಲಿಸಿ ಜ್ಞಾನವಾ ಹರಡೋಣ
ಸತ್ಯ ಧರ್ಮ ನ್ಯಾಯದ ಮಾರ್ಗದಲ್ಲಿ ಮುಂದೆ ಸಾಗೋಣ
ಪ್ರೇಮ ಕರುಣಯ ಕಲಿಸಿ ಶಾಂತಿ ಸಹನೆಯ ಬೆಳೆಸೋಣ
ಜಾತಿ ಧರ್ಮ ಭೇದವ ತೊರೆದು ಒಂದಾಗಿ ಬಾಳೋಣ
ಒಂದೇ ಜಗವು ಒಂದೇ ಕುಲವು ಒಂದೇ ದೈವವು
ಸತ್ಯ ಧರ್ಮಗಳೆರಡು ನಮ್ಮ ಬಾಳಿನ ಕಣ್ಣಾಗಿರಲಿ
ಶಾಂತಿಯೆ ಉಸಿರಾಗಿರಲಿ ಸೇವೆಯೆ ಗುರಿಯಾಗಿರಲಿ
ಒಮ್ಮನದಿಂದ ಎಲ್ಲರು ದುಡಿದು ಜಗವನೆಗೆಲ್ಲೋಣ
ವಿಶ್ವಮಾನವ ಸಂಸ್ಕೃತಿಯ ನವಯುಗ ನಿರ್ಮಿಸೋಣ
ಸಿರಿಗನ್ನಡದ ಭಾಷಾಸಾಹಿತ್ಯವ ಸ್ವರ್ಣಾಕ್ಷರದಲ್ಲಿ ಬರೆಯೋಣ
ಲೋಕ ಸನ್ಮಾನಿತ ಸತ್ಯಯುಗ ಉದಯ ಚರಿತ್ರೆಯ ಸ್ವಾಗತಿಸೋಣ

ಮೊಳಗಲಿ

ಮೊಳಗಲಿ

**ಮೊಳಗಲಿ ವಿಶ್ವಮಾನವ ಸಂಸ್ಕೃತಿಯ**

**ಕನ್ನಡ ಕಹಳೆ ಮೊಳಗಲಿ**





**ಸಿರಿಗನ್ನಡಂ ಗೆಲ್ಗೆ**

**ಸಿರಿಗನ್ನಡಂ ಬಾಳ್ಗೆ**


**ಇದು**

**ಪುನರ್ಜನ್ಮ ಸಂಶೋಧನಾ ಕೇಂದ್ರ ಆಚರಿಸುತ್ತಿರುವ**

**ಕನ್ನಡ ರಾಜ್ಯೋತ್ಸವ**

**ಕನ್ನಡ ವಿಜಯೋತ್ಸವ**



## ಸ್ವಾಗತ – ಸುಸ್ವಾಗತ

ಸರ್ವರನು ಸುಸ್ವಾಗತಿಸುವ ಸುಯೋಗದ ಸವಿನೆನಪಿನಲ್ಲಿ ನಾ ನಿಂದು

ಓದುಗರಿಗೆ ಹೊಸ ಹೊಸ ಆಸೆ–ಆಕಾಂಕ್ಷೆಯ ಸುಜ್ಞಾನ ಸಂದೇಶ ನಾ ತಂದು

ಮುಂದಿನ ಕೃತಯುಗದಲ್ಲಿ ಪಂಚಮ ವೇದಗಳೆಂದೇ ಕರೆಯಬಹುದಾದ ಈ ಸತ್ಕೃತಿಗಳ
ಜ್ಞಾನ, ವಿಜ್ಞಾನ, ಸುಜ್ಞಾನ, ದಿವ್ಯಜ್ಞಾನ ದೇಗುಲಕೆ
ಎಲ್ಲರೂ ಕೈಮುಗಿದು ಬನ್ನಿರೆಂದು
ವಿನಂತಿಸಿ ಸುಸ್ವಾಗತಿಸುವ ಕಾಲ ಸಮೀಪಿಸುತ್ತಿರುವುದು ನಿಮ್ಮೊಡನಿಂದು

ಇದೊಂದು ಶುಭಘಳಿಗೆ
ಅನೇಕ ಜನ್ಮಜನ್ಮಾಂತರಗಳಿಗೆ

ಒಮ್ಮೊಮ್ಮೆ ತಾ ಮೂಡಿ ಬರುವ ಸಾರ್ಥಕತೆಯ ಜ್ಞಾನಾನುಭವದ ಶುಭಗಳಿಗೆ
ಸರ್ವರೂ ಸವಿಯ ಬಯಸುವ ಸಾಕ್ಷಾತ್ಕಾರ ದಿವ್ಯಜ್ಞಾನಾಮೃತದ ಅಮರಗಳಿಗೆ

# 1. ಸಾಹಿತ್ಯ

ಅಂದು ಭಾನುವಾರ. ಬೆಂಗಳೂರು ಮೆಡಿಕಲ್ ಕಾಲೇಜಿನ ಆಡಿಟೋರಿಯಂನಲ್ಲಿ ಕಾಲೇಜಿನ ಡೀನ್ ಡಾ॥ ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಶಾಸ್ತ್ರದ ಮಕರಂದ ಎಂಬ ವಿಷಯದ ಬಗ್ಗೆ ಚರ್ಚಾಕೂಟ ಪ್ರಾರಂಭವಾಯಿತು.

ಆಗ ಡಾ॥ಶೀಲ ಡಾ॥ರಾಮುವಿಗೆ ನೇರವಾಗಿ ಎದುರಾಗಿ ಬಂದು ಕುಳಿತಳು. ಒಂದು ಕಡೆ ವಿನಯ ಮತ್ತು ಗಾಂಭೀರ್ಯ ಮೂರ್ತಿಯೇ ಆಗಿದ್ದ ಡಾ॥ರಾಮು ಸುಸಂಸ್ಕೃತ ತರುಣನಾಗಿ ಕುಳಿತಿದ್ದರೆ ಇನ್ನೊಂದು ಕಡೆ ಸ್ಫುರದ್ರೂಪಿಣಿ ಸೌಂದರ್ಯಗಳ ಮೂರ್ತಿಯೇ ಆಗಿದ್ದ ತರುಣಿಯಾದ ಡಾ॥ಶೀಲ ಸಂಭಾಷಣೆಗೆ ಮಂಡಿಸಿದ್ದಳು.

ಆಡಿಟೋರಿಯಂನಲ್ಲಿ ಜನರು ಕಿಕ್ಕಿರಿದು ತುಂಬಿ ಚಪ್ಪಾಳೆ ಸುರಿಮಳೆಗೈದರು. ಡಾ॥ರಾಮು ಮತ್ತು ಡಾ॥ಶೀಲ ಕಣ್ಣು ಮುಚ್ಚಿ ವಾಗ್ದೇವಿಯನ್ನು ನೆನೆದರು. ಕಾಲೇಜಿನ ಎದುರಿಗಿದ್ದ ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ಸಮಯದ ಅರ್ಚನೆಯ ಘಂಟಾನಾದವು ಜಾಗಟೆ, ಶಂಖನಾದದ ಧ್ವನಿ ವಾದ್ಯ ಘೋಷಣೆಗಳ ಜೊತೆಗೆ ಮೊಳಗುತ್ತಿತ್ತು

## ಸಾಹಿತ್ಯ ಶಾಸ್ತ್ರದ ಮಕರಂದ

ಡಾ॥ಶೀಲ : ಸಾಹಿತ್ಯವೆಂದರೇನು ?

ಡಾ॥ರಾಮು: ನಾವು ಸಾಮಾನ್ಯವಾಗಿ ಒಂದು ಭಾಷೆಯಲ್ಲಿ ಬರೆಯಬಹುದಾದ ಗ್ರಂಥಗಳ ಸಮೂಹಕ್ಕೆ ಸಾಹಿತ್ಯವೆಂದು ಕರೆಯುವೆವು.

ಯಾವುದನ್ನು ಓದಿದರೆ ಅಥವಾ ಕೇಳಿದರೆ ಮಾನವನ ಹೃದಯದಲ್ಲಿ ಅನಿರ್ವಚನೀಯವಾದ ಚಲನೆಯ ಅನುಭವವುಂಟಾಗುತ್ತದೆಯೋ ಅದೇ ಸಾಹಿತ್ಯ.

ಸಾಹಿತ್ಯವನ್ನು ಓದುತ್ತಿದ್ದರೆ ಅಥವಾ ಕೇಳುತ್ತಿದ್ದರೆ ಸ್ವಂತ ನಮ್ಮಲ್ಲಿ ನಾವೇ ಏನೋ ಒಂದು ಹೊಸ ಉತ್ಸಾಹ, ಚೇತರಿಕೆ, ವ್ಯಕ್ತಿತ್ವವನ್ನು ಕ್ರಮೇಣ ಕಂಡುಕೊಳ್ಳಲು ಸಾಧ್ಯ.

ಸಾಹಿತ್ಯ ಜೀವನದ ಕನ್ನಡಿಯೂ ಹೌದು, ಜೀವನದ ವಿಮರ್ಶೆಯೂ ಹೌದು. ಮಾನವನು ಪ್ರಗತಿಯ ಕಡೆ ಹೋಗುವಾಗ ಸಾಹಿತ್ಯ ಅವನನ್ನು ಪ್ರಾಕೃತಿತನದ ಸಂಸ್ಕೃತಿಯ ಕಡೆಗೆ ಕರೆದೊಯ್ಯುತ್ತದೆ.

ಡಾ॥ಶೀಲ : ಸಾಹಿತ್ಯದ ಮೂಲದ್ರವ್ಯವೇನು ?

ಡಾ॥ರಾಮು : ಕಲಾತ್ಮಕತೆಯು ಸಾಹಿತ್ಯದ ಮೂಲದ್ರವ್ಯ.

ಡಾ॥ಶೀಲ : ಸಾಹಿತ್ಯವೆನ್ನುವುದು ಹೇಗೆ ವ್ಯಕ್ತವಾಗಬೇಕು ?

ಡಾ॥ರಾಮು : ಸಾಹಿತ್ಯ ಕೇವಲ ವರದಿಯಂತೆ ವ್ಯಕ್ತವಾಗದೇ, ಕಲಾತ್ಮಕವಾಗಿ ವ್ಯಕ್ತಗೊಂಡರೆ ಮಾತ್ರ ಈ ಸಾಹಿತ್ಯದಲ್ಲಿ ಮಾನವನ ಅನಿಸಿಕೆಗಳು ಅನುಭವ ವಿಶೇಷಗಳು, ನಾಡಿನ ಇತಿಹಾಸ ಹಾಗೂ ಸಂಸ್ಕೃತಿಗಳನ್ನು ವ್ಯಕ್ತಗೊಂಡಿರುವುದುಂಟು.

ಡಾ॥ಶೀಲ : ಹೇಗಿರುವುದು ಸಾಹಿತ್ಯ ?

ಡಾ॥ರಾಮು : ಬುದ್ಧಿ ಮನಸ್ಸುಗಳ ವರ್ಧಕವೂ, ಸಂಸ್ಕೃತಿ ಸಂಪನ್ನವೂ, ಜೀವನ ಸೌಂದರ್ಯ ದಾಯಕವೂ ಆದ ಆತ್ಮಾಕರ್ಷಕ ಮತ್ತು ಅಹ್ಲಾದಕರವಾದ " ಅಕ್ಷರ ಮಾಧ್ಯಮ " ಸಾಹಿತ್ಯ.

ಸಾಹಿತ್ಯ ರಸ ಮನಸ್ಸಿಗೆ ಇಂಪಾಗಿ, ಜೀವಕ್ಕೆ ಸಂಸ್ಕಾರಕಾರಿಯಾಗಿದೆ.

ಸಾಹಿತ್ಯದಿಂದ ಮನುಷ್ಯನ ತಿಳುವಳಿಕೆ, ನಂಬಿಕೆ, ಅನುಭವ, ಮನೋಭಾವ, ಬುದ್ಧಿ, ಪರಿಣಾಮಕಾರಿಯಾದ ಶಕ್ತಿಯಾಗಿ ಮಾನವನನ್ನು ವಿಶ್ವಮಾನವನನ್ನಾಗಿ, ದೇವಮಾನವನ ನ್ನಾಗಿ ಮಾಡುತ್ತದೆ.

ಸಾಹಿತ್ಯ ಅನಂತವಾದ ವ್ಯಾಪ್ತಿಯಿಂದ ಕೂಡಿ ನಾಟಕ, ಕಾದಂಬರಿ, ಕವನ ಅಥವಾ ಮಹಾಕಾವ್ಯದ ರೂಪದಲ್ಲಿರುತ್ತದೆ.

ಡಾ॥ಶೀಲ : ಸಾಹಿತ್ಯದಲ್ಲಿ ಎಷ್ಟು ಪ್ರಕಾರಗಳಿವೆ ?

ಡಾ॥ರಾಮು : " ಶುದ್ಧ ಸಾಹಿತ್ಯ " ಮತ್ತು " ಶಾಸ್ತ್ರ ಸಾಹಿತ್ಯ" ಎಂಬ ಎರಡು ಪ್ರಕಾರಗಳು.

ಡಾ॥ಶೀಲ : " ಶುದ್ಧ ಸಾಹಿತ್ಯ" ಏನನ್ನು ಒಳಗೊಂಡಿರುತ್ತದೆ ?

ಡಾ॥ರಾಮು : ಕಥೆ, ಕಾದಂಬರಿ, ಕಾವ್ಯ, ನಾಟಕ ಇವೆಲ್ಲ ಶುದ್ಧ ಸಾಹಿತ್ಯದಲ್ಲಿ ಸೇರುವುವು.

ಡಾ॥ಶೀಲ : " ಶಾಸ್ತ್ರ ಸಾಹಿತ್ಯ" ಏನನ್ನು ಒಳಗೊಂಡಿರುತ್ತದೆ ?

ಡಾ॥ರಾಮು : ಭಾಷಾಶಾಸ್ತ್ರ, ವ್ಯಾಕರಣ, ಛಂದಸ್ಸು, ಕಾವ್ಯ ಮೀಮಾಂಸೆ ಗ್ರಂಥಸಂಪಾದನೆ ಇವೆಲ್ಲಾ ಶಾಸ್ತ್ರದಲ್ಲಿ ಸೇರುವುವು.

ಡಾ॥ಶೀಲ : " ಶುದ್ಧ ಸಾಹಿತ್ಯ" ಮತ್ತು " ಶಾಸ್ತ್ರ ಸಾಹಿತ್ಯ" ಗಳಲ್ಲಿ ಯಾವ ರೀತಿ ಭಿನ್ನವಾಗಿವೆ ?

ಡಾ॥ರಾಮು :ಶುದ್ಧ ಸಾಹಿತ್ಯ ಹೃದಯಕ್ಕೆ ಸಂಬಂಧಿಸಿದರೆ, ಸಾಹಿತ್ಯ ಶಾಸ್ತ್ರ ಬುದ್ಧಿಗೆ ಸಂಬಂಧಿಸಿರುತ್ತದೆ.

ಡಾ॥ಶೀಲ : " ಶುದ್ಧ ಸಾಹಿತ್ಯ" ಮಾನವನ ಮೇಲೆ ಯಾವ ಪರಿಣಾಮ ಬೀರುತ್ತದೆ ?

ಡಾ॥ರಾಮು : ಶುದ್ಧ ಸಾಹಿತ್ಯ ಮಾನವನ ಮನಸ್ಸನ್ನು ಅರಳಿಸಿ ಆತನಿಗೆ ಆನಂದವನ್ನುಂಟು ಮಾಡುವುದರ ಮೂಲಕ ಆತನ ಹೃದಯ ಪರಿವರ್ತನೆ ಮಾಡುತ್ತದೆ.

ಡಾ॥ಶೀಲ : " ಶಾಸ್ತ್ರ ಸಾಹಿತ್ಯ " ಮಾನವನ ಮೇಲೆ ಯಾವ ಪರಿಣಾಮ ಬೀರುತ್ತದೆ ?

ಡಾ॥ರಾಮು : ಶಾಸ್ತ್ರ ಸಾಹಿತ್ಯ ಜಂಗು ಹಿಡಿದ ಆತನ ಬುದ್ಧಿಗೆ ಸಾಣೆಯಿಕ್ಕಿ ಅದನ್ನು ಹೊಳಪು ಗೊಳಿಸುವುದು.

ಡಾ॥ಶೀಲ : ಸಾಹಿತ್ಯ ಒಂದು ಕಲೆಯೇ ? ಇದರಿಂದ ರಸಾನುಭವ ಉಂಟಾಗುವುದೇ ?

ಡಾ॥ರಾಮು: ಹೌದು, ಇದು ಒಂದು ಲಲಿತಕಲೆ, ಸಾಹಿತ್ಯ ಕಲೆಯೂ ರಸಗಳಿಂದ ಒಡಗೂಡಿರುವುದ ರಿಂದಲೇ ಮಾನವನಿಗೆ ಆನಂದವನ್ನು ಉಂಟುಮಾಡುತ್ತದೆ.

ಡಾ॥ಶೀಲ : ಸಾಹಿತ್ಯ ಮಾನವನ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರುತ್ತದೆ ?

ಡಾ॥ರಾಮು : ಮಾನವನ ಮನಸ್ಸನ್ನು ಮುದಗೊಳಿಸಿ ಆತನನ್ನು ಸುಸಂಸ್ಕೃತನನ್ನಾಗಿಸುತ್ತದೆ.

ಡಾ॥ಶೀಲ : ಸಾಹಿತ್ಯ ಮಾನವನ ಜೀವನದ ಮೇಲೆ ಯಾವ ಪರಿಣಾಮ ಉಂಟುಮಾಡುತ್ತದೆ ?

ಡಾ॥ರಾಮು :ಸಾಹಿತ್ಯ ಜೀವನದ ಕನ್ನಡಿಯೂ ಹೌದು, ಜೀವನದ ವಿಮರ್ಶೆಯೂ ಹೌದು. ಮಾನವನು ಪ್ರಗತಿಯ ಕಡೆ ಹೋಗುವಾಗ ಸಾಹಿತ್ಯ ಅವನನ್ನು ಪ್ರಾಕೃತಿತನದ ಸಂಸ್ಕೃತಿಯ ಕಡೆಗೆ ಕರೆದೊಯ್ಯುತ್ತದೆ.

ಡಾ॥ಶೀಲ : ಸಾಹಿತ್ಯದ ಹೆಗ್ಗಳಿಕೆ ಏನು ?

ಡಾ॥ರಾಮು : ಸಾಹಿತ್ಯ ಒಂದು ನಾಡಿನ ಅಮೂಲ್ಯವಾದ ಸಂಪತ್ತನ್ನು ಸೂಚಿಸುವುದೇ ಹೆಗ್ಗಳಿಕೆ.

ಡಾ॥ಶೀಲ : ಸಾಹಿತ್ಯದ ಗುರಿಯೇನು ?

ಡಾ॥ರಾಮು : ನಿತ್ಯ ಪರಿರ್ತನ ಶೀಲವಾದ ಈ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರಸರಣಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತಾ, ವಿಕಾಸ ಗೊಳಿಸುತ್ತಾ ಪೂರ್ಣತೆಯ ಕಡೆಗೆ ಕರೆದೊಯ್ಯುವುದೇ ಇದರ ಪರಮ ಗುರಿ.

ಡಾ॥ಶೀಲ : ಸಾಹಿತ್ಯದಲ್ಲಿ ಎಷ್ಟು ಬಗೆಯ ಸಾಹಿತ್ಯಗಳಿವೇ ?

ಡಾ॥ರಾಮು : ಸಾಮಾನ್ಯ ಸಾಹಿತ್ಯ ಮತ್ತು ಲಲಿತ ಸಾಹಿತ್ಯ.

ಸಂಗೀತಕ್ಕಾಗಿಯೇ ಅಳವಡಿಸುವಂಥ ಸಾಹಿತ್ಯ ಲಲಿತ ಸಾಹಿತ್ಯ.

ಮಿಕ್ಕೆಲ್ಲ ವಿಷಯಗಳನ್ನೂ ಪ್ರತಿಪಾದಿಸುವ ಸಾಹಿತ್ಯ ಸಾಮಾನ್ಯ ಸಾಹಿತ್ಯ.

ಡಾ॥ಶೀಲ : ಲಲಿತ ಸಾಹಿತ್ಯದ ಹೆಗ್ಗಳಿಕೆಯೇನು ?

ಡಾ॥ರಾಮು : ಲಲಿತ ಸಾಹಿತ್ಯಕ್ಕಾಗಿ ಹೊಂದಿಕೊಂಡು ನಾದ, ಲಯ ಬದ್ಧವಾದ ಸುಲಲಿತ ಪದಬಂಧ ಭಾಷಾಲಾಲಿತ್ಯ, ಭಾವ ಮಾಧೂರ್ಯ, ಶ್ರವಣೇಂದ್ರಿಯ ಸಂತೃಪ್ತಿಯ ಮಾಧ್ಯಮವಾಗಿರುವುದೇ ಹೆಗ್ಗಳಿಕೆ.

ಡಾ॥ಶೀಲ : ಲಲಿತ ಸಾಹಿತ್ಯ ಕೊಡುಗೆ ನೀಡಿದವರು ಯಾರು ?

ಡಾ॥ರಾಮು :ಹರಿದಾಸಕೂಟ ಸಂಪ್ರದಾಯದ ಮಹನೀಯರು. ಸಾಹಿತ್ಯ ಬುದ್ಧಿ ಪ್ರಚೋದನೆ ಮಾಡಿದ್ದಾರೆ. ಸಂಗೀತ ಹೃದಯದ ಭಾವನೆ ಪ್ರಚೋದನೆ ಮಾಡಿ ದಾಸರ ಕೃತಿಗಳು ಸಂಗೀತ ಸಾಹಿತ್ಯ ಗಳೆರಡರ ನಡುವೆ ಬಂದು ಸುವರ್ಣ ಸೇತುವೆಯನ್ನೇ ಕಟ್ಟಿ ಜನರಿಗೆ ಮಾರ್ಗದರ್ಶನ ಮಾಡುವ ರತ್ನ ಭಂಡಾರವಾಗಿ ಅಣಿ ಮುತ್ತಾಗಿ ನಿಂತಿದೆ.

ಡಾ॥ಶೀಲ : ಕರ್ನಾಟಕ ಸಂಗೀತದ ಹೆಸರಿನಲ್ಲಿ ಯಾವ ಪರಿಭಾಷೆಯ ಸಾಹಿತ್ಯ ವಿಶೇಷ ಪ್ರಚಾರದಲ್ಲಿದೆ.

ಡಾ॥ರಾಮು : ತೆಲುಗು ವಿಶೇಷ ಪ್ರಚಾರದಲ್ಲಿದೆ.

ಡಾ॥ಶೀಲ : ಸಂಗೀತ, ಸಾಹಿತ್ಯ ಯಾವ ರೀತಿ ಒಂದೊಕ್ಕೊಂದು ಪರಿಪೋಷಕವಾಗಿವೆ ?

ಡಾ॥ರಾಮು : ನಾದ, ಲಯಗಳ ಭಾವ ಮಾರ್ಧುಗಳ ಕೌಶಲ್ಯವನ್ನು ಕೇಳಿ ಸಂಗೀತ ತನ್ನ ಬಂಧಕ್ಕೆ ಕೌಶಲ್ಯಕ್ಕೆ ಮರುಳು ಮಾಡಿದರೆ, ಸಾಹಿತ್ಯ ತನ್ನ ಸೊಬಗು ಸೊಗಡುಗಳನ್ನು ಸವಿಸಿ ರಸಿಕ ವೃಂದಕ್ಕೆ ಸಂತಸಪಡಿಸುತ್ತದೆ.

ಲೋಕ ಜಾಗೃತಿ, ಜ್ಞಾನ ಪ್ರಚಾರವನ್ನು ಬಹು ಶೀಘ್ರವಾಗಿ ಮಾಡಲು ಅನುಕೂಲ. ಇದು ಸಂಸ್ಕಾರ ಹಾಗೂ ಪರಂಪರೆಯಿಂದ ಬಂದ ಒಂದು ಕ್ರಮ.

ಬಾಲ್ಯದಿಂದಲೂ ಅಂಥವು ಕಿವಿಗೆ ಬಿದ್ದುದರ ಪರಿಣಾಮ ಅವು ನಮಗೆ ಚಿಕ್ಕಂದಿನಲ್ಲೇ ಬಾಯಿಪಾಠವಾಗಿ ಬಿಟ್ಟಿರುತ್ತವೆ. ಅಲ್ಲದೆ ಒಂದೇ ರಾಗದಲ್ಲಿ ಒಂದೇ ಗತಿಯಲ್ಲಿ ಅನೇಕ ರಚನೆಗಳು ಇರುವುದರಿಂದ ರಾಗ ತೀರಾ ಪರಿಚಿತವಾಗಿ ಮೇಲಿಂದ ಮೇಲೆ ಕಿವಿಗೆ ಬಿದ್ದು ಸುಲಭವಾಗಿ ಹಾಡಲು ಬರುತ್ತದೆ.

**ಡಾ॥ಶೀಲ** : ನಾದೋಪಾಸನೆಯ ಮಹತ್ತರವೇನು ?

**ಡಾ॥ರಾಮು** : ಮೆಟ್ಟಿಲು. ಭಾರತೀಯ ಸಂಗೀತ ನಾದೋಪಾಸನೆ, ನಾದ ಸಾಧನೆ, ನಾದ ಸಿದ್ಧಿಗಳಲ್ಲಿ ಉನ್ನತ ಸ್ಥಾನವನ್ನು ಪಡೆದಿದೆ. ಇಲ್ಲಿ ನಾದಾನುಸಂಧಾನವೇ ಪರತತ್ವದ ಮೆಟ್ಟಿಲು.

ಉಪಾಸನೆಗಳಲ್ಲಿ ನಾದೋಪಾಸನೆ, ಭಕ್ತಿಮಾರ್ಗದಲ್ಲಿ ಒಂದು. ಮುಖ್ಯವಾದ ಮೀರಾ, ಕಬೀರ್, ತುಳಸೀದಾಸ್, ವಲ್ಲಭಾಚಾರ್ಯ, ತುಕರಾಮ್, ಜ್ಞಾನದೇವ ಮುಂತಾದ ಹಲವಾರು ದಾಸ ಶಿರೋಮಣಿಗಳಿಗೆ ಇದೇ ತತ್ವದ ಮಾರ್ಗವಾಗಿದೆ. ಕರ್ಮಸಿದ್ಧಿ, ಯೋಗಸಿದ್ಧಿ, ಜ್ಞಾನಸಿದ್ಧಿ ಯಂತೆಯೇ ನಾದಸಿದ್ಧಿಯೂ ಅತ್ಯಂತ ಮಹತ್ವದ ಮಜಲು.

**ಡಾ॥ಶೀಲ** : ಸಾಹಿತ್ಯ ಸಂಬಂಧವಾದ ಸಂಗೀತದ ವಿಶೇಷತೆಯೇನು ?

**ಡಾ॥ರಾಮು** : ಸಾಹಿತ್ಯ ಸಂಬಂಧವಾಧಿಯಾದ ಸಂಗೀತ ಹೃದಯ, ಮನ, ಬುದ್ಧಿ ಎಲ್ಲವನ್ನೂ ಏಕಕಾಲ ದಲ್ಲಿ ತಟ್ಟುತ್ತದೆ.

**ಡಾ॥ಶೀಲ** : ಕುವೆಂಪು, ದ. ರಾ. ಬೇಂದ್ರೆ, ಶಿವರಾಮ ಕಾರಂತರು ಸಾಹಿತಿ ಮತ್ತು ಸಾಹಿತ್ಯಗಳ ಹೆಗ್ಗಳಿಕೆಯನ್ನು ಯಾವ ರೀತಿ ವಿವರಿಸಿದ್ದಾರೆ ?

**ಡಾ॥ರಾಮು** : ಸಾಹಿತಿಯಾದವನು ತನ್ನ ಬುದ್ಧಿ ಭಾವಮಯವಾದ ಚಿತ್ಕೋಶವನ್ನು ಅಧ್ಯಯನದಿಂದ, ವಿದ್ವಜ್ಜನ ಸಂಪರ್ಕದಿಂದ, ಲೋಕಾನುಭವದಿಂದ, ಸ್ವಂತ ಚಿಂತನ ಧ್ಯಾನ ಸಾಧನಾದಿಗಳಿಂದ ಸುಪುಷ್ಟವನ್ನಾಗಿ, ಸುವಿಸ್ತೃತವನ್ನಾಗಿ, ಶ್ರೀಮಂತವನ್ನಾಗಿ ಮಾಡಿಕೊಳ್ಳಬೇಕು.

- ಕುವೆಂಪು

ಸಾಹಿತ್ಯವು ಸಮಾಜ ನಿರಪೇಕ್ಷವಲ್ಲ. ವಾಲ್ಮೀಕಿ, ವ್ಯಾಸ, ಕಾಳಿದಾಸ, ಷೇಕ್ಸ್‌ಪಿಯರ್, ಹೋಮರ್, ಗಯಯೆ, ಪಂಪ, ಹರಿಹರ, ಕುಮಾರವ್ಯಾಸ, ರತ್ನಾಕರ, ಪುರಂದರದಾಸರು ಹಾಳು ಸಮಾಜದಲ್ಲಿ ಹುಟ್ಟಲಾರರು. ಸಾಮಾಜಿಕ ಮನಃಸ್ಥಿತಿ ಪರಿಸ್ಥಿತಿಗಳಲ್ಲಿ ಜೀವಂತ ಬದಲಾವಣೆ ನಡೆಯುವಾಗಲೇ ಸಾಹಿತ್ಯವು ಜೀವಂತವಾಗುವುದು.

- ದ. ರಾ. ಬೇಂದ್ರೆ

ಸಾಹಿತ್ಯ ಮತ್ತು ಬದುಕು ಹತ್ತಿರ ಹತ್ತಿರ : ಅವು ಅವಳಿ ಜವಳಿ; ಒಂದರ ಉಸಿರು ಇನ್ನೊಂದರ ಉಸಿರು; ಒಂದರ ಜೀವ ಇನ್ನೊಂದರ ಜೀವ. ಬದುಕು ಪ್ರೇರಿಸದ ಸಾಹಿತ್ಯ ಬೊಬ್ಬಾಟ. ಬದುಕಿನಿಂದ, ಬದುಕಿನ ಅನುಭವದಿಂದ ಸ್ಫೂರ್ತಿ ಸೊಗಸು ಶಕ್ತಿಗಳನ್ನು ಗಳಿಸದೆಯೇ ಸುರಿಸುವ ಮಾತಿನ ಮಳೆ, ಜನತೆಯ ಕಿವಿಕಣ್ಣುಗಳಿಗೆ ಕೊಡುವ ಕರೆಕರೆ.

- ಶಿವರಾಮ ಕಾರಂತ

# 2. ಕವಿ

ಡಾ॥ಶೀಲ : ಕವಿ ಯಾರು ?

ಡಾ॥ರಾಮು: ಒಂದು ಸುಂದರವಾದ, ಭವ್ಯವಾದ ಕಾವ್ಯವನ್ನು ಸೃಷ್ಟಿಸುವ ಕಾವ್ಯ ನಿರ್ಮಾತೃ ಕವಿ ಎನಿಸುತ್ತಾನೆ.

"ಕವಿಃ ಕರೋತಿ ಕಾವ್ಯಂ".

ಕವಿ ಒಬ್ಬ ಪೂರ್ಣ ಮಾನವನ ಸಂಕೇತವಾಗಿ ಅಪೂರ್ಣ ಮಾನವರ ನಡುವೆ ನಿಲ್ಲುತ್ತಾನೆ.

ಇತರರು ಕನಸು ಕಾಣುವುದನ್ನು ಅವನು ಪ್ರತ್ಯಕ್ಷ ನೋಡುತ್ತಾನೆ.

ಅವನು ಓದುಗರನ್ನು ಒಂದು ಉನ್ನತ ಸಮಾಜದ ರೀತಿ ನೀತಿಗಳ ಮತ್ತು ಆಲೋಚನೆಯ ಉತ್ಕೃಷ್ಟ ಶೈಲಿಗೆ ಕರೆದೊಯ್ಯುತ್ತಾನೆ.

ಡಾ॥ಶೀಲ : ವಿಮರ್ಶಕರು ಯಾರು ?

ಡಾ॥ರಾಮು : ವಿಮರ್ಶಕರು ಯಾರೆಂದು ನಿಮಗೆ ಗೊತ್ತೆ ?

ಕಲೆ, ಸಾಹಿತ್ಯಗಳಲ್ಲಿ ವಿಫಲರಾದವರು – ಬೆಂಜಮಿನ್ ಡಿಸ್ರೇಲ್.

ವಿಮರ್ಶಕನೆಂದರೆ ಓದಲು ಕಲಿಸುವ ಹೆಳವ – ಚಾನಿಂಗ್ ಪೊಲಾಕ್.

## ಕವಿಯ ವಿವರಣೆ

ಡಾ॥ರಾಮು : ಬಲ್ಲವರನ್ನು ತಾತ್ವಿಕ, ವಿಜ್ಞಾನಿ, ಇತಿಹಾಸ ಲೇಖಕ, ಕವಿ ಎಂದು ವಿಂಗಡಿಸುವ ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿದೆ.

ಡಾ॥ಶೀಲ : ಭೌತ ಪ್ರಪಂಚದ ಮತ್ತು ಮಾನವ ಪ್ರಪಂಚದ ನಾನಾ ಚೋಧನೆಗಳಿಗೆ ಅವರಲ್ಲಿ ಒಬ್ಬೊಬ್ಬರಿಗೂ ತಮ್ಮತಮ್ಮದೇ ಆದ ಪ್ರತಿಕ್ರಿಯೆಯೂ ದೃಷ್ಟಿಕೋಣವೂ ಇರುವುದು ಸಹಜವೇ ಸರಿ.

ಡಾ॥ರಾಮು : ತಾತ್ವಿಕ, ವಿಜ್ಞಾನಿ, ಇತಿಹಾಸ ಲೇಖಕರಲ್ಲಿ ಬುದ್ಧಿಯ ಚಟುವಟಿಕೆಗೇ ಪ್ರಾಧಾನ್ಯ.

ಡಾ॥ಶೀಲ : ಕವಿಯಲ್ಲಾದರೊ ಬುದ್ಧಿಯ ಜೊತೆಗೆ ರಾಗಾವೇಶವೂ ವಿಭಾವನೆಯೂ ಸ್ಫೂರ್ತಿಯೂ ಕೂಡಿ ಕೊಂಡಿರುತ್ತವೆ.

ಡಾ॥ರಾಮು : ಕವಿಯ ನೋಟ ಒಂದು ರೀತಿಯ ಪರಿಪೂರ್ಣ ನೋಟ, ಮನುಷ್ಯನ ಎಲ್ಲ ಮುಖಗಳನ್ನೂ ಒಟ್ಟಿಗೆ ನೋಡುವ ನೋಟ. ಅವನು ವೀಕ್ಷಿಸುತ್ತಾನೆ, ಶಾಶ್ವತ ಸತ್ಯವನ್ನು, ಪರಮ ಸೌಂದರ್ಯವನ್ನು ವಚನಿಸುತ್ತಾನೆ.

ಡಾ॥ಶೀಲ : ಕವಿಯ ನುಡಿಗಟ್ಟು ನೇರವಾಗಿ ಹೃದಯಕ್ಕೆ ನುಗ್ಗಿ ಬೇರೂರಿ ನಿಲ್ಲುತ್ತದೆ. ಈ ಬಗೆಯ ನಂಬಿಕೆ ಬಹುಕಾಲದಿಂದ ನಿರ್ಮಿತವಾದವಾಗಿತ್ತು. ಅದರ ಪರಿಣಾಮವಾಗಿ ಕವಿಗಳ ಅಂತರ್ಯದಲ್ಲೂ ತಾವೇ ಶ್ರೇಷ್ಠರು, ಶಿಖರಪ್ರಾಯರು ಎಂಬ ಅಹಂಕಾರ ಮನೆಮಾಡಿತ್ತು.

ಡಾ॥ರಾಮು : ಕವಿಯ ಜನನಕ್ಕೂ ಬಾಳುವೆಗೂ ಬಂಗಾರದ ಆವರಣವಿದೆ. ಅಮೃತವೇ ಅವನ ಆಹಾರ. ಅವನೆದುರು ಸ್ವರ್ಗ ಯಾವಾಗಲೂ ತೆರೆದು ನಿಂತಿರುತ್ತದೆ. ಅಪೂರ್ವ ಸೊಬಗಿನಿಂದಲೂ ಅಗಾಧ ಶಕ್ತಿಯಿಂದಲೂ ಕೂಡಿದ ಅವನ ವಾಣಿ ಅಮರ ವಾಣಿ.

ಡಾ॥ಶೀಲ : ನಾಗರಿಕತೆ ಅಷ್ಟೇನೂ ಬೆಳೆಯದ ಪ್ರಾಚೀನ ತಲೆಮಾರುಗಳಲ್ಲಿ, ರಂಜಕವಾಗಿ ಮಾತನಾಡುವ ಚಾತುರ್ಯ ಒಂದೊಂದು ಬುಡಕಟ್ಟಿನಲ್ಲಿ ಒಬ್ಬನಿಗೊ ಇಬ್ಬರಿಗೊ ಇರುತ್ತಿತ್ತು.

ಡಾ॥ರಾಮು : ಅವರ ಮಾತುಗಳಿಂದ ಮುಗ್ಧರಾದ ಮಂದಿ ಅವರನ್ನು ಕವಿ (ಸ್ಕಾಪ್, ಬಾರ್ಡ್) ಎಂದು ಹೊಗಳುತ್ತ, ಅವರ ಬಗ್ಗೆ ಗೌರವದಿಂದ ನಡೆದುಕೊಳ್ಳುತ್ತಿದ್ದರು.

ಡಾ॥ಶೀಲ : ಈಗ ಇತರ ಮನುಜರಂತೆ ಕವಿಯೂ ಒಬ್ಬ ಮನುಷ್ಯ. ಅವನ ಧಮನಿಗಳಲ್ಲಿ ಹರಿಯುವುದೂ ರಕ್ತವೇ. ಶಬ್ದ ಸಾಮಗ್ರಿಯಲ್ಲಿ, ಅದನ್ನು ಉಪಯೋಗಿಸುವುದರಲ್ಲಿ, ಕವಿಯ ಅಳವು ಇತರರಿಗಿಂತ ಅಧಿಕ ಅಷ್ಟೆ. ಪ್ರತಿಯೊಬ್ಬನಲ್ಲೂ ಕವಿಯ ಅಂಶ ಕೊಂಚವಾದರೂ ಇದ್ದೇ ಇದೆ ಎಂಬ ಭಾವನೆಗೂ ಸ್ವಾಗತವುಂಟು.

ಡಾ॥ರಾಮು : ಭಾವಾವೇಶ, ವಿಭಾವನೆಗಳನ್ನು ಕುರಿತು ಸಂಶೋಧನೆ ಹೇರಳವಾಗಿ ಆಗಿ ಬಂದಿರುವುದರಿಂದ ಅವು ಕವಿಯ ಸ್ವತ್ತಲ್ಲ; ವಿಜ್ಞಾನಿ, ಚರಿತ್ರಕಾರ, ತತ್ತ್ವಜ್ಞರಲ್ಲೂ ಅವು ಕೆಲಸಮಾಡುತ್ತವೆ.

ಡಾ॥ಶೀಲ : ಸತ್ಯಕ್ಕೆ ಹಲವು ಮುಖಗಳಿರುವುದರಿಂದ ಯಾವೊಬ್ಬ ಅನ್ವೇಷಿಯೂ ಪೂರ್ಣಸತ್ಯವನ್ನು ಅವಲೋಕಿಸಲಾರ.

ಡಾ॥ರಾಮು : ಇನ್ನೊಂದು ವಿಚಾರ. ಕವಿಯ ದರ್ಶನ ಎಂಬ ಹೇಳಿಕೆಯಲ್ಲಿ, ಎಲ್ಲ ಕವಿಗಳಿಗೂ ಸಮನಾದ ಒಂದು ದರ್ಶನವಿದೆ ಎಂಬ ತಾತ್ಪರ್ಯ ಕುಳಿತಿದೆ.

ಡಾ॥ಶೀಲ : ಪ್ರಾಯಶಃ ವಿಜ್ಞಾನಿಗಳಲ್ಲಿ ಕೆಲವು ಸಂಗತಿಗಳನ್ನು ಕುರಿತು ಒಮ್ಮತವಿದೆ; ಚರಿತ್ರಕಾರರೆಲ್ಲರೂ ಹಲಕೆಲವು ಘಟನೆಗಳು ಜರುಗಿವೆಯೆಂದು ಸಮ್ಮತಿಸಿಯಾರು. ತತ್ತ್ವಜ್ಞರು ಎಷ್ಟು ಜನರಿದ್ದಾರೊ ಅಷ್ಟು ತೀರ್ಮಾನಗಳಿವೆ.

ಡಾ॥ರಾಮು : ಕವಿಗಳಲ್ಲೂ ಹಾಗೆಯೇ. ಕವಿಯ ದರ್ಶನ ಎಂಬುದನ್ನು ಬಿಟ್ಟುಕೊಟ್ಟು, ಆಯಾ ಕವಿಯ ದರ್ಶನ ಎಂದರೆ ನಿಜಾಂಶಕ್ಕೆ ಹತ್ತಿರವಾದೀತು

# 3. ಕಾವ್ಯ

ಡಾ||ಶೀಲ : ಕಾವ್ಯವೆಂದರೇನು ?

ಡಾ||ರಾಮು: ಆನಂದದೊಡನೆ ವಿಶಾಲವಾದ ಜ್ಞಾನವನ್ನು ತಂದುಕೊಡುವ ಸಾಧನವೇ ಕಾವ್ಯ.

ಸತ್ಯ, ಸೌಂದರ್ಯ, ಶಕ್ತಿ, ತತ್ವಗಳನ್ನು ಮನಸ್ಸಿನ ಕಲ್ಪನೆ ಹಾಗೂ ಊಹೆಗಳಿಂದ ಕಾವ್ಯ ಮೂರ್ತೀಕರಿಸುತ್ತದೆ.

ವಿಶ್ವದಲ್ಲಿರತಕ್ಕದ್ದೆಲ್ಲ ಅದರ ಸಾಧನ, ಆನಂದ ಮತ್ತು ಉದಾತ್ತೀಕರಣ ಅದರ ಗುರಿ, ಅದು ನಮ್ಮನ್ನು ರೂಪಿಸುವ, ಪೋಷಿಸುವ ಮತ್ತು ಸಂತಸಗೊಳಿಸುವ ಶಕ್ತಿಯನ್ನು ಪಡೆದು ಕೊಂಡಿರುತ್ತದೆ.

ಬಾಹ್ಯ ಮತ್ತು ಆಧ್ಯಾತ್ಮಿಕ ಜಗತ್ತಿನ ಸುಖಾನುಭವವನ್ನು ಸಜೀವವಾಗಿರಿಸಿ ಪ್ರಕೃತಿ ಸಂಪ್ರದಾಯಗಳ ನಡುವೆ ಅದು ನಿಲ್ಲುತ್ತದೆ.

ಕಾವ್ಯ ಸೌಂದರ್ಯವೇ ಅಲಂಕಾರ. " ವಾಕ್ಯಂರಸಾತ್ಮಕಂ ಕಾವ್ಯಂ ".

" ಜೇನು ತುಪ್ಪ ಸಿಹಿ, ಅದಕ್ಕಿಂತ ಸಿಹಿ ಅಮೃತ. ಅದಕ್ಕಿಂತ ಸಿಹಿ ಕವಿಯ ಮಾತು"

ಎಂಬ ಕವಿ ನುಡಿಯಿಂದ ಕಾವ್ಯದ ಸವಿ, ಸೌಂದರ್ಯದ ಅರಿವಾಗುವುದು.

ಕಾವ್ಯ ಕವಿಗೆ ಬಹಳ ಕೀರ್ತಿಯನ್ನು ಅಪಾರ ಆತ್ಮಶಾಂತಿಯನ್ನು ತಂದುಕೊಡುತ್ತದೆ. ಜೀವನ ಮತ್ತು ಕಾವ್ಯ ಎರಡೂ ಒಂದೇ ವಸ್ತುವಿನ ವಿಭಿನ್ನರೂಪಗಳೆನ್ನಬಹುದು.

ಡಾ||ಶೀಲ : ಕಾವ್ಯದ ಸಾರ್ಥಕತೆ ಯಾವಾಗ ?

ಡಾ||ರಾಮು : ಕವಿಯ ಕಾವ್ಯವನ್ನು ಅರ್ಥಮಾಡಿಕೊಂಡು ಕವಿ ಮನದಿಂಗಿತವನ್ನು ಅರಿತು, ಅರ್ಥಕ್ಕೆ ತಕ್ಕಂತಹ ರಾಗ ಹಾಗೂ ರಸ ಪರಿಪೋಷಕವೆನಿಸುವ ರಾಗ ಲಹರಿಯಲ್ಲಿ ಹೊಂದಿಸಿ ಭಾವನೆಗಳ ಸೌಂದರ್ಯವನ್ನು ಎತ್ತಿ ಹಿಡಿಯುವುದಲ್ಲದೆ ಭಾವಗೀತಾಶ್ರಮದಲ್ಲಿನ ಕಲಾಪರಿಪೂರ್ಣಕ್ಕೆ ಗೀತ ಗಾಯನದಲ್ಲಿ ಗುಂಪು ಹಾಡಿಕೆ, ಮಧುರ ರಾಗ ಸಂಯೋಜನೆ ಹಾಗೂ ಸುಂದರ ಕಾವ್ಯಗಳ ತ್ರಿವೇಣಿ ಸಂಗಮವಿದ್ದಾಗ ಈ ಕಾವ್ಯದ ಸಾರ್ಥಕತೆ.

ಡಾ||ಶೀಲ : ಕಾವ್ಯಗಾಯನ ಎಂದರೇನು ?

ಡಾ||ರಾಮು : ಮಧುರ ಕವಿತೆಗಳನ್ನು ಇಂಪಾದ ಧ್ವನಿಯಲ್ಲಿ, ಅತ್ಯಂತ ಮನೋಹರವಾದ, ರಮ್ಯವಾದ ಶೈಲಿಯಲ್ಲಿ ರಸಾನುಕೂಲವಾದ ಸ್ವರ ಸಮೂಹಗಳಿಂದ ಭಾವ ಪೂರ್ಣವಾಗಿ ಹಾಡು ವುದು ಕಾವ್ಯಗಾಯನ.

ಸಂಗೀತಕ್ಕೆ ಸಾಹಿತ್ಯದ ನೆರವು ದೊರೆತಾಗ ನವರಸ ಭಾವ ಪ್ರಕಟಣೆಗೆ ಹೆಚ್ಚು ಅನುಕೂಲವಾಗುತ್ತದೆ.

ನಾದ ಸಿದ್ಧಿಗೆ ಸಾಹಿತ್ಯಂಶದ ಅವಶ್ಯಕತೆ ಇಲ್ಲ ಎಂಬ ಮಾತು ನಿಜವಾದರೂ, ಬುದ್ಧಿ ಗಮ್ಯವಾದ ವಿಷಯ ಪ್ರತಿಪಾಧನೆ ಮನದಾಳಕ್ಕಿಳಿಯಲು ಸಂಗೀತಕ್ಕೆ ಸಾಹಿತ್ಯದ ರಸ ವಾಹಿನಿಯ ಸಂಬಂಧ ಪರಸ್ಪರ ಅವಶ್ಯಕ ಹಾಗೂ ಪೂರಕ ಕೂಡ.

# ಕಾವ್ಯದ ವಿವರಣೆ

ಡಾ॥ರಾಮು : ಕಾವ್ಯ ಉಗಮಗೊಂಡದ್ದು ಪ್ರಾಚೀನ ಕಾಲದ ಧಾರ್ಮಿಕ ವಿಧಿಗಳಲ್ಲಿ, ಮಂತ್ರಗಳಲ್ಲಿ ಹಾಗೂ ಜನಪದ ಸಾಹಿತ್ಯದಲ್ಲಿ ಎಂದು ತೋರುತ್ತದೆ.

ಡಾ॥ಶೀಲ : ವೇದ ಉಪನಿಷತ್ತುಗಳ ಕೆಲವು ಭಾಗಗಳು ಒಳ್ಳೆಯ ಕಾವ್ಯವಾಗಿದೆ. ಭರತಖಂಡದಲ್ಲಿ ಮಹಾಕಾವ್ಯ, ನಾಟಕಗಳಿಗೆ ಋಗ್ವೇದದ ಸಂವಾದ ಸೂಕ್ತಗಳ ಆಕರವೆಂದು ಹೇಳುತ್ತಾರೆ.

ಡಾ॥ರಾಮು : ಕವಿ ಯಾವಾಗಲೂ ಋಷಿ, ದ್ರಷ್ಟಾರ ಎಂದೇ ಪರಿಗಣಿತನಾಗಿದ್ದಾನೆ.

ಡಾ॥ಶೀಲ : ಕಾವ್ಯವೆಂದರೇನೆಂಬುದನ್ನು ಒಂದು ಮಾತಿನಲ್ಲಿ ಹೇಳುವುದು ಅಸಾಧ್ಯ. ಬದಲಾಗಿ, ಅದರ ಸ್ವರೂಪವನ್ನು ವಿವರಿಸಬಹುದು, ಅದರ ಉದ್ದೇಶ ಪ್ರಯೋಜನಗಳನ್ನು ಪಟ್ಟಿಹಾಕಬಹುದು, ಓದುಗನ ಮೇಲೆ ಅದು ಎಸೆಗುವ ಪರಿಣಾಮಗಳನ್ನು ಲೆಕ್ಕಿಸಬಹುದು, ಭಾರತೀಯರು ಸಿದ್ಧಕಾವ್ಯವನ್ನು ಕುರಿತು ವಿಚಾರ ಮಾಡಿದರೆ, ಪಾಶ್ಚತ್ಯರು ಕವಿಯ ಮನೋವ್ಯಾಪಾರಗಳನ್ನೂ ವಿಶ್ಲೇಷಿಸಿದ್ದಾರೆ.

ಡಾ॥ರಾಮು : ಮನಸ್ಸಿನ ಭಾವಗಳನ್ನು ಲಯಬದ್ಧ ಭಾಷೆಯಲ್ಲಿ ಸುಮೂರ್ತವಾಗಿ ಅಭಿವ್ಯಕ್ತಿಗೊಳಿಸುವ ಕಲೆ ಎಂದು ಕಾವ್ಯದ ಲಕ್ಷಣವನ್ನು ಸ್ಥೂಲವಾಗಿ ಹೇಳಬಹುದು.

ಡಾ॥ಶೀಲ : ಭಾರತೀಯ ಲಕ್ಷಣ ನಿರೂಪಣೆ : ಶಬ್ದಾರ್ಥಗಳು ಕೂಡಿ ಕಾವ್ಯವೆಂದು, ಕಾವ್ಯದ ಶರೀರವೆಂದರೆ ಇಷ್ಟವಾದ ಅರ್ಥವನ್ನುಳ್ಳ ಪದಸಮೂಹ ಎಂದು ದಂಡಿ ಹೇಳುತ್ತಾರೆ.

ಡಾ॥ರಾಮು : ವಾಮನ ಒಂದು ಕಡೆ ಕಾವ್ಯ ಅಲಂಕಾರದಿಂದ ಗ್ರಾಹ್ಯವಾಗುತ್ತದೆ, ಸೌಂದರ್ಯವೆ ಅಲಂಕಾರ ಎಂದೂ ಮತೊಂದು ಕಡೆ ಸೌಂದರ್ಯರೀತಿಯೇ ಕಾವ್ಯದ ಆತ್ಮವೆಂದೂ ಹೇಳಿದ್ದಾನೆ.

ಡಾ॥ಶೀಲ : ಎಲ್ಲ ಜ್ಞಾನದ ಉಸಿರು ಮತ್ತು ಸೂಕ್ಷ್ಮತರ ಚೈತನ್ಯವೇ ಕಾವ್ಯ.

ಡಾ॥ರಾಮು : ಶಕ್ತಭಾವಗಳ ಸಹಜ ಉಕ್ಕಿ ಹರಿಯುವಿಕೆ.

ಡಾ॥ಶೀಲ : ಕಾವ್ಯವೆಂದರೆ ಬುದ್ಧಿಯ ನೆರವಿಗೆ ಕಲ್ಪನೆಯನ್ನು ಆಮಂತ್ರಿಸುವುದರ ಮೂಲಕ ಸಂತೋಷವನ್ನು ಸತ್ಯದೊಡನೆ ಕೂಡಿಸುವ ಕಲೆ.

ಡಾ॥ರಾಮು : ಕಾವ್ಯ ವಿಜ್ಞಾನ ಕೃತಿಗಳಿಗೆ ವಿರುದ್ಧವಾದ ರಚನಾ ಪ್ರಕಾರ, ಅದರ ಸದ್ಯದ ಗುರಿ ಸಂತೋಷವೆ ಹೊರತು ಸತ್ಯವಲ್ಲ.

ಡಾ॥ಶೀಲ : ಕಾವ್ಯವೆಂದರೆ ಅತ್ಯುತ್ತಮ ಕ್ರಮದಲ್ಲಿ ಜೋಡಣೆಗೊಂಡ ಅತ್ಯುತ್ತಮ ಶಬ್ದಗಳು.

ಡಾ॥ರಾಮು : ಕಲ್ಪನೆಯ ಅಭಿವ್ಯಕ್ತಿಯೇ ಕಾವ್ಯ.

ಡಾ॥ಶೀಲ : ಸತ್ಯ ಸೌಂದರ್ಯ ಶಕ್ತಿಗಳನ್ನು ಕುರಿತ ಆವೇಶದ ಉದ್ಗಾರವೇ ಕಾವ್ಯ.

ಡಾ॥ರಾಮು : ಜೀವನದ ವಿಮರ್ಶೆ, ಮಾನವ ಶಬ್ದಗಳು ಮುಟ್ಟಬಹುದಾದ ಅತ್ಯಂತ ಆನಂದಪ್ರದವೂ ಪರಿಪೂರ್ಣವೂ ಆದ ಅಭಿವ್ಯಕ್ತಿ ಪ್ರಕಾರ.

ಡಾ॥ಶೀಲ : ಯಾವುದರಲ್ಲಿ ಜ್ಞಾನ ಕೂಡಲೆ ಭಾವವಾಗಿ ಪರಿವರ್ತಿತವಾಗುತ್ತದೋ ಮತ್ತು ಜ್ಞಾನದ ಒಂದು ಹೊಸ ಅಂಗವಾಗಿ ಮಾಪೊಳೆಯುತ್ತದೋ ಅಂಥ ಆತ್ಮವನ್ನು ಪಡೆದಿರುವಿಕೆಯೇ ಕಾವ್ಯ.

ಡಾ॥ರಾಮು : ಉದಾತ್ತ ಭಾವಗಳಿಗೆ ಉದಾತ್ತ ಭೂಮಿಕೆಯನ್ನು ಕಲ್ಪನೆಯಿಂದ ಧ್ವನಿಸುವಿಕೆಯೇ ಕಾವ್ಯ.

ಡಾ॥ಶೀಲ : ಬದುಕಿನ ಬಗ್ಗೆ ವ್ಯಕ್ತಿಯ ಪ್ರತಿಕ್ರಿಯೆಗಳನ್ನು ದಾಖಲುಮಾಡುವ ಕರಾರುವಾಕ್ಕು ಉಪಕರಣವೇ ಕಾವ್ಯ.

ಡಾ॥ರಾಮು :ಲೌಕಿಕವಾದ ಭಾವ ಸಾಧಾರಣೀಕರಣಗೊಂಡು ರಸವಾಗಿ ಪರಿಣಮಿಸಿ ಆಸ್ವಾದನೀಯವಾಗುತ್ತದೆ.

ಡಾ॥ಶೀಲ : ಕಾವ್ಯವೆಂದರೆ ಶಮ ಸ್ಥಿತಿಯಲ್ಲಿ ಸ್ಮೃತವಾದ ಭಾವಗಳು.

ಡಾ॥ರಾಮು : ಪ್ರತಿಭೆಯೇ ಕಾವ್ಯಕ್ಕೆ ಭಾರತೀಯ ಆಲಂಕಾರಿಕರ ನಿರ್ಣಯ, ಕವಿತ್ವ ಬೀಜಂ ಪ್ರತಿಭಾನಂ.

ಡಾ॥ಶೀಲ : ಹೊಸ ಹೊಸದನ್ನು ಉಲ್ಲೇಖಿಸುವ ಅಥವಾ ಹೊಳೆಯಿಸುವ ಪ್ರಜ್ಞೆಯೇ ಪ್ರತಿಭೆ, ಆ ಪ್ರತಿಭೆಯ ಉಸಿರಿನಿಂದ ಜೀವ ತುಂಬಿ ವರ್ಣಿಸಬಲ್ಲ ನಿಪುಣನೇ ಕವಿ, ಕವಿಕರ್ಮವೇ ಕಾವ್ಯ.

ಡಾ॥ರಾಮು : ಅಪೂರ್ವವಸ್ತು ನಿರ್ಮಾಣದ ಸಾಮರ್ಥ್ಯವುಳ್ಳದ್ದು ಕಾವ್ಯ.

ಡಾ॥ಶೀಲ : ಕವಿ ಪ್ರತಿಭೆಯ ಬಲದಿಂದ, ಸಮಾಜಹಿತ ಚಿತ್ತವಾಗಿ ಹೊಸ ಹೊಸ ಭಾವಗಳನ್ನು, ಅರ್ಥಗಳನ್ನು ಕಾಣುತ್ತಾನೆ.

ಡಾ॥ರಾಮು : ಅವನಿಗೆ ಲೋಕ ವಸ್ತುಗಳು ತಮ್ಮ ರಹಸ್ಯವನ್ನು ಬಿಟ್ಟುಕೊಡುತ್ತವೆ. ಅವುಗಳ ಜೀವಾಳವೆ ಅವನಿಗೆ ವಶವಾಗುತ್ತದೆ. ಅದೇ ಪದಸಮೂಹ, ಅದೇ ಅರ್ಥಸಂಪತ್ತು – ಆದರೂ ಕಟ್ಟುವ ಕೌಶಲದಿಂದ ಕಾವ್ಯ ಹೊಸದಾಗುತ್ತದೆ.

ಡಾ॥ಶೀಲ : ದಿನನಿತ್ಯದ ಸಾಮಾನ್ಯವಾದ ಮಾತು ಕಾವ್ಯದಲ್ಲಿ ಮಂತ್ರವಾಗುತ್ತದೆ.

ಡಾ॥ರಾಮು : ಕವಿ ಪ್ರತಿಭೆಯ ವಿದ್ಯುತ್ತು ಕಾವ್ಯದಲ್ಲಿ ಹರಿಯುವುದರಿಂದ, ವ್ಯುತ್ಪತ್ತಿ, ಅಭ್ಯಾಸ ಮುಂತಾದವು ಕವಿತೆಗೆ ಪರಿಕರಗಳು ಎಂದು ಹೇಳಲಾಗಿದೆ.

ಡಾ॥ಶೀಲ : ಏನು ಬೇಕಾದರೂ ಕಾವ್ಯಕ್ಕೆ ವಸ್ತುವಾಗಬಲ್ಲುದು; ಕವಿ ಪ್ರತಿಭೆಯಿಂದ ಅದು ರಸಾನುಭವಕಾರಿಯಾಗುತ್ತದೆ.

ಡಾ॥ರಾಮು : ರಮ್ಯ, ಅಸಹ್ಯ, ಉದಾರ, ನೀಚ, ಉಗ್ರ, ಪ್ರಸನ್ನ, ವಿಕೃತ – ಹೀಗೆ ವಸ್ತು ಯಾವುದಾದರೂ ಆಗಿರಲಿ, ಕಡೆಗೆ ವಸ್ತುವಲ್ಲದ್ದೆ ಆಗಿರಲಿ, ಕವಿಭಾವಕರ ಭಾವನೆಗೆ ವಿಷಯವಾದ ಮೇಲೆ ರಸಮಯವಾಗದ್ದು ಲೋಕದಲ್ಲಿ ಏನೊಂದೂ ಇಲ್ಲ.

ಡಾ॥ಶೀಲ : ಅಪಾರವಾದ ಕಾವ್ಯಪ್ರಪಂಚದಲ್ಲಿ ಕವಿಯೇ ಬ್ರಹ್ಮ ; ತನಗೆ ರುಚಿಸಿದಂತೆ ಅವನು ವಿಶ್ವವನ್ನು ಪರಿವರ್ತಿಸುತ್ತಾನೆ – ಎಂದು ಕವಿಯ ಹೆಗ್ಗಳಿಕೆಯನ್ನು ಆನಂದವರ್ಧನ ಸಾರಿದ್ದಾನೆ.

ಡಾ॥ರಾಮು : ಕಾವ್ಯ ಪ್ರಪಂಚ ಸ್ವತಂತ್ರವಾದುದು, ಸಂಪೂರ್ಣವಾದುದು, ಸ್ವಯಮಧಿಕಾರವುಳ್ಳದ್ದು.

ಡಾ॥ಶೀಲ : ಕಾವ್ಯಸತ್ಯ ಲೋಕಸತ್ಯಕ್ಕೆ ವಿರುದ್ಧವಾದದ್ದು ಎಂದು ಅರ್ಥವಲ್ಲ ; ನಿಯತಿಕೃತ ನಿಯಮರಹಿತ, ಅನನ್ಯ ಪರತಂತ್ರ ಎಂಬ ಮಾತುಗಳು ಕಾವ್ಯದ ಅಭಿವ್ಯಕ್ತಿ ವಿಧಾನವನ್ನು ಕುರಿತವು. ಕಾವ್ಯ ಚಿತ್ರಿಸುವುದು ಭಾವಸತ್ಯವನ್ನೆ ವಿನಾ ಬಾಹ್ಯಸತ್ಯವನ್ನಲ್ಲ.

ಡಾ॥ರಾಮು : ಭಾವಸತ್ಯ ಪ್ರತಿಮಾವಿಧಾನದ ಮೂಲಕ ಮಾತ್ರವೆ ಅಭಿವ್ಯಕ್ತವಾಗಬಲ್ಲದು. ಈ ವಿಧಾನ ಪ್ರತಿಕೃತಿ ವಿಧಾನದಂತಲ್ಲದೆ ನಿಯಮರಹಿತವಾಗುವುದು ಅನಿವಾರ್ಯ.

ಡಾ॥ಶೀಲ : ಅಂತೂ ಕಾವ್ಯಕ್ಕೂ ಲೋಕಕ್ಕೂ ಅಂತಹ ಸಂಬಂಧ ಉಂಟೇ ಉಂಟು. ಲೋಕವನ್ನು ಕಟ್ಟಿಕೊಂಡೇ ಕಾವ್ಯ ಮೇಲೇರಬೇಕು. ಅದು ಸಂಭಾವ್ಯತೆ ಗಡಿಯನ್ನು ದಾಟ ಕೂಡದು. ಔಚಿತ್ಯತತ್ತ್ವ ಇಲ್ಲಿಗೆ ವಿಸ್ತರಿಸಿ, ಕವಿಕಲ್ಪನೆಯಲ್ಲಿ ಔಚಿತ್ಯವಿರಬೇಕೆಂದು ಹೇಳಬಹುದು.

ಡಾ||ರಾಮು : ಅಷ್ಟರ ಮಟ್ಟಿಗೆ ಕಾವ್ಯದಲ್ಲಿ ಬುದ್ಧಿಯ ಅಂಶ ಅವಶ್ಯ.

ಬುದ್ಧಿ, ಭಾವಗಳ ವಿದ್ಯುದಾಲಿಂಗನವೇ ಪ್ರತಿಭೆ ಎಂಬ ಸೂಕ್ತಿ ಈ ದೃಷ್ಟಿಯಿಂದ ಅರ್ಥವತ್ತಾಗಿ ತೋರುತ್ತದೆ.

ಡಾ||ಶೀಲ : ಕಾವ್ಯ ದೃಷ್ಟಿಯೂ ಹೌದು, ಸೃಷ್ಟಿಯೂ ಹೌದು. ಬರಿಯ ದರ್ಶನದಿಂದಲೇ ಕವಿಪಟ್ಟ ಸಿಕ್ಕಲಾರದು; ವರ್ಣನವೂ ಅಷ್ಟೇ ಮುಖ್ಯ.

ಡಾ||ರಾಮು : ಋಷಿಯಲ್ಲದ ಕವಿಯಿಲ್ಲ : ದರ್ಶನವುಳ್ಳವನೇ ಋಷಿ. ತತ್ತ್ವದರ್ಶನವನ್ನು ಹೊಂದಿರುವಷ್ಟಕ್ಕೆ ಒಬ್ಬನಿಗೆ ಕವಿಯೆಂಬ ಹೆಸರು ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಆದರೆ ದರ್ಶನ ಮತ್ತು ವರ್ಣನ ಇವೆರಡೂ ಇದ್ದರೆ ಲೋಕದಲ್ಲಿ ಕವಿಯೆಂದು ಕರೆಯುವುದು. ಕಾವ್ಯಕ್ಕೆ ಪರಿಪೂರ್ಣತೆ ಬರುವುದು.

ಡಾ||ಶೀಲ : ಕಾವ್ಯಕ್ಕೆ ಪರಿಪೂರ್ಣತೆ ಬರುವುದು ಅದನ್ನು ಬರೆದು ಮುಗಿಸಿದಾಗಲೇ ಕವಿತೆಯನ್ನು ಬರೆದಾಗುವ ತನಕ, ತಾನು ಏನನ್ನು ಬರೆಯುತ್ತಿದ್ದೇನೆಂಬುದು ಕವಿಗೆ ಪೂರ್ತಿ ಗೊತ್ತಿರುವುದಿಲ್ಲ.

ಡಾ||ರಾಮು : ಕಾವ್ಯರಚನೆ ಪ್ರಜ್ಞಾಪೂರ್ವಕವಾದ ಕ್ರಿಯೆಯಲ್ಲ ಎಂಬುದನ್ನೂ ಇದು ಸೂಚಿಸುತ್ತದೆ. ಸುಪ್ತಮನಸ್ಸಿನ ಪ್ರೇರಣೆ ಪ್ರಚೋದನೆಗಳು ಧ್ವನಿತವಾಗಿವೆ. ಕಾವ್ಯ ಪೂರ್ಣವಾಗಿ ಅಪ್ರಜ್ಞಾಪೂರ್ವಕವಾದುದೂ ಅಲ್ಲ. ತಂತ್ರದ ವಿಷಯದಲ್ಲಿ ಕವಿ ತಕ್ಕಮಟ್ಟಿಗೆ ಎಚ್ಚರದಿಂದಲೇ ಇರಬೇಕಾಗುತ್ತದೆ. ಬುದ್ಧಿಯ ಕೆಲಸವೂ ಅಲ್ಲಿ ಉಂಟು. ಒಟ್ಟಿನಲ್ಲಿ ಕಾವ್ಯಸೃಷ್ಟಿಯೊಂದು ಬೌದ್ಧಿಕ ಕ್ರಿಯೆಯಲ್ಲ; ಸ್ಫೂರ್ತಿಯ ಪಾಲು ಅಲ್ಲಿ ವಿಶೇಷ.

ಡಾ||ಶೀಲ : ಕವಿಯ ಮನಸ್ಸಿನಲ್ಲಾದ ಅನುಭವವನ್ನು ಕಾವ್ಯ ಯಥಾವತ್ತಾಗಿ ವಾಚಕನ ಮನಸ್ಸಿನಲ್ಲಿ ಮೂಡಿಸ ಬಲ್ಲುದೇ ಎಂಬುದೊಂದು ಪ್ರಶ್ನೆ. ವಾಚಕ ಪಡೆಯುವುದು ಸದೃಶಾನುಭವವನ್ನೇ ಹೊರತು ಅದೇ ಅನುಭವ ವನ್ನಲ್ಲ.

ಡಾ||ರಾಮು : ಕಾವ್ಯವೆಂದರೆ ಶಬ್ದಗಳ ಲಯಬದ್ಧ ರೂಪ. ಲೇಖಕನ ಕಲ್ಪನಾತ್ಮಕ – ಭಾವನಾತ್ಮಕ – ಬೌದ್ಧಿಕ ಅನುಭವವನ್ನು ವ್ಯಕ್ತ ಪಡಿಸುವಂಥದು ಮತ್ತು ವಾಚಕನ ಅಥವಾ ಶ್ರಾವಕನ ಚಿತ್ತದಲ್ಲಿ ಸದೃಶಾನುಭವ ವೊಂದನ್ನು ಅದು ಸೃಜಿಸುವ ರೀತಿಯಲ್ಲಿ ವ್ಯಕ್ತಪಡಿಸುವಂಥದು.

ಡಾ||ಶೀಲ : ಕಾವ್ಯಪ್ರಯೋಜನಗಳು ಹಲವು. ಕಾವ್ಯ ಯಶಸ್ಸಿಗಾಗಿ, ಧನಾರ್ಜನೆಗಾಗಿ, ವ್ಯವಹಾರ ಜ್ಞಾನಕ್ಕಾಗಿ, ಅಮಂಗಳ ನಿವಾರಣೆಗಾಗಿ, ತತ್ಕಾಲದಲ್ಲಿ ಪರಮಾನಂದ ಪಡೆಯುವುದಕ್ಕಾಗಿ, ಕಾಂತೆಯಂತೆ ಉಪದೇಶಿಸು ವುದಕ್ಕಾಗಿ ಆದರೆ ರಸಾನಂದವು ಅವನ ಎಲ್ಲ ಪ್ರಯೋಜನಗಳಿಗೂ ಕಿರೀಟಪ್ರಾಯವಾದುದು.

ಡಾ||ರಾಮು : ಆನಂದ ಕಾವ್ಯದ ಏಕೈಕ ಗುರಿಯಲ್ಲದಿದ್ದರೂ ಪ್ರಧಾನವಾದ ಗುರಿ. ಕವಿತೆ ಆನಂದಗೊಳಿಸುತ್ತಲೇ ತಿಳಿವಳಿಕೆ ನೀಡುತ್ತದೆ. ಕಲ್ಪನೆ ಒಳ್ಳೆಯ ನೈತಿಕ ಸಾಧನ.

ಡಾ||ಶೀಲ : ಕಾವ್ಯ ಪುರುಷಾರ್ಥ ಸಾಧಕವಾದುದು ಎಂಬ ದೃಷ್ಟಿ ವಿಶೇಷವಾಗಿ ಭಾರತೀಯರದು.

ಡಾ||ರಾಮು : ಛಂದಸ್ಸಿಲ್ಲದೆ ಕಾವ್ಯವಿಲ್ಲ. ಆದರೆ ಛಂದಸ್ಸೊಂದೇ ಕಾವ್ಯದ ಅಳತೆಗೋಲಲ್ಲ.

ಡಾ||ಶೀಲ : ಪ್ರಾಚೀನ ಭಾರತದಲ್ಲಿ ಎಲ್ಲ ಶಾಸ್ತ್ರಗಳನ್ನೂ ಪದ್ಯರೂಪದಲ್ಲೆ ಬರೆದಿಡುತ್ತಿದ್ದರು.

ಡಾ||ರಾಮು : ನಿಯತವಾದ ಛಂದಸ್ಸಿಲ್ಲದಿದ್ದರೂ ಅನಿಯತವಾದ ಲಯ ಕವಿತೆಗಿರಬೇಕು, ಇದ್ದೇ ಇರುತ್ತದೆ; ಏಕೆಂದರೆ, ಭಾವಪೂರ್ಣವಾಗಿ ಏನ್ನನ್ನೆ ಹೇಳಿದರೂ ಅದು ಲಯಾನ್ವಿತವಾಗಿಯೆ ಹೊಮ್ಮುತ್ತದೆ.

ಡಾ||ಶೀಲ : ಕನ್ನಡದ ವಚನಗಳು, ಠಾಕೂರರ ಗೀತಾಂಜಲಿ, ವಾಲ್ಟ್ ವಿಟ್ಮನ್ನನ ಲೀವ್ಸ್ ಆಫ್ ಗ್ರಾಸ್ ಮೇಲು ನೋಟಕ್ಕೆ ಗದ್ಯದಂತೆ ಭಾಸವಾದರೂ ಅವುಗಳಲ್ಲಿ ಲಯವಿದೆ.

ಡಾ||ರಾಮು : ಇಂದಿನ ಕವಿತೆಯಲ್ಲಿ ಮುಕ್ತ ಛಂದಸ್ಸು, ಆಡುಮಾತಿನ ಲಯ ಕಂಡುಬರುತ್ತದೆ.

ಡಾ॥ಶೀಲ : ಗದ್ಯಕಾವ್ಯ ಪದ್ಯಕಾವ್ಯಗಳೆರಡನ್ನೂ ಕಾವ್ಯವೆಂದು ಹಿಂದಿನವರು ಪರಿಗಣಿಸಿದ್ದರು. ನಾಟಕವನ್ನು ದೃಶ್ಯ ಕಾವ್ಯವೆಂದೂ ಉಳಿದುದನ್ನು ಶ್ರವ್ಯಕಾವ್ಯವೆಂದೂ ಕರೆಯುತ್ತಿದ್ದರು. ರಸಾತ್ಮಕವಾದುದೆಲ್ಲ ಅವರ ಪಾಲಿಗೆ ಕಾವ್ಯವಾಗಿತ್ತು.

ಡಾ॥ರಾಮು : ಆದರೆ ಕಾದಂಬರಿಯಂಥ ಗದ್ಯಕಾವ್ಯಗಳಲ್ಲೂ ಲಯವನ್ನು ಗುರುತಿಸಬಹುದು. ಅಂತೂ ಲಯ ಕವಿತೆಗೆ ಮುಖ್ಯವಾದುದು.

ಡಾ॥ಶೀಲ : ಕಾವ್ಯವನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಾಸ ಮಾಡಲಾಗಿದೆ.

ಡಾ॥ರಾಮು : ಕಾವ್ಯ ಕವಿಯ ವೈಯಕ್ತಿಕ ಜೀವನದ ಅಭಿವ್ಯಕ್ತಿ ಎಂಬುದು ಒಂದು ಸಿದ್ಧಾಂತ. ಅದು ಸಮಷ್ಟಿ ಪ್ರಜ್ಞೆಯ ಅಭಿವ್ಯಕ್ತಿ ಎಂಬುದು ಮತ್ತೊಂದು ವಾದ.

ಡಾ॥ಶೀಲ : ಉನ್ನತ ಕವಿತೆ ಮನುಕುಲದ ಬದುಕಿನಿಂದ ತನ್ನ ಶಕ್ತಿಯನ್ನು ಪಡೆದುಕೊಳ್ಳುತ್ತದೆ.

ಡಾ॥ರಾಮು : ಕಾವ್ಯ ಕವಿಯ ವೈಯಕ್ತಿಕ ಭಾವಗಳ ಅಭಿವ್ಯಕ್ತಿಯಾಗಿರಬಹುದು. ಆದರೆ ಅದು ಕೇವಲ ಖಾಸಗಿಯಾಗಿರದೆ ಸಾರ್ವತ್ರಿಕತೆಯನ್ನುಳ್ಳದ್ದಾಗಿರಬೇಕು.

ಡಾ॥ಶೀಲ : ಕಾವ್ಯವನ್ನು ಮುಖ್ಯವಾಗಿ ಎರಡು ವಿಭಾಗ ಮಾಡುತ್ತಾರೆ : ವಸ್ತುನಿಷ್ಠ ಹಾಗೂ ವ್ಯಕ್ತಿ ನಿಷ್ಠ.

ಡಾ॥ರಾಮು : ಮಹಾಕಾವ್ಯ, ಕಥನ ಕವನ, ಲಾವಣಿ ರೊಮಾನ್ಸ್, ಇತಿವೃತ್ತ ಕವಿತೆ – ಮುಂತಾದ ಪ್ರಕಾರಗಳು ವಸ್ತುನಿಷ್ಠ ವಿಭಾಗದಲ್ಲಿ ಸೇರುತ್ತವೆ.

ಡಾ॥ಶೀಲ : ವ್ಯಕ್ತಿನಿಷ್ಠ ವಿಭಾಗ ಭಾವಗೀತೆಗಳ ಪ್ರಾಂತ ; ಇದರಲ್ಲಿ ಮತ್ತೆ ಪ್ರಗಾಥ, ಶೋಕಗೀತೆ, ಸಾನೆಟ್ ಮುಂತಾದ ಒಳ ಜಾತಿಗಳಿವೆ.

ಡಾ॥ರಾಮು : ಕಾವ್ಯಕ್ಷೇತ್ರಗಳಲ್ಲಿ ಕಾಲಕಾಲಕ್ಕೆ ಬೇರೆ ಬೇರೆ ಚಳವಳಿಗಳು ನಡೆದು ಪಂಥಗಳು ಹುಟ್ಟಿಕೊಂಡಿದನ್ನು ನೋಡುತ್ತೇವೆ. ಪಾಶ್ಚಾತ್ಯರಲ್ಲಿ ಕ್ಲಾಸಿಕ್ ಕಾವ್ಯ, ರೊಮ್ಯಾಂಟಿಕ್ ಕಾವ್ಯ, ಮೆಟಫಿಸಿಕಲ್ ಕಾವ್ಯ, ಪ್ರತಿಮಾನಿಷ್ಠ ಕಾವ್ಯ, ಸಂಕೇತನಿಷ್ಠ ಕಾವ್ಯ, ಸರ್‌ರಿಯಲಿಸ್ಟಿಕ್ ಕಾವ್ಯ ಇತ್ಯಾದಿಯಾಗಿ ಹಲವು ಪ್ರಸ್ತಾವನೆಗಳಿವೆ.

ಡಾ॥ಶೀಲ : ಕನ್ನಡದಲ್ಲಿ ಈ ಶತಮಾನದಲ್ಲಿ ನವೋದಯ (ರೆನೆಸ಼ಾನ್ಸ್) ಕಾವ್ಯ ಹಾಗೂ ನವ್ಯಕಾವ್ಯ ಎಂಬ ಎರಡು ಘಟ್ಟದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಕಾವ್ಯದ ಆತ್ಮ ಯಾವಾಗಲೂ ಒಂದೇ; ಕಾಲ ಕಾಲಕ್ಕೆ ಹೊಸ ಹೊಸ ರೂಪ ತಳೆಯುತ್ತದೆ.

ಡಾ॥ರಾಮು : ಒಂದು ಕಾಲದಲ್ಲಿ ಕಾವ್ಯದ ಬಗ್ಗೆ ತೀವ್ರವಾದ ಆಕ್ಷೇಪಣೆಗಳಿದ್ದುದನ್ನು ನೆನೆಯಬೇಕು. ಕವಿಗಳು ಭಾವೊದ್ದೀಪನದ ಮೂಲಕ ದೌರ್ಬಲ್ಯವನ್ನುಂಟುಮಾಡುತ್ತಾರೆಂದೂ ಅವರನ್ನು ಆದರ್ಶರಾಜ್ಯದಿಂದ ಬಹಿಷ್ಕರಿಸಬೇಕೆಂದೂ ಗ್ರೀಕ್ ದಾರ್ಶನಿಕ ಪ್ಲೇಟೊ ಸಲಹೆ ಮಾಡಿದ್ದ.

ಡಾ॥ಶೀಲ : ಅರಿಸ್ಟಾಟಲ್ ತನ್ನ ಕಾವ್ಯಮೀಮಾಂಸೆಯಲ್ಲಿ ಪ್ಲೇಟೊವಿನ ಆರೋಪಗಳಿಗೆ ಸಮರ್ಪಕವಾದ ಉತ್ತರವಿತ್ತು, ಕಾವ್ಯವನ್ನು ಉಜ್ಜ್ವಲವಾಗಿ ಸಮರ್ಥಿಸಿದ್ದಾನೆ.

ಡಾ॥ರಾಮು : ಕಾವ್ಯ ಇತಿಹಾಸಕ್ಕಿಂತ ಉನ್ನತವೂ ತಾತ್ತ್ವಿಕವೂ ಆದದ್ದು.

ಡಾ॥ಶೀಲ : ಕಾವ್ಯ ಅದೆಲ್ಲಿಂದ ಬರುತ್ತದ್ದೋ ನಾವರಿಯೆವು. ನಾವು ಅಪ್ಪಣೆ ಮಾಡಿದಾಗ ಅದು ನುಡಿಯದು. ಅಥವಾ ನಮ್ಮ ಭಾಷೆಯಲ್ಲಿ ಉತ್ತರಿಸಿದು. ಅದು ನಮ್ಮ ಆಳಲ್ಲ, ಅರಸು.

ಡಾ॥ಶೀಲ : ಇತಿಹಾಸ ನಡೆದ ಸಂಗತಿಯನ್ನಷ್ಟೇ ಹೇಳುತ್ತದೆ, ಕಾವ್ಯ ನಡೆಯಬಹುದಾದ ಸಂಗತಿಯನ್ನು ಹೇಳುತ್ತದೆ. ಇತಿಹಾಸಕ್ಕಿರುವ ಕಾಲದೇಶಗಳ ಕಟ್ಟು ಕಾವ್ಯಕ್ಕಿಲ್ಲ; ಅದು ಇರುವುದನ್ನೂ ಮಾತ್ರವೇ ನಿರೂಪಿಸುವುದಿಲ್ಲ, ಇರಬೇಕಾದುದನ್ನೂ ನಿರೂಪಿಸುತ್ತದೆ.

ಡಾ॥ರಾಮು : ಎಷ್ಟೇ ವಿವರಣೆಗಳನ್ನು ಕೊಟ್ಟರೂ ಕಾವ್ಯದ ರಹಸ್ಯವನ್ನು ಪೂರ್ಣವಾಗಿ ಭೇದಿಸುವುದು, ಅದರ ಬಗ್ಗೆ ಕಡೆಯ ಮಾತು ಹೇಳುವುದು ಶಕ್ಯವಿಲ್ಲ. ಅದು ನಿಯಮಗಳಿಗೆ ನಿಲುಕದು. ಅದೊಂದು ಮೋಡಿ; ಅದೊಂದು ಚೈತನ್ಯ.

ಡಾ॥ರಾಮು : ಗದ್ಯ, ಕಾವ್ಯ ಎಂಬ ಎರಡು ಮಾಧ್ಯಮಗಳಿವೆ.

ಡಾ॥ಶೀಲ : ಕಾವ್ಯವು ಸಾಧಿಸುವುದನ್ನು ಗದ್ಯವು ಸಾಧಿಸಲಾರದು. ಲಯವಿಲ್ಲದ ಕಾವ್ಯವಿಲ್ಲ, ಲಯಕ್ಕೆ ಒಂದು ಶಕ್ತಿ ಇದೆ, ಅದು ತನ್ನದೇ ಆದ ಜಗತ್ತನ್ನು ಸೃಷ್ಟಿಸುತ್ತದೆ.

ಡಾ॥ರಾಮು : ಹೃದಯದ ಬಡಿತ, ಹಗಲು–ರಾತ್ರಿಗಳ ಕ್ರಮ, ಋತುಗಳ ಕ್ರಮ, ಎಲ್ಲ ಲಯಬದ್ಧ, ಲಯವು ಸೃಷ್ಟಿಯ ಹೃದಯದಲ್ಲಿದೆ, ಆದುದರಿಂದ ಅದಕ್ಕೆ ವಿಶಿಷ್ಟ ಶಕ್ತಿ.

ಡಾ॥ಶೀಲ : ಲಯ, ಪ್ರತಿಮೆಗಳು, ವಿಶಿಷ್ಟ ರಚನೆ – ಇವುಗಳಿಂದಾಗಿ ಕಾವ್ಯವು ತನ್ನದೇ ಸುಸಂಬದ್ಧ ಜಗತ್ತನ್ನು ಸೃಷ್ಟಿಸುತ್ತದೆ.

ಡಾ॥ರಾಮು : ಗದ್ಯವು ಅಭಿವ್ಯಕ್ತಿಗೊಳಿಸಲಾಗದ ಭಾವಸೂಕ್ಷ್ಮತೆಯನ್ನು, ಅನುಭವವನ್ನು ಕವನ ಅಭಿವ್ಯಕ್ತಿಗೊಳಿಸುತ್ತದೆ.

ಡಾ॥ಶೀಲ : ಕವನದಲ್ಲಿ ಶಬ್ದಗಳ ಕ್ರಮ ಮತ್ತು ನಾದಗಳೂ ಪರಿಣಾಮ ಬೀರುವುದರಲ್ಲಿ ಪಾತ್ರವಹಿಸುತ್ತವೆ. ಕವನದ ಲಯ, ಶಬ್ದಗಳು, ಅವುಗಳ ಜೋಡಣೆಯಿಂದ ಸೃಷ್ಟಿಯಾಗುವ ನಾದಭಾಗ.

ಡಾ॥ರಾಮು : ಮಹಾಕಾವ್ಯವು ದೀರ್ಘವಾಗಿದ್ದು ಕಥೆಯನ್ನು ಹೇಳುವುದರಿಂದ ಅದರಲ್ಲಿ ಕಾದಂಬರಿಯ ಕೆಲವು ಲಕ್ಷಣಗಳು ಪ್ರಕಟವಾಗಬಹುದು.

ಡಾ॥ಶೀಲ : ಶಬ್ದಗಳು, ಅವುಗಳ ಜೋಡಣೆ, ನಾದ, ಲಯ, ಛಂದಸ್ಸು, ಪ್ರತಿಮೆಗಳು ಎಲ್ಲದರ ಮೂಲಕ ಅದು ಅನುಭವವನ್ನು ಪುನರ್‌ಸೃಷ್ಟಿ ಮಾಡುತ್ತದೆ.

# 4. ಅಕ್ಷರಲಿಪಿ

## ವಿವರಣೆ

ಡಾ||ರಾಮು : ಚಿಹ್ನೆಗಳ ಮೂಲಕ ಅಭಿಪ್ರಾಯ ಅಥವಾ ಶಬ್ದವನ್ನು ಸೂಚಿಸುವ ಸಾಧನವೇ ಲಿಪಿ.

ಲಿಪಿಗಳಲ್ಲಿ ಅನೇಕ ವಿಧಗಳಿವೆ.

ಡಾ||ಶೀಲ : ಇವುಗಳಲ್ಲಿ ಅಕ್ಷರ ಮಾಲಾಲಿಪಿ(ಆಲ್ಫಬೆಟಿಕ್ ರೈಟಿಂಗ್) ಬಹಳ ಮುಂದುವರಿದದ್ದು.

ಡಾ||ರಾಮು: ಇದರಲ್ಲಿ ಪ್ರತಿಯೊಂದು ಚಿಹ್ನೆಗೂ ಅಕ್ಷರಕ್ಕೂ ಒಂದು ಸ್ಪಷ್ಟವಾದ, ಸಾಮಾನ್ಯವಾಗಿ ಎಲ್ಲರಿಂದಲೂ ಮಾನ್ಯ ಪಡೆದ, ಒಂದು ಅಥವಾ ಅನೇಕ ಶಬ್ದಗಳ ಮೌಲ್ಯ ಇರುತ್ತದೆ. ಅಕ್ಷರಲಿಪಿ ಉಚ್ಚರಿಸುವ ಶಬ್ದದ ಒಂದು ಸಂಕೇತ

ಡಾ||ಶೀಲ : ಆದರೆ ಚಿತ್ರಲಿಪಿ, ಭಾವಲಿಪಿ ಮುಂತಾದುವು ಅಕ್ಷರಲಿಪಿಗಳಲ್ಲ. ಅವುಗಳನ್ನು ಅನಕ್ಷರಲಿಪಿಗಳು (ನಾನ್‌ಆಲ್ಫಬೆಟಿಕ್) ಎಂದು ಕರೆಯಬಹುದು. ಏಕೆಂದರೆ ಅವುಗಳಲ್ಲಿ ಬರೆಯುವ ಚಿಹ್ನೆಗೂ ಉಚ್ಚರಿಸುವ ಶಬ್ದಕ್ಕೂ ನಿಕಟ ಸಂಬಂಧವಿರುತ್ತದೆ.

ಡಾ||ರಾಮು : ಅನಕ್ಷರಲಿಪಿಯ ಬೆಳವಣಿಗೆ ಮತ್ತು ವಿಕಾಸದಿಂದ ಅಕ್ಷರಮಾಲಾಲಿಪಿ ಉಗಮವಾಯಿತು ಎಂಬ ವಾದವನ್ನು ಎಲ್ಲರೂ ಒಪ್ಪುತ್ತಾರೆ.

ಡಾ||ಶೀಲ : ಮಾನವ ತನ್ನ ನಾಗರಿಕತೆಯ ಪ್ರಾರಂಭ ದೆಶೆಯಲ್ಲಿ, ಚಿತ್ರಲಿಪಿ ಭಾವಲಿಪಿ ಮುಂತಾದ ಅನಕ್ಷರಲಿಪಿಗಳನ್ನು ಉಪಯೋಗಿಸಿ, ಅವುಗಳಲ್ಲಿದ್ದ ನ್ಯೂನತೆಗಳನ್ನು ಸರಿಪಡಿಸಿ, ಸಮರ್ಪಕವಾದ ಅಕ್ಷರ ಲಿಪಿಗೆ ತಳಹದಿಯನ್ನು ಹಾಕಿದ.

ಡಾ||ರಾಮು : ಚರಿತ್ರಪೂರ್ವಕಾಲದ, ಶಿಲಾಯುಗದ ಮಾನವ ಗುಹೆಗಳಲ್ಲಿ ಚಿತ್ರಗಳನ್ನು ಗೀಚುವ ಅಭ್ಯಾಸವನ್ನು ಇಟ್ಟುಕೊಂಡಿದ್ದರೂ ಅವು ಬರೆವಣಿಗೆಯ ದೃಷ್ಟಿಯಿಂದ ನಿರ್ಮಾಣವಾದ ವೆಂದು ಹೇಳಲಾಗುವುದಿಲ್ಲ.

ಡಾ||ಶೀಲ : ಅನಕ್ಷರಲಿಪಿಯ ಬೆಳವಣಿಗೆಯಲ್ಲಿ ಮುಖ್ಯವಾದ ಮೂರು ಮೂಲ ಅವಸ್ಥೆಗಳನ್ನು ನಾವು ಕಾಣಬಹುದು.

ಡಾ||ರಾಮು : ಮೊದಲನೆಯದು ಬೀಜರೂಪವಾದ ಬರೆವಣಿಗೆ (ಎಂಬ್ರಿಯೋರೈಟಿಂಗ್). ಇದರಲ್ಲಿ ಅನೇಕ ವಿಧವಾದ ಜ್ಯಾಮಿತಿಯ ಸಂಕೇತಗಳು ಚಿಹ್ನೆಗಳು ವೃತ್ತಗಳು ರೇಖೆಗಳು ಮತ್ತು ಇತರ ಗುರುತುಗಳನ್ನು ಕಾಣುತ್ತೇವೆ.

ಡಾ||ಶೀಲ : ಎರಡನೆಯದು ಬಿಂಬರೂಪ ಮತ್ತು ತಾಂತ್ರಿಕಮತಗಳಲ್ಲಿ ಉಪಯೋಗಿಸುವ ರೀತಿಯ ಸೂಚ್ಯಾತ್ಮಕ ಚಿಹ್ನೆಗಳು (ಇಕೊನೊಗ್ರಫಿ ಮತ್ತು ಸಿಂಪತೆಟಿಕ್ ಮ್ಯಾಜಿಕ್).

ಡಾ||ರಾಮು : ಮೂರನೆಯದು ಸ್ಮರಣೆಗೆ ಸಹಾಯಕವಾದ (ನೆಮೋನಿಕ್) ಸಾಧನಗಳು, ಉದಾಹರಣೆಗೆ ಪೆರು ಸಂಸ್ಕೃತಿಯಲ್ಲಿ ಬಣ್ಣದ ದಾರಗಳಿಂದ ಒಂದು ಅಥವಾ ಅನೇಕ ಗಂಟುಗಳನ್ನು ಹಾಕುವುದು ಬಹು ಸಾಮಾನ್ಯವಾದ ಪದ್ಧತಿಯಾಗಿತ್ತು. ಈ ಗಂಟುಗಳು ಲೆಕ್ಕಕ್ಕೆ ಉಪಯೋಗಿಸಲ್ಪಡುತ್ತಿದ್ದುವು.

ಡಾ॥ಶೀಲ : ಅದೇ ರೀತಿಯಲ್ಲಿ ಚಾಕುವಿನಿಂದ ಮರದ ಕೊಂಬೆಗಳ ಮೇಲೆ ಗೀರುಗಳನ್ನು ಮಾಡಿ ಈ ಗೀರುಗಳ ಅರ್ಥವನ್ನು ಸುದ್ದಿಗಾರರಿಗೆ ತಿಳಿಸಿದರೆ, ಸುದ್ದಿಗಾರ ಅದನ್ನು ಮತ್ತೊಂದು ದೇಶದ ರಾಜನಿಗೆ ವಿವರಿಸುತ್ತಿದ್ದ ಪದ್ಧತಿಯೂ ಇದ್ದಿತೆಂದು ಗೊತ್ತಾಗುತ್ತದೆ.

ಡಾ॥ರಾಮು : ಚಿತ್ರಲಿಪಿಯೇ ಬರೆವಣಿಗೆಯ ಅತ್ಯಂತ ಪ್ರಾಚೀನವಾದ ಅವಸ್ಥೆ. ಚಿತ್ರಗಳಲ್ಲಿ ಉಚ್ಚಾರಣ ಧ್ವನಿಗಳಿಲ್ಲ. ಬರೆಯಲ್ಪಟ್ಟ ವಸ್ತುವಿನ ಅಭಿಪ್ರಾಯ ಬರೆದ ಚಿತ್ರದ ಮೂಲಕ ಮಾತ್ರ ಉಂಟಾಗುತ್ತದೆ.

ಡಾ॥ಶೀಲ : ಒಂದು ಸಣ್ಣ ವೃತ್ತಾಕಾರದ ಸೂರ್ಯನ ಅಭಿಪ್ರಾಯವನ್ನು, ಆನೆಯ ಚಿತ್ರ ಆನೆಯನ್ನೂ ತೋರಿಸುವುದೇ ಚಿತ್ರಲಿಪಿಯ ಮೂಲೋದ್ದೇಶ,

ಡಾ॥ರಾಮು : ಭಾವಲಿಪಿ ಚಿತ್ರಲಿಪಿಗಿಂತ ಹೆಚ್ಚು ಮುಂದುವರಿದದ್ದು. ಇದರಲ್ಲಿನ ಚಿತ್ರಗಳು, ಅವುಗಳ ಹಿಂದೆ ಅಡಗಿರುವ ಭಾವವನ್ನು ವ್ಯಕ್ತಪಡಿಸುತ್ತವೆ. ಒಂದು ಸಣ್ಣ ವೃತ್ತ ಶಾಖ, ಬಿಸಿಲು, ಹಗಲು ಅಥವಾ ಸೂರ್ಯದೇವ ಎಂಬ ಅರ್ಥಗಳನ್ನು ಕೊಡುತ್ತದೆ.

ಡಾ॥ಶೀಲ : ಸುಮಾರು ಒಂದು ಸಾವಿರ ಕಲ್ಲಿನ ಮತ್ತು ತಾಮ್ರದ ಮುದ್ರೆಗಳು ಸಿಂಧೂನಾಗರಿಕತೆಯ ಅನೇಕ ಸ್ಥಳಗಳಲ್ಲಿ ದೊರಕಿವೆ.

ಡಾ॥ರಾಮು : ಸಿಂಧೂ ಬರೆವಣಿಗೆಯಲ್ಲಿ ಕೊನೆಯ ಪಕ್ಷ ಮುನ್ನೂರು ಸಂಕೇತಗಳನ್ನು ಕಾಣುತ್ತೇವೆ.

ಡಾ॥ಶೀಲ : ಇಲ್ಲಿ ಪ್ರಾಣಿಗಳ ಚಿಹ್ನೆಗಳಿಗಿಂತ ಏಣಿ ಚೌಕ ವೃತ್ತ ಮುಂತಾದ ಚಿಹ್ನೆಗಳೇ ಹೆಚ್ಚು. ಆದುದರಿಂದ ಇದು ಭಾವಲಿಪಿ ಮತ್ತು ಭಾಷಾಧ್ವನಿನಿರೂಪಕ ಲಿಪಿಯ ಮಿಶ್ರಣವೆಂದು ಹೇಳಬಹುದು.

ಡಾ॥ರಾಮು : ಸಿಂಧೂಲಿಪಿಯೇ ಭಾರತದಲ್ಲಿ ವಿಕಾಸಹೊಂದಿ ಬ್ರಾಹ್ಮೀಲಿಪಿಯಾಯಿತೆಂದು ಕೆಲವು ವಿದ್ವಾಂಸರು ವಾದಿಸುತ್ತಾರೆ.

ಡಾ॥ಶೀಲ : ಮುಂದಿನ ಹಂತವೇ ಅಕ್ಷರಲಿಪಿ. ಅಕ್ಷರಲಿಪಿ ಎಲ್ಲಿ ಉಗಮವಾಯಿತು ಮತ್ತು ಅದು ಯಾವ ಜನಾಂಗದ ಕೊಡುಗೆ ಎಂಬ ಪ್ರಶ್ನೆಗಳು ಇನ್ನೂ ಚರ್ಚಾಸ್ಪದವಾಗಿಯೇ ಇದೆ.

ಡಾ॥ರಾಮು : ಚರಿತ್ರಪೂರ್ವಯುಗದ ರೇಖಾಚಿತ್ರಗಳೇ ಮುಂದೆ ವಿಕಾಸಹೊಂದಿ ಅಕ್ಷರಗಳಾದವು ಎಂದು ಫ್ಲಿಂಡರ್ಸ್ ಪೆಟ್ರಿಯ ವಾದ.

ಡಾ॥ಶೀಲ : ಅಕ್ಷರಲಿಪಿಯ ಉಗಮಕ್ಕೆ ಒಂದೇ ಜನಾಂಗ ಕಾರಣವಲ್ಲದಿರಬಹುದೆಂದೂ ಪ್ರಾಚೀನ ಪ್ರಪಂಚದ ಅನೇಕ ಸಂಸ್ಕೃತಿಗಳ ಪ್ರಭಾವ ಮತ್ತು ಕೊಡುಗೆಗಳಿಂದ ಅಕ್ಷರಲಿಪಿ ಉಗಮವಾಗಿರಬೇಕೆಂದೂ ಡಿರಿಂಜರ್ ತನ್ನ ನಿರ್ಧಾರವನ್ನು ಸೂಚಿಸಿದ್ದಾನೆ.

ಡಾ॥ರಾಮು : ಬ್ರಾಹ್ಮೀಲಿಪಿ ಪ್ರಾಚೀನ ಭಾರತದಲ್ಲಿ ವಿಶೇಷವಾಗಿ ಬಳಕೆಯಲ್ಲಿತ್ತು.

ಡಾ॥ಶೀಲ : ಬ್ರಹ್ಮನಿಂದ ರಚಿತವಾದ ಅಥವಾ ಬ್ರಹ್ಮವಿದ್ಯೆಗೋಸ್ಕರ ರಚಿತವಾದ ಈ ಲಿಪಿಗೆ ಬ್ರಾಹ್ಮೀ ಎಂದು ಹೆಸರಾಯಿತೆಂದು ಸಾಂಪ್ರದಾಯಿಕ ಮತ.

ಡಾ॥ರಾಮು : ಬ್ರಾಹ್ಮೀಲಿಪಿ ಭಾರತದಲ್ಲಿಯೇ ಉಗಮವಾಯಿತೆನ್ನುವ ವಿದ್ವಾಂಸರು ಕೆಲವರಿದ್ದಾರೆ.

ಡಾ॥ಶೀಲ : ಈ ಲಿಪಿ ಸಿಂಧೂಲಿಪಿಯ ವಿಕಾಸದಿಂದ ಉಂಟಾಯಿತೆನ್ನುವ ವಿದ್ವಾಂಸರಿಗೂ ಕೊರತೆ ಇಲ್ಲ.

ಡಾ॥ರಾಮು : ಕ್ರಿ.ಪೂ. ಮೂರನೆಯ ಶತಮಾನದಿಂದ ಪ್ರಾರಂಭವಾಗಿ ಬ್ರಾಹ್ಮೀಲಿಪಿಯ ಶಾಸನಗಳು ದೊರಕಿವೆ.

ಡಾ॥ಶೀಲ : ಅಶೋಕನ ಶಾಸನಗಳು ವಿಶೇಷವಾಗಿ ಈ ಲಿಪಿಯಲ್ಲಿವೆ. ಭಾರತದೇಶದ ಮತ್ತು ಆಗ್ನೇಯ ಏಷ್ಯದ ಎಲ್ಲ ಲಿಪಿಗಳೂ ಅಶೋಕನ ಕಾಲದ ಬ್ರಾಹ್ಮೀಲಿಪಿಯಿಂದ ಉತ್ಪತ್ತಿಯಾದವು.

ಡಾ॥ರಾಮು : ಇಂಗ್ಲಿಷ್ ಭಾಷೆಯಲ್ಲಿ ವರ್ಣಮಾಲೆ (ಆಲ್ಫಬೆಟ್) ಎಂಬ ಪದ ಗ್ರೀಕರ ಆಲ್ಫ ಮತ್ತು ಬೀಟ ಎಂಬ ಎರಡು ಚಿಹ್ನೆಗಳಿಂದ ಬಂದಿದೆ.

ಡಾ॥ಶೀಲ : ಶಾತವಾಹನ, ಕದಂಬ, ಗಂಗ, ಬಾದಾಮಿಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣಿಚಾಳುಕ್ಯ, ಹೊಯ್ಸಳ, ವಿಜಯನಗರ ಕಾಲಗಳಲ್ಲಿ ಕ್ರಮೇಣ ವಿಕಾಸಹೊಂದಿ, ಇದು ಇಂದಿನ ಕನ್ನಡಲಿಪಿಯಾಗಿದೆ

## ಕನ್ನಡಲಿಪಿ ವಿವರಣೆ

ಡಾ॥ರಾಮು : ಕನ್ನಡ ಲಿಪಿ ಭಾರತ ದೇಶದ ಇತರ ಲಿಪಿಗಳಂತೆ ಕ್ರಿಸ್ತ ಪೂರ್ವ 3ನೆಯ ಶತಮಾನದ ಅಶೋಕನ ಬ್ರಾಹ್ಮೀಲಿಪಿಯಿಂದ ಉದ್ಭವಿಸಿದೆ.

ಡಾ॥ಶೀಲ : ಈ ಬ್ರಾಹ್ಮೀ ಲಿಪಿ ಭಾರತದಲ್ಲಿ ಇದುವರೆಗೆ ಓದಿ ಗುರುತಿಸಲ್ಪಟ್ಟಿರುವ ಅತ್ಯಂತ ಪ್ರಾಚೀನ ಲಿಪಿಯಾಗಿದೆ. ಇದಕ್ಕಿಂತ ಪ್ರಾಚೀನವಾದ ಸಿಂಧುಕೊಳ್ಳದ ಮುದ್ರೆಗಳ ಲಿಪಿಯನ್ನು ಇದುವರೆಗೆ ವಿದ್ವಾಂಸರು ಸಮರ್ಪಕವಾಗಿ ಓದಿ ಅರ್ಥಮಾಡಿರುವುದಿಲ್ಲ.

ಡಾ॥ರಾಮು : ಅಶೋಕನ ಬ್ರಾಹ್ಮೀ ಲಿಪಿ ಉತ್ತರಕ್ಕೆ ಕಾಲಸಿ ಮತ್ತು ಭಾರತ–ನೇಪಾಲ ಗಡಿಯಲ್ಲಿರುವ ರುಮ್ಮಿಂದೈಯಿಮದ ದಕ್ಷಿಣಕ್ಕೆ ಮೈಸೂರು ವರೆಗೂ ಪೂರ್ವಕ್ಕೆ ಒರಿಸ್ಸಾದಿಂದ ಪಶ್ಚಿಮಕ್ಕೆ ಜುನಾಗಢ ಮತ್ತು ಬೊಂಬಾಯಿವರೆಗೂ ದೊರೆತ ಅಶೋಕ ಸಮ್ರಾಟನ ಧರ್ಮಶಾಸನಗಳಲ್ಲಿ ಕಂಡುಬರುತ್ತದೆ.

ಡಾ॥ಶೀಲ : ಈ ಲಿಪಿ ಸಂಸ್ಕೃತ ಭಾಷೆಯಿಂದ ಪ್ರಭಾವಿತವಾಗಿದ್ದು ಅಶೋಕನ ಕಾಲದಲ್ಲಿ ಪ್ರಚಲಿತವಿದ್ದ ಪಾಕೃತ ಭಾಷೆಯಾಗಿ ಉಪಯೋಗಿಸಲ್ಪಟ್ಟಿದೆ.

ಡಾ॥ರಾಮು : ಆ ಕಾಲಕ್ಕಾಗಲೇ ಅದು ಪರಿಪೂರ್ಣತೆಯನ್ನು ಪಡೆದಿದ್ದು ಪ್ರಾಕೃತ ಭಾಷೆಯ ಪ್ರತಿಯೊಂದು ಶಬ್ದ ಅಥವಾ ಧ್ವನಿಗೆ ಪ್ರತ್ಯೇಕವಾದ ಅಕ್ಷರ ಅಥವಾ ಸಂಜ್ಞೆಯನ್ನು ಅದರಲ್ಲಿ ಕಲ್ಪಿಸಲಾಗಿದೆ.

ಡಾ॥ಶೀಲ : ಕರ್ಣಾಟಕದಲ್ಲಿ ಅಶೋಕನ ಬಾಹ್ಮೀ ಲಿಪಿಯ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರ ಎಂಬ ಸ್ಥಳಗಳಲ್ಲಿಯೂ ರಾಯಚೂರು ಜಿಲ್ಲೆಯ ಮಾಸ್ಕಿ, ಪಾಲ್ಕಿಗುಂಡು ಮತ್ತು ಗವಿಮಠ ಎಂಬ ಸ್ಥಳಗಳಲ್ಲಿಯೂ ದೊರೆತಿವೆ.

ಡಾ॥ರಾಮು : ಅಶೋಕನ ಬ್ರಾಹ್ಮೀ ಲಿಪಿ ಮುಂದೆ ಕ್ರಿ.ಶ. 3ನೆಯ ಶತಮಾನದ ವರೆಗೆ ಶುಂಗ, ಕುಶಾನ, ಕ್ಷತ್ರಪ, ಆಂಧ್ರ, ಶಾತವಾಹನ ಮುಂತಾದ ಅರಸರ ಶಾಸನಗಳಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ವಿಕಾಸ ಹೊಂದಿರುತ್ತದೆ.

ಡಾ॥ಶೀಲ : ಕರ್ಣಾಟಕದಲ್ಲಿ ಅಶೋಕನ ಬ್ರಾಹ್ಮೀ ಲಿಪಿಯ ಮುಂದಿನ ಹಂತವನ್ನು ಕ್ರಿ.ಶ. 2–3ನೆಯ ಶತಮಾನದ ಮಳವಳ್ಳಿ ಮತ್ತು ಬನವಾಸಿಯ ಸಾತಕರ್ಣಿಯ ಶಾಸನಗಳಲ್ಲಿ ಕಾಣುತ್ತೇವೆ. ಕ್ರಿ.ಶ. 4–5ನೆಯ ಶತಮಾನದ ಕದಂಬ ಅರಸರ ಶಾಸನಗಳಲ್ಲಿ ಕಂಡುಬರುವ ಕನ್ನಡ ಲಿಪಿ ಮುಂದಿನ ಬೆಳವಣಿಗೆಗೆ ತಳಹದಿಯಾಗಿದೆಯೆಂದು ಹೇಳಬಹುದು.

ಡಾ॥ರಾಮು : ಆ ಕಾಲದಿಂದ ಕರ್ಣಾಟಕದಲ್ಲಿ ಬಾಳಿ ಬೆಳಗಿದ ಗಂಗ, ಬದಾಮಿ ಚಾಳುಕ್ಯ, ರಾಷ್ಟ್ರಕೂಟ, ಚಾಳುಕ್ಯ, ಕಳಚುರಿ, ಯಾದವ, ಹೊಯ್ಸಳ ಮತ್ತು ವಿಜಯನಗರದ ಅರಸರ ಸಾವಿರಾರು ಶಾಸನಗಳು ದೊರೆತಿದ್ದರಿಂದ ಕನ್ನಡ ಲಿಪಿಯ ಅವಿಚ್ಛಿನ್ನವಾದ ಬೆಳವಣಿಗೆಯನ್ನು ತಿಳಿದುಕೊಳ್ಳಲಿಕ್ಕೆ ಸಾಧ್ಯವಾಗಿದೆ.

ಡಾ॥ಶೀಲ : ಕ್ರಿ.ಶ. 6–8ನೆಯ ಶತಮಾನದಲ್ಲಾಳಿದ ಬಾದಾಮಿ ಚಾಳುಕ್ಯರ ಶಾಸನಗಳಲ್ಲಿ ಕನ್ನಡ ಲಿಪಿಯ ಮುಂದಿನ ಬೆಳವಣಿಗೆಯನ್ನು ಕಾಣುತ್ತೇವೆ.

ಡಾ॥ರಾಮು : ಆದರ ಮುಂದಿನ ಎರಡು ಮೂರು ಶತಮಾನಗಳ ಕಾಲದಲ್ಲಿ ಅಂದರೆ ಕ್ರಿ. ಸ. 14–16ನೆಯ ಶತಮಾನದ ವಿಜಯನಗರ ಅರಸರ ಶಾಸನಗಳಲ್ಲಿ ಅಕ್ಷರಗಳನ್ನು ಡೊಂಕು ಡೊಂಕಾಗಿ ಬರೆಯಲಾಗಿದ್ದು ಅವುಗಳ ಜೋಡಣೆಯ ವಿಷಯದಲ್ಲಿ ಅಷ್ಟು ಗಮನವನ್ನಿತ್ತಿಲ್ಲ.

ಡಾ॥ಶೀಲ : ಕ್ರಿ.ಶ. 18ನೆಯ ಶತಮಾನದಲ್ಲಿ ಮೈಸೂರು ಅರಸರ ಕಾಲದಲ್ಲಿ ಕನ್ನಡ ಲಿಪಿ ವಿಜಯನಗರ ಕಾಲದ ಅಕ್ಷರಗಳ ಕೆಲವು ಲಕ್ಷಣಗಳನ್ನು ಉಳಿಸಿಕೊಂಡಿದ್ದರೂ ಆಧುನಿಕ ಕನ್ನಡ ಲಿಪಿಗೆ ಬಹಳ ಹತ್ತಿರವಾಗಿ ತೋರುತ್ತದೆ.

ಡಾ॥ಶೀಲ : ಕ್ರಿ.ಶ. 14–15ನೆಯ ಶತಮಾನಗಳಲ್ಲಿ ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಕೆಲವು ವ್ಯತ್ಯಾಸಗಳು ತಲದೋರಿದ್ದು ಮುಂದಿನ ಎರಡು ಮೂರು ಶತಮಾನಗಳಲ್ಲಿ ಗಮನಾರ್ಹವಾದ ಭೇದಗಳು ಕಂಡುಬರುತ್ತವೆ.

ಡಾ॥ರಾಮು : ಆದರೂ ಅಲ್ಪ ಪ್ರಯತ್ನದಿಂದ ಕನ್ನಡಿಗರು ತೆಲುಗು ಲಿಪಿಯನ್ನೂ ಅದರಂತೆ ಆಂದ್ರರು ಕನ್ನಡ ಲಿಪಿಯನ್ನೂ ಸುಲಭವಾಗಿ ತಿಳಿದುಕೊಳ್ಳಬಹುದು.

ಡಾ॥ಶೀಲ : ಬಾದಾಮಿ ಚಾಳುಕ್ಯರ ಕಾಲದಲ್ಲಿ ಕನ್ನಡ ಲಿಪಿ ಮಹಾರಾಷ್ಟ್ರ ಮತ್ತು ಗುಜರಾತ್ ಪ್ರಾಂತ್ಯಗಳಲ್ಲಿಯೂ ಪ್ರಚಲಿತವಿದ್ದು ಮುಂದೆ ಅಲ್ಲಿ ನಾಗರೀ ಲಿಪಿ ಬಳಕೆಗೆ ಬಂತು.

ಡಾ॥ರಾಮು : ಅಂತೂ ಮೇಲಿನ ವಿವೇಚನೆಯಿಂದ ಕನ್ನಡ ಲಿಪಿ ಸುಮಾರು ಎರಡು ಸಾವಿರ ವರ್ಷಕ್ಕೂ ಹೆಚ್ಚಿನ ಪರಂಪರೆಯುಳ್ಳದ್ದಾಗಿದೆಯೆಂದು ಗೊತ್ತಾಗುತ್ತದೆ.

ಡಾ॥ಶೀಲ : ಉಚ್ಚಾರಿತ ಅಕ್ಷರ ಹಾಗೂ ಲಿಖಿತ ವರ್ಣ ಇವುಗಳ ಸಂಬಂಧ ಸಂಪೂರ್ಣವಿರಬೇಕು.

ಡಾ॥ರಾಮು : ಈ ದೃಷ್ಟಿಯಿಂದ ವಿಚಾರಿಸಿದರೆ ಕನ್ನಡ ಲಿಪಿ ಪರಿಪೂರ್ಣತೆಯನ್ನು ಪಡೆದಿದೆಯೆಂದು ಹೇಳಬಹುದು.

ಡಾ॥ಶೀಲ : ಈ ಲಿಪಿಯಲ್ಲಿ ಸ್ವರ ಮತ್ತು; ವ್ಯಂಜನಗಳು ಪೂರ್ಣವಾಗಿದ್ದು ಆರ್ಯ ಮತ್ತು ದ್ರಾವಿಡ ಭಾಷೆಗಳ ಧ್ವನಿಗಳನ್ನು ಕೊರತೆಯಿಲ್ಲದೆ ಸೂಚಿಸಲಿಕ್ಕೆ ಉಪಯುಕ್ತವಾದ ಸಂಕೇತಗಳಿವೆ. ವ್ಯಂಜನಾಕ್ಷರಗಳೊಡನೆ ಸ್ವರಗಳ ಸುಂದರವಾದ ಸಂಯೋಗವಿದೆ.

ಡಾ॥ರಾಮು : ಹೀಗೆ ಕನ್ನಡ ಲಿಪಿ ಅಶೋಕನ ಬ್ರಾಹ್ಮೀಲಿಪಿಯಿಂದ ಉದ್ಭವಿಸಿ ಕಾಲಕ್ರಮದಲ್ಲಿ ಅನೇಕ ಮಾರ್ಪಾಟುಗಳನ್ನು ಹೊಂದಿ ವೈವಿಧ್ಯಪೂರ್ಣವಾದ ವಿಕಾಸವನ್ನು ಪಡೆದು ಸಾಹಿತ್ಯ-ಸಂಸ್ಕೃತಿಗಳ ಹಿರಿಮೆಯನ್ನು ವ್ಯಕ್ತಪಡಿಸುತ್ತದೆ.

ಡಾ॥ಶೀಲ : ಕನ್ನಡ ವರ್ಣಮಾಲೆಯ ಪ್ರತಿಯೊಂದು ಅಕ್ಷರದ ಉಗಮ, ವಿಕಾಸ, ಉಚ್ಚಾರಣೆ ಮೊದಲಾದ ವಿವರಗಳು ಆಯಾ ಅಕ್ಷರಗಳ ಶೀರ್ಷಿಕೆಗಳಲ್ಲಿ ಬಂದಿವೆ.

# 5. ಅಕ್ಷರ

**ಡಾ॥ಶೀಲ : ಅಕ್ಷರಗಳು ಎಂದರೇನು ?**

**ಡಾ॥ರಾಮು : ಉಚ್ಚಾರಣೆಯನ್ನು ಬರಹದಲ್ಲಿ ತೋರಿಸುವ ಚಿಹ್ನೆಗಳಿಗೆ ಅಕ್ಷರಗಳೆಂದು ಹೆಸರು.**

**ಡಾ॥ಶೀಲ : ಅಕ್ಷರ** ವೆಂದರೆ ವರ್ಣಮಾಲೆಯಲ್ಲಿ ಬಿಂಬಿಸುವ ಬರವಣಿಗೆಯ ರೂಪದಲ್ಲಿರುವ ಒಂದು ಅಥವಾ ಜಾಸ್ತಿ ಶಬ್ದಗಳನ್ನು ಸ್ಫುರಿಸುವ ಒಂದು ಸಂವಹನೆಯ ಮಾಧ್ಯಮ.

**ಡಾ॥ರಾಮು :** ಪ್ರತಿಯೊಂದು ಅಕ್ಷರವೂ ಒಂದು ಭಾಷೆಯಲ್ಲಿರುವ ವಿವಿಧ ಪದಗಳನ್ನು ಉಚ್ಚರಿಸುವ ವಿಧಾನಗಳನ್ನು ತಿಳಿಸುತ್ತದೆ. ಅಕ್ಷರವು ಬರವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

**ಡಾ॥ಶೀಲ : ಈ ಅಕ್ಷರಗಳು "ಅ"ಕಾರ, "** ಇ**" ಕಾರ, "** ಕ**" ಕಾರ, "**ಮ**" ಕಾರ** ಮುಂತಾದ **ವರ್ಣಗಳು.**

**ಡಾ॥ರಾಮು : ಈ ಅಕ್ಷರಗಳು ಒಂದು ಸಲದ ಉಚ್ಚಾರಣೆಗೆ ಶಕ್ತವಾಗಿರುತ್ತವೆ.**

**ಉದಾ: ಅಕ್ಷರ ಎಂಬ ಶಬ್ದದಲ್ಲೇ ಅ, ಕ್ಷ,**ರ **ಎಂಬ ಮೂರು ಅಕ್ಷರಗಳಿವೆ.**

**ಡಾ॥ಶೀಲ : "ಅಕ್ಷರ" ಪದದ ಇನ್ನೊಂದು ಅರ್ಥವೇನು ?**

**ಡಾ॥ರಾಮು : ನಾಶವಿಲ್ಲದ, ವಿಕಾರವಿಲ್ಲದ, ಮರಣವಿಲ್ಲದ ಸ್ಥಿರವಾದದಕ್ಕೆ "ಅಕ್ಷರ" ವೆನ್ನುತ್ತಾರೆ.**

**ಡಾ॥ಶೀಲ : ಅಕ್ಷರಗಳ ಮೂಲಭೂತ ಅಂಶಗಳು ಯಾವುವು** ?

**ಡಾ॥ರಾಮು :**

1. ಅಕ್ಷರ
2. ೧೩ ಸ್ವರಗಳು - ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ
3. ೨ ಯೋಗವಾಹಕಗಳು - ಅಂ ಅಃ
4. ೨೫+೧೧ ವ್ಯಂಜನಗಳು - ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ ಯ ರ ಱ ಲ ವ ಶ ಷ ಸ ಹ ಳ ೞ
5. ಪದ ಅಥವಾ ಶಬ್ದ
6. ನಾಮಪದ
7. ಕ್ರಿಯಾಪದ
8. ಸರ್ವನಾಮ
9. ಗುಣವಾಚಕ
10. ಸಾಲು ಅಥವಾ ವಾಕ್ಯ
11. ವಿಭಕ್ತಿ ಪ್ರತ್ಯಯಗಳು
12. ಧಾತು-ವ್ಯಾಕರಣ

**13.** ಲಿಂಗ-ವ್ಯಾಕರಣ

**14.** ಅಂಕಿ

# ಪ್ರಮುಖ ವಿಭಾಗಗಳು

1. ತತ್ಸಮ-ತದ್ಭವ
2. ವಿಭಕ್ತಿ ಪ್ರತ್ಯಯಗಳು
3. ಕಾಲ-ವ್ಯಾಕರಣ
4. ಜೋಡು ನುಡಿಗಟ್ಟು
5. ಸಂಧಿ
6. ಸಮಾಸ
7. ಛಂದಸ್ಸು
8. ಅಲಂಕಾರ
9. ವೃತ್ತ
10. ತ್ರಿಪದಿ
11. ಕಾಂಡ
12. ಷಟ್ಪದಿ
13. ಸಾಂಗತ್ಯ
14. ಪ್ರಾಸಗಳು
15. ದ್ವಿರುಕ್ತಿ
16. ಪರಿಮಾಣ ವಾಚಕಗಳು
17. ಸಮುಚ್ಚಯ ಪದಗಳು |ದ್ವಯಗಳು; ತ್ರಯ ; ಚತುಷ್ಟಯಗಳು ; ಪಂಚ ಗಳು; ಇತ್ಯಾದಿ, ಷಷ್ಠಿ (೬೦)ಸಂವತ್ಸರಗಳ ವರೆಗೆ
18. ಪ್ರಬಂಧ ರಚನೆ

# 6. ಅಕ್ಷರತೆ

ಡಾ||ರಾಮು : ಅಕ್ಷರತೆ ಎಂದರೆ ಅಕ್ಷರಜ್ಞಾನವನ್ನು ಹೊಂದಿರುವುದು. ಸಾಕ್ಷರತೆ (ಲಿಟರಸಿ) ಎಂದರ್ಥ.

ಡಾ||ಶೀಲ : ಜ್ಞಾನಾರ್ಜನೆಯ ಸಾಧನಗಳಲ್ಲಿ ಅಕ್ಷರತೆ ಬಹಳ ಮುಖ್ಯವಾದುದು. ಮುಂದುವರಿದ ರಾಷ್ಟ್ರಗಳಲ್ಲೆಲ್ಲ ಅಕ್ಷರತೆ ಹೆಚ್ಚಾಗಿರುತ್ತದೆ.

ಡಾ||ರಾಮು : ಹಿಂದುಳಿದ ರಾಷ್ಟ್ರಗಳಲ್ಲಿ ನಿರಕ್ಷರತೆ (ಇಲ್ಲಿಟ್ರಸಿ) ಹೆಚ್ಚಾಗಿರುತ್ತದೆ.

ಡಾ||ಶೀಲ : ಅಕ್ಷರತೆಯ ಗಣತಿಗಾಗಿ 15 ವರ್ಷಕ್ಕೆ ಮೇಲ್ಪಟ್ಟವರನ್ನು ವಯಸ್ಕರೆಂದು ಪರಿಗಣಿಸಲಾಗಿದೆ.

ಡಾ||ರಾಮು : ಪ್ರಪಂಚದಲ್ಲಿ 44% ನಿರಕ್ಷರಸ್ಥರಿದ್ದಾರೆ. ಇವರಲ್ಲಿ ಹೆಂಗಸರು ಹೆಚ್ಚು.

ಡಾ||ಶೀಲ : ಅಮೆರಿಕ ರಷ್ಯ ಇಂಗ್ಲೆಂಡ್ ಜಪಾನ್ ಮುಂತಾದ ದೇಶಗಳಲ್ಲಿ 90%ಕ್ಕಿಂತ ಹೆಚ್ಚು ಜನ ಅಕ್ಷರಸ್ಥರಿದ್ದಾರೆ (ಲಿಟರೇಟ್ಸಸ). ಭಾರತದಲ್ಲಿ (1907) ಅಕ್ಷರತೆ 24.4% ಇವರ ಸಂಖ್ಯೆ 1951ರಲ್ಲಿ 16.6 1931ರಲ್ಲಿ 10.5%, 1907ರಲ್ಲಿ 7% ಆಗಿತ್ತು.

ಡಾ||ರಾಮು : ಸಾಮಾನ್ಯವಾಗಿ ಉಚಿತವಾದ ಮತ್ತು ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿರುವ ರಾಷ್ಟ್ರಗಳಲ್ಲಿ ಸಾಕ್ಷರತೆಯ ಮಟ್ಟ ಹೆಚ್ಚಾಗಿರುತ್ತದೆ.

ಡಾ||ಶೀಲ : ಆಯಾ ದೇಶದ ಸ್ಥಿತಿಗತಿಗಳಿಗನುಗುಣವಾಗಿ ಸಾಕ್ಷರತೆಯ ಮಟ್ಟ ವ್ಯತ್ಯಾಸವಾಗುತ್ತದೆ.

ಡಾ||ರಾಮು : ಯುನೆಸ್ಕೊ ಸಂಸ್ಥೆ ಏರ್ಪಡಿಸಿದ್ದ ಸಮಿತಿಯೊಂದು ಇದರ ಬಗ್ಗೆ ಪರಿಶೀಲನೆ ನಡೆಸಿ ಓದಿ ವಿಷಯವನ್ನು ಗ್ರಹಿಸಿಕೊಳ್ಳುವುದರ ಜೊತೆಗೆ ನಿತ್ಯಜೀವನಕ್ಕೆ ಸಂಬಂಧಪಟ್ಟ, ವಿಷಯವನ್ನು ಸರಳವಾದ ಶೈಲಿಯಲ್ಲಿ ಬರೆಯುವ ಶಕ್ತಿಯನ್ನು ಮಾತ್ರ ಪಡೆದಿದ್ದು, ಬರೆಹ ತಿಳಿಯದವನನ್ನು ಅರೆಅಕ್ಷರಸ್ಥನೆಂದೂ ವಿವರಿಸಿದೆ.

ಡಾ||ಶೀಲ : ಮುಂದುವರಿಯುತ್ತಿರುವ ದೇಶಗಳಲ್ಲಿ ತಮ್ಮ ದೇಶದ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಪ್ರಯತ್ನ ಮಾಡುತ್ತಿವೆ.

ಡಾ||ರಾಮು : ಸಾಕ್ಷರತೆ ಕಡಿಮೆ ಇರುವ ದೇಶಗಳಲ್ಲೆಲ್ಲ ವಯಸ್ಕರ ಶಿಕ್ಷಣಸಂಸ್ಥೆಗಳು ಅಕ್ಷರಪ್ರಚಾರಕ್ಕೆ ಹೆಚ್ಚು ಗಮನಕೊಡುತ್ತಿವೆ.

ಡಾ||ಶೀಲ : ಮೈಸೂರು ರಾಜ್ಯದಲ್ಲಿ ಸಾಕ್ಷರತೆಯನ್ನು ಪ್ರಸಾರ ಮಾಡುವ ಕೆಲಸ ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗಲೇ (1912) ಪ್ರಾರಂಭವಾಯಿತು.

ಡಾ||ರಾಮು : ಕಾರಣಾಂತರಗಳಿಂದ ನಿಂತಿದ್ದ ಆ ಕಾರ್ಯವನ್ನು 1941ರಿಂದ ಈಚೆಗೆ ಸಂಸ್ಥಾನದ ವಯಸ್ಕರ ಶಿಕ್ಷಣಸಮಿತಿ ಕೈಗೊಂಡಿದೆ.

# 7. ಭಾಷೆ

ಡಾ॥ಶೀಲ : ಭಾಷೆ ಎಂದರೇನು ?

ಡಾ॥ರಾಮು : ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಸ್ವತಂತ್ರ ಧ್ವನಿಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ (ಲಾಂಗ್ವೇಜ್).

ಅಕ್ಷರರೂಪದಿಂದ ಅಭಿವ್ಯಕ್ತವಾದ ಮನೋಭಾವನೆಯೇ ಭಾಷೆ.

ಜನರು ತಮ್ಮ ಭಾವನೆಗಳನ್ನು ಇತರರಿಗೆ ತಿಳಿಸಲು ಈ ಭಾಷಾ ಮಾಧ್ಯಮ ಸಾಧನವಾದ ಮಾತು ಅಥವಾ ನುಡಿಯ ಮೂಲಕ ಉಪಯೋಗಿಸುತ್ತಾರೆ.

ಭಾಷೆಗಳಲ್ಲಿ ವರ್ಣಗಳು ಕೆಲವು, ಪದಗಳು ಕೆಲವು.

ಡಾ॥ಶೀಲ : ಭಾಷೆ ಪದದ ನಿಷ್ಪತ್ತಿ ಹೇಗಾಯಿತು ?

ಡಾ॥ರಾಮು : ಭಾಷೆ ಎಂಬ ನಿಷ್ಪತ್ತಿ ಸಂಸ್ಕೃತ " ಭಾಷ್ " ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ.

ಇಂಗ್ಲೀಷಿನ "Language" ಎಂಬ ಪದ "Lingua" ಎಂಬ ಲ್ಯಾಟಿನ್ ಮೂಲದಿಂದ ನಿಷ್ಪನ್ನವಾಗಿದೆ.

" ಭಾಸತೆ ಇತಿ ಭಾಷಾ " ಎಂದರೆ " ಹೊಳೆಯುವುದು " ಎಂದರ್ಥ.

ಮಾತನ್ನಾಡಲು ಬರುವುದು ಯಾವುದೋ ಅದೇ ಭಾಷೆ.

ವ್ಯಾಖ್ಯಾನಿಸುವುದು ಯಾವುದೋ ಅದೇ ಭಾಷೆ.

## ಭಾಷೆಯ ವಿವರಣೆ

ಡಾ॥ಶೀಲ : ಧ್ವನಿಸಂಕೇತಗಳ ವ್ಯವಸ್ಥೆಯಿಂದ ಕೂಡಿ ಒಂದು ಸಾಮಾಜಿಕ ಸಮೂಹದ ಸಹಕಾರಕ್ಕೆ ಕಾರಣವಾಗುವುದೇ ಭಾಷೆ.

ಡಾ॥ರಾಮು : ಭಾಷೆ ಒಂದು ವ್ಯವಸ್ಥೆ; ಸಂಕೇತಗಳ ವ್ಯವಸ್ಥೆ; ಉಚ್ಚರಿತ ಸಂಕೇತಗಳ ವ್ಯವಸ್ಥೆ; ಯಾದೃಚ್ಛಿಕ ಉಚ್ಚರಿತ ಸಂಕೇತಗಳ ವ್ಯವಸ್ಥೆಯೇ ಭಾಷೆ ಎಂದು ತಿಳಿದುಬರುತ್ತದೆ.

ಡಾ॥ಶೀಲ : ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಂಕೇತಗಳ ಒಂದು ಸುವ್ಯವಸ್ಥೆಯೇ ಭಾಷೆ.

ಡಾ॥ರಾಮು : ಶಬ್ದಗಳೆಂಬ ನಾಣ್ಯಗಳ ಮೂಲಕ ಮಾತ್ರ ನಾವು ನಮ್ಮೊಳಗೇ ಆಲೋಚನೆಗಳ ವಿನಿಮಯ ಮಾಡಿಕೊಳ್ಳಲು ಸಾಧ್ಯ.

ಡಾ॥ಶೀಲ : ಭಾಷೆಯ ಉಗಮವನ್ನು ಅರಿಯಲು ಅನೇಕ ವಿದ್ವಾಂಸರು ಪ್ರಯತ್ನ ನಡೆಸಿರುವರಾದರೂ ಅವರ ಯಾವ ಪ್ರಯತ್ನವೂ ಫಲಕಾರಿಯಾಗಿಲ್ಲ.

ಡಾ॥ರಾಮು : ಭಾಷೆಯ ಉಗಮಕ್ಕೆ ಸಂಬಂಧಿಸಿದ ಅನುಕರಣವಾದ, ಉದ್ಗಾರವಾದ, ಅನುರಣನವಾದ. ಮುಂತಾದವು ತಮ್ಮ ಅಸ್ಪಷ್ಟತೆಯಿಂದಾಗಿ ಬಿದ್ದುಹೋದವು.

ಡಾ॥ಶೀಲ : ಇವೇ ಅಲ್ಲದೆ ಸಂಜ್ಞಾಭಾಷೆಯೇ ಪ್ರಾಚೀನವಾದದ್ದು ಎಂಬುದಾಗಿ ಪ್ರತಿಪಾದಿಸಿದ ಅನೇಕ ಮಹನೀಯರ ವಾದವೂ ಅಸ್ತಿತ್ವವನ್ನು ಕಳೆದುಕೊಂಡವು.

ಡಾ॥ರಾಮು : ಆದ್ದರಿಂದ ಭಾಷೆಯ ಹುಟ್ಟನ್ನು ತಿಳಿಯಲು ನಡೆಸಿರುವ ಪ್ರಯತ್ನಗಳೆಲ್ಲ ವಿಫಲವಾಗಿವೆ.

ಡಾ॥ಶೀಲ : ಭಾಷೆ ಮರುಭೂಮಿಯ ಮಹತ್ಕೃತಿ. ಮೃಗಕ್ಕೂ ಮಾನವನಿಗೂ ಇರುವ ವ್ಯತ್ಯಾಸಗಳಲ್ಲಿ ಭಾಷೆಯೇ ಪ್ರಮುಖವಾದದ್ದು.

ಡಾ॥ರಾಮು : ಭಾಷೆ ಸಂಸ್ಕೃತಿಯ ಸಾಧನ ಸಾಮಗ್ರಿ.

ಡಾ॥ಶೀಲ : ನಮ್ಮ ಪರಸ್ಪರ ವ್ಯವಹಾರಕ್ಕೆ ಭಾಷೆ ಪ್ರಮುಖ ಸಾಧನ. ಭಾಷೆಯಿಂದಲೇ ಮಾನವ ಸಮಾಜ ಸಂಸ್ಕೃತಿ ಅರಳಿ ವಿಕಾಸಗೊಂಡಿದೆ.

ಡಾ॥ರಾಮು : ಮಾನವ ಮನಸ್ಸನ್ನು ಅರಳಿಸುವ, ಮುದುಡಿಸುವ ಕ್ರಿಯಾಶೀಲವಾಗುವಂತೆ ಮಾಡುವ ಶಕ್ತಿ ಭಾಷೆಗುಂಟು.

ಡಾ॥ಶೀಲ : ಆದ್ದರಿಂದ ಇಂದಿನ ನಾಗರಿಕ ಬದುಕಿನಲ್ಲಿ ಭಾಷೆ ಅಗತ್ಯವೂ ಅನಿವಾರ್ಯವೂ ಆಗಿದೆ.

ಡಾ॥ಶೀಲ : ಭಾಷೆಯ ಬಗ್ಗೆ ಪಂಡಿತರು ಯಾವ ಯಾವ ರೀತಿ ವ್ಯಾಖ್ಯಾನ ಮಾಡಿದ್ದಾರೆ ?

ಡಾ॥ರಾಮು :ಭಾಷೆ "ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಸಾಧನ".

- ಪ್ಲೇಟೋ

"ಒಂದು ಚಿತ್ತ ಸ್ಥಿತಿಯನ್ನು ಉದ್ದೇಶದಿಂದ ಕೂಡಿದ ಧ್ವನಿಗಳ ಉಚ್ಚಾರದಿಂದ ವ್ಯಕ್ತಪಡಿಸುವುದೇ ಭಾಷೆ ". - ಮಾರ್ಟ

"ಭಾಷೆ ಎಂಬುದು ಒಂದು ಬಗೆಯ ಸಂಕೇತ. ಈ ಸಂಕೇತಗಳ ಮುಖಾಂತರ ಮಾನವ ತನ್ನ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದೇ ಭಾಷೆ ". - ವೆನ್ರಿಚ್

" ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಗೊಳಿಸುವುದೆ ಭಾಷೆ "

- ಹೆನ್ರಿ ಸ್ವೀಟ್

" ಭಾಷೆಯಾದಚ್ಛಿಕವಾದ ಮೌಖಿಕ ಧ್ವನಿ ಸಂಕೇತಗಳನ್ನು ಹೊಂದಿದ್ದು, ಸಮಾಜದ ಸದಸ್ಯರ ಕ್ರಿಯೆ ಮತ್ತು ಪ್ರಕ್ರಿಯೆಗಳು ಇದರಿಂದ ಸಾಧ್ಯವಾಗುತ್ತದೆ." - ಎಚ್.ಸ್ಟುರ್ಟೆವಾಂಟ್

" ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ ".

- ಫರ್ಡಿನಾಂಡ್ ಡಿ.ಸಸೂರ್

" ಪದಗಳೆಂಬ ನಾಣ್ಯಗಳ ಮೂಲಕ ನಮ್ಮೊಳಗಿನ ಆಲೋಚನೆಗಳನ್ನು ವಿನಿಮಯ ಮಾಡಿ ಕೊಳ್ಳಲು ಸಾಧ್ಯವಾಗುವ ಸಾಧನವೇ ಭಾಷೆ. " - ಕ್ವಿಲ್ಲರ್

" ಸೀಮೀತವಾದ ವ್ಯವಸ್ಥಿತ ಶಬ್ದ ಸಮುದಾಯವನ್ನೊಳಗೊಂಡು ಅಭಿವ್ಯಕ್ತಿಗೆ ಕಾರಣವಾಗುವ ಮಾಧ್ಯಮವೇ ಭಾಷೆ. " - ಕ್ರೋಚೆ

" ಭಾಷೆ ಎಂಬುದು ಯಾದೃಚ್ಛಿಕ ಮೌಖಿಕ ಧ್ವನಿ ಸಂಕೇತಗಳ ಒಂದು ವ್ಯವಸ್ಥೆ ಸಮುದಾಯ ದಲ್ಲಿ ಇದರಿಂದ ವ್ಯವಹರಣೆ ನಡೆಯುತ್ತದೆ. " - ಬ್ಲಾಕ್ ಮತ್ತು ಟ್ರೇಗಲ್

" ಮಾನವ ಭಾಷೆ ಸಂಕೇತಗಳ ವ್ಯವಸ್ಥೆ " - ಎಡ್ವರ್ಡ್‌ಸಪಿರ್

" ನಮ್ಮ ವಿಚಾರಗಳನ್ನು, ಭಾವನೆಗಳನ್ನು ಮತ್ತು ಅಪೇಕ್ಷೆಗಳನ್ನು ಸಂವಹನೆ ಮಾಡಲೆಂದು ಇರುವ ಸ್ವಭಾವ ಸಿದ್ಧವಲ್ಲದ ಹಾಗೂ ಮಾನವನಿಗೆ ಮಾತ್ರ ಸೀಮಿತವಾದ ಸ್ವಪ್ರೇರಿತ ಉಚ್ಚಾರಿತ ಸಂಕೇತಗಳ ವ್ಯವಸ್ಥೆಯೇ ಭಾಷೆ " - ಸಿ.ಎಲ್.ಬಾರ್ಬರ್

ಡಾ॥ಶೀಲ : ಭಾಷೆಯ ಲಕ್ಷಣಗಳಾವುವು ?

ಡಾ॥ರಾಮು : 1. ದ್ವಿವಿಧತೆ (Dualitys)
2. ಉತ್ಪಾದಕತೆ (Productivity)
3. ಯಾದೃಚ್ಛಿಕತೆ (Arbitrariness)
4. ವಿಶಿಷ್ಟ ಪ್ರಾವಿಣ್ಯ (Specializations)
5. ಪರಸ್ಪರ ವಿನಿಮಯ (Interchangeabilitys)
6. ಸ್ಥಾನ ಪಲ್ಲಟತೆ (Displacement)
7. ಸಂಸ್ಕೃತಿವಹಾಕತೆ (Cultural transmission)

ಡಾ॥ಶೀಲ : ದ್ವಿವಿಧತೆ ಎಂದರೇನು ?

ಡಾ॥ರಾಮು : ಭಾಷೆಯಲ್ಲಿ ಬಳಕೆಯಾಗುವ ಶಬ್ದಗಳು ಧ್ವನಿ ಮತ್ತು ಅರ್ಥ ವೆಂಬ ಎರಡು ಅಂಶಗಳನ್ನು ಹೊಂದಿರುತ್ತವೆ. ಇವುಗಳನ್ನು ಅಭಿವ್ಯಕ್ತಿ ಮತ್ತು ಆಶಯ ಎನ್ನುವರು ಹೀಗೆ ಶಬ್ದಗಳು ಪಡೆದು ಕೊಂಡಿರುವ ಎರಡು ಅಂಶಗಳನ್ನು ದ್ವಿವಿಧತೆ ಎನ್ನುವರು.

ಉದಾ:- ಧ್ವನಿಗೆ - ನ್ + ಊ + ಲ್ + ಉ = ನೂಲು (ಶಬ್ದರೂಪದ ಅಥವಾ ಧ್ವನಿರೂಪ)
ಅರ್ಥಕ್ಕೆ - ವಸ್ತುವನ್ನು ಸೂಚಿಸುತ್ತದೆ (ಅಂತಃರೂಪ ಅಥವಾ ಅರ್ಥರೂಪ)

ಡಾ॥ಶೀಲ : ಉತ್ಪಾದಕತೆ ಎಂದರೇನು ?

ಡಾ॥ರಾಮು : ಅಗತ್ಯಕ್ಕನುಗುಣವಾಗಿ ಭಾಷೆಯ ಹೊಸ ಹೊಸ ಶಬ್ದ ನಿರ್ಮಾಣ ಶಕ್ತಿಯೇ ಉತ್ಪಾದಕತೆ
ಉದಾ :- ಕಂಪ್ಯೂಟರ್ - ಗಣಕಯಂತ್ರ, ಇಂಟರ್ ನೆಟ್ - ಅಂತರ್ ಜಾಲ ಮೊಬೈಲ್ - ಜಂಗಮವಾಣಿ ಇತ್ಯಾದಿ.

ಡಾ॥ಶೀಲ : ಯಾದೃಚ್ಛಿಕತೆ ಎಂದರೇನು ?

ಡಾ॥ರಾಮು: ಒಂದು ವಸ್ತು ಜಗತ್ತಿನಾದ್ಯಂತ ಸಾರ್ವತ್ರಿಕವಾಗಿ ಒಂದೇ ಆಗಿದ್ದರೂ, ಅದರ ರಚನೆಯು ಒಂದೇ ರೀತಿಯಾಗಿದ್ದರೂ ಅದನ್ನು ಗುರ್ತಿಸುವ ಪದಗಳು ಮಾತ್ರ ಭಾಷೆಯಿಂದ ಭಾಷೆಗೆ ಭಿನ್ನವಾಗಿರುತ್ತದೆ. ಇದನ್ನೆ ಯಾದೃಚ್ಛಿಕತೆ ಎನ್ನುವರು.

ಡಾ॥ಶೀಲ : ವಿಶಿಷ್ಟ ಪ್ರಾವಿಣ್ಯ ಎಂದರೇನು ?

ಡಾ॥ರಾಮು : ಭಾಷೆಯನ್ನು ಸ್ವಭಾಷೆಯಾಗಿ ಹೊಂದಿದವನು ಅದನ್ನು ಲೀಲಾಜಾಲವಾಗಿ ಬಳಸುತ್ತಿರುತ್ತಾನೆ. ಅಂದರೆ ಮಾನಾಡುವವನಾಗಿ, ಕೇಳುಗನಾಗಿ ಆತ ತನ್ನ ಭಾಷೆಯನ್ನು ಬಳಸುವ ವಿಶಿಷ್ಟ ಜ್ಞಾನವನ್ನು ಪಡೆದಿರುತ್ತಾನೆ.

ಡಾ॥ಶೀಲ : ಪರಸ್ಪರ ವಿನಿಮಯ ಎಂದರೇನು ?

ಡಾ||ರಾಮು : ಎದುರಿಗಿರದ, ಅಮೂರ್ತವಾಗಿರುವುದನ್ನು ಮೂರ್ತವೆಂಬಂತೆ ಮನಸ್ಸಿಗೆ ತಿಳುವಳಿಕೆ ಮಾಡಿ ಕೊಡುವ ಭಾಷೆಯ ಲಕ್ಷಣವೇ ಸ್ಥಾನಪಲ್ಲಟತೆ. ಉದಾ :- ಪುಷ್ಪಕ ವಿಮಾನ, ಸ್ವರ್ಗ, ನರಕ ಇತ್ಯಾದಿ.

ಡಾ||ಶೀಲ : ಸಂಸ್ಕೃತಿವಹಾಕತೆ ಎಂದರೇನು ?

ಡಾ||ರಾಮು: ಅನಾದಿಕಾಲದಿಂದಲೂ ಭಾಷೆ ಸಂಸ್ಕೃತಿಯನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸುವುದೇ ಸಂಸ್ಕೃತಿವಾಹಕತೆ. (ಜ್ಞಾನ, ತಿಳುವಳಿಕೆ, ಬದುಕು, ಜೀವನಕ್ರಮ ಇತ್ಯಾದಿ ಸಾಂಸ್ಕೃತಿಕ ಅಂಶಗಳು)

ಡಾ||ಶೀಲ : ಮೂರು ಸಾಲಿನ ಪದ್ಯವನ್ನು ಏನೆಂದು ಕರೆಯಲಾಗುತ್ತದೆ ?
ಡಾ||ರಾಮು :ತ್ರಿಪದಿ

ಡಾ||ಶೀಲ : ನಾಲ್ಕು ಸಾಲಿನ ಪದ್ಯವನ್ನು ಏನೆಂದು ಕರೆಯಲಾಗುತ್ತದೆ ?
ಡಾ||ರಾಮು : ಚೌಪದಿ

ಡಾ||ಶೀಲ : ಚೌಪದಿಯಲ್ಲಿ ಹೆಚ್ಚಾಗಿ ಮೂಡಿ ಬಂದ ಸಾಹಿತ್ಯ ಯಾವುದು ?
ಡಾ||ರಾಮು : ಜಾನಪದ ಸಾಹಿತ್ಯ

ಡಾ||ಶೀಲ : ಆರು ಸಾಲಿನ ಪದ್ಯವನ್ನು ಏನೆಂದು ಕರೆಯಲಾಗುತ್ತದೆ ?
ಡಾ||ರಾಮು : ಷಟ್ಪದಿ

ಡಾ||ಶೀಲ : ಷಟ್ಪದಿಯ ಪ್ರಕಾರಗಳು ಯಾವುವು ?
ಡಾ||ರಾಮು : ಶರ, ಕುಸುಮ, ಭೋಗ, ಭಾಮಿನೀ, ಪರಿವರ್ಧಿನೀ, ವಾರ್ಧಿಕ

ಡಾ||ಶೀಲ : ತ್ರಿಪದಿಯ ಸಾರ್ವಭೌಮರೆಂದು ಯಾರನ್ನು ಕರೆಯುತ್ತಾರೆ ?
ಡಾ||ರಾಮು : ಸರ್ವಜ್ಞ

ಡಾ||ಶೀಲ : ಕನ್ನಡ ವರ್ಣಮಾಲೆಯಲ್ಲಿನ ವ್ಯಂಜನಗಳೆಷ್ಟು ?
ಡಾ||ರಾಮು : 34

ಡಾ||ಶೀಲ : ಕನ್ನಡ ವರ್ಣ ಮಾಲೆಯಲ್ಲಿನ ಅನುನಾಸಿಕ ಅಕ್ಷರಗಳೆಷ್ಟು ?
ಡಾ||ರಾಮು : 5

ಡಾ||ಶೀಲ : ಕನ್ನಡ ವ್ಯಾಕರಣದಲ್ಲಿ ಎಷ್ಟು ಅಂಗಗಳಿವೆ ?
ಡಾ||ರಾಮು : ಮೂರು

ಡಾ||ಶೀಲ : ಕನ್ನಡವು ಯಾವ ಭಾಷಾವರ್ಗದ ಒಂದು ಪ್ರಮುಖ ಭಾಷೆ ?
ಡಾ||ರಾಮು : ಡ್ರಾವಿಡ ಭಾಷೆ

ಡಾ||ಶೀಲ : ಮೂಲ ಡ್ರಾವಿಡ ಭಾಷೆಯ ಎಷ್ಟು ವರ್ಷಗಳು ಹಿಂದೆ ಬಳಕೆಯಲ್ಲಿತ್ತೆಂದು ಹೇಳಲಾಗುತ್ತಿದೆ ?

ಡಾ||ರಾಮು : ಕ್ರಿ. ಶ. 2500ವರ್ಷಗಳ ಹಿಂದೆ.

# 8. ವ್ಯಾಕರಣ

ಡಾ॥ರಾಮು : ಭಾಷೆಯ ನಿಯಮಗಳನ್ನು ತಿಳಿಸುವ ಶಾಸ್ತ್ರ (ಗ್ರಾಮರ್). ಆರು ವೇದಾಂಗಗಳ ಪೈಕಿ ಒಂದು.

ಡಾ॥ಶೀಲ : ವ್ಯಾಕರಣ ಎಂದರೆ ವಿ+ಆ+ಕರಣ. ವಿಶೇಷವಾಗಿ ಮತ್ತು ಸಮಗ್ರವಾಗಿ ಶಬ್ದಸ್ವರೂಪವನ್ನು ವಿವರಿಸುವುದು ಎಂದರ್ಥ. ಇದು ಭಾಷಾವೈಭವವನ್ನು ಸವಿಸ್ತಾರವಾಗಿ ವಿವರಿಸುವಂಥದು.

ಡಾ॥ರಾಮು : ವ್ಯಾಕರಣ ಭಾಷೆಯ ಕೇಂದ್ರ. ಪ್ರತಿಯೊಂದು ಭಾಷೆಗೂ ತನ್ನ ರಚನೆಯಲ್ಲಿರುವ ಅಂಶಗಳನ್ನು ನಿಯಂತ್ರಿಸಿಕೊಳ್ಳಲು ತನ್ನದೇ ಆದ ಸಿದ್ಧಾಂತಗಳ, ನಿಯಮಗಳ ವ್ಯವಸ್ಥೆಯುಂಟು.

ಡಾ॥ಶೀಲ : ಈ ಸಿದ್ಧಾಂತ ಮತ್ತು ನಿಯಮಗಳೇ ಆಯಾ ವ್ಯಾಕರಣಗಳ ಉಸಿರು. ವ್ಯಾಕರಣಾತ್ಮಕ ವ್ಯವಸ್ಥೆಯಿಂದಾಗಿಯೇ ಯಾವುದೇ ಒಂದು ಭಾಷಿಕ ಸಮೂಹದಲ್ಲಿ ಸಂವಹನ ಕ್ರಿಯೆ ಅಭಿವ್ಯಕ್ತಿ ಸಾಧ್ಯವಾಗಿದೆ.

ಡಾ॥ರಾಮು : ಭಾಷೆಯ ಈ ಸಂಕೀರ್ಣ ವ್ಯವಸ್ಥೆಯನ್ನು ಶೋಧಿಸಿ ವಿವರಣಾತ್ಮಕವಾಗಿ ತಿಳಿಸಿಕೊಡುವುದೇ ವ್ಯಾಕರಣ. ಶಬ್ದ ಮತ್ತು ಶಬ್ದಗಳ ಸಂಬಂಧ ನಿರ್ದಿಷ್ಟವಾಗಿಯೇ ಇರಬೇಕೆಂಬುದನ್ನು ವ್ಯಾಕರಣ ಗೊತ್ತು ಪಡಿಸುವುದು.

ಡಾ॥ಶೀಲ : ಆದುದರಿಂದ ಶುದ್ಧವಾಗಿ, ಅರ್ಥಪೂರ್ಣವಾಗಿ ಮಾತನಾಡುವ ಮತ್ತು ಬರೆಯುವ ಶಕ್ತಿಯನ್ನು ಗಳಿಸಬೇಕಾದರೆ ಅವಶ್ಯವಾಗಿ ವ್ಯಾಕರಣವನ್ನು ಅಭ್ಯಾಸ ಮಾಡಲೇಬೇಕು.

ಡಾ॥ರಾಮು : ಪ್ರಪಂಚದ ಎಲ್ಲ ಭಾಷೆಗಳಲ್ಲೂ ಆಯಾಯ ಭಾಷೆಗಳ ಸ್ವರೂಪವನ್ನು ಅವುಗಳ ವ್ಯಾಕರಣ ತಿಳಿಯ ಪಡಿಸುತ್ತದೆ. ಆ ಭಾಷೆಗಳನ್ನು ಕಲಿಯುವವರು ಆ ಭಾಷೆಯ ವ್ಯಾಕರಣವನ್ನು ಅಭ್ಯಸಿಸಬೇಕು.

ಡಾ॥ಶೀಲ : ಭಾಷೆ ಬಲ್ಲವನೆನಿಸಿಕೊಳ್ಳಬೇಕಾದರೆ ಕೂಲಂಕಷವಾಗಿ ವ್ಯಾಕರಣವನ್ನು ತಿಳಿದಿರಬೇಕು. ಭಾಷೆಯ ರಚನೆ ವ್ಯಾಕರಣ ನಿಯಮಗಳಿಗೆ ಬದ್ಧವಾಗಿದ್ದಾಗ, ಆ ಭಾಷೆ ವ್ಯಾಕರಣ ಬದ್ಧ ಭಾಷೆ ಎನಿಸಿ ಕೊಳ್ಳುತ್ತದೆ.

ಡಾ॥ರಾಮು : ಪ್ರಪಂಚದಲ್ಲಿ ಪ್ರತಿಯೊಂದು ಭಾಷೆಯ ರಚನೆಯೂ ನಿಯಮಬದ್ಧವಾಗಿಯೇ ಇರುವುದರಿಂದ, ವ್ಯಾಕರಣ ಬದ್ಧವಲ್ಲದ ಯಾವುದೇ ಮಾನವ ಭಾಷೆ ಇಲ್ಲ.

ಡಾ॥ಶೀಲ : ವ್ಯಾಕರಣದ ವಿಚಾರದಲ್ಲಿ ಕೆಲವು ತಪ್ಪು ಗ್ರಹಿಕೆಗಳಿವೆ. ಅವುಗಳನ್ನು ಹೀಗೆ ಉಲ್ಲೇಖಿಸಬಹುದು:

1. ವ್ಯಾಕರಣ, ಲಿಪಿಯಿರುವ ಭಾಷೆಗಳಿಗೆ ಮಾತ್ರ ಸಂಬಂಧಿಸಿದ್ದು, ಆಡುಭಾಷೆಗಳಿಗೆ ಸಮಗ್ರ ವ್ಯಾಕರಣವೆಂಬುದಿಲ್ಲ. ಇದ್ದರೂ ಅದು ಅಪೂರ್ಣವಾದದ್ದು.
2. ವ್ಯಾಕರಣ ಕೆಲವು ಭಾಷೆಗೆ ಮಾತ್ರ ಇರುವಂಥದು. ಕೆಲವು ಭಾಷೆಗಳಿಗೆ ಇಲ್ಲವೇ ಇಲ್ಲ.
3. ಭಾಷೆಯನ್ನು ಕಲಿಯಲು ವ್ಯಾಕರಣ ಅನಿವಾರ್ಯ.
4. ಭಾಷೆಯ ಸರಿ–ತಪ್ಪುಗಳನ್ನು ಕಂಡುಕೊಳ್ಳಲೆಂದೇ ವ್ಯಾಕರಣ ರಚಿತವಾಗಿರುವಂಥದು.
5. ಪ್ರಪಂಚದ ಎಲ್ಲ ಭಾಷೆಗಳಿಗೂ ಅನ್ವಯವಾಗುವುದು ವ್ಯಾಕರಣ ಮಾತ್ರ.

## ವ್ಯಾಕರಣದ ಬಗೆಗಳು:

ಡಾ॥ರಾಮು : ತಮ್ಮದೇ ಆದ ಚಿಂತನೆಗಳಿಂದ ರೂಪುಗೊಂಡ ಸಿದ್ಧಾಂತಗಳನ್ನು ಪ್ರತಿಪಾದಿಸುವ ವ್ಯಾಕರಣ ಸಂಖ್ಯೆ ಸಾಕಷ್ಟಿದೆ. ಈ ಪೈಕಿ ಕೆಲವನ್ನು ಗಮನಿಸಬಹುದು.

ಡಾ॥ಶೀಲ : 1. ವಿವರಣಾತ್ಮಕ ವ್ಯಾಕರಣ:

ಯಾವುದಾದರೊಂದು ಭಾಷೆ ಅಥವಾ ಉಪಭಾಷೆಯ ಆಂತರಿಕ ರಚನೆಗೆ ಸಂಬಂಧಿಸಿದ ಧ್ವನಿ, ಪದ, ವಾಕ್ಯಗಳ ವಿಚಾರ ಮತ್ತು ಕಾರ್ಯವನ್ನು ಆ ಭಾಷೆ ಅಥವಾ ಉಪಭಾಷೆಗಳಲ್ಲಿರುವಂತೆಯೇ ವಿಶ್ಲೇಷಿಸಿ ವಿವರಿಸಿ ತೋರಿಸುವುದು.

ಪಂಪನ ವಿಕ್ರಮಾರ್ಜುನ ವಿಜಯದ ಭಾಷೆಯ ವಿಶ್ಲೇಷಣೆಯ ನಿರೂಪಣೆಯನ್ನು ಒಳಗೊಂಡ ಕೃತಿ,

ವಿಕ್ರಮಾರ್ಜುನ ವಿಜಯದಲ್ಲಿ ಬಳಕೆಯಾಗಿರುವ ಕನ್ನಡ ವಿವರಣಾತ್ಮಕ ವ್ಯಾಕರಣ ಎನಿಸಿಕೊಳ್ಳುತ್ತದೆ.

ನಂಜನಗೂಡಿನ ಒಕ್ಕಲಿಗರಾಡುವ ಭಾಷಾ ರೂಪವನ್ನು ಭಾಷಾ ವಿಜ್ಞಾನಿಯೊಬ್ಬ ವಿಶ್ಲೇಷಿಸಿದರೆ, ಆ ವಿಶ್ಲೇಷಣೆಯ ನಿರೂಪಣೆಯನ್ನೊಳಗೊಂಡ ಕೃತಿ ನಂಜನಗೂಡಿನ ಒಕ್ಕಲಿಗರ ಕನ್ನಡದ ವಿವರಣಾತ್ಮಕ ವ್ಯಾಕರಣವೆನಿಸಿಕೊಳ್ಳುತ್ತದೆ.

ವಿವರಣಾತ್ಮಕ ವ್ಯಾಕರಣಕಾರ ತಾನು ವಿಶ್ಲೇಷಿಸಿ ವಿವರಿಸಿದ ಭಾಷೆಯ (ಗ್ರಾಂಥಿಕ ಅಥವಾ ಆಡುನುಡಿ) ರಚನೆ ಹೇಗಿದೆ ಎಂಬುದನ್ನು ತಿಳಿಸಲು ಪ್ರಯತ್ನಿಸುತ್ತಾನೆಯೇ ಹೊರತು ಹೇಗಿರಬೇಕು ಎಂಬುದನ್ನು ಹೇಳುವುದಿಲ್ಲ.

ಡಾ॥ರಾಮು : 2 ಐತಿಹಾಸಿಕ ವ್ಯಾಕರಣ:

ಇದು ಭಾಷೆ ನಡೆದು ಬಂದ ದಾರಿಯನ್ನು ಗುರುತಿಸುತ್ತದೆ.

ಐತಿಹಾಸಿಕ ವ್ಯಾಕರಣಕಾರ, ಕಾಲಾನುಕ್ರಮದಲ್ಲಿ ಭಾಷೆಯ ಸ್ವರೂಪದಲ್ಲಿ ಆದ ಪರಿವರ್ತನೆಗಳನ್ನು ಗುರುತಿಸಿ, ಭಾಷೆಯ ಇತಿಹಾಸವನ್ನು ನಿರೂಪಿಸುತ್ತಾನೆ.

ಪ್ರಪಂಚದ ಪ್ರತಿಯೊಂದು ಭಾಷೆಯೂ ಕಾಲಾನುಕ್ರಮದಲ್ಲಿ ಬದಲಾವಣೆಯನ್ನು ಹೊಂದಿರುತ್ತದೆ.

ಈ ಬದಲಾವಣೆ, ಭಾಷೆಗೆ ಇತಿಹಾಸವನ್ನು ತಂದುಕೊಡುತ್ತದೆ.

ಡಾ॥ಶೀಲ : 3. ತೌಲನಿಕ ವ್ಯಾಕರಣ:

ಎರಡು ಅಥವಾ ಅದಕ್ಕಿಂತ ಹೆಚ್ಚು ಭಾಷೆಗಳ ರಚನಾವಿನ್ಯಾಸಗಳನ್ನು ಹೋಲಿಸಿ ನೋಡುವಂಥದು.

ಹೀಗೆ ಹೋಲಿಸಿ ನೋಡುವುದರಿಂದ ಗೊತ್ತಾಗುವ ಸಾಮ್ಯ ವೈಷಮ್ಯಗಳನ್ನು ತೌಲನಿಕ ವ್ಯಾಕರಣಕಾರ ಪಟ್ಟಿ ಮಾಡುತ್ತಾನೆ.

ಭಾಷಾ ವರ್ಗೀಕರಣ ಮತ್ತು ಭಾಷಿಕ ಪುನಾರಚನೆ, ಆಂತರಿಕ ಪುನರ್‌ರಚನೆ ಮತ್ತು ಬಾಹ್ಯ ಪುನರ್‌ರಚನೆ ಗಳ ಸಂದರ್ಭಗಳಲ್ಲಿ ಐತಿಹಾಸಿಕ ಮತ್ತು ತೌಲನಿಕ ವ್ಯಾಕರಣಗಳು ಹೆಚ್ಚು ಉಪಯುಕ್ತವೆನಿಸಿವೆ.

ಎ.ಎನ್. ನರಸಿಂಹಯ್ಯನವರ 'ಎ ಗ್ರಾಮರ್ ಆಫ್ ದಿ ಓಲ್ಡೆಸ್ಟ್ ಕ್ಯಾನರೀಸ್ ಇನ್‌ಸ್ಕ್ರಿಪ್‌ಶನ್ಸ್ (1941), ಜಿ.ಎಸ್. ಗಾಯಿ ಅವರ ಹಿಸ್ಟಾರಿಕಲ್ ಗ್ರಾಮರ್ ಆಫ್ ಓಲ್ಡ್ ಕನ್ನಡ (1946) – ಇವು ಐತಿಹಾಸಿಕ ವ್ಯಾಕರಣಗಳಾದರೆ, ರೆವರೆಂಡ್ ಕಾಲ್ಡ್ವೆಲ್ ಅವರ 'ಎ ಕಂಪ್ಯಾರಿಟಿವ್ ಗ್ರಾಮರ್ ಆಫ್ ದಿ ದ್ರವಿಡಿಯನ್' ಆರ್ 'ಸೌತ್ ಇಂಡಿಯನ್ ಫ್ಯಾಮಿಲಿ ಆಫ್ ಲ್ಯಾಂಗ್ವೇಜಸ್' (1866) ಎಂಬುದು ತೌಲನಿಕ ವ್ಯಾಕರಣ ಗ್ರಂಥ.

ಡಾ॥ರಾಮು : 4. ವಿಧಾಯಕ ವ್ಯಾಕರಣ:

ಇದು ಭಾಷೆಯನ್ನು ನಿರ್ದಿಷ್ಟ ರೀತಿಯಲ್ಲೇ ಬಳಸಬೇಕು ಎಂದು ವಿಧಿಸುತ್ತದೆ.

ಪ್ರಸಿದ್ಧ ಪ್ರಾಚೀನ ಕವಿಗಳೂ ವಿದ್ವಾಂಸರೂ ಬಳಸಿರುವ ಭಾಷೆಯನ್ನು ಆಧಾರವಾಗಿಟ್ಟುಕೊಂಡು, ಉಳಿದವರ ಭಾಷೆಯೂ ಹಾಗೆಯೇ ಇರಬೇಕು ಎಂದು ವಿಧಾಯಕ ವ್ಯಾಕರಣಕಾರ ಹೇಳುತ್ತಾನೆ.

ಇವನು ಭಾಷೆಯ ಸ್ವರೂಪದಲ್ಲಿ ಕಾಲಾನುಕ್ರಮದಲ್ಲಿ ಆದ ಪರಿವರ್ತನೆಗಳನ್ನು ಗುರುತಿಸಿ, ಅವನ್ನೆಲ್ಲಾ ತಪ್ಪುಗಳು ಎಂದು ಪರಿಗಣಿಸುತ್ತಾನೆ.

ಡಾ॥ಶೀಲ : ಹೀಗೆ ಪರಿಗಣಿಸುವುದು ಆಡು ಮಾತಿನಲ್ಲುಂಟಾದ ಬದಲಾವಣೆಗಳನ್ನು ಹಿಂದಿನ ಕಾಲದ ಸಂಪ್ರದಾಯ ಬದ್ಧ ವ್ಯಾಕರಣಕಾರರು ರಚಿಸಿರುವ ವ್ಯಾಕರಣಗಳಲ್ಲಿ ವಿಧಾಯಕ ವ್ಯಾಕರಣದ ಲಕ್ಷಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

ಉದಾಹರಣೆಗೆ ತಿಂದಿತು, ಬಂದಿತು ಎಂಬ ಪದಗಳನ್ನು ತಿಂತು, ಬಂತು ಎಂದು ಬಳಸಿದರೆ ವಿಧಾಯಕ ವ್ಯಾಕರಣಕಾರ ಒಪ್ಪುವುದಿಲ್ಲ.

ಶುದ್ಧ ಪ್ರಯೋಗವನ್ನೇ ಬಳಸಬೇಕೆನ್ನುವವರು ತಿಂದಿತು, ಬಂದಿತು ಎಂದೇ ಬಳಸಬೇಕು ಎಂದು ವಿಧಿಸುತ್ತಾರೆ.

ಡಾ॥ರಾಮು : ಈ ವ್ಯಾಕರಣ ಬಗೆಗಳೇ ಅಲ್ಲದೆ,

ಬೋಧನಾತ್ಮಕ ವ್ಯಾಕರಣ,

ನಿರ್ದೇಶಾತ್ಮಕ ವ್ಯಾಕರಣ,

ಪರಾಮರ್ಶನ ವ್ಯಾಕರಣ,

ಸೈದ್ಧಾಂತಿಕ ವ್ಯಾಕರಣ,

ವೈದೃಶ್ಯಾತ್ಮಕ ವ್ಯಾಕರಣ,

ವ್ಯವಸ್ಥಿತ ವ್ಯಾಕರಣ,

ಕಾರಕ ವ್ಯಾಕರಣ,

ಸ್ತರಾತ್ಮಕ ವ್ಯಾಕರಣ,

ಪ್ರರೂಪಾತ್ಮಕ ವ್ಯಾಕರಣ,

ರೂಪಾಂತರಣ ವ್ಯಾಕರಣ,

ಉತ್ಪಾದನಾತ್ಮಕ ವ್ಯಾಕರಣ,

ಸಾರ್ವತ್ರಿಕ ವ್ಯಾಕರಣ

ಮೊದಲಾದ ಪ್ರಭೇದಗಳಿವೆ.

ಡಾ॥ಶೀಲ : ವ್ಯಾಕರಣ ಎಂದರೇನು ?

ಡಾ॥ರಾಮು : ಯಾವುದೇ ಭಾಷೆಯಲ್ಲಿರುವ ಧ್ವನಿ, ಶಬ್ದ, ಪದ, ವಾಕ್ಯಗಳ ಪರಿಚಯ ಹಾಗೂ ಸಂಬಂಧ ಗಳನ್ನು ತಿಳಿಸುವ ಶಾಸ್ತ್ರವೇ ವ್ಯಾಕರಣ. ಅಂದರೆ ಯಾವುದೇ ಒಂದು ಭಾಷೆಯನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡುವುದು.

ಡಾ॥ಶೀಲ : ವರ್ಣ ಎಂದರೇನು ?

ಡಾ॥ರಾಮು : ಬಿಡಿ ಬಿಡಿಯಾಗಿ ಉಚ್ಚರಿಸಲ್ಪಡುವ ಶಬ್ದ ವರ್ಣ

ಡಾ॥ಶೀಲ : ವರ್ಣಮಾಲೆ ಎಂದರೇನು ?

ಡಾ॥ರಾಮು : ವರ್ಣಮಾಲೆ ಎಂದರೆ ವ್ಯಾಕರಣದ ನಿಯಮಗಳಿಗೆ ಒಳಪಟ್ಟ ವರ್ಣಗಳ ಗುಂಪು

**ಡಾ||ಶೀಲ** : ಅಕ್ಷರ ಎಂದರೇನು ?

**ಡಾ||ರಾಮು** : ಧ್ವನಿಯನ್ನು ಬರಹವನ್ನಾಗಿಸುವ ಸಾಧನ ಅಕ್ಷರ. ನಾಶವಿಲ್ಲದ್ದೇ ಇರುವುದು ಅಕ್ಷರ.

**ಡಾ||ಶೀಲ** : ವರ್ಣಮಾಲೆ ಎಷ್ಟು ಅಕ್ಷರಗಳಿವೆ ?

**ಡಾ||ರಾಮು** : ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ 49.

**ಡಾ||ಶೀಲ** : ಸ್ವರ ಎಂದರೇನು ?

**ಡಾ||ರಾಮು** : ಸ್ವತಂತ್ರವಾಗಿ ಉಚ್ಚರಿಸಲ್ಪಡುವ ವರ್ಣಕ್ಕೆ ಸ್ವರ ಎಂದು ಹೆಸರು

**ಡಾ||ಶೀಲ** : ಸ್ವರಾಕ್ಷರಗಳ ಸಂಖ್ಯೆ ಎಷ್ಟು ?

**ಡಾ||ರಾಮು** : ಸ್ವರಾಕ್ಷರಗಳ ಒಟ್ಟು ಸಂಖ್ಯೆ-14

**ಡಾ||ಶೀಲ** : ಹ್ರಸ್ವರಗಳ ಸಂಖ್ಯೆ ಎಷ್ಟು ?

**ಡಾ||ರಾಮು** : ಹ್ರಸ್ವರಗಳ ಸಂಖ್ಯೆ 6 ( ಅ ಇ ಉ ಋ ಎ ಒ )

**ಡಾ||ಶೀಲ** : ದೀರ್ಘಸ್ವರಗಳ ಸಂಖ್ಯೆ ಎಷ್ಟು ?

**ಡಾ||ರಾಮು** : ದೀರ್ಘಸ್ವರಗಳ ಸಂಖ್ಯೆ 7 ( ಆ ಈ ಊ ಏ ಐ ಓ ಔ )

**ಡಾ||ಶೀಲ** : ಸವರ್ಣಸ್ವರಗಳು (ಜೋಡಿಸ್ವರಗಳು) ಯಾವುವು ?

**ಡಾ||ರಾಮು** : ಸವರ್ಣಸ್ವರಗಳು ಅ ಆ, ಇ ಈ, ಉ ಊ,

**ಡಾ||ಶೀಲ** : ಯೋಗವಾಹಕಗಳು ಎಂದರೇನು ?

**ಡಾ||ರಾಮು** : ಸೊನ್ನೆಯ ಸಂಬಂಧವನ್ನು ಹೊಂದಿರುವ ಸ್ವರಾಕ್ಷರಗಳನ್ನು ಯೋಗವಾಹಕಗಳೆಂದು ಕರೆಯುತ್ತಾರೆ.

**ಡಾ||ಶೀಲ** : ಯೋಗವಾಹಕಗಳ ಸಂಖ್ಯೆ ಎಷ್ಟು ?

**ಡಾ||ರಾಮು** : ಯೋಗವಾಹಕಗಳ ಸಂಖ್ಯೆ 2 ಅವು ೦ , ಃ

**ಡಾ||ಶೀಲ** : ಅನುಸ್ವಾರ (೦)ಎಂದರೇನು ?

**ಡಾ||ರಾಮು** : ಒಂದು ಸೊನ್ನೆಯ ಸಂಬಂಧವನ್ನು ಹೊಂದಿರುವ ಸ್ವರಾಕ್ಷರಕ್ಕೆ ಅನುಸ್ವಾರ ಎಂದು ಹೆಸರು.

**ಡಾ||ಶೀಲ** : ವಿಸರ್ಗ ( ಃ ) ಎಂದರೇನು ?

**ಡಾ||ರಾಮು** : ಎರಡು ಸೊನ್ನೆಯ ಸಂಬಂಧವನ್ನು ಹೊಂದಿರುವ ಸ್ವರಾಕ್ಷರಕ್ಕೆ ವಿಸರ್ಗ ಎಂದು ಹೆಸರು.

**ಡಾ||ಶೀಲ** : ಮಾತ್ರೆ ಎಂದರೇನು ?

**ಡಾ||ರಾಮು** : ವರ್ಣಗಳನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲಾವಧಿಗೆ ಮಾತ್ರೆ ಎಂದು ಹೆಸರು.

**ಡಾ||ಶೀಲ** : ಸ್ವರಗಳ ವಿಧಗಳು ಎಷ್ಟು ?

**ಡಾ||ರಾಮು** : ಸ್ವರಗಳ ವಿಧಗಳು 3 (ಹ್ರಸ್ವ, ದೀರ್ಘ, ಪ್ಲುತ)

**ಡಾ॥ಶೀಲ** : ಹ್ರಸ್ವಸ್ವರ ( ) ಎಂದರೇನು ?

**ಡಾ॥ರಾಮು** : ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರವೇ ಹ್ರಸ್ವಸ್ವರ ಎಂದು ಹೆಸರು.

**ಡಾ॥ಶೀಲ** : ದೀರ್ಘಸ್ವರ (-) ಎಂದರೇನು ?

**ಡಾ॥ರಾಮು** : ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರ ದೀರ್ಘಸ್ವರ ಎಂದು ಹೆಸರು.

**ಡಾ॥ಶೀಲ** : ಪ್ಲುತ ( ) ಎಂದರೇನು ?

**ಡಾ॥ರಾಮು** : ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರ ಪ್ಲುತ ಎಂದು ಹೆಸರು.

**ಡಾ॥ಶೀಲ** : ವ್ಯಂಜನ ಎಂದರೇನು ?

**ಡಾ॥ರಾಮು** : ಸ್ವರದ ಸಹಾಯದಿಂದ ಉಚ್ಚರಿಸಲ್ಪಡುವ ವರ್ಣಕ್ಕೆ ವ್ಯಂಜನ ಎಂದು ಹೆಸರು.

**ಡಾ॥ಶೀಲ** : ವ್ಯಂಜನ ವರ್ಣಗಳ ಒಟ್ಟು ಸಂಖ್ಯೆ ಎಷ್ಟು ?

**ಡಾ॥ರಾಮು** : ವ್ಯಂಜನ ವರ್ಣಗಳ ಒಟ್ಟು ಸಂಖ್ಯೆ 34

**ಡಾ॥ಶೀಲ** : ವ್ಯಂಜನ ವರ್ಣಗಳಲ್ಲಿ ಎಷ್ಟು ವಿಧಗಳು ?

**ಡಾ॥ರಾಮು** : ವ್ಯಂಜನ ವರ್ಣಗಳಲ್ಲಿ 2 ವಿಧಗಳು - ವರ್ಗೀಯ ವ್ಯಂಜನಗಳು ಮತ್ತು ಅವರ್ಗೀಯ ವ್ಯಂಜನ ವರ್ಣಗಳು.

**ಡಾ॥ಶೀಲ** : ವರ್ಗೀಯ ವ್ಯಂಜನಗಳು ಎಂದರೇನು ?

**ಡಾ॥ರಾಮು** : ಒಂದೇ ವರ್ಗದಲ್ಲಿ(ವರ್ಣೋತ್ಪತ್ತಿ ಸ್ಥಾನವನ್ನಾಧರಿಸಿ)ಸೇರಿಸಲಾದ ವ್ಯಂಜನ ವರ್ಣಗಳು ವರ್ಗೀಯ ವ್ಯಂಜನಗಳು

**ಡಾ॥ಶೀಲ** : ಅವರ್ಗೀಯ ವ್ಯಂಜನ ವರ್ಣಗಳು ಎಂದರೇನು ?

**ಡಾ॥ರಾಮು** : ವರ್ಗದಿಂದ ಬೇರ್ಪಡಿಸಲಾದ ವ್ಯಂಜನಾಕ್ಷರಗಳು ಅವರ್ಗೀಯ ವ್ಯಂಜನ ವರ್ಣಗಳು

**ಡಾ॥ಶೀಲ** : ಅರ್ಧಾಕ್ಷರ (ಕ್) ಎಂದರೇನು ?

**ಡಾ॥ರಾಮು** : ವ್ಯಂಜನಾಕ್ಷರದ ಮೂಲರೂಪ ಅರ್ಧಾಕ್ಷರ (ಕ್)

**ಡಾ॥ಶೀಲ** : ಅಲ್ಪಪ್ರಾಣ ಎಂದರೇನು ?

**ಡಾ॥ರಾಮು** : ಕಡಿಮೆ ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜಾನಾಕ್ಷರ ಅಲ್ಪಪ್ರಾಣ

**ಡಾ॥ಶೀಲ** : ಮಹಾಪ್ರಾಣ

**ಡಾ॥ರಾಮು** : ಹೆಚ್ಚು ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜಾನಾಕ್ಷರ ಮಹಾಪ್ರಾಣ

**ಡಾ॥ಶೀಲ** : ಅಲ್ಪಪ್ರಾಣಾಕ್ಷರಗಳ ಸಂಖ್ಯೆ

**ಡಾ॥ರಾಮು** : ಅಲ್ಪಪ್ರಾಣಾಕ್ಷರಗಳ ಸಂಖ್ಯೆ 10 – 10 ಕಚಟತಪ ಗಜಡದಬ

**ಡಾ॥ಶೀಲ** : ಮಹಾಪ್ರಾಣಾಕ್ಷರಗಳ ಸಂಖ್ಯೆ

ಡಾ||ರಾಮು : ಮಹಾಪ್ರಾಣಾಕ್ಷರಗಳ ಸಂಖ್ಯೆ 10 – ಖಛಠಥಫ ಘಝಢಧಭ

ಡಾ||ಶೀಲ : ಅನುನಾಸಿಕ ಅಕ್ಷರಗಳು ಸಂಖ್ಯೆ

ಡಾ||ರಾಮು : ಅನುನಾಸಿಕ ಅಕ್ಷರಗಳು ಸಂಖ್ಯೆ – 5

ಙ ಞ ಣ ನ ಮ ಗಳು- ಅನುನಾಸಿಕ ಅಕ್ಷರಗಳು

ಡಾ||ಶೀಲ : ಅಲ್ಪಪ್ರಾಣಾಕ್ಷರಗಳು

ಡಾ||ರಾಮು : ಕಚಟತಪಗಜಡದಬ – ಅಲ್ಪಪ್ರಾಣಾಕ್ಷರಗಳು

ಡಾ||ಶೀಲ : ಮಹಾಪ್ರಾಣಾಕ್ಷರಗಳು

ಡಾ||ರಾಮು : ಖಛಠಥಫಘಝಢಧಭಗಳು – ಮಹಾಪ್ರಾಣಾಕ್ಷರಗಳು

ಡಾ||ಶೀಲ : ಗುಣಿತಾಕ್ಷರ (ಕ್+ಅ=ಕ)

ಡಾ||ರಾಮು : ವ್ಯಂಜನಾಕ್ಷರಗಳಿಗೆ ಸ್ವರಾಕ್ಷರವು ಸೇರಿ ಆಗುವ ರೂಪವೇ – ಗುಣಿತಾಕ್ಷರ (ಕ್+ಅ=ಕ)

ಡಾ||ಶೀಲ : ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ

ಡಾ||ರಾಮು : ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ – 25 (ಕ ಯಿಂದ ಮ)

ಡಾ||ಶೀಲ : ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ

ಡಾ||ರಾಮು : ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ – 9 (ಯ ಯಿಂದ ಳ)

ಡಾ||ಶೀಲ : ದ್ವಿತ್ವಾಕ್ಷರ

ಡಾ||ರಾಮು : ಎರಡು, ಮೂರು ವ್ಯಂಜನಾಕ್ಷರಗಳನ್ನು ಒಟ್ಟಿಗೆ ಉಚ್ಚರಿಸುವುದು – ದ್ವಿತ್ವಾಕ್ಷರ

ಡಾ||ಶೀಲ : ಸಜಾತಿ ಸಂಯುಕ್ತಾಕ್ಷರ

ಡಾ||ರಾಮು : ಕ್ + ಕ್ + ಅ = ಕ್ಕ – ಸಜಾತಿ ಸಂಯುಕ್ತಾಕ್ಷರ

ಡಾ||ಶೀಲ : ವಿಜಾತಿ ಸಂಯುಕ್ತಾಕ್ಷರ

ಡಾ||ರಾಮು : ಸ್ + ತ್ + ರ್ + ಅ + ಸಣ – ವಿಜಾತಿ ಸಂಯುಕ್ತಾಕ್ಷರ

ಡಾ||ಶೀಲ : ಸಜಾತಿ ದ್ವಿತ್ವ

ಡಾ||ರಾಮು : ಒಂದೇ ಜಾತಿಯ 2 ವ್ಯಂಜನಾಕ್ಷರಗಳನ್ನು ಒಟ್ಟಿಗೆ ಉಚ್ಚರಿಸುವುದು – ಸಜಾತಿ ದ್ವಿತ್ವ

ಡಾ||ಶೀಲ : ವಿಜಾತಿದ್ವಿತ್ವ

ಡಾ||ರಾಮು : ಬೇರೆ ಬೇರೆ ಜಾತಿಯ 2 ಅಥವಾ ಹೆಚ್ಚು ವ್ಯಂಜನಾಕ್ಷರಗಳ ಒಟ್ಟು ಉಚ್ಚರಣೆ – ವಿಜಾತಿ ದ್ವಿತ್ವ

ಡಾ||ಶೀಲ : ಅನುನಾಸಿಕಗಳು

ಡಾ||ರಾಮು : ಮೂಗಿನ (ನಾಸಿಕ) ಸಹಾಯದಿಂದ ಉಚ್ಚರಿಸಲ್ಪಡುವ ವರ್ಣಗಳು – ಅನುನಾಸಿಕಗಳು

ಡಾ॥ಶೀಲ : ಅಘೋಷ ವರ್ಣಗಳು

ಡಾ॥ರಾಮು : ಕಚಟತಪ - ಅಘೋಷ ವರ್ಣಗಳು

ಡಾ॥ಶೀಲ : ದೇಶೀಯ ಅಕ್ಷರಗಳು

ಡಾ॥ರಾಮು : ಎ ಒ ಱ್ ಱ್ ೞ (ಕುೞ)-ದೇಶೀಯ ಅಕ್ಷರಗಳು

ಡಾ॥ಶೀಲ : ಸಂಧ್ಯಕ್ಷರಗಳು

ಡಾ॥ರಾಮು : ಸಂಧ್ಯಕ್ಷರಗಳು - 2 ಐ, ಔ, - ಸಂಧ್ಯಕ್ಷರಗಳು

ಡಾ॥ಶೀಲ : ಸಂಧ್ಯಕ್ಷರಗಳ ರೂಪ

ಡಾ॥ರಾಮು : ಅ + ಇ = ಐ, ಅ + ಉ = ಔ -ಸಂಧ್ಯಕ್ಷರಗಳ ರೂಪ

ಡಾ॥ಶೀಲ : ಶುದ್ಧಗೆಗಳೆಂದರೆ

ಡಾ॥ರಾಮು : ಶುದ್ಧಗೆಗಳೆಂದರೆ - ವರ್ಣಗಳು (ಕೇಶಿರಾಜ)

ಡಾ॥ಶೀಲ : ಸಂಧಿ

ಡಾ॥ರಾಮು : ಎರಡು ವರ್ಣಗಳು ಪರಸ್ಪರ ಕಾಲವಿಳಂಬವಿಲ್ಲದೆ ಸೇರುವುದು - ಸಂಧಿ

ಡಾ॥ಶೀಲ : ಸಂಧಿಗಳ ವಿಧಗಳು

ಡಾ॥ರಾಮು : ಸಂಧಿಗಳ ವಿಧಗಳು - 2 (ಕನ್ನಡ ಸಂಧಿ, ಸಂಸ್ಕೃತ ಸಂಧಿ)

ಸಂಧಿ ಬಿಡಿಸುವ ನಿಯಮ (ಸೂತ್ರ ) - ಪ್ರಕೃತಿ+ಪ್ರತ್ಯಯ=ಸಂಧಿ

ಡಾ॥ಶೀಲ : ಪೂರ್ವಪದ

ಡಾ॥ರಾಮು : ಸಂಧಿ ಬಿಡಿಸುವಾಗ ಬರುವ ಎಡಭಾಗವು - ಪೂರ್ವಪದ

ಡಾ॥ಶೀಲ : ಪರಪದ (ಉತ್ತರಪದ)

ಡಾ॥ರಾಮು : ಸಂಧಿ ಬಿಡಿಸುವಾಗ ಬರುವ ಬಲಭಾಗವು - ಪರಪದ (ಉತ್ತರಪದ)

ಡಾ॥ಶೀಲ : ಕನ್ನಡ ಸಂಧಿಗಳು

ಡಾ॥ರಾಮು : ಲೋಪ, ಆಗಮ, ಆದೇಶ ಸಂಧಿಗಳು - ಕನ್ನಡ ಸಂಧಿಗಳು

ಡಾ॥ಶೀಲ : ಸ್ವರಲೋಪಸಂಧಿ

ಡಾ॥ರಾಮು : ಬೇರೊಬ್ಬ ಪದವನ್ನು ಬಿಡಿಸಿ ಬರೆದಾಗ (ಬೇರೆ+ಒಬ್ಬ) - ಸ್ವರಲೋಪಸಂಧಿ

ಡಾ॥ಶೀಲ : ಆದೇಶ ಸಂಧಿ

ಡಾ॥ರಾಮು : ಚಳಿಗಾಲ ಪದವನ್ನು ಬಿಡಿಸಿ ಬರೆದಾಗ (ಚಳಿ+ಕಾಲ) - ಆದೇಶ ಸಂಧಿ

ಡಾ॥ಶೀಲ : ಯ ಕಾರಾಗಮ ಸಂಧಿ

**ಡಾ||ರಾಮು** : ಕಾಯದೆ ಕಚಗುಳಿಯಿಡು ಎಂಬ ಪದಗಳು ಆಗುವ ಸಂಧಿ – ಯ ಕಾರಾಗಮ ಸಂಧಿ

**ಡಾ||ಶೀಲ** : ಸ್ವರಲೋಪಸಂಧಿ

**ಡಾ||ರಾಮು** : ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದ ಕೊನೆಯಲ್ಲಿರುವ 1 ವರ್ಣ ಲೋಪವಾಗುವ ಸಂಧಿ.

ಸ್ವರಲೋಪಸಂಧಿ ಉದಾ:- ಬೇರೆ+ಒಬ್ಬ=ಬೇರೊಬ್ಬ, ತಮ್ಮ+ಒಳಗೆ=ತಮ್ಮೊಳಗೆ -

**ಡಾ||ಶೀಲ** : ಆಗಮಸಂಧಿ

**ಡಾ||ರಾಮು** : ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದ ಕೊನೆಯ ವರ್ಣ ಲೋಪವಾಗುವುದರ ಬದಲಿಗೆ ಬೇರೊಂದು ವರ್ಣ ಆಗಮವಾಗುವುದು - ಆಗಮಸಂಧಿ

ಉದಾ:-ಮನೆ+ಅನ್ನು=ಮನೆಯನ್ನು,ಯಕಾರಾಗಮ:ಮಗು+ಅನ್ನು=ಮಗುವನ್ನು, ವಕಾರಾಗ

**ಡಾ||ಶೀಲ** : ಆದೇಶಸಂಧಿ

**ಡಾ||ರಾಮು** : ಪೂರ್ವಪದವು ಸ್ವರಸಹಿತವಾದ ವ್ಯಂಜನ ವರ್ಣವಾಗಿದ್ದು ಉತ್ತರಪದದಲ್ಲಿರುವ ಕಚಟತಪ (ಕತಪ) ಗಳಿಗೆ ಗಜಡದಬ (ಗದಬ) ಗಳು ಆದೇಶವಾಗಿ ಬರುವ ಸಂಧಿ - ಆದೇಶಸಂಧಿ

ಉದಾ:- ಮಳೆ+ಕಾಲ=ಮಳೆಗಾಲ, ಹಳ+ಕನ್ನಡ=ಹಳೆಗನ್ನಡ, ಬೆಟ್ಟ+ತಾವರೆ=ಬೆಟ್ಟದಾವರೆ

**ಡಾ||ಶೀಲ** : ಸವರ್ಣದೀರ್ಘ ಸಂಧಿ

**ಡಾ||ರಾಮು** : ಸವರ್ಣಸ್ವರಗಳು ಒಂದರ ಮುಂದೆ ಒಂದು ಬಂದು ಆಗುವ ಸಂಧಿ-ಸವರ್ಣದೀರ್ಘ ಸಂಧಿ

ಉದಾ:-ಅಆಇಈಉಊ+ಸವರ್ಣಸ್ವರ ಪರ=ಸ.ದೀ.ಸಂಧಿ :: ದೇವ+ಆಲಯ=ದೇವಾಲಯ (ಅ+ಆ)

**ಡಾ||ಶೀಲ** : ನಾಮಪದ

**ಡಾ||ರಾಮು** : ವ್ಯಕ್ತಿ, ವಸ್ತು, ಸ್ಥಳ, ಪ್ರಾಣಿ, ಪಕ್ಷಿಗಳ ಹೆಸರನ್ನು ಹೇಳುವ ಪದವೇ – ನಾಮಪದ

**ಡಾ||ಶೀಲ** : ನಾಮಪ್ರಕೃತಿ (ಪ್ರಾತಿಪದಿಕ)

**ಡಾ||ರಾಮು** : ನಾಮಪದದ ಮೂಲರೂಪ – ನಾಮಪ್ರಕೃತಿ (ಪ್ರಾತಿಪದಿಕ)

**ಡಾ||ಶೀಲ** : ಸರ್ವನಾಮ

**ಡಾ||ರಾಮು** : ನಾಮಪದದ ಬದಲಿಗೆ ಬಂದು ನಿಲ್ಲುವ ಶಬ್ದವೇ – ಸರ್ವನಾಮ

**ಡಾ||ಶೀಲ** : ವಸ್ತುವಾಚಕ

**ಡಾ||ರಾಮು** : ವಸ್ತುಗಳ ಹೆಸರನ್ನು ಹೇಳುವ ವಾಚಕವೇ – ವಸ್ತುವಾಚಕ (3ವಿಧ)

**ಡಾ||ಶೀಲ** : ರೂಢನಾಮ

**ಡಾ||ರಾಮು** : ರೂಢಿಯಲ್ಲಿರುವ ವಸ್ತುಗಳ ಹೆಸರನ್ನು ಹೇಳುವುದು – ರೂಢನಾಮ

ಉದಾ:- ಮನೆ, ಮರ, ಕಲ್ಲು, ಹಸು, ನಾಯಿ, ಹುಲಿ, ಆನೆ, ಮನುಷ್ಯ, ಹೆಂಗಸು, ಗಂಡಸು ಇತ್ಯಾದಿ

ಡಾ॥ಶೀಲ : ಅಂಕಿತನಾಮ

ಡಾ॥ರಾಮು : ಅನೇಕ ವ್ಯಕ್ತಿ, ವಸ್ತುಗಳನ್ನು ಪ್ರತ್ಯೇಕಿಸಲು ಇಟ್ಟ ಹೆಸರು - ಅಂಕಿತನಾಮ

ಉದಾ:- ಕಾವೇರಿ, ಶಂಕರ, ಹಿಮಾಲಯ, ಭಾರತ ಇತ್ಯಾದಿ

ಡಾ॥ಶೀಲ : ಅನ್ವರ್ಥನಾಮ

ಡಾ॥ರಾಮು : ವ್ಯಕ್ತಿಯ ಆಕಾರ, ವೃತ್ತಿ, ಗುಣ ಮುಂತಾದವುಗಳಿಗೆ ಅನ್ವಯವಾಗುವಂತಹ ಹೆಸರು - ಅನ್ವರ್ಥನಾಮ

ಉದಾ:- ವಿದ್ಯಾರ್ಥಿ, ಪೆದ್ದ, ಕುಂಟ, ಕುರುಡ, ಕಿವುಡ, ಹೆಳವ, ವಕೀಲ, ವೈದ್ಯ, ಶಿಕ್ಷಕ, ಅಭಿಮಾನಿ, ರೋಗಿ, ವ್ಯಾಪಾರಿ, ವೈಯಾಕರಣಿ, ಪಂಡಿತ ಇತ್ಯಾದಿ

ಡಾ॥ಶೀಲ : ಗುಣವಾಚಕಗಳು

ಡಾ॥ರಾಮು : ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳು - ಗುಣವಾಚಕಗಳು

ಉದಾ:- ಕೆಂಪು, ದೊಡ್ಡದು, ಹಳೆಯದು, ಕರಿಯದು, ಮೃದು, ಕೆಟ್ಟ, ಒಳ್ಳೆಯ, ಚಿಕ್ಕ ಇತ್ಯಾದಿ.

ಡಾ॥ಶೀಲ : ಸಂಖ್ಯಾವಾಚಕ

ಡಾ॥ರಾಮು : ಸಂಖ್ಯೆಯನ್ನು ತಿಳಿಸುವುದು (ಹತ್ತು, ನೂರು, ಸಾವಿರ, ಲಕ್ಷ, ಕೋಟಿ) - ಸಂಖ್ಯಾವಾಚಕ

ಡಾ॥ಶೀಲ : ಸಂಖ್ಯೇಯವಾಚಕ

ಡಾ॥ರಾಮು : ಸಂಖ್ಯೆಯಿಂದ ಕೂಡಿದ ಶಬ್ದಗಳೇ - ಸಂಖ್ಯೇಯವಾಚಕ ಉದಾ:-ಆರನೆಯ, ಇಬ್ಬರು, ನಾಲ್ಕನೆಯ, ಐವರು ಇತ್ಯಾದಿ

ಡಾ॥ಶೀಲ : ಭಾವನಾಮ

ಡಾ॥ರಾಮು : ವಸ್ತುವಿನ ಗುಣ, ಸ್ವಭಾವ, ಕ್ರಿಯೆ -ಭಾವನಾಮವೆನ್ನುವರು

ಉದಾ:- ಬಿಳುಪು, ನೋಟ, ಸಿರಿತನ, ಬಡತನ, ಕುರುಡು, ಕಪ್ಪು, ಕೆಂಪು ಇತ್ಯಾದಿ ಅಥವಾ ಸ್ಥಿತಿಗಳನ್ನು ತಿಳಿಸುವ ಪದ

ಡಾ॥ಶೀಲ : ಪರಿಮಾಣವಾಚಕವೆನ್ನುವರು

ಡಾ॥ರಾಮು : ವಸ್ತುವಿನ ಸಾಮಾನ್ಯ ಅಳತೆ-ಪರಿಮಾಣವಾಚಕವೆನ್ನುವರು

ಉದಾ:- ಕೆಲವು, ಹಲವು, ಅಷ್ಟು, ಗಾತ್ರ ಮುಂತಾದವುಗಳನ್ನು ಹೇಳುವ ಶಬ್ದಗಳು. ಪರಿಮಾಣ : ಉದಾ:- ಇಷ್ಟು, ಎಷ್ಟು, ಸೇರು, ಬಳ್ಳ, ಕೊಳಗೆ ಇತ್ಯಾದಿ

ಡಾ॥ಶೀಲ : ದಿಗ್ವಾಚಕಗಳು

ಡಾ॥ರಾಮು : ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳು - ದಿಗ್ವಾಚಕಗಳು

ಉದಾ:- ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ, ಈಶಾನ್ಯ, ಅತ್ತ, ಇತ್ತ, ಅಲ್ಲಿ, ಇಲ್ಲಿ, ಮೇಲೆ, ಕೆಳಗೆ, ಆಚೆ, ಈಚೆ ಇತ್ಯಾದಿ

ಡಾ॥ಶೀಲ : ಪ್ರಕಾರವಾಚಕಗಳು

ಡಾ॥ರಾಮು : ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳು ಪ್ರಕಾರವಾಚಕಗಳು

ಉದಾ:- ಅಂತಹ, ಇಂತಹ, ಎಂತಹ, ಅಂಥ, ಇಂಥ ಇತ್ಯಾದಿ

ಡಾ॥ಶೀಲ : ಉತ್ತಮ ಪುರುಷ

ಡಾ॥ರಾಮು : ಮಾತಾಡುತ್ತಿರುವವರನ್ನು ಸೂಚಿಸುವ ಸರ್ವನಾಮಗಳು - (ಪುರುಷಾರ್ಥಕ)
ಉದಾ:- ನಾನು - ನಾವು ಉತ್ತಮ ಪುರುಷ

ಡಾ॥ಶೀಲ : ಮಧ್ಯಮ ಪುರುಷ

ಡಾ॥ರಾಮು : ಯಾರೊಂದಿಗೆ ಮಾತನ್ನಾಡುತ್ತಿದ್ದೇವೆಯೋ ಅವರನ್ನು - ಮಧ್ಯಮ ಪುರುಷ ಸೂಚಿಸುವ ಸರ್ವನಾಮಗಳು

ಉದಾ:- ನೀನು-ನೀವು ಸರ್ವನಾಮಗಳು

ಡಾ॥ಶೀಲ : ಪ್ರಥಮ ಪುರುಷ

ಡಾ॥ರಾಮು : ಯಾರನ್ನು ಕುರಿತು ಮಾತನ್ನಾಡುತ್ತಿದ್ದೇವೆಯೋ ಅಂತಹವರನ್ನು - ಪ್ರಥಮ ಪುರುಷ ಸೂಚಿಸುವ ಸರ್ವನಾಮಗಳು

ಉದಾ:-ಅವನು-ಅವಳು-ಅವರು

ಡಾ॥ಶೀಲ : ಪ್ರಶ್ನಾರ್ಥಕ ಸರ್ವನಾಮಗಳು

ಡಾ॥ರಾಮು : ಪ್ರಶ್ನಿಸುವ ಸರ್ವನಾಮಗಳು - ಪ್ರಶ್ನಾರ್ಥಕ ಸ.ನಾಮಗಳು

ಉದಾ:- ಎಲ್ಲಿ, ಏಕೆ, ಹೇಗೆ, ಯಾರು, ಇತ್ಯಾದಿ

ಡಾ॥ಶೀಲ : ಆತ್ಮಾರ್ಥಕ

ಡಾ॥ರಾಮು : ಆತ್ಮಸೂಚಕವಾಗಿರುವ ಸರ್ವನಾಮಗಳು - ಆತ್ಮಾರ್ಥಕ

ಉದಾ:- ತಾನು, ತನ್ನ ಇತ್ಯಾದಿ

ಡಾ॥ಶೀಲ : ನಿತ್ಯನಪುಂಸಕಗಳು

ಡಾ॥ರಾಮು : ಶಿಶು, ಮಗು, ದಂಡು, ಕೂಸು, ಸಂಘ, ಸೈನ್ಯ, ಸರ್ಕಾರ, ಸಭೆ ಇವುಗಳು - ನಿತ್ಯ ನಪುಂಸಕಗಳು

ಡಾ॥ಶೀಲ : ವಿಶೇಷ್ಯಾಧೀನ ಲಿಂಗ

ಡಾ॥ರಾಮು : ಸರ್ವನಾಮ, ಗುಣವಾಚಕ ಸಂಖ್ಯೆಗಳು ಮೂರು ಲಿಂಗಗಳಲ್ಲೂ ಒಂದೇ ರೀತಿಯಲ್ಲಿ ಪ್ರಯೋಗವಾಗುವ ಲಿಂಗವೇ - ವಿಶೇಷ್ಯಾಧೀನ ಲಿಂಗ ಉದಾ:- ಒಂದು, ಒಬ್ಬರು, ಒಬ್ಬಳು

# 9. ಪುಸ್ತಕಗಳು

ಡಾ॥ರಾಮು : ಪುಸ್ತಕಗಳು, ಸಂತನಿರುವ ಅಥವಾ ಇದ್ದಾನೆಂದು ನಂಬಲಾದ ದೇವಮಂದಿರಗಳು.
- ಫ್ರಾನ್ಸಿಸ್ ಬೇಕನ್

ಡಾ॥ಶೀಲ : ಪುಸ್ತಕಗಳು ಮನಸ್ಸಿಗೆ ಮತ್ತುಹಿಡಿಸುವ ದಿವ್ಯ ಔಷಧಿಗಳು
- ರಾಬರ್ಟ್ ಛೇಂಬರ್ಸ್

ಡಾ॥ರಾಮು : ವಾಚನಾಯೋಗ್ಯವೆಂಬುದೇ ಪುಸ್ತಕದ ಲಕ್ಷಣ. - ಎಮರ್ಸನ್

ಡಾ॥ಶೀಲ : ಪುಸ್ತಕ ಯೌವನದಲ್ಲಿ ಮಾರ್ಗದರ್ಶಿ, ವೃದ್ಧಾಪ್ಯದಲ್ಲಿ ಮನರಂಜಕ.
- ಜೆರಿಮಿ ಕಾಲಿಯರ್

ಡಾ॥ರಾಮು : ಅತ್ಯುತ್ತಮ ಪುಸ್ತಕಗಳು ಉತ್ತಮ ಸಂಗಾತಿಗಳು. - ಥಿಯೋಡಾರ್ ಪಾರ್ಕರ್

ಡಾ॥ಶೀಲ : ಕೆಲವೇ, ಉತ್ತಮ ಪುಸ್ತಕಗಳು ಮಿತ್ರರು ಇರಬೇಕು. - ಒಂದು ಸ್ಪೇನಿನ ಗಾದೆ

ಡಾ॥ರಾಮು : ಪುಸ್ತಕಗಳು ನಮ್ಮ ವಿಚಾರಪರತೆಯನ್ನು ನಾಶಮಾಡುವ ಸಂಭವ ಉಂಟು.
- ಎಮರ್ಸನ್

ಡಾ॥ಶೀಲ : ನಮ್ಮ ಅಂತರಂಗದ ಪುಸ್ತಕ ತೆರೆಯುವ ತನಕ ಉಳಿದೆಲ್ಲ ಪುಸ್ತಕಗಳು ಉಪಯೋಗಕ್ಕೆ ಬಾರದು. - ಸ್ವಾಮಿ ವಿವೇಕಾನಂದ

ಡಾ॥ರಾಮು : ಒಂದು ವರ್ಷ ಹಳೆಯದಾಗದ ಪುಸ್ತಕ ಓದಬೇಡ; ಹೆಸರು ಗಳಿಸಿದ ಪುಸ್ತಕ ಓದಬೇಡ; ನಿನಗೆ ಇಷ್ಟವಿಲ್ಲದ ಪುಸ್ತಕ ಓದಬೇಡ - ಎಮರ್ಸನ್

ಡಾ॥ರಾಮು : ಎಲ್ಲಾ ಪುಸ್ತಕಗಳನ್ನೂ ಎರಡು ಪಂಗಡಗಳಾಗಿ ವಿಭಾಗಿಸಬಹುದು: ಆಂದಂದಿನ ಪುಸ್ತಕಗಳು ಮತ್ತು ಸಾರ್ವಕಾಲಿಕ ಪುಸ್ತಕಗಳು. - ರಸ್ಕಿನ್

ಡಾ॥ಶೀಲ : ಹಳೆಯ ಕೋಟು ಧರಿಸಿ: ಹೊಸ ಪುಸ್ತಕ ಕೊಳ್ಳಿ. - ಆಸ್ಟಿನ್ ಫೆಲ್ಪ್ಸ್

ಡಾ॥ರಾಮು : ಪುಸ್ತಕಗಳೆಂದರೆ ಕೇವಲ ಸತ್ತ ಸಂಗತಿಗಳಲ್ಲ. ಜೀವನದ ಸತ್ವವೇ ಅವುಗಳಲ್ಲಿ ತುಂಬಿದೆ.
- ಜಾನ್ ಮಿಲ್ಟನ್

ಡಾ॥ಶೀಲ : ಇಂದಿನ ದಿನಗಳಲ್ಲಿ ಒಳ್ಳೆಯ ಪುಸ್ತಕಗಳ ಸಂಗ್ರಹವೇ ಒಂದು ವಿಶ್ವವಿದ್ಯಾನಿಲಯ.
- ಥಾಮಸ್ ಕಾರ್ಲೈಲ್

ಡಾ॥ರಾಮು : ನಾನು ಪುಸ್ತಕಗಳನ್ನು ರೂಪಿಸಿರುವುದಕ್ಕಿಂತ ಪುಸ್ತಕಗಳು ನನ್ನನ್ನು ರೂಪಿಸಿರುವುದೇ ಹೆಚ್ಚು.
- ಮಾಂಟೆಯ್ನ್

ಡಾ॥ಶೀಲ : ಕೆಲವು ಪುಸ್ತಕಗಳನ್ನು ರುಚಿ ನೋಡಬೇಕು. ಕೆಲವನ್ನು ನುಂಗಬೇಕು. ಮತ್ತೆ ಕೆಲವನ್ನು ಚೀಪಿ ಅರಗಿಸಿಕೊಳ್ಳಬೇಕು. - ಫ್ರಾನ್ಸಿಸ್ ಬೇಕನ್

ಡಾ॥ರಾಮು : ಕೆಲವರಿಗೆ ಜೀವನವೇ ಮುಖ್ಯ: ಆದರೆ ನನಗೆ ವಾಚನವು ಅದಕ್ಕಿಂತ ಮುಖ್ಯ.
- ಲೋಗನ್ ಪಿಯರ್ಸಾಲ್ ಸ್ಮಿತ್

**ಡಾ॥ಶೀಲ** : ಪುಸ್ತಕಗಳೇ ವಾಚಕನಲ್ಲಿ ಮನಶ್ಶಾಂತಿಯನ್ನೂ ಪುಷ್ಟಿಯನ್ನೂ ಹೆಚ್ಚಿಸುವುದಕ್ಕೆ ಯೋಗ್ಯವಾದುವು. ಪುಸ್ತಕಗಳೇ ಸಮಾಜದ ಏಳಿಗೆಗೆ ಮೂಲ ಕಾರಣವು.

- ಶ್ರೀ ಕರ್ಪೂರ ಶ್ರೀನಿವಾಸರಾಯರು

**ಡಾ॥ರಾಮು** : ಒಬ್ಬ ಮನುಷ್ಯನನ್ನು ಕೊಂದರೆ ದೇವರ ಪ್ರತಿಬಿಂಬವನ್ನು ನಾಶಮಾಡಿದಂತೆ.

ಪುಸ್ತಕವನ್ನು ನಾಶ ಮಾಡಿದರೆ ಸಕಾರಣಜೀವಿಯ ಸಕಾರಣತೆಯನ್ನೇ ಕೊಂದಂತೆ.

- ಜಾನ್ ಮಿಲ್ಟನ್

**ಡಾ॥ಶೀಲ** : ಸುಖವನ್ನು ಸಂಗ್ರಹಿಸಬೇಕಾದರೆ ಪುಸ್ತಕಗಳನ್ನು ಸಂಗ್ರಹಿಸು. - ವಿ. ಸ್ಟಾರೆಟ್

**ಡಾ॥ರಾಮು** : ಶೀಲ-ಅಶ್ಲೀಲ ಎನ್ನುವಂಥ ಪುಸ್ತವಿಲ್ಲ: ಇರುವುದು ಒಳ್ಳೆಯ ಪುಸ್ತಕ - ಕೆಟ್ಟ ಪುಸ್ತಕ ಅಷ್ಟೆ.

- ಆಸ್ಕರ್ ವೈಲ್ಡ್

**ಡಾ॥ಶೀಲ** : ಅಮರತ್ವದ ತಿಳಿವು ಪುಸ್ತಕಗಳಿಂದ ಲಭ್ಯವಾದದ್ದು. - ಎಮರ್ಸನ್

**ಡಾ॥ರಾಮು** : ತತ್ಕಾಲದ ಪುಸ್ತಕಗಳು, ಸದಾಕಾಲದ ಪುಸ್ತಕಗಳು - ಎಂದು ಎಲ್ಲಾ ಪುಸ್ತಕಗಳನ್ನು ಎರಡು ಗುಂಪಾಗಿ ವಿಂಗಡಿಸಬಹುದು. - ಜಾನ್ ರಸ್ಕಿನ್

ನಾವು ಓದುವ ಪುಸ್ತಕಗಳಿಂದ, ಅದರಲ್ಲಿಯೂ ಚಿಕ್ಕಂದಿನಲ್ಲಿ ಓದುವ ಪುಸ್ತಕಗಳಿಂದ, ನಮ್ಮ ಮಾನಸಿಕ ಸಿದ್ಧಿ ಎಷ್ಟರಮಟ್ಟಿಗಾಗುತ್ತದೆಂಬುದನ್ನು ನಾವು ಸಾಕಷ್ಟು ಅರ್ಥ ಮಾಡಿಕೊಳ್ಳುತ್ತಲಿಲ್ಲ. ನಮಗೆ, ಜ್ಞಾನ ಸಂಪಾದನೆಗಾಗಿ ಅನೇಕ ಅನುಕೂಲಗಳಿವೆ: ಈಗ ರೇಡಿಯೋ, ಚಲನಚಿತ್ರ, ವೃತ್ತ ಪತ್ರಿಕೆಗಳಿವೆ. ಟೆಲಿವಿಷನ್ ಕೂಡ ನಮಗೆ ಲಭ್ಯವಾಗಿದೆ. ಆದರೆ, ಪುಸ್ತಕಾಭ್ಯಾಸ ಅತ್ಯಂತ ಪುರಾತನವಾದುದಷ್ಟೇ ಅಲ್ಲದೆ, ಅತ್ಯಂತ ಪರಿಣಾಮಕಾರಿಯಾದ ವಿಧಾನವೂ ಹೌದು. ತಾಂತ್ರಿಕವಾಗಿ ತಿಳಿಸುವ ವಿಧಾನಕ್ಕಿಂತ ಪುಸ್ತಕವನ್ನೋದುವುದು ಅತ್ಯಂತ ವಿಭಿನ್ನವಾದುದಾಗಿರುತ್ತದೆ. ಸ್ವಾಧ್ಯಾಯ ಅಥವಾ ಅಧ್ಯಾಯನವು ನಮ್ಮ ಮೇಲೆ ಪ್ರಚೋದಿತವಾಗಿದೆ. ನಮ್ಮ ಸಂಗಡ ಪುಸ್ತಕಗಳಿದ್ದರೆ, ನಾವೆಂದಿಗೂ ಒಬ್ಬಂಟಿಗರಾಗುವುದಿಲ್ಲ. - ಎಸ್. ರಾಧಾಕೃಷ್ಣನ್

ಒಳ್ಳೆಯ ಪುಸ್ತಕವು ಒಂದು ಸಲ ಓದಿನಿಂದ ಸಿಪ್ಪೆಯಾಗಿ ಹೋಗತಕ್ಕುದಲ್ಲ. ಪದೇ ಪದೇ ನೋಡುವುದರಿಂದಲೇ ಅದರ ಗುಣವನ್ನರಿಯಲಾಗುವುದು. ಇದಕ್ಕಾಗಿಯೇ ಅದು ನಮ್ಮ ಬಳಿಯಿರಬೇಕು. ಪ್ರತಿಯೊಂದು ಮನೆಗೂ ದೀಪವ ಹೇಗೆಯೋ ಪುಸ್ತಕವು ಹಾಗೆಯೇ ಅವಶ್ಯ ವಸ್ತುವೆಂಬುದನ್ನು ನಮ್ಮವರು ಗ್ರಹಿಸಬೇಕಾಗಿದೆ - ಡಿ. ವಿ. ಜಿ.

# 10. ಗ್ರಂಥಗಳು

ಡಾ॥ಶೀಲ : ಪಿತೃಗಳು ಕೀರ್ತಿಯನ್ನು ಬೆಳಗಿಸುವ ಚಿರಂಜೀವಿ ಮಕ್ಕಳಂತೆ ಗ್ರಂಥಕರ್ತರ ಕೀರ್ತಿಯನ್ನು ಅವರ ಗ್ರಂಥಗಳು ಆಚಂದ್ರಾರ್ಕವಾಗಿ ಬೆಳಗಿಸುತ್ತವೆ. - ಪ್ಲೇಟೋ

ಡಾ॥ರಾಮು : ಉತ್ತಮ ಗ್ರಂಥವು ಇಂದು ಮತ್ತು ಎಂದೆಂದಿಗೂ ಅತ್ಯತ್ಕೃಷ್ಟ ಸ್ನೇಹಿತನಿದ್ದ ಹಾಗೆ. - ಮಾರ್ಟಿನ್ ಎಫ್. ಟುಪ್ಪರ್

ಡಾ॥ಶೀಲ : ಗ್ರಂಥಗಳು ಬಾಳನ್ನು ಬೆಳಗಿಸುವ ಅಮೃತ ಸಂಜೀವಿನಿ. ಜೀವಿಗಳಿಗೆ ಆಹಾರವಿದ್ದಂತೆ ಮನುಷ್ಯನಿಗೆ ಗ್ರಂಥಗಳು. - ಡಿ. ವಿ. ಜಿ.

ಡಾ॥ರಾಮು : ಉತ್ತಮ ಗ್ರಂಥಗಳು ನಾಡಿನ ಸಂಸ್ಕೃತಿಯ ಪ್ರತೀಕ. - ನೆಹರು.

ಡಾ॥ಶೀಲ : ಸದ್ಗ್ರಂಥವು ಒಂದು ನಾಡಿನ ಬೆಳಕು ಬಾಳದಾಲಿಯ ದೀವಿಗೆ. - ವಿ. ಸೀ.

ಡಾ॥ರಾಮು : ನಮ್ಮಿಂದ ಕಣ್ಮರೆಯಾದ ಮಹಾನುಭಾವರು ಉಸುರಿದ ಮಾತುಗಳೇ ಸದ್ ಗ್ರಂಥಗಳು. - ಕ್ಯಾನಿಂಗ್

ಡಾ॥ಶೀಲ : ಒಳ್ಳೆಯ ಗ್ರಂಥಗಳನ್ನು ಓದದ ಸುಶಿಕ್ಷಿತನಿಗೂ ಅವುಗಳನ್ನು ಓದಲಲಿಯದ ನಿರಕ್ಷರಿಗೂ ವ್ಯತ್ಯಾಸವಿಲ್ಲ. - ಮೆಂಕನ್

ಡಾ॥ರಾಮು : ಗ್ರಂಥಗಳಲ್ಲಿ ಕೇವಲ ಎರಡು ವರ್ಗ: ಉತ್ತಮವಾಗಿ ಬರೆದವುಗಳು: ಹೊಲಸಾಗಿ ಬರೆದವುಗಳು. - ಆಸ್ಕರ್ ವಾಯಿಲ್ಡ್

ಡಾ॥ಶೀಲ : ಗ್ರಂಥವು ಬೇಕಾದಾಗ, ಬೇಕಾದ ಹೊತ್ತಿನಲ್ಲಿ, ಬೇಕಾದ ಸ್ಥಳದಲ್ಲಿ ಮತ್ತು ಬೇಕಾದ ಪರಿಸ್ಥಿಯಲ್ಲಿ ತಿಳುವಳಿಕೆ ನೀಡುವ ಸದಾಸಿದ್ಧಿ ಜ್ಞಾನನಿಧಿ. - ಎಸ್. ಆರ್. ಗುಂಜಾಳ

ಡಾ॥ರಾಮು : ಗ್ರಂಥಾಲಯವು ಶಿಕ್ಷಣದ ಹೃದಯವಾಗಿದೆ. - ಪೌಲ ಬಕ್

ಡಾ॥ಶೀಲ : ಗ್ರಂಥಗಳಿಲ್ಲದೆ ಹೋದರೆ ದೇವರು ಮೌನಿಯಾಗುವನು; ನ್ಯಾಯದೇವತೆ ನಿದ್ರಿಸುವಳು; ಸೃಷ್ಟಿ ವಿಜ್ಞಾನವು ಸ್ಥಗಿತಗೊಳ್ಳುವುದು; ತತ್ವಜ್ಞಾನವು ಕುಂಟುವುದು; ಅಕ್ಷರಗಳು ಅರ್ಥಹೀನ ವಾಗುವುವು; ಸಹಚರಾಚರಗಳು ಮಬ್ಬುಗವಿಯಲ್ಪಡುವುವು. - ಬಾರ್ಥೋಲಿನಿ

ಡಾ॥ಶೀಲ : ಒಂದು ಉತ್ತಮ ಗ್ರಂಥವನ್ನು ಒಬ್ಬ ಸಜ್ಜನ ಮನುಷ್ಯನನ್ನೇ ಕೊಂಡಂತೆ. - ಜಾನ್ ಮಿಲ್ಟನ್

ಡಾ॥ರಾಮು : ಯಾವ ಗ್ರಂಥವನ್ನು ಆಶಾ ದೃಷ್ಟಿಯಿಂದ ತೆರೆದು, ಲಾಭ ಪಡೆದು ಮುಚ್ಚುತ್ತೇವೆಯೋ ಅದು ಉತ್ತಮ ಗ್ರಂಥ. - ಎಚ್. ಬಿ. ಅಲಕಾಟ್

ಡಾ॥ಶೀಲ : ಭೂಡ್ಸನ್ನು ಕೊಳ್ಳಲು ಹಾತೊರೆಯುತ್ತೇವೆ. ಬುಕ್ಕುಗಳನ್ನು ಕೊಳ್ಳಲು ಏತಕ್ಕೆ ಆತಂಕ ಪಡುವುದಿಲ್ಲ? - ಎಸ್. ವಿ. ರಂಗಣ್ಣ

ಡಾ॥ರಾಮು : ಸ್ನೇಹಿತನನ್ನು ಆರಿಸಿಕೊಂಡಂತೆ ನಿಮ್ಮ ಲೇಖಕನವನ್ನು ಆರಿಸಿಕೊಳ್ಳಿರಿ. - ವೆಂಟ್‌ವರ್ತ್ ಡಿಲ್ಲಾನ್

**ಡಾ॥ರಾಮು** : ಕವಿವಾಣಿಯು ನಿಯತ ಕೃತ ನಿಯಮ ರಹಿತವೂ ಅನನ್ಯ ಪರ ತಂತ್ರವೂ, ಆದ ನವ ಕಾವ್ಯಸೃಷ್ಟಿಯನ್ನು ನಿರ್ಮಿಸಿಸುವ ಸ್ವತಂತ್ರತೆಯುಳ್ಳುದ್ದಾದರೂ, ಆ ನವ ಕಾವ್ಯ ಸೃಷ್ಟಿಯು ಆಹ್ಲಾದೈಕಮಯವೂ ನವರಸ ರುಚಿರವೂ ಆಗಬೇಕಾದರೆ, ಅದಕ್ಕೆ ಶಬ್ದಶಾಸ್ತ್ರದ ಮತ್ತು ಅಲಂಕಾರಾದಿಗಳ ಅವಶ್ಯಕತೆಯು ಬೇಕೇ ಬೇಕು. ಸ್ವಾತಂತ್ರ್ಯವೆಂಬ ಮಾತಿನರ್ಥವು ನಿಯಮೋಲ್ಲಂಘನವಲ್ಲ: ಪರಿಸ್ಥಿತಿಗನುಸರಿಸಿ ನಿಯಮಗಳನ್ನು ಮಾಡಿಕೊಳ್ಳುವ ಸ್ವಾಧಿಕಾರ"

- ವೈ. ನಾಗೇಶಶಾಸ್ತ್ರೀ

**ಡಾ॥ಶೀಲ** : ನಮ್ಮ ಹಿರಿಯರು ಸದ್ವಿವೇಕೋದಯಕ್ಕೆ ಸಾಧನೀಭೂತಂಗಳನ್ನಾಗಿ ನಮ್ಮ ಭಾಷಾಗ್ರಂಥ ಗಳನ್ನು ಸ್ವಾರ್ಥ ಪರತಿಯಿಲ್ಲದೆ ಲೋಕೋಪಕಾರಾರ್ಥವಾಗಿ ಬರೆದಿಟ್ಟರು. ಅವುಗಳನ್ನು ಓದಿ ಕೊಳ್ಳದೆ ನಾವು ಕೃತಘ್ನರೆನಿಸುವೆವು. ಆದುದರಿಂದ ನಮ್ಮ ಸ್ವದೇಶ ಭಾಷಾ ಗ್ರಂಥಗಳನ್ನು ವಿಶೇಷ ಪ್ರವಚನ - ಪ್ರಚಾರಕ್ಕೆ ತಂದುಕೊಳ್ಳುವುದು ನಮ್ಮ ಮುಖ್ಯ ಕರ್ತವ್ಯವಾಗಿರುವುದು.

- ಶಿವಶಂಕರ ಶಾಸ್ತ್ರಿಗಳು

**ಡಾ॥ರಾಮು** : ನಿರೂಪಿಸಿದ ವಿಷಯದಿಂದಷ್ಟೇ ಅಲ್ಲ, ನಿರೂಪಿಸುವ ರೀತಿಯಿಂದಲೂ ಓದುಗರಿಗೆ ಸಂತೋಷ ನೀಡಬಲ್ಲುದೇ ನಿಜವಾದ ಸಾಹಿತ್ಯ.

- ಸ್ಟಾಪ್ ಫೋರ್ಡ್ ಎ. ಬ್ರೂಕ್

**ಡಾ॥ಶೀಲ** : ಉದಾರಿಯಾಗುವುದು ದೈವಕೃಪೆ. ಆದರೆ ಓದು, ಬರಹ ಸಹಜವಾಗಿ ಬರುತ್ತದೆ.

- ಷೇಕ್ಸ್ ಪಿಯರ್

# 11. ಕನ್ನಡನುಡಿ

## ಕನ್ನಡನುಡಿ ವಿವರಣೆ

ಡಾ॥ರಾಮು : ಕನ್ನಡನುಡಿ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ ಎರಡು ನಿಯತ ಕಾಲಿಕಗಳಲ್ಲಿ ಒಂದು.

ಡಾ॥ಶೀಲ : ಕನ್ನಡನುಡಿ ಕನ್ನಡದ ಚಳವಳಿಗಾಗಿಯೇ ಮೀಸಲಾದ ಪತ್ರಿಕೆಯಾಗಿದೆ.

ಡಾ॥ರಾಮು : ಕನ್ನಡ ಪ್ರಚಾರಕ್ಕಾಗಿಯೇ ಮೀಸಲಾದ ಒಂದು ಪತ್ರಿಕೆ ಇರುವುದರ ಅವಶ್ಯಕತೆಯಿದೆ ಎಂದು ಬಿ.ಎಂ.ಶ್ರೀ.ಯವರ ಅಪೇಕ್ಷೆಯಂತೆ ಅ.ನ.ಕೃ. ಅವರ ಸಂಪಾದಕತ್ವದಲ್ಲಿ ಕನ್ನಡನುಡಿ ವಾರಪತ್ರಿಕೆಯಾಗಿ ಜನ್ಮತಾಳಿತು.

ಡಾ॥ಶೀಲ : ಅ. ನ. ಕೃಷ್ಣರಾಯ, ಬಿ. ವೆಂಕೋಬರಾವ್, ಬಿ. ಎಂ. ಶ್ರೀ ಎಂ. ಜಿ. ನಂಜುಂಡಾರಾಧ್ಯ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ, ಸಿದ್ಧವನಹಳ್ಳಿ ಕೃಷ್ಣಶರ್ಮ, ಡಿ. ಸಿ. ಸುಬ್ಬರಾಯಪ್ಪ, ವಿ.ಸೀ. ಎಂ. ವಿ. ಸೀತಾರಾಮಯ್ಯ, ಎಂ.ಆರ್.ಶ್ರೀ., ಬಿ. ಶಿವಮೂರ್ತಿಶಾಸ್ತ್ರೀ, ಡಿ. ಆರ್. ರಾಮಯ್ಯ, ಸಿ.ಕೆ. ವೆಂಕಟರಾಮಯ್ಯ, ಜಿ. ವೆಂಕಟಸುಬ್ಬಯ್ಯ, ಹಿ.ಮ ನಾಗಣ್ಣ, ವಿಜಯ ಸುಬ್ಬರಾಜ್, ಎಸ್.ವಿ. ಶ್ರೀನಿವಾಸರಾವ್, ಮಹದೇವ ಪ್ರಕಾಶ್ ಮೊದಲಾದವರು ಕನ್ನಡ ನುಡಿಯ ಸಂಪಾದಕರಾಗಿದ್ದರು.

ಡಾ॥ರಾಮು : ಕನ್ನಡನುಡಿಯ ಧ್ಯೇಯಧೋರಣೆಗಳನ್ನು ಕುರಿತು ಈ ಪತ್ರಿಕೆಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸರ್ವಜನೋಪಯುಕ್ತವಾದ ಲೇಖನಗಳು ಪ್ರಕಟವಾಗುತ್ತವೆ.

ಡಾ॥ಶೀಲ : ಪ್ರಾಚೀನ ಸಾಹಿತ್ಯದ ಉದ್ಗ್ರಂಥಗಳ ಪರಿಚಯ, ವೈಜ್ಞಾನಿಕ ವಿಚಾರ, ಕಾವ್ಯಾವಲೋಕನ, ಅಂಗಸಂಸ್ಥೆಗಳಾದ ಕರ್ನಾಟಕ ಸಂಘಗಳ ಕಾರ್ಯ ಕಲಾಪಗಳ ಸಂಗ್ರಹ ಮುಖ್ಯವಾಗಿ ಜನಸಾಮಾನ್ಯಕ್ಕೆ ಉಪಯೋಗವಾಗುವ ರೀತಿಯಲ್ಲಿ ಮತ್ತು ಅರ್ಥವಾಗುವ ಶೈಲಿಯಲ್ಲಿ ಈ ಪತ್ರಿಕೆಯನ್ನು ನಡೆಸಲಾಗುತ್ತದೆ.

ಡಾ॥ರಾಮು : ನಾಡಿನ ಮತ್ತು ಹೊರನಾಡಿನ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳ ವರದಿ, ಕನ್ನಡ ಭಾಷೆ, ಸಾಹಿತ್ಯ, ಕಲೆ, ಗ್ರಂಥಲೋಕ, ಶಿಲ್ಪ, ಶಾಸನ, ವಿಜ್ಞಾನ ಭೂಮಿಕೆಗಳಲ್ಲೂ ಪ್ರಶಂಸಾರ್ಹವಾದ ನೂರಾರು ಲೇಖನಗಳು ಇಲ್ಲಿ ಬೆಳಕು ಕಂಡಿವೆ.

ಡಾ॥ಶೀಲ : ಇವುಗಳಲ್ಲಿ ಮುಖ್ಯವಾದವು 1957ರ ಸನ್ಮಾನೋತ್ಸವ ವಿಶೇಷ ಸಂಚಿಕೆ ಮತ್ತು 1963ರಲ್ಲಿ ಪ್ರಕಟವಾದ ಒಂದು ನೂರು ಪುಟಗಳ ಬೆಳ್ಳಿ ಸಂಚಿಕೆ.

ಡಾ॥ರಾಮು : ರವೀಂದ್ರ ಸಂಚಿಕೆ, ಕುವೆಂಪು ಲೇಖನ ಮಾಲೆ, ಎಂ.ಆರ್.ಶ್ರೀ. ಬಾಷ್ಪಾಂಜಲಿ ಸಂಚಿಕೆ (1953) ತೀ.ನಂ.ಶ್ರೀ. ಸ್ಮರಣ ಸಂಚಿಕೆ (1966) ಇವು ಕವಿ – ಕೃತಿ ದರ್ಶನಕ್ಕೆ ಸಹಾಯಕವಾದ ಸಂಚಿಕೆಗಳಾಗಿವೆ.

ಡಾ॥ಶೀಲ : ಸಾಹಿತ್ಯ ಸಮ್ಮೇಳನಗಳ ನೆನಪಿಗೆ ಪ್ರಕಟವಾಗುವ ಸಮ್ಮೇಳನ ವಿಶೇಷಾಂಕಗಳು ವೈಶಿಷ್ಟ್ಯ ಪೂರ್ಣವಾಗಿರುತ್ತವೆ.

ಡಾ॥ರಾಮು : ಸಮ್ಮೇಳನಾಧ್ಯಕ್ಷರ ವ್ಯಕ್ತಿ – ಕೃತಿ ಪರಿಚಯಗಳು, ಸಮ್ಮೇಳನ ನಡೆಯಬೇಕಾದ ನಗರ, ಜಿಲ್ಲೆ, ಪ್ರದೇಶಗಳ ಸಾಂಸ್ಕೃತಿಕ ಐತಿಹಾಸಿಕ ಮತ್ತು ಸಾಹಿತ್ಯ ಪರಂಪರೆಗಳ ಪರಿಚಯ ಮಾಡಿಕೊಡುವ ವಿಶೇಷ ಲೇಖನಗಳು, ಹಲವಾರು ಗೋಷ್ಠಿಗಳಲ್ಲಿ ಭಾಗವಹಿಸುವ ವಿದ್ವಾಂಸರು ಸಾದರಪಡಿಸುವ ಲೇಖನಗಳು, ಭಾವಚಿತ್ರಗಳು ಈ ವಿಶೇಷಾಂಕಗಳಲ್ಲಿ ಪ್ರಕಟಗೊಂಡು ಉತ್ತಮ ದಾಖಲೆಗಳೆನಿಸಿವೆ.

# 12. ಕನ್ನಡ ಸಾಹಿತ್ಯ

ಡಾ॥ರಾಮು : ಕನ್ನಡ ಸಾಹಿತ್ಯಕ್ಕೆ ಬಹು ಪ್ರಾಚೀನವೂ ಸಮೃದ್ಧವೂ ಆದ ಚರಿತ್ರೆ ಇದೆ. ಕರ್ಣಾಟಕ ಕವಿಚರಿತ್ರೆಯ ಆಧಾರದ ಮೇಲೆ ಹೇಳುವುದಾದರೆ ಹತ್ತೊಂಬತ್ತನೆಯ ಶತಮಾನದ ಆದಿಭಾಗದವರೆಗಾಗಲೇ ಸಾವಿರದ ಇನ್ನೂರು ಕವಿಗಳು ಕಾಣಸಿಗುತ್ತಾರೆ.

ಡಾ॥ಶೀಲ : ಕನ್ನಡ ಸಾಹಿತ್ಯ ಚರಿತ್ರೆ ಕನ್ನಡ ನಾಡಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಜೀವನದ ಚರಿತ್ರೆಯೂ ಆಗಿದ್ದು ಅಂದಿನ ಯುಗ ಧರ್ಮವನ್ನು ಪ್ರತಿಬಿಂಬಿಸುವಂತಿದೆ. ಪಂಪ, ರನ್ನ, ಜನ್ನ, ನಾಗವರ್ಮ, ಬಸವಣ್ಣ, ಮಹದೇವಿಯಕ್ಕ, ಹರಿಹರ, ರಾಘವಾಂಕ, ನಾರಾಣಪ್ಪ, ಲಕ್ಷ್ಮೀಶ, ಸರ್ವಜ್ಞ, ರತ್ನಾಕರವರ್ಣಿ, ಮುದ್ದಣ – ಈ ಮೊದಲಾದವರ ಕೃತಿಗಳಲ್ಲಿ ಹಲವು ಪ್ರಪಂಚದ ಅತಿಶ್ರೇಷ್ಠ ಕೃತಿಗಳ ಮಟ್ಟದವಾಗಿವೆ.

ಡಾ॥ರಾಮು : ಸಂಸ್ಕೃತದ ಗಾಢಾಲಿಂಗನದಿಂದ ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ರಮೇಣ ಹೊರಬಂದು ತನ್ನದೇ ಆದ ಧ್ಯೇಯ, ಶೈಲಿಗಳನ್ನು ರೂಪಿಸಿಕೊಂಡ ಬಗೆ ಅಚ್ಚರಿಗೊಳಿಸುವಂಥದು. ಚಂಪೂ ಕ್ರಮೇಣ ಷಟ್ಪದಿ ವಚನ ಸಾಂಗತ್ಯ ತ್ರಿಪದಿಗಳಿಗೂ ಪದ್ಯ ಗದ್ಯಕ್ಕೂ ಎಡೆಮಾಡಿಕೊಟ್ಟಿದೆ. ಪದ್ಯಕ್ಕಿದ್ದ ಸ್ಥಾನಮಾನಗಳನ್ನು ಇಂದು ಗದ್ಯ ಗೆದ್ದಿದೆ.

ಡಾ॥ಶೀಲ : ಧಾರ್ಮಿಕ ದೃಷ್ಟಿ. ಲೌಕಿಕ ದೃಷ್ಟಿ, ಸೃಷ್ಟಿಗಳಿಗೆಡೆ ಮಾಡಿದೆ. ಕಾವ್ಯ ಪ್ರಕಾರದೊಂದಿಗೆ ಶಾಸ್ತ್ರಪ್ರಕಾರ ಹೆಚ್ಚಿನ ಪ್ರಾಮುಖ್ಯಗಳಿಸುತ್ತಿದೆ. ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಬಹುಮುಖ ಬೆಳವಣಿಗೆಯಿಂದಾಗಿ ಬೆರಗುಗೊಳಿಸುತ್ತಿದೆ.

ಡಾ॥ರಾಮು : ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕನ್ನಡ ಗ್ರಂಥ ಸೂಚಿ, ಆಧಾರದ ಮೇಲೆ ಹೇಳುವುದಾದರೆ ಕನ್ನಡದಲ್ಲಿ ಅಚ್ಚಾಗಿರುವ (1817–1968) ಗ್ರಂಥಗಳ ಸಂಖ್ಯೆ 3,50,000. ಅನುಪಲಬ್ಧವಾಗಿ ದ್ದರೂ ಹೆಸರು ತಿಳಿದಿರುವ ಪುಸ್ತಕಗಳ ಸಂಖ್ಯೆ 10,000. ಅಚ್ಚಾಗಿರುವ ವಿಜ್ಞಾನ ಪುಸ್ತಕಗಳು 1,149, ಕಥೆ, ಕಾದಂಬರಿ ಪ್ರಬಂಧ, ಜೀವನಚರಿತ್ರೆ, ಪ್ರವಾಸ ಸಾಹಿತ್ಯ, ವಿಜ್ಞಾನ ಸಾಹಿತ್ಯ–ಈ ಮುಂತಾದ ಕ್ಷೇತ್ರಗಳಲ್ಲಿ ವಿಶ್ವ ಸಾಹಿತ್ಯದ ಮಟ್ಟಕ್ಕೇರಬಲ್ಲ–ಅನೇಕ ಕೃತಿರತ್ನಗಳು ಕನ್ನಡದಲ್ಲಿ ಬಂದಿವೆ.

ಡಾ॥ಶೀಲ : ಆಧುನಿಕ ಕನ್ನಡ ಸಾಹಿತ್ಯದ ಒಂದು ಪಕ್ಷಿನೋಟ ಈ ರೀತಿ ಇದೆ –

ಕನ್ನಡದಲ್ಲಿ ಆತ್ಮಕಥೆಗಳು ; ಕನ್ನಡದಲ್ಲಿ ಕಾದಂಬರೀ ಸಾಹಿತ್ಯ ; ಕನ್ನಡದಲ್ಲಿ ಕಾವ್ಯಮೀಮಾಂಸೆ ; ಕನ್ನಡದಲ್ಲಿ ವಚನಸಾಹಿತ್ಯ ; ಕನ್ನಡದಲ್ಲಿ ವಿಚಾರಸಾಹಿತ್ಯ ; ಕನ್ನಡದಲ್ಲಿ ವಿಜ್ಞಾನಸಾಹಿತ್ಯ ; ಕನ್ನಡದಲ್ಲಿ ವಿಡಂಬನ ಸಾಹಿತ್ಯ ; ಕನ್ನಡದಲ್ಲಿ ವಿಶ್ವಕೋಶಗಳು ; ಕನ್ನಡದಲ್ಲಿ ಶತಕಸಾಹಿತ್ಯ ; ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯ ; ಕನ್ನಡದಲ್ಲಿ ಷಟ್ಪದೀ ಕಾವ್ಯಗಳು ; ಕನ್ನಡ ಚಂಪೂಸಾಹಿತ್ಯ ; ಕನ್ನಡ ಛಂದಸ್ಸು ; ಕನ್ನಡ ಜಾನಪದ ; ಕನ್ನಡದಲ್ಲಿ ಅಷ್ಟಕಗಳು ; ಕನ್ನಡದಲ್ಲಿ ಗದ್ಯಸಾಹಿತ್ಯ ; ಕನ್ನಡದಲ್ಲಿ ಗಾಂಧಿ ಸಾಹಿತ್ಯ ; ಕನ್ನಡದಲ್ಲಿ ಗಾದೆಗಳು ; ಕನ್ನಡದಲ್ಲಿ ಜೀವನ ಚರಿತ್ರೆಗಳು ; ಕನ್ನಡದಲ್ಲಿ ನವ್ಯಕಾವ್ಯ ; ಕನ್ನಡದಲ್ಲಿ ನಾಟಕಸಾಹಿತ್ಯ ; ಕನ್ನಡದಲ್ಲಿ ಪ್ರಬಂಧಗಳು ; ಕನ್ನಡದಲ್ಲಿ ಪ್ರವಾಸಸಾಹಿತ್ಯ ; ಕನ್ನಡದಲ್ಲಿ ಭಾವಗೀತೆ; ಕನ್ನಡದಲ್ಲಿ ಭಾಷಾಂತರಗಳು; ಕನ್ನಡದಲ್ಲಿ ಮಕ್ಕಳಸಾಹಿತ್ಯ ; ಕನ್ನಡದಲ್ಲಿ ರುದ್ರನಾಟಕ ; ಕನ್ನಡದಲ್ಲಿ ಸಣ್ಣಕಥೆ ; ಕನ್ನಡದಲ್ಲಿ ಸಾಂಗತ್ಯ ಕಾವ್ಯ ; ಕನ್ನಡದಲ್ಲಿ ಹಾಸ್ಯಸಾಹಿತ್ಯ ; ಕನ್ನಡ ಭಾಷೆ ; ಕನ್ನಡ ಸಂಶೋಧನ ಸಂಸ್ಥೆ ; ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಅಧ್ಯಯನ ಸಂಸ್ಥೆ.

ಡಾ||ರಾಮು : ನೃಪತುಂಗ ಚಕ್ರವರ್ತಿ ಬರೆದುದೆಂದು ಪ್ರಸಿದ್ದವಾಗಿರುವ ಕವಿರಾಜಮಾರ್ಗ (ಕ್ರಿ. ಶ. 817) ಕನ್ನಡದಲ್ಲಿ ಇದುವರೆಗೆ ಲಭಿಸಿರುವ ಗ್ರಂಥಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದದ್ದು. ಆದರೆ ಅದಕ್ಕೂ ಹಿಂದೆಯೇ ಕನ್ನಡದಲ್ಲಿ ಕಾವ್ಯರಚನೆ ವಿಶೇಷವಾಗಿ ನಡೆದಿತ್ತೆಂದು ನಂಬಲು ಹಲವು ಕಾರಣಗಳಿವೆ. ಕವಿರಾಜಮಾರ್ಗದ ಕರ್ತೃವೇ ತನಗಿಂತ ಹಿಂದಿನ ಅನೇಕ ಕವಿಗಳ ಹೆಸರುಗಳನ್ನು ಹೇಳಿದ್ದಾನೆ. ಅವರಲ್ಲಿ ಪದ್ಯಗದ್ಯ ಕರ್ತೃಗಳಿಬ್ಬರೂ ಇದ್ದಾರೆ. ಆಗ್ಗೆ ಬಳಕೆಯಲ್ಲಿದ್ದ ಚತ್ತಾಣ, ಬೆದಂಡೆ ಮೊದಲಾದ ಕಾವ್ಯಜಾತಿಗಳನ್ನು ಹೆಸರಿಸಿ ಅವುಗಳ ಲಕ್ಷಣ ಗಳನ್ನೂ ಹೇಳಿರುವುದರಿಂದ ಆ ಕಾಲಕ್ಕೇ ಕನ್ನಡದಲ್ಲಿ ಅನೇಕ ಕೃತಿಗಳು ಹುಟ್ಟಿದ್ದುವೆಂದು ತಿಳಿಯಬಹುದು.

ಡಾ||ಶೀಲ : ಕನ್ನಡದ ಮೊದಲ ಕವಿಯೆಂಬ ಪ್ರಶಸ್ತಿಗೆ ಪಾತ್ರನಾದ ಪಂಪ ತನಗಿಂತ ಮುಂಚೆ ಸಮಸ್ತ ಭಾರತವನ್ನೂ ಬರೆದ ಕವಿಗಳಿಲ್ಲವೆಂದು ಹೇಳಿಕೊಂಡಿರುವುದರಿಂದ ಅವನಿಗಿಂತ ಮುಂಚೆ ಭಾರತ ಕಥೆಯ ಭಾಗಗಳನ್ನು ಆಯ್ದುಕೊಂಡು ಕೃತಿರಚನೆ ಮಾಡಿದ ಕನ್ನಡ ಕವಿಗಳಿದ್ದರೆಂದು ತಿಳಿಯಬೇಕಾಗಿದೆ.

ಡಾ||ರಾಮು : ಕನ್ನಡ ದೇಶದ ಮೊದಲ ರಾಜರಾದ ಗಂಗರಲ್ಲಿ ಹಲವರು ಕೃತಿಕರ್ತರಾಗಿದ್ದರೆಂದು ಶಾಸನಾ ಧಾರಗಳಿಂದ ತಿಳಿದುಬಂದಿದೆ.

ಸುಮಾರು ಕ್ರಿ. ಶ. 800ರಲ್ಲಿದ್ದ ಸೈಗೊಟ್ಟ ಶಿವಮಾರ ಗಜಶಾಸ್ತ್ರವನ್ನು ಬರೆದನೆಂದೂ ಅದು ಒನಕೆವಾಡು ಆಗಿದ್ದಿತೆಂದೂ ನಗರದ 35ನೆಯ ಶಾಸನ ಹೇಳುತ್ತಿದೆ.

ಚೂಡಾಮಣಿ ಎಂಬ ಹೆಸರಿನ ತತ್ತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನರೂಪವಾದ ತೊಂಬತ್ತಾರು ಸಾವಿರ ಶ್ಲೋಕಗಳುಳ್ಳ ಒಂದು ಗ್ರಂಥ ಇತ್ತೆಂದು ಶ್ರವಣಬೆಳಗೊಳದ ಒಂದು ಶಾಸನ ಹೇಳುತ್ತದೆ.

ಆ ಗ್ರಂಥವನ್ನು ದಂಡಿ ಸ್ತೋತ್ರ ಮಾಡಿದನೆಂದೂ ತಿಳಿಯುತ್ತದೆ. ಸಾವಿರಾರು ಪದ್ಯವನ್ನೊಳಗೊಂಡ ಬೃಹದ್ಗ್ರಂಥ ವೊಂದು ಆ ಕಾಲಕ್ಕೆ ಕನ್ನಡದಲ್ಲಿ ಪ್ರಸಿದ್ಧವಾಗಿದ್ದಿತೆಂದು ತಿಳಿಯಬೇಕಾಗಿದೆ.

ಡಾ||ಶೀಲ : ನೃಪತುಂಗ ಪಂಪರಿಗಿಂತ ಹಲವು ಶತಮಾನಗಳ ಹಿಂದೆಯೇ ಕನ್ನಡದಲ್ಲಿ ಕಾವ್ಯರಚನೆ ಬೇಕಾದ ಹಾಗೆ ನಡೆದಿತ್ತೆಂದು ತಿಳಿಯಲು ಅಡ್ಡಿಯಿಲ್ಲ.

ಕನ್ನಡ ನಾಡಿನಲ್ಲಿ ಅನೇಕ ಶಿಲಾಶಾಸನಗಳೂ ತಾಮ್ರ ಶಾಸನಗಳೂ ಲಭಿಸಿವೆ. ಸಾಮಾನ್ಯವಾಗಿ ರಾಜರೇ ಮೊದಲಾದ ದಾತೃಗಳು ಕೊಟ್ಟ ಕೊಡುಗೆಗಳನ್ನು ಕುರಿತು ಹೇಳುವ ದಾನ ಶಾಸನಗಳು ಅನೇಕವಾಗಿ ಸಿಕ್ಕಿವೆ. ಇವುಗಳ ಸಹಾಯದಿಂದ ಕನ್ನಡನಾಡಿನ ಇತಿಹಾಸವನ್ನು ಊಹಿಸಲು ಶಕ್ಯವಾಗಿದೆ.

ಡಾ||ರಾಮು : ಇನ್ನು ಕೆಲವು ವೀರಗಲ್ಲುಗಳು. ಯುದ್ಧಭೂಮಿಯಲ್ಲಿ ಶತ್ರುಗಳನ್ನು ಇದಿರಿಸಿ ಕಾದಿ ಸತ್ತು ವೀರಸ್ವರ್ಗ ಪಡೆದವರ ಮತ್ತು ತುರುಗಾಳಗಳಲ್ಲಿ, ಸ್ತ್ರೀಯರ ಮಾನರಕ್ಷಣೆಗಾಗಿ ಹೋರಾಡಿ ಸತ್ತವರ ಚರಿತ್ರೆಗಳನ್ನು ಹೇಳುವ ಶಾಸನಗಳನ್ನು ವೀರಗಲ್ಲುಗಳೆಂದು ಕರೆಯುವುದು ವಾಡಿಕೆ.

ಡಾ||ಶೀಲ : ಗಂಡನ ಶವದೊಡನೆ ಚಿತೆಯೇರಿ ಆತ್ಮಾರ್ಪಣೆ ಮಾಡಿಕೊಂಡು ಕೈವಲ್ಯ ಪಡೆದ ಮಹಾಸತಿಯರ ಹಿರಿಮೆಯನ್ನು ಹೊಗಳುವ ಮಾಸ್ತಿ ಕಲ್ಲುಗಳು ಅನೇಕವಾಗಿ ಲಭಿಸಿವೆ. ಈ ಎಲ್ಲ ಶಾಸನಗಳಲ್ಲಿಯೂ ಕನ್ನಡ ಬರವಣಿಗೆ ಲಭಿಸಿದೆ. ಅತ್ಯಂತ ಪ್ರಾಚೀನವಾದ ಕನ್ನಡ ಶಾಸನ ಹಾಸನ ಜಿಲ್ಲೆಯ ಹಲ್ಮಿಡಿ ಗ್ರಾಮದಲ್ಲಿ ಲಭಿಸಿದ ಒಂದು ಶಿಲಾಲೇಖ. ಇದು ಕ್ರಿ. ಶ. 450ರ ವೇಳೆಯಲ್ಲಿ ರಚಿತವಾಯಿತೆಂದು ತಿಳಿದಿದೆ.

ಡಾ||ರಾಮು : ಆ ಕಾಲಕ್ಕಾಗಲೆ ಕನ್ನಡದ ಮೇಲೆ ಸಂಸ್ಕೃತ ಭಾಷೆಯ ಪ್ರಭಾವ ವಿಶೇಷವಾಗಿ ಆಗಿತೆಂದು ಆ ಶಾಸನದಿಂದ ಗೊತ್ತಾಗುತ್ತದೆ. ಅದರಲ್ಲಿ ಅನೇಕ ಸಂಸ್ಕೃತ ಶಬ್ದಗಳು ಇವೆ.

ಡಾ||ಶೀಲ : ಕ್ರಿ. ಶ. 700ರ ಸುಮಾರಿನಲ್ಲಿ ರಚಿತವಾದ ಒಂದು ಬಾದಾಮಿ ಶಾಸನದಲ್ಲಿ ಕಪ್ಪೆ ಅರಭಟ್ಟ ನೆಂಬುವನನ್ನು ಹೊಗಳುವ ತ್ರಿಪದಿಗಳು ಸಿಕ್ಕಿವೆ. ಇದರಿಂದ ಕನ್ನಡ ಸಾಹಿತ್ಯ ಚರಿತ್ರೆಯ ಆರಂಭಕಾಲದಲ್ಲಿಯೇ ತ್ರಿಪದಿ ಬಳಕೆಯಲ್ಲಿದ್ದು ಜನಪ್ರಿಯವಾಗಿತೆಂದು, ಸ್ಪಷ್ಟವಾಗುತ್ತದೆ.

ಡಾ||ರಾಮು : ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿದ್ದರೂ ಆ ಕಾಲಕ್ಕೂ ಕನ್ನಡ ಪುಷ್ಟವಾಗಿ ಬೆಳೆದು ತನ್ನದೇ ಆದ ಛಂದಸ್ಸನ್ನು ರೂಪಿಸಿಕೊಂಡು ಜನಮಾನ್ಯತೆಗೆ ಪಾತ್ರವಾಗಿತ್ತು.

ಡಾ||ಶೀಲ : ಕವಿರಾಜಮಾರ್ಗ ಕ್ರಿ.ಶ. 817ರಿಂದ ಮಾನ್ಯಖೇಟ (ಇಂದಿನ ಮಳಖೇಡ) ನಗರದಲ್ಲಿ ರಾಜ್ಯಭಾರ ಮಾಡುತ್ತಿದ್ದ ನೃಪತುಂಗನ ಹೆಸರಿನಲ್ಲಿ ಪ್ರಚುರವಾಗಿದೆ. ಕನ್ನಡನಾಡು, ನುಡಿ, ಜನ ಮೊದಲಾದ ವಿಷಯಗಳನ್ನು ಕುರಿತು ಈ ಗ್ರಂಥಕರ್ತ ಹೇಳಿರುವ ಮಾತುಗಳು ಬಹಳ ಉಪಯುಕ್ತವಾಗಿದೆ.

ಡಾ||ರಾಮು : ಕನ್ನಡನಾಡು ಆ ಕಾಲಕ್ಕೆ ಕಾವೇರಿಯಿಂದ ಗೋದಾವರಿವರೆಗೆ ಹಬ್ಬಿದ್ದಿತೆಂದೂ ಕಿಸುವೊಳಲು, ಕೊಪಣ, ಒಂಕುಂದ ಮತ್ತು ಪುಲಿಗೆರೆಯೆಂಬ ನಾಲ್ಕು ನಗರಗಳ ನಡುವಣ ಪ್ರದೇಶ ಕನ್ನಡ ನಾಡಿನ ತಿರುಳಾದ ಭಾಗವೆಂದೂ ಕವಿ ಹೇಳಿದ್ದಾನೆ.

ಡಾ||ಶೀಲ : ಆ ಕಾಲಕ್ಕೆ ಪ್ರಸಿದ್ಧರಾಗಿದ್ದ ಗದ್ಯಾಶ್ರಮಪದಗುರುಗಳೆನಿಸಿಕೊಂಡ ವಿಮಳೋದಯ, ನಾಗಾರ್ಜುನ, ಜಯಸಿಂಧು, ದುರ್ವಿನೀತ ಮೊದಲಾದವರನ್ನೂ ಅನೇಕ ಪದ್ಯಕವಿಗಳನ್ನೂ ನೃಪತುಂಗ ಹೆಸರಿಸಿದ್ದಾನೆ. ಅಕ್ಕರ, ಚೌಪದಿ, ಗೀತಿಕೆ, ತಿವಿದಿ ಮೊದಲಾದ ಪದ್ಯಜಾತಿಗಳು ಆ ಕಾಲಕ್ಕೆ ಪ್ರಚಾರದಲ್ಲಿದ್ದು ಕಂದ ವೃತ್ತಗಳೂ ಬಳಕೆಗೆ ಬಂದಿದ್ದುವೆಂದು ಈತನ ಹೇಳಿಕೆಗಳಿಂದ ತಿಳಿಯುತ್ತದೆ.

ದೋಷಾನುವರ್ಣನ ನಿರ್ಣಯ, ಶಬ್ದಾಲಂಕಾರ, ಅರ್ಥಾಲಂಕಾರ ಎಂದು ಮೂರು ಪ್ರಕರಣಗಳನ್ನೊಳಗೊಂಡ ಕವಿರಾಜಮಾರ್ಗ ಗ್ರಂಥ ಕವಿತಾಪ್ರಾಶಸ್ತ್ಯ, ಕಾವ್ಯ ಪ್ರಯೋಜನ ಮೊದಲಾದ ಹಲವು ವಿಷಯಗಳನ್ನು ವಿಚಾರ ಮಾಡುತ್ತದೆ.

ಡಾ||ರಾಮು : ನೃಪತುಂಗನ ತರುವಾಯ, ಕನ್ನಡ ಸಾಹಿತ್ಯದಲ್ಲಿ ಅಗ್ರಮಾನ್ಯವಾದ ಪಂಪನನ್ನು ಗಮನಿಸಬೇಕು. ಕನ್ನಡ ಕವಿಗಳನೇಕರು ಪಂಪನಿಂದ ಪ್ರಭಾವಿತರಾಗಿದದ್ದು ಅವನ ಕವಿತ್ವವೈಭವವನ್ನು ಬಾಯಿ ತುಂಬ ಹೊಗಳಿ ದ್ದಾರೆ. ರಸಿಕನಾದ ಪಂಪಕವಿ ವೈರಾಗ್ಯಪ್ರಧಾನವಾದ ಈ ಧಾರ್ಮಿಕ ಕಾವ್ಯದಲ್ಲಿಯೂ ಅವಕಾಶ ಕಲ್ಪಿಸಿಕೊಂಡು ಅಲ್ಲಲ್ಲಿ ಶೃಂಗಾರ ಸನ್ನಿವೇಶಗಳನ್ನು; ಅತ್ಯಂತ ಹೃದ್ಯವಾದ ರೀತಿಯಲ್ಲಿ ಚಿತ್ರಿಸಿ ಓದುಗರ ಮನಸ್ಸನ್ನು ತಣಿಸಿದ್ದಾನೆ. ಪಂಪನ ಇನ್ನೊಂದು ಮೇರುಕೃತಿ ವಿಕ್ರಮಾರ್ಜುನವಿಜಯ, ಇದಕ್ಕೆ ಪಂಪಭಾರತವೆಂದೂ ಹೆಸರು.

ಡಾ||ಶೀಲ : ಪಂಪ ಕ್ರಿ. ಶ. 902ರಲ್ಲಿ ಜನ್ಮವೆತ್ತಿ ತನ್ನ ಮೂವತ್ತನೆಯ ವಯಸ್ಸಿನಲ್ಲಿ ಆದಿಪುರಾಣವನ್ನು ರಚಿಸಿ ಜಿನಪದಾಂಭೋಜ ವರಪ್ರಸಾದೋತ್ಪನ್ನ ಪ್ರಸನ್ನ ಗಂಭೀರ ವಚನ ರಚನ ಚತುರ ಕವಿತಾ ಗುಣಾರ್ಣವೆನೆಂಬ ಹೆಮ್ಮೆಯ ಪ್ರಶಸ್ತಿಯನ್ನು ಪಡೆದುಕೊಂಡ. ಇದರಿಂದ ಆತ ಅರಿಕೇಸರಿಯ ಗಮನವನ್ನು ಸೆಳೆದು ಅವನ ಆದರದ ಆಹ್ವಾನದಂತೆ ಆ ರಾಜನ ಆಸ್ಥಾನ ಸೇರಿ ಅಕ್ಕರೆಯ ಬಹುಮತಿಯನ್ನು ಸ್ವೀಕರಿಸಿ ಅವನ ಕೋರಿಕೆಯಂತೆ ಭಾರತವನ್ನು ರಚಿಸಿ ಕೀರ್ತಿಗಳಿಸಿದ.

ಡಾ||ರಾಮು : ಹತ್ತನೆಯ ಶತಮಾನವನ್ನು ಪಂಪಯುಗವೆಂದೇ ಕರೆಯುವುದು ವಾಡಿಕೆ. ಪಂಪಭಾರತದ ಹದಿಮೂರನೆಯ ಆಶ್ವಾಸದ ಕಥೆಯಾದ ಗದಾಯುದ್ಧವನ್ನು ತನ್ನ ಕಾವ್ಯದ ವಸ್ತುವಾಗಿ ಇಟ್ಟುಕೊಂಡ ಕವಿರನ್ನ (993) ತನ್ನ ಸಾಹಸಭೀಮ ವಿಜಯವನ್ನು ರಚಿಸಿದ. ಆತ ತನ್ನ ಕಾವ್ಯದಲ್ಲಿ ಪಂಪನಿಂದ ಹಲವು ವಾಕ್ಯಗಳನ್ನು

ಉಂಡುಂಡೆಯಾಗಿ ತೆಗೆದು ಬಳಸಿಕೊಳ್ಳುತ್ತ ಅಲ್ಪಸ್ವಲ್ಪ ವ್ಯತ್ಯಾಸ ಮಾಡಿ ಆ ವಾಕ್ಯಗಳ ಅರ್ಥ ಸ್ವಾರಸ್ಯವನ್ನು ಹೆಚ್ಚಿಸುತ್ತಾನೆ.

ಡಾ॥ಶೀಲ : ರನ್ನನಂಥ ಪ್ರತಿಭಾಸಂಪನ್ನನಾದ ವಾಗ್ವಿದಗ್ಧ ಪಂಪನನ್ನು ವಿಶೇಷವಾಗಿ ಗೌರವಿಸುವುದು ಪಂಪನ ಹಿರಿಮೆಗೂ ರನ್ನನ ಕಾವ್ಯರಸಿಕತೆಗೂ ಉತ್ತಮ ಸಾಕ್ಷಿಯಾಗಿದೆ. ರನ್ನನ ಗದಾಯುದ್ಧ ಒಂದು ಅಪೂರ್ವವಾದ ರಸಘಟ್ಟಿ. ಅವನ ವಾಗ್ವಿಲಾಸ ಕೊಂಡಾಡುವಂಥಾದ್ದು. ತನ್ನ ಕಾವ್ಯಕ್ಕೆ ಭೀಮಧುರ್ಯೋಧನರ ಗದಾ ಯುದ್ಧವನ್ನೇ ಕಥಾವಸ್ತುವಾಗಿ ಆಯ್ದು ಕೊಂಡಿದ್ದರೂ ಸಿಂಹಾವಲೋಕನ ಕ್ರಮದಿಂದ ಇಡೀ ಭಾರತ ಕಥೆಯನ್ನೇ ವರ್ಣಿಸಿರುವುದಾಗಿ ರನ್ನ ಹೇಳಿಕೊಂಡಿದ್ದಾನೆ.

ಡಾ॥ರಾಮು : ಈ ಕಾವ್ಯದ ಅನೇಕ ಪಾತ್ರಗಳು ಮತ್ತೆ ಮತ್ತೆ ತಮ್ಮ ಹಿಂದಿನ ದಿನಗಳ ಘಟನೆಗಳನ್ನು ಪ್ರಸ್ತಾಪಿಸಿರುವುದರಿಂದ ಪೂರ್ವಕಥೆಯೆಲ್ಲ ಮತ್ತೆ ಮತ್ತೆ ಓದುಗರ ಮನಸ್ಸಿನಲ್ಲಿ ಚಿತ್ರಿತವಾಗಿದೆ. ರನ್ನನ ಸಂಭಾಷಣಾ ಶೈಲಿ ಗದಾಯುದ್ಧದಲ್ಲಿ ಬಹಳ ಚೆನ್ನಾಗಿ ಪ್ರಕಟವಾಗಿದೆ. ಆದ್ದರಿಂದಲೇ ಶ್ರೀಯವರು ರನ್ನನ ಮಾತುಗಳನ್ನೆ ಆರಿಸಿಕೊಂಡು ಗದಾಯುದ್ಧ ನಾಟಕವನ್ನು ರೂಪಿಸಲು ಸಾಧ್ಯವಾಯಿತು.

ಡಾ॥ಶೀಲ : ಅರ್ಥೋಚಿತವಾದ ಪದ ಪ್ರಯೋಗ, ಪಾತ್ರಚಿತ್ರಣ, ಸನ್ನಿವೇಶ ಕಲ್ಪನೆ, ವೀರ್ಯವತ್ತಾದ ಶೈಲಿ, ವೀರ, ರೌದ್ರ, ಭಯಾನಕ, ಭೀಭತ್ಸಾದಿರಸಗಳ ಪ್ರತಿಪಾದನೆ ರನ್ನಕವಿಯ ಸೊತ್ತು.
ಪಂಪನಿಗೆ ನಮ್ರತೆ ಹೆಚ್ಚಾದರೆ ರನ್ನನಿಗೆ ಆತ್ಮಪ್ರತ್ಯಯ ಹೆಚ್ಚು.
ತನ್ನ ಕವಿತಾಶಕ್ತಿಯನ್ನು ರನ್ನ ಧಾರಾಳವಾಗಿ ಹೊಗಳಿಕೊಂಡಿದ್ದಾನೆ. ಬಂಡವಾಳವಿಲ್ಲದ ಬಡಾಯಿ ರನ್ನನ ಲಕ್ಷಣವಲ್ಲ.
ಅವನಿಗೆ ತನ್ನ ಶಕ್ತಿಯ ಸಂಪೂರ್ಣವಾದ ಅರಿವಿತ್ತು. ಅದನ್ನು ಸ್ಪಷ್ಟೋಕ್ತಿಯಿಂದ ಹೇಳಿಕೊಳ್ಳಲು ಆತ ಹಿಂಜರಿದಿಲ್ಲ.
ಡಾ॥ರಾಮು : ರನ್ನನ ಅಜಿತತೀರ್ಥಂಕರ ಪುರಾಣತಿಲಕ ಕನ್ನಡ ಸಾಹಿತ್ಯದಲ್ಲಿ ಗಣ್ಯಸ್ಥಾನವನ್ನು ಪಡೆದ ಕಾವ್ಯ. ಇದರಲ್ಲಿ ರನ್ನನ ವೈರಾಗ್ಯೋಪದೇಶ ಸಾಮರ್ಥ್ಯ ಸುವ್ಯಕ್ತವಾಗಿದೆ. ಕವಿ ದೇಹಾನಿತ್ಯತೆಯನ್ನು ವರ್ಣಿಸುವಾಗ ಎಂಥ ಭೋಗಾಭಿಲಾಷಿಯಾದರೂ ಗಾಬರಿಗೀಡಾಗಿ ದುಃಖಿಸಿಯಾನು ! ಅಜಿತಪುರಾಣ ಪುರಾಣತಿಲಕ ವಾಗಿರುವಂತೆ ಉತ್ತಮ ಕಾವ್ಯವೂ ಆಗಿದೆ. ಈ ಎರಡು ಶ್ರೇಷ್ಠ ಕೃತಿಗಳು ಕವಿರನ್ನನ ಕೀರ್ತಿಸ್ತಂಭಗಳಂತೆ ಹೊಳೆಯುತ್ತವೆ.
ಡಾ॥ಶೀಲ : ಈ ಕಾಲದ ಇನ್ನೊಬ್ಬ ಕವಿ ಪೊನ್ನ (ಸು. 950), ಪಂಪನ ಸಮಕಾಲೀನ ಇದ್ದರೂ ಇರಬಹುದು. ಈತ ತನ್ನ ಕಾವ್ಯದಲ್ಲಿ ಬೇರೆ ಯಾವ ಕನ್ನಡ ಕವಿಯ ಹೆಸರನ್ನೂ ಸ್ಮರಿಸಿಲ್ಲ. ರನ್ನ ಮಾತ್ರ ಪಂಪ ಪೊನ್ನ ರಿಬ್ಬರನ್ನೂ ಹೊಗಳಿದ್ದಾನೆ. ಈ ಮೂವರು ಕವಿಗಳನ್ನೂ ಕನ್ನಡದ ರತ್ನತ್ರಯರೆಂದು ಹೇಳುವುದು ವಾಡಿಕೆ.
ಡಾ॥ರಾಮು : ಪೊನ್ನ ಶಾಂತಿಪುರಾಣ ಮತ್ತು ಭುವನೈಕರಾಮಾಭ್ಯುದಯ ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. ಮೊದಲ ಕೃತಿ ದೊರೆತಿದೆ. ಎರಡನೆಯದು ಸಿಕ್ಕಿಲ್ಲ. ಇವನನ್ನು ಕುರುಳ್ಗಳಸವಣ ಎಂದು ಕರೆಯು ತ್ತಿದ್ದರೆಂದು ತಿಳಿಯುವುದರಿಂದ ಇವನು ಯತಿಯಾಗಿದ್ದರೂ ಇರಬಹುದು. ಈತ ತನ್ನ ಹಿರಿಮೆಯನ್ನು ಹೊಗಳಿಕೊಳ್ಳುತ್ತ ತಾನು ಕಾಳಿದಾಸನಿಗೆ ನೂರ್ಮಡಿ ಎಂದು ಹೇಳಿಕೊಂಡಿದ್ದಾನೆ. ಆದರೆ ಇದು ಸಲ್ಲದ ಮಾತು.

ಡಾ॥ಶೀಲ : ಕಾಳಿದಾಸನ ರಘುವಂಶದ ಕೆಲವು ಶ್ಲೋಕಗಳನ್ನು ಅನುವಾದ ಮಾಡಲು ಯತ್ನಿಸಿದ್ದನಾದರೂ ಆ ಮಹಾಕವಿಯ ವಾಕ್‌ಕೌಶಲ, ಅರ್ಥ ಗಾಂಭೀರ್ಯ, ಪೊನ್ನನಲ್ಲಿ ಸುತರಾಂ ಕಾಣಿಸುವುದಿಲ್ಲ. ಪಂಪರನ್ನರ ಸಾಲಿಗೆ ಸೇರಿಸಿದ್ದರಿಂದ ಪೊನ್ನನಿಗೆ ಸಲ್ಲದ ಪೂಜ್ಯತೆ ಲಭಿಸಿದೆಯೆಂದು ಹೇಳಿದರೆ ತಪ್ಪಲ್ಲ. ಪೊನ್ನ ಕವಿ ಗಮಕಿವಾದಿವಾಗ್ಮಿಗಳ ದರ್ಪವನ್ನು ಅಡಗಿಸಬಲ್ಲ ಪಂಡಿತನಾಗಿದ್ದಿರಬಹುದೇ ಹೊರತು ಪ್ರತಿಭಾವಂತನಾದ ಹುಟ್ಟು ಕವಿಯಲ್ಲ.

ಡಾ॥ರಾಮು : ಈ ಶತಾಬ್ದದ ಇನ್ನೊಬ್ಬ ಹಿರಿಯ ಕವಿ ಮೊದಲನೆಯ ನಾಗವರ್ಮ (ಸು. 990). ಇದನ್ನು ಬಾಣಭಟ್ಟನ ಮೇರುಕೃತಿಯಾದ ಕಾದಂಬರಿಯನ್ನು ಯಶಸ್ವಿಯಾಗಿ ಕನ್ನಡಿಸಿದ್ದಾನೆ. ಮೂಲ ಗದ್ಯಗ್ರಂಥವಾದರೂ ನಾಗವರ್ಮ ಅದನ್ನು ಗದ್ಯ ಪದ್ಯಾತ್ಮಕವಾದ ಚಂಪೂ ರೂಪದಲ್ಲಿ ಬರೆದು ಜನಪ್ರಿಯವಾಗಿಸಿದ್ದಾನೆ.

ಡಾ॥ಶೀಲ : ನಾಗವರ್ಮನ ಕಥನಕೌಶಲ ಕೊಂಡಾಡುವಂಥದ್ದು. ಸ್ವಾತಂತ್ರ್ಯ ವಹಿಸಿ ಮೂಲಕಥೆಯಲ್ಲಿ ಯಾವ ಬದಲಾವಣೆಯನ್ನೂ ಮಾಡುವ ಗೋಜಿಗೆ ಆತ ಹೋಗಿಲ್ಲ. ಅನೇಕ ದೀರ್ಘ ವರ್ಣನೆಗಳನ್ನು ಸಂಕ್ಷೇಪ ಗೊಳಿಸಿ ಕಾವ್ಯದ ಅಂದವನ್ನು ಹೆಚ್ಚಿಸಿದ್ದಾನೆ. ಈತನ ಪದ್ಯಗಳು ಬಹಳ ಹೃದ್ಯವಾಗಿವೆ. ಅನಿವಾರ್ಯವಾಗಿ ಈ ಕೃತಿಯಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚಾಗಿದೆ. ಆದರೆ ಅದು ದುರ್ಬೋಧವಾದ ಅಪ್ರಸಿದ್ಧ ಪದ ಪ್ರಯೋಗ ವಲ್ಲ. ಪಾಂಡಿತ್ಯ ಪ್ರದರ್ಶನದ ಚಟ ನಾಗವರ್ಮನಿಗೆ ಇಲ್ಲ. ಮೂಲಕೃತಿಯ ಕಥಾಸ್ವಾರಸ್ಯಕ್ಕಾಗಲಿ ಸನ್ನಿವೇಶ ಸೌಂದರ್ಯಕ್ಕಾಗಲಿ ಸ್ವಲ್ಪವೂ ಚ್ಯುತಿ ಬರದಂತೆ ಈ ಪಂಡಿತಕವಿ ಅನುವಾದ ಕಾರ್ಯವನ್ನು ನಿರ್ವಹಿಸಿ ಮುಂದಿನ ಕವಿಗಳಿಗೆ ಈ ಕ್ಷೇತ್ರದಲ್ಲಿ ಮಾರ್ಗದರ್ಶಕನಾಗಿದ್ದಾನೆ.

ಡಾ॥ರಾಮು : ನಾಗವರ್ಮನ ಇನ್ನೊಂದು ಕೃತಿ ಛಂದೋಂಬುಧಿ. ಕನ್ನಡ ಛಂದಸ್ಸನ್ನು ಹೇಳುವ ಮೊತ್ತ ಮೊದಲನೆಯ ಗ್ರಂಥ. ಪಿಂಗಳಾಚಾರ್ಯನನ್ನೂ ಜಯದೇವ ಎಂಬ ಸಂಸ್ಕೃತ ಛಂದಶ್ಯಾಸ್ತ್ರಕಾರನನ್ನೂ ಅನುಸರಿಸಿ ಬರೆದಿರುವುದಾಗಿ ನಾಗವರ್ಮನೇ ಹೇಳಿಕೊಂಡಿದ್ದಾನೆ. ಇದು ಆರು ಅಧಿಕಾರಗಳುಳ್ಳ ಗ್ರಂಥ. ಇದರಲ್ಲಿ ಸಂಸ್ಕೃತದ ಸಮವೃತ್ತ, ಅರ್ಧ ಸಮವೃತ್ತ ವಿಷಮವೃತ್ತ–ಮೊದಲಾದ ಪದ್ಯಜಾತಿಗಳ ಲಕ್ಷಣಗಳನ್ನೂ ಕನ್ನಡ ಪದ್ಯಜಾತಿಯ ಲಕ್ಷಣಗಳನ್ನೂ ಹೇಳಿದೆ.

ಡಾ॥ಶೀಲ : ಈ ಕವಿ ವೆಂಗಿಮಂಡಲದ ವೆಂಗಿಮಿ ಎಂಬ ಗ್ರಾಮದ ವೆಣ್ಣಮಯ್ಯನ ಮಗ. ತನ್ನನ್ನು ಈತ ನಾಕಿ, ಸೈಯಡಿಯಾತಂ ಎಂದೂ ಹೇಳಿಕೊಂಡಿದ್ದಾನೆ. ಈತ ಕವಿ ಮಾತ್ರನಲ್ಲದೆ ಯುದ್ಧ ವೀರನೂ ಆಗಿದ್ದನೆಂದು ಅವನ ಮಾತಿನಿಂದ ಊಹಿಸಬಹುದುದಾಗಿದೆ. ಶಾಸ್ತ್ರಗ್ರಂಥವನ್ನು ಈ ಕವಿ ಪದ್ಯಗಳಿಂದ ಕೂಡಿದ ಚಂಪೂ ಶೈಲಿಯಲ್ಲಿಯೇ ಬರೆದಿರುವುದು ಆ ಕಾಲದ ಕವಿಗಳಿಗೆ ಪದ್ಯದ ಮೇಲಿದ್ದ ಪಕ್ಷಪಾತವನ್ನು ತೋರಿಸುತ್ತದೆ.

ಡಾ॥ರಾಮು : ಈ ಕಾಲದಲ್ಲಿ ಹೆಚ್ಚಾಗಿ ಚಂಪೂಕೃತಿಗಳೇ ಹುಟ್ಟಿವೆಯಾದರೂ ಗದ್ಯಗ್ರಂಥಗಳೂ ಇಲ್ಲದೆ ಹೋಗಿಲ್ಲ. ಶಿವಕೋಟ್ಯಾಚಾರ್ಯನೆಂಬ ಜೈನಕವಿ ವಡ್ಡಾರಾಧನೆ ಎಂಬ ಅತಿ ಶ್ರೇಷ್ಠವಾದ ಗದ್ಯಕೃತಿಯನ್ನು ರಚಿಸಿದ್ದಾನೆ. ಇವನು ಪಂಪನ ಸಮಕಾಲೀನನೋ ಅಥವಾ ಅವನಿಗಿಂತ ಕೊಂಚ ಹಿಂದಿನವನೊ ಇದ್ದಿರಬೇಕು.

ಡಾ॥ಶೀಲ : ಈತನ ಕೃತಿಯಲ್ಲಿ ಪೂರ್ವದ ಹಳಗನ್ನಡ ಶಬ್ದರೂಪಗಳು ಹೆಚ್ಚಾಗಿವೆ. ವಡ್ಡಾರಾಧನೆ ಉಪ ಸರ್ಗ ಕೇವಲಿಗಳ ಪುಣ್ಯಕಥೆಗಳನ್ನೊಳಗೊಂಡ ಪುಣ್ಯಗ್ರಂಥ. ಜೈನಧರ್ಮದ ಹಿರಿಮೆಯನ್ನು ಹೊಗಳುವ ಈ ಕೃತಿಯಲ್ಲಿ ಅನೇಕ ಕಥೆ ಉಪಕಥೆಗಳು ಸೇರಿಕೊಂಡು ಓದುಗರ ಮನಸ್ಸು ಹೃದಯಗಳನ್ನು ಒಲಿಸಿ ನಲಿಸುವ ದೊಡ್ಡ ಕಥಾಕೋಶದಂತೆ ಇದೆ. ನಮಗೆ ದೊರೆತಿರುವ ಕನ್ನಡ ಗದ್ಯಕೃತಿಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದದ್ದು.

ಡಾ॥ರಾಮು : ಈ ಶತಾಬ್ದದ ಇನ್ನೊಂದು ಗದ್ಯಕೃತಿ ಚಾವುಂಡರಾಯ (978) ರಚಿಸಿದ ತ್ರಿಷಷ್ಟಿಲಕ್ಷಣ ಮಹಾಪುರಾಣ. ಇದಕ್ಕೆ ಚಾವುಂಡರಾಯ ಪುರಾಣವೆಂದೇ ಹೆಸರು. ಜಿನಭದ್ರಗುಣಸೇನಾಚಾರ್ಯರ ಪೂರ್ವಪುರಾಣ ಮತ್ತು ಉತ್ತರಪುರಾಣಗಳಲ್ಲಿ ಹೇಳಿರುವ ಅರವತ್ತು ಮೂವರು ಶಲಾಕಾಪುರುಷರ ಕಥೆಗಳನ್ನು ಚಾವುಂಡರಾಯ ಗದ್ಯದಲ್ಲಿ ಹೇಳಿದ್ದಾನೆ. ಆದರೆ ಇದು ಶಿವಕೋಟ್ಯಾಚಾರ್ಯನ ಕೃತಿಯಂತೆ ರಸವತ್ತಾಗಿಲ್ಲ. ಇದರಲ್ಲಿ ಕವಿ ಪಂಪನ ಆದಿಪುರಾಣದಿಂದಲೂ ರನ್ನನ ಅಜಿತಪುರಾಣದಿಂದಲೂ ಅನೇಕ ಪದಪುಂಜಗಳನ್ನು ಉಂಡುಂಡೆಯಾಗಿ ತೆಗೆದುಕೊಂಡಿರುವುದು ಕಾಣುತ್ತದೆ. ವಡ್ಡಾರಾಧನೆ ದೊರೆಯುವ ಮುನ್ನ ಇದೇ ಅತ್ಯಂತ ಪ್ರಾಚೀನ ಕನ್ನಡ ಗದ್ಯ ಗ್ರಂಥವೆಂಬ ಪ್ರಶಸ್ತಿಯನ್ನು ಪಡೆದಿತ್ತು.

ಡಾ॥ರಾಮು : ಚಾವುಂಡರಾಯ ಗಂಗರಾಜ ರಾಚಮಲ್ಲ ಸತ್ಯವಾಕ್ಯನಲ್ಲಿ ಅಮಾತ್ಯನಾಗಿಯೂ ಸೇನಾಪತಿ ಯಾಗಿಯೂ ಇದ್ದು ಕೀರ್ತಿವಂತನಾದ ಧರ್ಮಾಭಿಮಾನಿ. ಶ್ರವಣಬೆಳಗೊಳದ ಗೊಮ್ಮಟೇಶ್ವರನ ವಿಗ್ರಹವನ್ನು ಸ್ಥಾಪಿಸಿದವ ಇವನೇ. ದೊರೆ ಇವನ ಔದಾರ್ಯವನ್ನೂ ಪರಾಕ್ರಮವನ್ನೂ ಮೆಚ್ಚಿಕೊಂಡು ಇವನಿಗೆ ರಾಯ ಎಂಬ ಬಿರುದನ್ನು ಕೊಟ್ಟು ಗೌರವಿಸಿದ.

ಡಾ॥ಶೀಲ : ಕವಿ ರನ್ನನಿಗೆ ಬಹಳ ಸಹಾಯ ಮಾಡಿದ ಯಶಸ್ಸು ಚಾವುಂಡರಾಯನದು. ಇವನನ್ನು ಕವಿಗಳು ಅಕ್ಕರೆಯಿಂದ ಅಣ್ಣ ಎಂದು ಕರೆದಿದ್ದಾರೆ. ಇವನು ಸ್ವಯಂ ಲೇಖಕನೂ ಕವಿಪೋಷಕನೂ ಆಗಿದ್ದು ಕನ್ನಡ ಕಾವ್ಯದೇವಿಯ ರಥವನ್ನು ಮುಂದಕ್ಕೆ ನಡೆಸಿದ ಭಾಷಾಭಿಮಾನಿಯೆನಿಸಿದ್ದಾನೆ.

ಡಾ॥ರಾಮು : ಹನ್ನೊಂದನೆಯ ಶತಾಬ್ದದಲ್ಲಿ ಹಲವು ಕವಿಗಳ ಹೆಸರುಗಳನ್ನು ಕೇಳುತ್ತೇವೆ. ಆದರೆ ಅವರ ಕಾವ್ಯಗಳು ಲಭಿಸಿಲ್ಲ. ಗಜಾಂಕುಶ, ಮನಸಿಜ, ಚಂದ್ರಭಟ್ಟ, ನಾರಾಯಣಭಟ್ಟ ಈ ಕಾಲದವರು. ಕೊನೆಯ ಕವಿಯ ಹೆಸರನ್ನು ತೆಲುಗು ಸಾಹಿತ್ಯದ ಮೊದಲ ಕವಿಯಾದ ನನ್ನಯ ಭಟ್ಟ ಹೊಗಳಿದ್ದಾನೆ.

ಡಾ॥ಶೀಲ : ಈ ಶತಾಬ್ದದ ಹಿರಿಯ ಕವಿಗಳಲ್ಲಿ ಚಾವುಂಡರಾಯ (1150) ನೆಂಬುವನು ಲೋಕೋಪಕಾರ ಎಂಬ ಶಾಸ್ತ್ರಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ಜ್ಯೋತಿಷ್ಯದಿಂದ ಹಿಡಿದು ವಿಷವೈದ್ಯವರೆಗೆ ಹಲವು ಉಪಯುಕ್ತ ವಿಷಯಗಳಿದ್ದು ಲೋಕೋಪಕಾರ ಎಂಬ ಅದರ ಹೆಸರನ್ನು ಅನ್ವರ್ಥವಾಗಿಸಿವೆ.

ಡಾ॥ರಾಮು : ಇವನಾದ ಮೇಲೆ ಕಿಸುಕಾಡು ನಾಡಿನ ದುರ್ಗಸಿಂಹನೆಂಬ (ಸು. 1145) ಇನ್ನೊಬ್ಬ ಬ್ರಾಹ್ಮಣ ಕವಿ ವಸುಭಾಗಭಟ್ಟನ ಪಂಚತಂತ್ರವನ್ನು ಕನ್ನಡಕ್ಕೆ ತಂದಿದ್ದಾನೆ. ಇದರ ಮೂಲಗ್ರಂಥವಾದ ಸಂಸ್ಕೃತಕೃತಿ ಲಭ್ಯವಾಗಿಲ್ಲವಾದ್ದರಿಂದ ಈ ಕನ್ನಡ ಕೃತಿ ಮೂಲಕ್ಕೆ ಸರಿಯಾದ ಅನುವಾದವೇ ಅಲ್ಲವೇ ಎಂಬುದನ್ನು ನಿರ್ಣಯಿಸಲು ಸಾಧ್ಯವಿಲ್ಲ. ದುರ್ಗಸಿಂಹ ಪಂಪನ ಕೃತಿಗಳನ್ನು ಮೆಚ್ಚಿಕೊಂಡು ಅವನಿಂದ ಪ್ರಭಾವಿತನಾಗಿದ್ದಾನೆ.

ಡಾ॥ಶೀಲ : ಹುಲಿ, ಜಿಂಕೆ, ನರಿ ಮೊದಲಾದ ವನ್ಯಜಂತುಗಳ ಕಥೆಗಳನ್ನೇ ಹೆಚ್ಚಾಗಿ ಹೇಳುತ್ತಿದ್ದರೂ ಪಂಚತಂತ್ರದ ತತ್ತ್ವನೀತಿಗಳೆಲ್ಲ ಮಾನವರ ವರ್ತನೆಗೆ ಸಂಬಂಧಿಸಿದುವೇ ಆಗಿದೆ. ದುರ್ಗಸಿಂಹ ಚಂಪೂಕವಿ ಯಾದರೂ ಅವನ ಕೃತಿಯಲ್ಲಿ ಬಹಳ ಸರಳವಾದ ಗದ್ಯವಿದೆ. ಕನ್ನಡ ಗದ್ಯ ಬೆಳವಣಿಗೆಯಲ್ಲಿ ಪಂಚತಂತ್ರ ಒಂದು ಮುಖ್ಯವಾದ ಹಂತ. ಇದರಲ್ಲಿ ಕವಿ ಗದ್ಯವನ್ನು ಪಾಂಡಿತ್ಯ ಪ್ರದರ್ಶನಕ್ಕೆ ಬಳಸಿಕೊಳ್ಳದೆ ಅರ್ಥವ್ಯಕ್ತಿ, ವಿಚಾರ ನಿರೂಪಣೆ, ಕಥನ ನಿರೂಪಣೆಗಳಿಗೆ ಬಳಸಿದ್ದಾನೆ.

ಡಾ॥ರಾಮು : ಜಾತಕತಿಲಕವೆಂಬ ಜ್ಯೋತಿಷ್ಯ ಗ್ರಂಥವನ್ನು ಬರೆದ ಶ್ರೀಧರಾಚಾರ್ಯ ಈ ಶತಮಾನದವರೆ. ಛಂದಸ್ಸಿನ ಅಗತ್ಯಗಳಿಗಾಗಿ ಪಾದಪೂರಣಾದಿಗಳನ್ನು ಬಳಸದೆ ಶಾಸ್ತ್ರಾರ್ಥವನ್ನು ಕುಂದಿಲ್ಲದೆ ನಿರೂಪಿಸಿ ರುವೆನೆಂದು ಹೇಳಿ ಕವಿ ಚಂಪೂರೂಪದಲ್ಲಿ ಸಮಗ್ರ ಗ್ರಂಥವನ್ನು ನಿರ್ವಹಿಸಿದ್ದಾನೆ.

ಡಾ||ಶೀಲ : ಅಭಿನವ ಪಂಪನೆಂಬ ಬಿರುದು ಧರಿಸಿದ ನಾಗಚಂದ್ರ (ಸು. 1100) ಈ ಶತಾಬ್ದದ ಅತ್ಯಂತ ಮುಖ್ಯ ಕವಿಯೆನ್ನಬೇಕು. ಮಲ್ಲಿನಾಥಪುರಾಣ ಮತ್ತು ರಾಮಚಂದ್ರ ಚರಿತ ಪುರಾಣ ಎಂಬ ಎರಡು ಚಂಪೂಕಾವ್ಯಗಳನ್ನು ಈತ ರಚಿಸಿದ್ದಾನೆ. ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿದೇವನ ಚರಿತ್ರೆಯೇ ಮಲ್ಲಿನಾಥಪುರಾಣ. ಶ್ವೇತಾಂಬರ ಸಂಪ್ರದಾಯದ ಪ್ರಕಾರ ಮಲ್ಲಿ ಹೆಂಗಸು ; ರಾಜಕುಮಾರಿ, ಅತ್ಯಂತ ಸುಂದರಿಯಾದ ಮಲ್ಲಿಯನ್ನು ಮದುವೆಯಾಗ ಬಯಸಿ ತನ್ನ ತಂದೆಯ ಮೇಲೆ ದಂಡೆತ್ತಿ ಬಂದ ಐದಾರು ರಾಜರನ್ನು ಮಲ್ಲಿ ಉಪಾಯವಾಗಿ ಸಮಾಧಾನಪಡಿಸಿ ಬರಮಾಡಿಕೊಂಡು ದೇಹ ಅಶಾಶ್ವತ, ಅನೇಕ ಕಲ್ಮಷಗಳ ನೆಲೆ, ಹೊರಗಿನ ಆಕಾರ ನೋಡಿ ಮೋಹಿಸಬಾರದು ಎಂದು ಉಪದೇಶ ಮಾಡಿ ಅವರಿಗೆ ಜಿನದೀಕ್ಷೆ ಕೊಡಿಸಿ ತಾನೂ ಜಿನದೀಕ್ಷೆ ವಹಿಸಿದಳಂತೆ ! ನಾಗಚಂದ್ರ ಕವಿಯ ಧರ್ಮಾನುರಾಗ, ಜಿನಭಕ್ತಿ ಈ ಕೃತಿಯಲ್ಲಿ ಉಜ್ಜ್ವಲವಾಗಿ ಪ್ರಕಟವಾಗಿವೆ.

ಡಾ||ರಾಮು : ಪಂಪರಾಮಾಯಣವೆಂದೇ ಹೆಸರಾಗಿರುವ ಇವನ ಇನ್ನೊಂದು ಕೃತಿ ರಾಮಚಂದ್ರ ಚರಿತ ಪುರಾಣ ಜೈನ ಸಂಪ್ರದಾಯಾನುಗುಣವಾದ ರಾಮಕಥೆ. ವಾಲ್ಮೀಕಿ ರಾಮಾಯಣಕ್ಕೂ ಇದಕ್ಕೂ ಅನೇಕ ವ್ಯತ್ಯಾಸಗಳಿವೆ. ಇದರ ಪ್ರಕಾರ ರಾವಣನನ್ನು ಕೊಂದವನು ಲಕ್ಷ್ಮಣನೇ ಹೊರತು ರಾಮನಲ್ಲ. ಸುಗ್ರೀವ, ಆಂಜನೇಯ ಮೊದಲಾದ ವೀರರು ಕಪಿಧ್ವಜರೇ ಹೊರತು ಕಪಿಗಳಲ್ಲ. ರಾಮಲಕ್ಷ್ಮಣರಿಗೇ ಅಲ್ಲದೆ ಆಂಜನೇಯನಿಗೂ ಈ ರಾಮಾಯಣದಲ್ಲಿ ಹಲವು ಮದುವೆಗಳಾಗುತ್ತವೆ. ಈ ಕಾವ್ಯದ ಎಲ್ಲ ಪಾತ್ರಗಳೂ ಜೈನರು. ಕೊನೆಯಲ್ಲಿ ಶ್ರೀರಾಮನೂ ಜಿನದೀಕ್ಷೆ ಸ್ವೀಕರಿಸಿ ತಪಸ್ಸಿನಿಂದ ಕೈವಲ್ಯ ಹೊಂದುತ್ತಾನೆ.

ಡಾ||ಶೀಲ : ನಾಗಚಂದ್ರ ಮೃದುಪದಬಂಧಕ್ಕೆ ಹೆಸರಾದ ಕವಿ. ಈತನ ಕವಿತಾಶೈಲಿ ಆಮೇಲಿನ ಅನೇಕ ಕವಿ ಗಳಿಗೆ ಆದರ್ಶವಾಯಿತು. ಹನ್ನೊಂದನೆಯ ಶತಾಬ್ದಿಯನ್ನು ಅಭಿನವ ಪಂಪನ ಯುಗವೆಂದೇ ಹೇಳಿದರೂ ಸಲ್ಲುತ್ತದೆ. ಇವನ ಜೊತೆಯಲ್ಲಿ ಕಂತಿಯೆಂಬ ಒಬ್ಬ ಕಬ್ಬಿಗಿತಿಯಿದ್ದಳೆಂದು ದೋರಸಮುದ್ರದ ರಾಜಸಭೆಯಲ್ಲಿ ಸಮಸ್ಯಾಪೂರಣ ಮಾಡುತ್ತಿದ್ದಾಳೆಂದೂ ಒಂದು ಕಥೆಯಿದೆ. ಕಂತಿ ಹಂಪನ ಸಮಸ್ಯೆಗಳು ಎಂದು ಒಂದು ಗ್ರಂಥವೂ ದೊರೆತಿದೆ. ಆದರೆ ಕಂತಿಯೆಂಬುದು ಜೈನಸಂನ್ಯಾಸಿಯ ಹೆಸರು. ಇದು ಒಂದು ವ್ಯಕ್ತಿಯ ಹೆಸರಿನಂತೆ ತೋರುವುದಿಲ್ಲ. ಈ ಸಮಸ್ಯಾಪೂರಣ ಸಂಸ್ಕೃತ ಕವಿಗಳಿಗೆ ಬಹಳ ಪ್ರಿಯವಾದ ಹವ್ಯಾಸ. ಈ ಕಟ್ಟುಕಥೆಗಳ ಆಧಾರದ ಮೇಲೆ ಕಂತಿಯೆಂಬ ಕಬ್ಬಿಗಿತಿಯಿದ್ದಳೆಂದು ನಂಬುವುದು ಕಷ್ಟ. ಈಗ ಉಪಲಬ್ಧ ವಾಗಿರುವ ಕಂತಿ ಪಂಪರ ಸಮಸ್ಯೆಗಳು ಎಂಬ ಪುಸ್ತಕದ ಕರ್ತೃ ಯಾರೋ ಯಾವ ಕಾಲದವನೋ ತಿಳಿಯದು.

ಡಾ||ರಾಮು : ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಬಹಳ ಮುಖ್ಯವಾದ ಕಾಲ. ಈ ಕಾಲದಲ್ಲಿ ಹಳೆಯ ಸಂಪ್ರದಾಯದಂತೆ ಚಂಪೂಕಾವ್ಯಗಳನ್ನು ರಚಿಸಿದವರು ಅನೇಕರಿದ್ದಾರೆ. ಕಾವ್ಯವಸ್ತು, ಭಾಷೆ, ಛಂದಸ್ಸು, ಯಾವುದಕ್ಕೂ ಸಂಸ್ಕೃತವನ್ನು ಅವಲಂಬಿಸದೆ ಆಡುಮಾತಿಗೆ ಹತ್ತಿರವಾದ ಭಾಷೆಯಲ್ಲಿ ಕೃತಿರಚನೆ ಮಾಡಿದ ವಚನಕಾರರು ಅವತರಿಸಿದದ್ದು ಈ ಶತಮಾನದಲ್ಲಿಯೇ. ಇವರಲ್ಲದೆ ರಗಳೆಯ ಕವಿ ಎಂಬ ಖ್ಯಾತಿಗೆ ಪಾತ್ರನಾದ ಹಂಪೆಯ ಹರಿಹರ ಕವಿ ಅನೇಕ ಶಿವಶರಣರ ಚರಿತ್ರೆಗಳನ್ನು ಬರೆದು ಪ್ರಸಿದ್ಧನಾದದ್ದೂ ಈ ಕಾಲದಲ್ಲಿಯೇ. ಹರಿಶ್ಚಂದ್ರ ಕಾವ್ಯವೇ ಮೊದಲಾದ ಹಲವು ಷಟ್ಪದೀ ಕಾವ್ಯಗಳನ್ನು ಬರೆದು ಆ ಛಂದಸ್ಸನ್ನು ಬಳಕೆಗೆ ತಂದ ರಾಘವಾಂಕ ಕವಿಯೂ ಈ ಶತಮಾನದವನೇ. ಚಂಪೂ, ವಚನ, ರಗಳೆ, ಷಟ್ಪದೀ ಈ ನಾಲ್ಕು ಕಾವ್ಯವಾಹಿನಿಗಳ ಸಂಗಮ ಈ ಶತಾಬ್ದದ ವೈಶಿಷ್ಟ್ಯ.

ಡಾ||ಶೀಲ : ನಯಸೇನನ ಧರ್ಮಾಮೃತ ಪಂಚತಂತ್ರದಂತೆಯೇ ಅನೇಕ ಕಥೆ ಉಪಕಥೆಗಳನ್ನೊಳಗೊಂಡು ಒಂದು ಕಥಾಕೋಶವೇ ಆಗಿದೆ. ಈತ ಹಿಂದಿನ ಜೈನಕವಿಗಳಂತಲ್ಲ. ಸ್ವಧರ್ಮ ಉತ್ಕರ್ಷವನ್ನು ಹೇಳುತ್ತ ಹೇಳುತ್ತ ಅಲ್ಲಲ್ಲಿ ಅನ್ಯಧರ್ಮಗಳನ್ನು ಇತ ಹಾಸ್ಯ ಮಾಡುತ್ತಾನೆ. ಆದರೆ ಈ ಕವಿ ತನ್ನ ಕೃತಿಯಲ್ಲಿ ಉತ್ತಮ ಗದ್ಯರಚನಾ ಕೌಶಲ್ಯವನ್ನು ಮೆರೆದಿದ್ದಾನೆ. ಇವನ ಸರಳ ಶೈಲಿ. ಮೆಚ್ಚುವಂಥಾದ್ದು. ಇವರ ಉಪಮೆಗಳು ಅನೇಕ ವೇಳೆ ಸಾಲುಗಟ್ಟಿ ಬರುತ್ತವೆ. ನಯಸೇನ ಕನ್ನಡದ ಅಭಿಮಾನಿ. ಕನ್ನಡಕ್ಕೆ ಸಂಸ್ಕೃತ ಬೆರೆಸುವುದು ಇವನಿಗೆ ಸಮ್ಮತವಲ್ಲ. ಅನಗತ್ಯವಾದ ಸಂಸ್ಕೃತ ಶಬ್ದಗಳನ್ನು ಬಳಸಿ ಕನ್ನಡದಲ್ಲಿ ಬರೆಯ ಹೊರಡುವುದು ತುಪ್ಪಕ್ಕೆ ಎಣ್ಣೆ ಸೇರಿಸಿದಂತೆ ಆಗುವುದೆಂದು ಅವನ ಹೇಳಿಕೆ. ಆದರೆ ಅಂಡಯ್ಯನಂತೆ ಸಂಸ್ಕೃತ ಪದಗಳನ್ನು ಬಳಸಲೇಬಾರ ದೆಂಬ ಹಟ ನಯಸೇನನಿಗೆ ಇಲ್ಲ. ಸುಲಭವಾಗಿ ಎಲ್ಲರಿಗೂ ತಿಳಿಯುವ ಸಂಸ್ಕೃತ ಮಾತುಗಳ ಬಳಕೆಗೆ ನಯಸೇನನ ವಿರೋಧವಿಲ್ಲ. ಧರ್ಮಾಮೃತ ಜೈನಧರ್ಮದ ತತ್ತ್ವಗಳ ಉತ್ತಮ ಕೈಪಿಡಿಯಂತೆ ಇದೆಯಾದರೂ ಅದೊಂದು ಸುಂದರವಾದ ಕಾವ್ಯ.

ಡಾ||ರಾಮು : ನಯಸೇನ ಆರಂಭಿಸಿದ ಅನ್ಯಧರ್ಮದ ಹಾಸ್ಯ ಈ ಶತಮಾನದ ಬೇರೆ ಕವಿ ಕೃತಿಗಳಲ್ಲಿ ಇನ್ನೂ ವೃದ್ಧಿಯಾಗಿದೆ. ಬ್ರಹ್ಮಶಿವನ ಸಮಯ ಪರೀಕ್ಷೆ ವೃತ್ತವಿಲಾಸನೆಂಬ ಕವಿಯ ಧರ್ಮಪರೀಕ್ಷೆ ಅನ್ಯಮತಗಳನ್ನು ಕುರಿತ ಅಪಹಾಸ್ಯಕ್ಕೆ ಉತ್ತಮ ನಿದರ್ಶನಗಳೆನ್ನಬಹುದು. ಸಮಯ ಪರೀಕ್ಷೆಯಲ್ಲಿ ಆಪ್ತಾಗಮಧರ್ಮವನ್ನೂ ಅನಾಪ್ತಾಗಮ ಧರ್ಮವನ್ನೂ ಹೇಳಿರುವೆನೆಂದು ಕವಿ ತಿಳಿಸಿದ್ದಾನೆ. ಜೈನಧರ್ಮವೇ ಆಪ್ತಾಗಮ ಧರ್ಮ. ಶೈವವೈಷ್ಣವ ಧರ್ಮಗಳೇ ಅನಾಪ್ತಾಗಮಧರ್ಮಗಳು. ಇತರ ಮತಗಳನ್ನು ನಿಂದಿಸುವುದು ತಪ್ಪಲ್ಲವೆಂದೇ ಬ್ರಹ್ಮಶಿವನ ಮತ. ಗ್ರಂಥ ಪದ್ಯರೂಪವಾಗಿದೆ. ಆಡುಮಾತಿನಂತೆ ಸಹಜವೂ ಸರಳವೂ ಆದ ಭಾಷೆಯ ಬಳಕೆ ಬ್ರಹ್ಮಶಿವನ ಶೈಲಿಗೆ ಮೆರುಗು ತಂದಿದೆ.

ಡಾ||ಶೀಲ : ಚಂದ್ರಪ್ರಭಪುರಾಣವನ್ನು ರಚಿಸಿದ ಅಗ್ಗಳದೇವ, ಲೀಲಾದೇವಿ, ಪ್ರಬಂಧಂ ಮತ್ತು ನೇಮಿನಾಥಪುರಾಣಗಳನ್ನು ರಚಿಸಿದ ನೇಮಿಚಂದ್ರ ಮೊದಲಾದ ಜೈನಕವಿಗಳು ಈ ಶತಾಬ್ದದ ಹಿರಿಯ ಕವಿಗಳು. ಇವರ ಪ್ರತಿಭೆ, ಪಾಂಡಿತ್ಯ, ಕಲ್ಪನಾವಿಲಾಸ, ವರ್ಣನಾಕುಶಲತೆಗಳು ಕೊಂಡಾಡುವಂಥವು. ಕೆಲವು ವೇಳೆ ಕಥೆಗಿಂತ ವರ್ಣನೆ ಹೆಚ್ಚು–ಎಂಬ ಆಕ್ಷೇಪಣೆಗೂ ಇವರು ಗುರಿಯಾಗಿದ್ದಾರೆ. ಇವರೂ ಈ ಕಾಲದ ಇತರ ಚಂಪೂ ಕವಿಗಳೂ ಸಂಸ್ಕೃತದಲ್ಲಿ ವಿಶೇಷವಾದ ಪಾಂಡಿತ್ಯಗಳಿಸಿದವರು. ಇವರ ಭಾಷಾಪ್ರಭುತ್ವ ಅತಿಶಯವಾದದ್ದು. ರುದ್ರಭಟ್ಟನೆಂಬ ಬ್ರಾಹ್ಮಣಕವಿ ವಿಷ್ಣುಪುರಾಣದ ಐದನೆಯ ಅಂಶವನ್ನೇ ಆಧಾರ ವಾಗಿಟ್ಟುಕೊಂಡು ರಚಿಸಿದ ಜಗನ್ನಾಥ ವಿಜಯ ಮಹಾಪ್ರೌಢವಾದ ಚಂಪೂಕಾವ್ಯ. ಇದು ಸಂಸ್ಕೃತ ವಿದ್ವಾಂಸರ ಗಮನವನ್ನು ಸೆಳೆದಿದೆ. ಈ ಕಾವ್ಯದ ಮೊದಲ ಪದ್ಯಗಳಿಗೆ ಸಂಸ್ಕೃತ ವ್ಯಾಖ್ಯಾನವೊಂದು ಹುಟ್ಟಿದೆ. ವೈದಿಕ ಪುರಾಣಕಥೆಗಳನ್ನು ಕನ್ನಡದಲ್ಲಿ ಬರೆದ ಕವಿಗಳಲ್ಲಿ ರುದ್ರಭಟ್ಟನೇ ಮೊದಲನೆಯವ. ಈತನ ಕವಿತಾ ವೈಖರಿ ಯನ್ನು ಸಮಕಾಲೀನರು ವಿಶೇಷವಾಗಿ ಮೆಚ್ಚಿಕೊಂಡಿದ್ದರು. ಈತ ಪಂಪನ ಕೃತಿಗಳಿಂದ ಪ್ರಭಾವಿತನಾಗಿದ್ದಾನೆ.

ಡಾ||ರಾಮು : ಈ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ನಡೆಸಿದ ಯಶಸ್ಸು ವೀರಶೈವ ವಚನಕಾರರದು. ಇದುವರೆಗಿನ ಕನ್ನಡ ಕವಿಗಳು ಬಹಳಮಟ್ಟಿಗೆ ಸಂಸ್ಕೃತದಿಂದ ಸಾರಸಂಗ್ರಹಪರಾಯಣ ರಾಗಿದ್ದರು. ಸಂಸ್ಕೃತದ ಗ್ರಂಥಗಳನ್ನು ಅನುವಾದ ಮಾಡುವ ಹವ್ಯಾಸ ಅವರದು. ಛಂದಸ್ಸು ಸಂಸ್ಕೃತದ್ದು. ಬಳಸುವ ಭಾಷೆಯಲ್ಲಿಯೂ ಸಂಸ್ಕೃತ ಪದಗಳ ಆಧಿಕ್ಯವಿತ್ತು. ವಸ್ತು, ರೀತಿ ಭಾಷೆ, ಶಬ್ದಸಂಪತ್ತು–ಎಲ್ಲಕ್ಕೂ ಚಂಪೂಕವಿಗಳು ಸಂಸ್ಕೃತದ ಕಡೆಗೇ ನೋಡುತ್ತಿದ್ದರು. ವಚನಕಾರರು ಈ ಪರಾವಲಂಬನವನ್ನು ತೊರೆದರು.

ಅವರ ವಚನಗಳು ಬೇರೆ ಯಾವ ಕವಿ ಕೃತಿಗಳ ಅನುವಾದಗಳೂ ಅಲ್ಲ. ಮತ ಪ್ರಚಾರ ತತ್ತ್ವೋಪದೇಶ, ನೀತಿ ನಿರೂಪಣೆಗಳ ಉದ್ದೇಶದಿಂದ ಶಿವಶರಣರು ಈ ಕಾಲದಲ್ಲಿ ತಮ್ಮ ಅನೇಕ ವಚನಗಳನ್ನು ರಚಿಸಿದರು. ಅವು ಬಹುಮಟ್ಟಿಗೆ ಆಶು ಕವಿತೆಗಳಂತೆ ಕಾಣುತ್ತವೆ. ಶರಣರು ತಾವು ಬದುಕಿನಲ್ಲಿ ಕಂಡ ಅನೇಕ ಅನ್ಯಾಯಗಳನ್ನು ಪ್ರತಿಭಟಿಸಲು ಆವೇಶದಿಂದ ಮಾತನಾಡಿದ್ದಾರೆ. ಶರಣರು ಭಕ್ತಿಯ ಭರದಲ್ಲಿ ಮಾಡಿದ ಉಪದೇಶ ವಾಕ್ಯಗಳನ್ನು ಶ್ರೋತೃಗಳಾದ ಭಕ್ತರು ಬರೆದಿಟ್ಟರೆಂದು ತೋರುತ್ತದೆ.

ಡಾ॥ಶೀಲ : ಜೇಡರದಾಸಿಮಯ್ಯನೆಂಬ ಭಕ್ತಾಗ್ರೇಸರನೇ ವಚನಕಾರರಲ್ಲಿ ಮೊದಲನೆಯವನೆಂದು ತಿಳಿಯುತ್ತದೆ. ಈತ ಬಸವಣ್ಣನಿಗಿಂತ ಪ್ರಾಚೀನನೇ ಇರಬಹುದು. ರಾಮನಾಥ ಎಂಬ ಅಂಕಿತವನ್ನು ಬಳಸುವ ಈ ಶರಣ ಶಿವಭಕ್ತಿಯ ಹಿರಿಮೆಯನ್ನು ಹೃದ್ಯವಾದ ಶೈಲಿಯಲ್ಲಿ ನಿರೂಪಿಸಿದ್ದಾನೆ. ಆದರೆ ವಚನ ಸಾಹಿತ್ಯ ಹೆಚ್ಚು ಬಳಕೆಗೆ ಬಂದು ಪ್ರಸಿದ್ಧವಾದದ್ದು ಕಲ್ಯಾಣದ ಬಿಜ್ಜಳನ ಭಂಡಾರಿಯಾಗಿದ್ದ ಬಸವಣ್ಣನ ಕಾಲದಲ್ಲಿಯೇ. ಬಸವಣ್ಣ ವೀರಶೈವ ಮತಸ್ಥಾಪಕರಲ್ಲದಿದ್ದರೂ ಅತಿಶಯವಾದ ಮನ್ನಣೆ ಭಕ್ತಿಗಳಿಗೆ ಪಾತ್ರನಾದ, ಮತಪ್ರಚಾರಕನಾದ ಆಚಾರ್ಯ, ಲಿಂಗಧಾರಣೆ, ಜಂಗಮಾರಾಧನೆ, ಮೊದಲಾದ ತತ್ತ್ವಗಳನ್ನು ಈತ ತನ್ನ ವಚನಗಳಲ್ಲಿ ಯಶಸ್ವಿಯಾಗಿ ನಿರೂಪಿಸಿದ್ದಾನೆ.

ಡಾ॥ರಾಮು : ಅನೇಕ ಪುರಾತನರ ಚರಿತ್ರೆಗಳನ್ನೂ ಅಲ್ಲಲ್ಲಿ ಸೂಕ್ಷ್ಮವಾಗಿ ಹೇಳಿದ್ದಾನೆ. ಎಲ್ಲಕ್ಕಿಂತ ಮಿಗಿಲಾಗಿ ವೀರಶೈವ ಧರ್ಮದ ಸಾರತತ್ತ್ವಗಳನ್ನು ತಿಳಿಗನ್ನಡದಲ್ಲಿ ಎಲ್ಲರಿಗೂ ಸುಲಭವಾಗಿ ಬೊಧೆಯಾಗುವಂತೆ ಉಪದೇಶಿಸಿ ಕೃತಕೃತ್ಯನಾಗಿದ್ದಾನೆ. ಈತನ ಸಮಕಾಲೀನರಾದ ಅಲ್ಲಮಪ್ರಭು. ಸಿದ್ಧರಾಮ, ಚೆನ್ನಬಸವ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ ಮೊದಲಾದ ಅನೇಕ ಶಿವಶರಣರು ವಚನಗಳನ್ನು ರಚಿಸಿದ್ದಾರೆ. ಅಕ್ಕಮಹಾದೇವಿಯೆಂಬ ಶರಣೆಯೊಬ್ಬಳು ಚನ್ನಮಲ್ಲಿಕಾರ್ಜುನ ಎಂಬ ಅಂಕಿತದಲ್ಲಿ ಅನೇಕ ಸುಂದರವಾದ ವಚನಗಳನ್ನು ರಚಿಸಿದ್ದಾಳೆ. ವೀರಶೈವ ವಚನಕಾರ್ತಿಯರಲ್ಲಿ ಈಕೆ ಪ್ರಮುಖಳಾದವಳು. ಇನ್ನೂ ಅನೇಕ ಮಹಿಳೆಯರು ಈ ಕಾಲದಲ್ಲಿ ಸ್ಫೂರ್ತಿಯಿಂದ ವಚನ ರಚನೆಗೆ ಕೈಹಾಕಿದರು.

ಡಾ॥ಶೀಲ : ಇದುವರೆಗೆ ರಾಜಸ್ಥಾನದಲ್ಲಿಯೇ ರಾರಾಜಿಸುತ್ತಿದ್ದ ಕನ್ನಡ ಕಾವ್ಯ ವಚನಕಾರರ ಕೃಪೆಯಿಂದ ಜನಪಥಕ್ಕೆ ಬಂತು. ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿದ್ದನಾದರೂ ರಾಜನ ಸಂತೋಷಾರ್ಥವಾಗಿ ಕೃತಿರಚನೆ ಮಾಡಲಿಲ್ಲ. ವಚನಕಾರರನೇಕರು ಪಂಡಿತರಲ್ಲ. ಭಕ್ತಿ ಶ್ರೀಮಂತರಾದ ಈ ಜನ ತಮ್ಮ ಸಾಧನೆಯಿಂದ ಶಿವಸಾಕ್ಷಾತ್ಕಾರ ಪಡೆದು ತಮ್ಮ ಶಿವಾನುಭವವನ್ನು ಲೋಕ ಹಿತಾರ್ಥವಾಗಿ ವಚನ ರೂಪದಲ್ಲಿ ಹೇಳಿದರು. ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಅನುಭವಮಂಟಪದ ಧರ್ಮ ಸಭೆಗಳಲ್ಲಿ ಶಿವಶರಣರು ತತ್ತ್ವ ಮಂಥನ ಮಾಡಿ ತೇಲಿದ ಇತ್ಯರ್ಥಗಳನ್ನು ಜನತೆಯಲ್ಲಿ ಪ್ರಸಾರ ಮಾಡುತ್ತಿದ್ದರೆಂದು ಹೇಳಲಾಗಿದೆ.

ಡಾ॥ರಾಮು : ಹೀಗೆ ತತ್ತ್ವ ಜಿಜ್ಞಾಸೆಯಿಂದಲೂ ಸ್ವಾನುಭವದ ತೀವ್ರತೆಯಿಂದಲೂ ಮೂಡಿಬಂದ ಕೃತಿಗಳಾದ್ದರಿಂದ ವಚನಗಳ ಮಾತುಗಳು ಭಾವಭರಿತವಾಗಿದ್ದು ಶಕ್ತಿಯುತವಾಗಿವೆ. ಗಹನವಾದ ತತ್ತ್ವಗಳನ್ನು ಶರಣರು ಸುಲಭವಾದ ಕನ್ನಡದಲ್ಲಿ ಹೇಳಿದ್ದಾರೆ.

ಕನ್ನಡ ಭಾಷೆಯ ಶಕ್ತಿಯನ್ನು ಅರಿತುಕೊಳ್ಳಬೇಕಾದರೆ ವೀರಶೈವ ವಚನ ಸಾಹಿತ್ಯವನ್ನು ಗಮನಿಸಬೇಕು. ವಚನಗಳಲ್ಲಿ ವಾಗಾಡಂಬರಕ್ಕೆ ಅಲಂಕಾರಶೈಲಿಗೆ ಎಡೆಯಿಲ್ಲ.

ಸಾಮಾನ್ಯ ಜನರನ್ನು ಸೇರಬೇಕಾದ್ದರಿಂದ ಇವುಗಳ ಭಾಷೆ ಅತ್ಯಂತ ಸುಲಭವಾಗಿರಬೇಕಾದದ್ದು ಅಗತ್ಯವಾಯಿತು. ಶಬ್ದಾಲಂಕಾರ ಅರ್ಥಲಂಕಾರಗಳನ್ನು ಬುದ್ಧಿಪೂರ್ವಕವಾಗಿ ತಂದು ತುಂಬುವ ಹವ್ಯಾಸ ಇಲ್ಲಿ ಸುತರಾಂ ಸಲ್ಲದು. ವೈಖರಿಯಲ್ಲಿ ಅಲಂಕಾರಗಳು, ಉಕ್ತಿ ಚಮತ್ಕಾರಗಳು ಬರುತ್ತವಾದರೂ ಅವೆಲ್ಲ ಸಹಜವೂ ಸುಂದರವೂ ಉಚಿತವೂ ಆಗಿವೆ.

ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯಾ
ಅವಸರಬಂದರೆ ಮಾರುವ ದೈವವೆನೆಂತು ಸರಿಯೆಂಬೆನಯ್ಯ
ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ
ಸಹಜಭಾವದ ನಿಜ್ಯಕ್ಯ ಸ್ಥಿರರೂಪ ನಿರ್ವಿಕಾರ ನಿರಂಜನ
ಕೂಡಲಸಂಗಮದೇವನೊರ್ವನೇ ದೇವ ಕಾಣಿರೋ

ಎಂದು ನುಡಿದು ಶರಣರು ನಿರಾಕಾರ ಭಗವಂತನ ಆರಾಧನೆಯ ಹಿರಿಮೆಯನ್ನು ಹಾಡಿ ಹೊಗಳಿದ್ದಾರೆ. ಭಜನೆ, ಸ್ಮರಣೆ, ಕಥನ, ಶ್ರವಣಗಳಿಂದಲೇ ಧನ್ಯತೆಯನ್ನು ಪಡೆಯಬಹುದಾದರೂ ಭಕ್ತವೇಷಿಗಳ ಬೂಟಾಟಿಕೆಯ ಆಚಾರ ಖಂಡನೀಯವೆ.

ಡಾ॥ಶೀಲ : ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ ? ದರಿದ್ರ
ಸಿರಿವಂತನಾಗಬಲ್ಲನೆ ? ಮುನ್ನಿನ ಪುರಾತನರ ನೆನೆದು
ಧನ್ಯನಾದೆನೆಂಬ ಮಾತಿನರಂಜಕರನೇನೆಂಬೆ ಕೂಡಲಸಂಗಮದೇವ

ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡ ಎಂದು ವೃಕ್ಷದ ದೃಷ್ಟಾಂತದಿಂದ, ಭೂಲೋಕದಲ್ಲಿರುವ ಜಂಗಮನಿಗೆ ನೀಡಿದ್ದು ಕೈಲಾಸದಲ್ಲಿರುವ ಶಿವನಿಗೆ ಸೇರುವುದೆಂದು ಹೇಳಿ ಜಂಗಮಲಿಂಗ ಸಾಮರಸ್ಯವನ್ನು; ನಿರೂಪಿಸಿದ್ದಾನೆ. ಬಸವಣ್ಣ, ಜಂಗಮನೇ ಲಿಂಗ ಕಾಣಾ ಎಂದು ಹೇಳುವುದಕ್ಕೂ ಶರಣರು ಹಿಂತೆಗೆದಿಲ್ಲ. ಆದರೆ ಭಕ್ತರ ಈ ಭಕ್ತಿ ಔದಾರ್ಯಗಳ ದುರ್ಲಾಭ ಪಡೆಯಲು ಹವಣಿಸುವ ದುಷ್ಟ ಜಂಗಮರನ್ನು ಖಂಡಿಸುವುದನ್ನೂ ಶರಣರು ಮರೆತಿಲ್ಲ.

ಒಡೆಯನೊಡಗೊಂಡು ಒಡೆಯನರಮನೆಗೆ ಹೋದರೆ ಕೂಳ
ಸೊಕ್ಕು ತಲೆಗೇರಿ ಒಡೆಯನರಸಿಯ ಸಂಗಡ ಸರಸಬೇಡ ಕಾಣಿರೋ

ಡಾ॥ರಾಮು : ಅಂದಿನ ವೀರಶೈವ ಸಮಾಜದ ಕುಂದುಕೊರತೆಗಳನ್ನು ಅನ್ಯಧರ್ಮಗಳವರ ಲೋಪದೋಷಗಳನ್ನು ಖಂಡಿಸುವುದೇ ಅಲ್ಲದೆ ವಚನಕಾರರು ತಮ್ಮ ಸಾಧನೆ, ಸಿದ್ಧಿ, ತಪಸ್ಸುಗಳ ಕಥೆಯನ್ನೂ ಅಲ್ಲಲ್ಲಿ ಹೇಳಿಕೊಂಡಿರುತ್ತಾರೆ. ಆದ್ದರಿಂದ ವಚನಗಳು ಶರಣರ ಆಧ್ಯಾತ್ಮಿಕ ಕಥೆಗಳಂತೆ ಇರುವುದೂ ಉಂಟು.

ಡಾ॥ಶೀಲ : ಒಬ್ಬಿಬ್ಬರ ಹೊರತು ಎಲ್ಲ ವಚನಕಾರರೂ ಸಾಧಾರಣವಾಗಿ ಕೊನೆಯಲ್ಲಿ ಹೆಸರುಗಳನ್ನು ಹೇಳಿಕೊಳ್ಳದೆ ತಮ್ಮ ಅಂಕಿತಗಳನ್ನೇ ಬಳಸಿದ್ದಾರೆ. ರಾಮನಾಥ, ಕೂಡಲಸಂಗಮದೇವ, ಚೆನ್ನಮಲ್ಲಿಕಾರ್ಜುನ, ಕಪಿಲಸಿದ್ಧಮಲ್ಲಿಕಾರ್ಜುನ, ಗುಹೇಶ್ವರ ಮೊದಲಾದ ಅಂಕಿತಗಳು ಸುಪ್ರಸಿದ್ಧವಾಗಿವೆ.

ವಚನಕಾರರಿಗೆ ಭಕ್ತಿಪ್ರಚಾರ ಮುಖ್ಯವಾಗಿತ್ತೇ ಹೊರತು ತಮಗೆ ಕವಿಕೀರ್ತಿ ಲಭಿಸಬೇಕೆಂಬ ಅಪೇಕ್ಷೆ ಇರಲಿಲ್ಲ. ತತ್ತ್ವದ ಉಪದೇಶ, ಸಮಾಜದ ಸುಧಾರಣೆ, ಜನತೆಯ ಅಭ್ಯುದಯ ಇಷ್ಟೇ ಶರಣರಾದ ವಚನಕಾರರ ಬದುಕಿನ ಧ್ಯೇಯ.

ಡಾ||ರಾಮು : ವಚನ ಸಾಹಿತ್ಯ ಹುಲುಸಾಗಿ ಬೆಳೆಯುತ್ತಿದ್ದ ಕಾಲದಲ್ಲಿಯೇ ಹಂಪೆಯ ಹರೀಶ್ವರನೆಂಬ ಭಕ್ತ ಕವಿ ಅವತರಿಸಿ ಹಂಪೆಯಲ್ಲಿ ನೆಲೆಸಿ ವಿರೂಪಾಕ್ಷಸ್ವಾಮಿಯ ಭಕ್ತಾಗ್ರೇಸರನಾಗಿ ಅನೇಕ ಶಿವಶರಣ ಶರಣೆಯರ ಪುಣ್ಯ ಕಥೆಗಳನ್ನು ರಗಳೆಯ ಛಂದಸ್ಸಿನಲ್ಲಿ ರಚಿಸಿ ವೀರಶೈವಧರ್ಮ ಪ್ರಚಾರಕ್ಕೆ ಮಿಗಿಲಾದ ನೆರವು ನೀಡಿದ. ಬಸವರಾಜದೇವರ ರಗಳೆ ಎಂಬ ಈತನ ಅಪೂರ್ಣಕೃತಿ ಬಸವಣ್ಣನ ಜೀವನ ಕಥೆಯನ್ನೇ ಹೇಳುವಂಥಾದ್ದು. ಬಸವನ ಸಮಕಾಲೀನರಾದ ಪ್ರಭುದೇವ, ಮಹದೇವಿ, ಸಿದ್ಧರಾಮ ಮೊದಲಾದ ಶರಣರ ಕಥೆಗಳನ್ನೂ ಹರಿಹರ ರಚಿಸಿದ್ದಾನೆ. ತಮಿಳುನಾಡಿನ ಪ್ರಾಚೀನ ಶಿವಭಕ್ತರನೇಕರ ಕಥೆಗಳನ್ನು ಹೇಳಿದ್ದಾನೆ. ತಿರುನೀಲಕಂಠರು, ನಂಬಿಯಣ್ಣ, ಕಾರಿಕಾಲಮ್ಮೆ ಮೊದಲಾದುವು ಪ್ರಸಿದ್ಧವಾಗಿವೆ. ಹರಿಹರ ಒಟ್ಟು ನೂರೊಂದು ರಗಳೆಗಳನ್ನು ರಚಿಸಿರುವಂತೆ ತಿಳಿಯುತ್ತದೆ.

ಡಾ||ಶೀಲ : ಗಿರಿಜಾಕಲ್ಯಾಣವೆಂಬ ಒಂದೇ ಒಂದು ಚಂಪೂಕಾವ್ಯವನ್ನು ಈತ ರಚಿಸಿರುವನಾದರೂ ಇವನಿಗೆ ರಗಳೆಯ ಛಂದಸ್ಸು ಚೆನ್ನಾಗಿ ಒಗ್ಗಿದೆ. ಆದ್ದರಿಂದಲೇ ಈತ ರಗಳೆಯ ಕವಿ ಎಂಬ ಖ್ಯಾತಿಯನ್ನು ಗಳಿಸಿದ್ದಾನೆ. ಬೇರೆ ಯಾವ ಕನ್ನಡ ಕವಿಯೂ ರಗಳೆಯನ್ನು ಇಷ್ಟು ಯಶಸ್ವಿಯಾಗಿ ಪ್ರಯೋಗಿಸಿಲ್ಲ.

ಓದುಗರಲ್ಲಿ ಭಕ್ತಿಯ ಆವೇಶವೇ ಮೂಡುವಂತೆ ಬರೆಯಬಲ್ಲ ಅಸಾಧಾರಣ ಶಕ್ತಿ ಹರಿಹರನಿಗೆ ಇದೆ.

ಶಿವಕಥೆ, ಶಿವಭಕ್ತರ ಕಥೆಗಳನ್ನಲ್ಲದೆ ಉಳಿದವರ ಕಥೆ ಹೇಳುವುದಿಲ್ಲವೆಂದು ಹರಿಹರನ ಪ್ರತಿಜ್ಞೆ, ತನ್ನ ಪ್ರತಿಜ್ಞೆಯನ್ನು ಸಾಧಿಸಿ ಈತ ಧನ್ಯನಾಗಿದ್ದಾನೆ.

ಪ್ರಸಾದಿಕಶೈಲಿ, ಕಥನ ಕೌಶಲ, ಮಾತಿನ ಮೋಡಿ, ವರ್ಣನಾಚಾತುರ್ಯಗಳಿಂದಾಗಿ ಹರಿಹರ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿದ್ದಾನೆ. ಇವನ ಸಮಕಾಲೀನರೂ ಆಮೇಲಿನವರೂ ಆದ ಅನೇಕ ಕವಿಗಳು ಈತನಿಂದ ಸ್ಫೂರ್ತಿ ಪಡೆದು ಇವನನ್ನು ಆದರ್ಶವಾಗಿಟ್ಟುಕೊಂಡು ಕೃತಿರಚನೆ ಮಾಡಿ ಇವನನ್ನು ಕೊಂಡಾಡಿದ್ದಾರೆ.

ಡಾ||ರಾಮು : ಹರಿಹರ ರಗಳೆಯ ಛಂದಸ್ಸಿನಲ್ಲಿ ಇಡೀ ಕಾವ್ಯವನ್ನೇ ಬರೆಯಲು ಮೊದಲಿಗನಾದರೆ ಅವನ ಸೋದರಳಿಯನೂ ಶಿಷ್ಯನೂ ಆದ ರಾಘವಾಂಕ ಷಟ್ಪದಿಯಲ್ಲಿ ಕಾವ್ಯ ರಚನೆ ಮಾಡಿರುವವರಲ್ಲಿ ಮೊದಲನೆಯವನಾಗಿದ್ದಾನೆ. ಇವನಿಗಿಂತ ಮುಂಚೆ ಇದ್ದ ಪೋಲಾಳ್ವ ದಂಡನಾಥನೆಂಬ ಕವಿ ಹರಿಚಾರಿತ್ರ ಎಂಬ ಒಂದು ಷಟ್ಪದೀ ಕಾವ್ಯವನ್ನು ರಚಿಸಿದನೆಂಬ ಹೇಳಿಕೆ ಪ್ರಸಿದ್ಧಿಯಾಗಿದೆಯಾದರೂ ಆ ಕೃತಿ ಅಲಭ್ಯ. ರಾಘವಾಂಕನ ಹರಿಶ್ಚಂದ್ರಕಾವ್ಯ. ಸೋಮನಾಥಚರಿತ್ರೆ, ಸಿದ್ಧರಾಮಪುರಾಣ, ವೀರೇಶಚರಿತೆ ಎಂಬ ಕೃತಿಗಳು ಪ್ರಸಿದ್ಧವಾಗಿವೆ. ಅವನ ಉಳಿದೆರಡು ಕೃತಿಗಳು ಲಭ್ಯವಿಲ್ಲ.

ಡಾ||ಶೀಲ : ಹರಿಶ್ಚಂದ್ರ ಪರಮ ಶಿವಭಕ್ತನೆಂದೂ ಸತ್ಯವೆಂಬುದೆ ಹರನು, ಹರನೆಂಬುದೇ ಸತ್ಯ ಎಂಬ ತತ್ತ್ವವನ್ನು ಲೋಕಕ್ಕೆ ಬೆಳಗಿದ ಧನ್ಯನೆಂದೂ ಹೇಳಿ ರಾಘವಾಂಕ ಹರಿಶ್ಚಂದ್ರನ ಶಿವಭಕ್ತಿಯ ಆಧಿಕ್ಯವನ್ನು ವರ್ಣಿಸಿದ್ದರೂ ಹರಿಶ್ಚಂದ್ರನೆಂಬ ನರನ ಸ್ತುತಿ ಮಾಡಿದನೆಂದು ಸಿಟ್ಟುಗೊಂಡು ಹರಿಹರ ಅವನ ಹಲ್ಲು ಮುರಿದ ನೆಂದು ಒಂದು ಕಟ್ಟುಕಥೆ ಪ್ರಚಾರದಲ್ಲಿದೆ. ಬಹುಶಃ ಹರಿಶ್ಚಂದ್ರ ಕಾವ್ಯಕ್ಕಿಂತ ಅವನ ಸೋಮನಾಥ ಚರಿತ್ರೆ, ಸಿದ್ಧರಾಮ ಚರಿತ್ರೆಗಳು ವೀರಶೈವಭಕ್ತರಿಗೆ ಹೆಚ್ಚು ಪ್ರಿಯವೂ ಪೂಜ್ಯವೂ ಆಗಿವೆಯೆಂಬ ಅಂಶವನ್ನು ಈ ಕಥೆ ಧ್ವನಿಸುತ್ತದೆಂದು ತೋರುತ್ತದೆ. ಸೋಮನಾಥ ಚರಿತೆ ಅಥವಾ ಆದಿಶೆಟ್ಟಿಪುರಾಣ ಎಂಬ ಕಾವ್ಯದಲ್ಲಿ ಆದಯ್ಯ ನೆಂಬ ಶಿವಭಕ್ತ ಜೈನರ ಮೂದಲಿಕೆಗೆ ಮುನಿಸುಗೊಂಡು ಸುರಹೊನ್ನೆಯ ಬಸದಿಯೆಂದು ಪ್ರಸಿದ್ಧವಾಗಿದ್ದ

ದೊಡ್ಡ ಜಿನಾಲಯದಲ್ಲಿದ್ದ ಜಿನಮೂರ್ತಿಯನ್ನು ಕಿತ್ತು ಅದರ ಸ್ಥಾನದಲ್ಲಿ ಸೋಮನಾಥನನ್ನು ಸ್ಥಾಪಿಸಿದ ಕಥೆಯಿದೆ.

ಡಾ||ರಾಮು : ಸಿದ್ಧರಾಮಚರಿತೆ ಅದರ ಹೆಸರೇ ಹೇಳುವಂತೆ ಬಸವಣ್ಣನ ಸಮಕಾಲೀನನಾದ ಕರ್ಮಯೋಗಿ ಶಿವಸಿದ್ಧರಾಮನ ದಿವ್ಯ ಚರಿತ್ರೆಯನ್ನು ಒಳಗೊಂಡಿದೆ. ಕಥೆಯ ನಿರೂಪಣೆ, ಸಂಭಾಷಣೆಯ ಚತುರತೆ, ನಾಟಕೀಯ ಸನ್ನಿವೇಶಗಳ ರಚನೆ, ಪಾತ್ರಚಿತ್ರಣ–ಈ ಎಲ್ಲ ದೃಷ್ಟಿಯಿಂದಲೂ ರಾಘವಾಂಕನ ಕೃತಿಗಳಲ್ಲಿ ಹರಿಶ್ಚಂದ್ರಕಾವ್ಯ ಅತ್ಯುತ್ತಮವಾದುದಾಗಿದೆ. ಕಥೆ ಹೇಳುವುದರಲ್ಲಿ ರಾಘವಾಂಕ ಜಾಣ.

ಇವನ ಸಂಭಾಷಣೆಯ ಶೈಲಿ ರಮ್ಯವಾಗಿದ್ದು ಇಂದಿಗೂ ಜನ ಮೆಚ್ಚಿಗೆಗೆ ಪಾತ್ರವಾಗಿದೆ. ರಾಘವಾಂಕ ಹರಿಹರನಿಗೆ ತಕ್ಕ ಶಿಷ್ಯನೇ ಸರಿ. ಪ್ರಾಯಕವಾಗಿ ಎಲ್ಲಾ ವೀರಶೈವ ಕವಿಗಳ ಹೊಗಳಿಕೆಗೂ ಈತ ಪಾತ್ರ ನಾಗಿದ್ದಾನೆ.

ಡಾ||ಶೀಲ : ಹರಿಹರ, ರಾಘವಾಂಕ, ಕೆರೆಯಪದ್ಮರಸರು ಸಮಕಾಲೀನರೆಂದು ತಿಳಿದುಬಂದಿದೆ. ಹನ್ನೆರಡನೆಯ ಶತಮಾನದ ಕೊನೆಯ ವೇಳೆಗೆ ಚಂಪೂ, ವಚನ, ರಗಳೆ, ಷಟ್ಪದಿ ಮೊದಲಾದ ಕಾವ್ಯಾಜಾತಿಗಳು ಬಳಕೆಗೆ ಬಂದು ಕನ್ನಡಸಾಹಿತ್ಯ ಬಹುಮುಖವಾಗಿ ಅಭಿವೃದ್ಧಿ ಹೊಂದತೊಡಗಿತು.

ಜೈನ, ವೈಷ್ಣವ, ಶೈವಕವಿಗಳು ಕನ್ನಡದಲ್ಲಿ ಕೃತಿರಚನೆ ಮಾಡುತ್ತಿದ್ದರು. ತಮ್ಮ ತಮ್ಮ ಮತಧರ್ಮಗಳಿಗೆ ಸಂಬಂಧಿಸಿದ ಕೃತಿಗಳನ್ನೇ ಅಲ್ಲದೆ ಹಲವು ಲಕ್ಷಣ ಗ್ರಂಥಗಳನ್ನೂ ಈ ಕಾಲದ ಕವಿಗಳು ರಚಿಸಿ ಕನ್ನಡ ಶಾಸನ ಸಂಪತ್ತನ್ನು ಸಮೃದ್ಧವಾಗಿಸಿದರು.

ಡಾ||ರಾಮು : ಹದಿಮೂರನೆಯ ಶತಾಬ್ದದಲ್ಲಿ ಬ್ರಾಹ್ಮಣ, ಜೈನ, ವೀರಶೈವ ಕವಿಗಳೆಲ್ಲರೂ ಕನ್ನಡ ಕಾವ್ಯದೇವಿಯ ಕೈಂಕರ್ಯವನ್ನು ನಡೆಸಿದರು. ಈ ಕಾಲದಲ್ಲಿ ಸಾಂಗತ್ಯ ಛಂದಸ್ಸು ಮನ್ನಣೆ ಪಡೆಯಿತು. ಶಿಶುಮಾಯಣ ಮೊದಲಾದವರು ತಮ್ಮ ಕೃತಿಗಳನ್ನು ಸಾಂಗತ್ಯದಲ್ಲಿಯೇ ಬರೆದರು. ನರಹರಿತೀರ್ಥ ಈ ಕಾಲದಲ್ಲಿ ಕೆಲವು ಕೀರ್ತನೆಗಳನ್ನು ರಚಿಸಿ ವೈಷ್ಣವ ಭಕ್ತಿ ಸಾಹಿತ್ಯದ ಆರಂಭೋತ್ಸವವನ್ನು ನೆರವೇರಿಸಿದ. ಅಂಡಯ್ಯನೆಂಬ ಜೈನಕವಿ ಸಂಸ್ಕೃತದ ನೆರವಿಲ್ಲದೆ ಕನ್ನಡದಲ್ಲಿ ಕಾವ್ಯಸೃಷ್ಟಿ ಸಾಧ್ಯವಾಗದೆಂಬ ಮೂದಲಿಕೆಯಿಂದ ಕವಿಗಳನ್ನು ರಕ್ಷಿಸುವುದಕ್ಕಾಗಿ ಕಬ್ಬಿಗರ ಕಾವ ಎಂಬ ಅಚ್ಚಗನ್ನಡದ ಕಾವ್ಯವನ್ನು ರಚಿಸಿದ್ದು ಈ ಶತಾಬ್ದದಲ್ಲಿಯೇ. ಮಲ್ಲಿಕಾರ್ಜುನನೆಂಬ ಪಂಡಿತಕವಿ ಸೂಕ್ತಿಸುಧಾರ್ಣವ ಎಂಬ ಒಂದು ಸಂಕಲನ ಗ್ರಂಥವನ್ನು ರಚಿಸಿದದ್ದೂ ಕನ್ನಡ ಅತ್ಯಂತ ಪ್ರಸಿದ್ಧ ವ್ಯಾಕರಣ ಗ್ರಂಥ ಶಬ್ದಮಣಿದರ್ಪಣ ಹುಟ್ಟಿದ್ದೂ ಕನ್ನಡದ ಮೊದಲ ರಸವಿವೇಚನಾ ಗ್ರಂಥ ಶೃಂಗಾರ ರತ್ನಾಕರ ಹುಟ್ಟಿದ್ದೂ ಈ ಶತಾಬ್ದದಲ್ಲಿಯೇ.

ಡಾ||ಶೀಲ : ಶಿಶುಮಾಯಣನ ಅಂಜನಾಚರಿತ್ರೆ ಹದಿನೈದು ಸಂಧಿಗಳುಳ್ಳ ಸಾಂಗತ್ಯಗ್ರಂಥ. ರವಿಷೇಣನ ಸಂಸ್ಕೃತದ ಪದ್ಮಚರಿತೆ ಇದಕ್ಕೆ ಮೂಲ. ತ್ರಿಪುರದಹನ ಸಾಂಗತ್ಯ ಎಂಬ ಇನ್ನೊಂದು ಸಣ್ಣ ಗ್ರಂಥ ಜನನ ಜರಾಮರಣಗಳೆಂಬ ಹೆಸರಿನಿಂದ ಘನತರವಹ ಮೂರು ಪುರಗಳನ್ನು ಗೆಲ್ಲುವ ಕಥೆಯಾಗಿದೆ. ಬಂಧುವರ್ಮ ಜೀವಸಂಬೋಧನೆ ಮತ್ತು ಹರಿವಂಶಾಭ್ಯುದಯ ಎಂಬ ಎರಡು ಚಂಪೂಕಾವ್ಯಗಳನ್ನು ಲಲಿತ ಶೈಲಿಯಲ್ಲಿ ರಚಿಸಿದ್ದಾನೆ. ನಯಸೇನನಂತೆ ಇವನೂ ಜೀವಸಂಬೋಧನೆಯಲ್ಲಿ ದ್ವಾದಶಾನುಪ್ರೇಕ್ಷೆಗಳನ್ನು ಹನ್ನೆರಡು ಅಧಿಕಾರಗಳಲ್ಲಿ ವರ್ಣಿಸಿ ನೀತಿ ವೈರಾಗ್ಯಗಳನ್ನು ಬೋಧಿಸುವುದರಲ್ಲಿ ತೊಡಗಿದ್ದಾನೆ. ಪ್ರತಿ ಆಶ್ವಾಸದಲ್ಲಿಯೂ ಒಂದು ಕಥೆ ಇದೆ. ಹರಿವಂಶಾಭ್ಯುದಯ 22ನೆಯ ತೀರ್ಥಂಕರನಾದ ನೇಮಿನಾಥಸ್ವಾಮಿಯ ಚರಿತ್ರೆ. ಇದರಲ್ಲಿ ಜೈನ ಸಂಪ್ರದಾಯಾನುಸಾರವಾದ ಕೃಷ್ಣ ಕಥೆ ಬಂದಿದೆ.

ಡಾ||ರಾಮು : ಲೆಕ್ಕಿಗರ ಪರಿಯನೆನಿಸಿಕೊಂಡ ಅಂಡಯ್ಯ ಚಿಕ್ಕದಾದರೂ ಚೊಕ್ಕವಾದ ಒಂದು ಸುಂದರ ಕಾವ್ಯವನ್ನು ರಚಿಸಿದ್ದಾನೆ. ಇದು ಮನ್ಮಥ ವಿಜಯದ ಕಥೆಯನ್ನೊಳಗೊಂಡಿರುವುದರಿಂದ ಕಾಮನಗೆಲ್ಲ; ಕಾವ್ಯದ ಉದ್ದಕ್ಕೂ ಪ್ರಕೃತಿ ಸೌಂದರ್ಯದ ವರ್ಣನೆ ಇರುವುದರಿಂದ ಸೊಬಗಿನ ಸುಗ್ಗಿ; ಎಲ್ಲಕ್ಕಿಂತ ಮಿಗಿಲಾಗಿ ಕನ್ನಡ ಕವಿಗಳಿಗೆ ಅದುವರೆಗೆ ಅಂಟಿಕೊಂಡಿದ್ದ ಒಂದು ಆಕ್ಷೇಪವನ್ನು ನಿವಾರಿಸುವುದರಿಂದ ಕಬ್ಬಿಗರ ಕಾವ್ಯ. ಸಂಸ್ಕೃತವನ್ನು ಬಳಸದೆ ಕನ್ನಡದಲ್ಲಿ ಸ್ವತಂತ್ರವಾಗಿ ಕೃತಿರಚನೆ ಮಾಡುವುದು ಸಾಧ್ಯವೆಂಬುದನ್ನು ಆಂಡಯ್ಯ ತನ್ನ ಕೃತಿಯಿಂದ ಸಿದ್ಧಾಂತ ಮಾಡಿ ತೋರಿಸಿದ್ದಾನೆ. ಹಾಗೆ ಮಾಡುವಾಗ ತದ್ಭವ ಶಬ್ದಗಳನ್ನು ಯಥೇಷ್ಟವಾಗಿ ಬಳಸಿಕೊಂಡಿದ್ದಾನೆ.

ಡಾ||ಶೀಲ : ಈ ಶತಾಬ್ದದ ಗಣ್ಯಕವಿ ಜನ್ನ, ವೀರಬಲ್ಲಾಳನೆಂದು ಹೆಸರುಗೊಂಡ ಗಿರಿ ದುರ್ಗಮಲ್ಲರಾಜನ ಆಸ್ಥಾನಕವಿ. ಜನ್ನ, ಜನ್ನಯ್ಯ, ಜನ್ನಮಯ್ಯ, ಜನ್ನಿಗ, ಜನ್ನಮರಸ, ಜನಾರ್ದನದೇವ, ಜಾನಕಿ ಎಂದು ಕವಿ ತನ್ನ ಹೆಸರನ್ನು ವಿಧವಿಧವಾಗಿ ಹೇಳಿಕೊಂಡಿದ್ದಾನೆ.

ಕವಿಭಾಳನೇತ್ರ, ಅಸಹಾಯಕಸುಕವಿ. ಸಾಹಿತ್ಯ ರತ್ನಾಕರ ಎಂದು ಜನ್ನ ತನ್ನನ್ನು ಹೊಗಳಿಕೊಂಡಿದ್ದಾನೆ.

ಈತ ಯಶೋಧರಚರಿತೆ ಮತ್ತು ಅನಂತನಾಥ ಪುರಾಣ ಎಂಬ ಎರಡು ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾನೆ. ಯಶೋಧರಚರಿತೆ ನಾಲ್ಕು ಅವತಾರಗಳ ಚಿಕ್ಕ ಪದ್ಯಕಾವ್ಯ, ಕೇವಲ ಕಂದ ಛಂದಸ್ಸಿನಲ್ಲಿಯೆ ಸಂಕೀರ್ಣವಾದ ಕಥೆಯನ್ನು ಮನೋಜ್ಞವಾಗಿ ಹೇಳಿರುವ ಕವಿಪ್ರತಿಭೆ ಪ್ರಶಂಸನೀಯವಾದದ್ದು. ಇದರಲ್ಲಿ ಜೀವ ಹಿಂಸೆಯಿಂದೊದಗುವ ಅನರ್ಥ ಪರಂಪರೆಯನ್ನು ಮನ ಮುಟ್ಟುವಂತೆ ಚಿತ್ರಿಸಿ ಜೀವದಯೆಯ ಮಹಿಮೆಯನ್ನು ಕವಿ ಕೊಂಡಾಡಿದ್ದಾನೆ.

ಡಾ||ರಾಮು : ಜಿನಧರ್ಮದ ಪ್ರಾಶಸ್ತ್ಯ ನಿರೂಪಣೆಯೇ ತನ್ನ ಮುಖ್ಯಧ್ಯೇಯವಾದರೂ ಜನ್ನ ಬಹು ಚಮತ್ಕಾರವಾಗಿ ಕಥೆಯನ್ನು ಹೆಣೆದು ಕೇವಲ ಸಂಕಲ್ಪವಧೆಯಿಂದ ಯಶೋಧರ ರಾಜನಿಗೆ ಹಲವು ಹೀನಜನ್ಮಗಳುಂಟಾದುದನ್ನೂ ಜಿನದೀಕ್ಷೆಯನ್ನು ವಹಿಸಿ ಸಮಾಧಿ ಮರಣವುಂಟಾದ ಮಾತ್ರದಿಂದ ಉತ್ತಮವಾದ ಮನುಷ್ಯಜನ್ಮ ಲಭಿಸಿದುದನ್ನೂ ಹೇಳಿ ಕಥೆಯ ಸನ್ನಿವೇಶಗಳಿಂದಲೇ ಜೀವದಯೆಯ ಮಹಿಮೆಯನ್ನು ಪ್ರತಿಪಾದಿಸಿದ್ದಾನೆ. ಕಾವ್ಯದ ಯಾವ ಭಾಗದಲ್ಲಿಯೂ ಕವಿ ನೇರವಾಗಿ ಧರ್ಮೋಪದೇಶ ನಡೆಸುವುದಿಲ್ಲ. ವರ್ಣನಾಕೌಶಲ್ಯ, ಸನ್ನಿವೇಶ ರಚನಾ ಚಾತುರ್ಯ, ಪಾತ್ರಗಳನ್ನು ಚಿತ್ರಿಸಿರುವ ಜಾಣತನ, ಎಲ್ಲ ಅವನಿಗೆ ಕವಿಚಕ್ರವರ್ತಿಯೆಂಬ ಬಿರುದನ್ನು ಗಳಿಸಿಕೊಟ್ಟಿವೆ.

ವೈರಾಗ್ಯ ಪ್ರಧಾನವಾದ ಪುರಾಣ ಕಥೆಗಳಲ್ಲಿಯೂ ಜನ್ನ ಪ್ರಣಯದ ಹಲವು ಮುಖಗಳನ್ನು ಚಿತ್ರಿಸಿದ್ದಾನೆ. ನೇಮಿ ಜನ್ನರಿರ್ವರೆ ಕರ್ಣಾಟ ಕೃತಿಗೆ ಸೀಮಾಪುರಷರ್ ಎಂದು ಆ ಇಬ್ಬರನ್ನೂ ಮುಂದಿನ ಕವಿಗಳು ಕೊಂಡಾಡಿದ್ದಾರೆ.

ಡಾ||ಶೀಲ : ಜನ್ನ ಕವಿ ಸುಮನೋಬಾಣನ ಮಗ, ಅವನ ಶಿಷ್ಯನೂ ಹೌದು. ಸೂಕ್ತಿ ಸುಧಾರ್ಣವನ್ನು ರಚಿಸಿದ ಮಲ್ಲಿಕಾರ್ಜುನ ಈತನ ಸೋದರಿಯ ಗಂಡ; ಶಬ್ದಮಣಿದರ್ಪಣಕಾರನಾದ ಕೇಶಿರಾಜ ಸೋದರಳಿಯ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದೇ ಸಂಸಾರಕ್ಕೆ ಸೇರಿದ ಹಲವರು ಕಾವ್ಯ ಪ್ರಚಾರ ಮಾಡಿರುವ ನಿದರ್ಶನ ಬಹುಶಃ ಇದೊಂದೇ ಎಂದು ತೋರುತ್ತದೆ.

ಡಾ||ರಾಮು : ಮಲ್ಲಿಕಾರ್ಜುನ ಕವಿ ಕಾವ್ಯಾಂಗಗಳ ವರ್ಣನಾ ರೂಪವಾದ ಪದ್ಯಗಳನ್ನು ಪೂರ್ವ ಕವಿಗಳಿಂದ ಆಯ್ದು ಸಂಗ್ರಹ ಮಾಡಿ ಸೂಕ್ತಿಸುಧಾರ್ಣವವನ್ನು ರಚಿಸಿದ್ದಾನೆ. ಇದಕ್ಕೆ ಕಾವ್ಯಸಾರ ಎಂಬ ಇನ್ನೊಂದು

ಹೆಸರೂ ಇದೆ. ಸರಸಕವೀಶ್ವರ ಸಭೆಯೊಳ್ ಸರಸ ಕವೀಶಂ ಎಂದು ತನ್ನ ವಿಷಯವಾಗಿ ಮಲ್ಲಿಕಾರ್ಜುನನೇ ಹೇಳಿಕೊಂಡಿದ್ದಾನೆ. ಯೋಗಪ್ರವರ ಚಿದಾನಂದ ಮಲ್ಲಿಕಾರ್ಜುನ ಎಂದು ಕೇಶಿರಾಜ ಇವನನ್ನು ಹೊಗಳಿರುವು ದರಿಂದ ಇವನು ಜೈನಯತಿಯಾಗಿದ್ದಿರಬಹುದು. ಮುನಿಗಳ ಸಭೆಯೊಳ್ ಈತ ಪರಮಮುನಿಯಾಗಿದ್ದಿರಬೇಕು. ಇಂಥ ಸಂಕಲನ ಗ್ರಂಥ ಕನ್ನಡದಲ್ಲಿ ಇದೇ ಮೊದಲನೆಯದು. ಇದರಿಂದ ಅನೇಕ ಕವಿಗಳ ಕಾಲನಿರ್ಣಯಕ್ಕೆ ಸಹಾಯವಾಗಿದೆ. ಕಾವ್ಯ ರಸಿಕನಾದ ಮಲ್ಲಿಕಾರ್ಜುನ ತನಗೆ ಮೆಚ್ಚುಗೆಯಾದ ಉತ್ತಮ ಪದ್ಯಗಳನ್ನು ಸಂಗ್ರಹ ಮಾಡಿದರೆ ಇವರ ಸುಪುತ್ರನಾದ ಕೇಶಿರಾಜ ಇವುಗಳ ಆಧಾರದಿಂದ ಹಳಗನ್ನಡದ ಒಂದು ಶಾಸ್ತ್ರೀಯ ವ್ಯಾಕರಣವನ್ನು ಬರೆದ.

ಡಾ॥ಶೀಲ : ಕುಮುದೇಂದುರಾಮಾಯಣ ಈ ಕಾಲದ ಇನ್ನೊಂದು ಮುಖ್ಯವಾದ ಕನ್ನಡಕಾವ್ಯ. ಇದು ಎಲ್ಲ ಜಾತಿಯ ಷಟ್ಪದಿಗಳನ್ನೂ ಒಳಗೊಂಡ ಜೈನರಾಮಾಯಣ. ಬಹಳ ಮಟ್ಟಿಗೆ ಇದು ನಾಗಚಂದ್ರನ ಕೃತಿಯನ್ನೇ ಅನುಸರಿಸುತ್ತದೆ. ಪರವಾದಿಗಂಡ ಭೇರುಂಡ, ಚತುರ್ವಿಧ ಪಾಂಡಿತ್ಯ ಚಕ್ರವರ್ತಿ ಮೊದಲಾದ ಬಿರುದುಗಳನ್ನು ಧರಿಸಿದ್ದ ಕುಮುದೇಂದುವೇ ಈ ಗ್ರಂಥದ ಕರ್ತೃ.

ಕವಿಯ ಹೆಸರೇ ಕಾವ್ಯಕ್ಕೂ ಬಂದಿದೆ. ಇವನ ಕಾಲಕ್ಕೆ ಷಟ್ಪದಿ ಬಳಕೆಗೆ ಬಂದಿದ್ದು ಜೈನಕವಿಗಳೂ ಅದನ್ನು ಬಳಸಲು ಆರಂಭಿಸಿದ್ದರೆಂಬುದಕ್ಕೆ ಕುಮುದೇಂದು ನಿದರ್ಶನನಾಗಿದ್ದಾನೆ. ಇವನೂ ಪಂಡಿತ ವಂಶಕ್ಕೆ ಸೇರಿದವ. ಇವನ ತಂದೆ, ದೊಡ್ಡಪ್ಪ ಮುಂತಾದವರೂ ಕವಿಗಳೂ ಪಂಡಿತರೂ ಆಗಿದ್ದರೆಂದು ತಿಳಿದುಬಂದಿದೆ. ಪರವಾದಿ ಗಿರಿವಜ್ರ ಎಂದು ಕುಮುದೇಂದು ಹೊಗಳಿಕೊಂಡಿರುವುದರಿಂದ ಇವನು ಜೈನಧರ್ಮ ಪ್ರಚಾರದಲ್ಲಿ ಆಸಕ್ತನಾಗಿ ಅನ್ಯಧರ್ಮಗಳವರೊಡನೆ ವಾದ ವಿವಾದಗಳಲ್ಲಿ ತೊಡಗುತ್ತಿದ್ದನೆಂದು ತಿಳಿಯಬೇಕಾಗಿದೆ.

ಡಾ॥ರಾಮು : ಕುಮಾರಪಾಲಿ ಘೂರ್ಜರ ಉದ್ಭಟನೆಂಬ ಭಕ್ತನ ಕಥೆಯನ್ನು ಹನ್ನೆರಡು ಆಶ್ವಾಸಗಳ ಚಂಪೂ ಕಾವ್ಯವಾಗಿ ಬರೆದ ಸೋಮರಾಜನನ್ನು ಇಲ್ಲಿ ಸ್ಮರಿಸಬೇಕು. ಓಹಿಲಯ್ಯ ಆಕಾಶಯಾನ ಮಾಡುತ್ತ ಕೈಲಾಸಕ್ಕೆ ಹೋಗುತ್ತಿದ್ದುದನ್ನು ಕಂಡು ಮೇಲಾಟಕ್ಕಾಗಿ ಉದ್ಭಟ ತನ್ನ ಇಡೀ ನಗರವನ್ನೇ ಕೈಲಾಸಕ್ಕೆ ಕರೆದುಕೊಂಡು ಹೋದನೆಂಬುದೇ ಈ ಕಾವ್ಯದ ಕಥಾವಸ್ತು.

ಡಾ॥ಶೀಲ : ಆಂಧ್ರಪ್ರದೇಶದ ನಾರಣಪುರದ ಅತ್ತಿರಾಜನ ಮಗನಾದ ಪೋಲಾಳ್ವದಂಡನಾಥ ಹರಿಚಾರಿತ್ರವೆಂಬ ಷಟ್ಪದೀ ಕಾವ್ಯವನ್ನು ರಚಿಸಿದನೆಂದು ದಾವಣಗೆರೆ 25ನೆಯ ಶಾಸನದಲ್ಲಿ ಹೇಳಿದೆ. ಗ್ರಂಥ ಸಿಕ್ಕಿಲ್ಲ. ಅದು ಎಂದಾದರೂ ಸಿಕ್ಕಿದರೆ ಅತ್ಯಂತ ಪ್ರಾಚೀನ ಷಟ್ಪದೀ ಕಾವ್ಯವೆನಿಸುತ್ತದೆ.

ಈ ಕವಿ ಹೊಯ್ಸಳ ವೀರಬಲ್ಲಾಳನಲ್ಲಿಯೂ ಅವನ ಮಗ ವೀರನರಸಿಂಹನಲ್ಲಿಯೂ ಅಮಾತ್ಯನಾಗಿದ್ದ, ಪರಾಕ್ರಮಶಾಲಿಯೂ ದಾತನೂ ಆಗಿದ್ದು ಎಲ್ಲರ ಹೊಗಳಿಕೆಗೆ ಪಾತ್ರನಾಗಿದ್ದ. ಸತ್ಯ ಜ್ಞಾನಲಕ್ಷ್ಮಿಪರ ಹಿತಚರಿತೋದ್ಯೋಗದಿಂದ ಧಾತ್ರಿಗೆ ಗುರುವೆನಿಸಿ ಕೊಂಡನಂತೆ, ಆತ, ಪೋಲಾಳ್ವನಂ ಪೊಗಟ್ಟು ಇನ್ನು ಅನ್ಯರನ್ ಅಣ್ಣ ಪೊಗಟ್ಟು ದೇ ಪಾಲುಂಡು ಮೇಲುಂಬುದೆ–ಎಂದು ಒಬ್ಬ ಕವಿ ಇವನ್ನು ಪ್ರಶಂಸಿಸಿದ್ದಾನೆ.

ಡಾ॥ರಾಮು : ಈ ಕಾಲದ ಇನ್ನೊಬ್ಬ ವೈಷ್ಣವ ಕವಿ ನರಹರಿತೀರ್ಥ. ಈ ಮಾಧ್ವ ಕವಿ ವಿಷ್ಣುಸ್ತುತಿ ರೂಪವಾದ ಕೆಲವು ಹಾಡುಗಳನ್ನು ಬರೆದು ದಾಸರ ಪದಗಳೆಂದು ಪ್ರಸಿದ್ಧವಾಗಿರುವ ಕೀರ್ತನ ಸಾಹಿತ್ಯ ರಚನೆಗೆ ಮೊದಲಿಗ ನಾಗಿದ್ದಾನೆ. ಮಧ್ವಾಚಾರ್ಯರ ನಾಲ್ವರು ಅಂತರಂಗ ಶಿಷ್ಯರಲ್ಲಿ ನರಹರಿತೀರ್ಥನೂ ಒಬ್ಬ. ಮಧ್ವಾಚಾರ್ಯರ ತರುವಾಯ ಈತ ಮೂರನೆಯ ಪಟ್ಟದ ಸ್ವಾಮಿಯಾದ. ಸಂನ್ಯಾಸಿಯಾಗುವ ಮುನ್ನ ಶ್ರೀಕಾಕುಳಂ ತಾಲ್ಲೂಕಿನ

ಶ್ರೀಕೂರ್ಮಂ ಎಂಬಲ್ಲಿ ಯೋಗಾನಂದ ನರಸಿಂಹಸ್ವಾಮಿಯ ಆಲಯವನ್ನು ಕಟ್ಟಿಸಿದನೆಂದು ಅಲ್ಲಿನ ಶಾಸನ ಹೇಳುತ್ತದೆ.

ಜಗನ್ನಾಥದಿಂದ ರಾಮ ಮತ್ತು ಸೀತೆಯರ ಮೂಲವಿಗ್ರಹಗಳನ್ನು ತರುವ ಸಲುವಾಗಿ ಮಧ್ವಚಾರ್ಯರು ಈತನನ್ನು ಉತ್ಕಲದೇಶಕ್ಕೆ ಕಳುಹಿಸಿದ್ದರಂತೆ. ಈತ ಬರೆದ ಕೀರ್ತನೆಗಳು ಹೆಚ್ಚಾಗಿ ಲಭಿಸಿಲ್ಲ. ಕವಿಚರಿತೆಕಾರರು ಹೇಳಿರುವ ಕೀರ್ತನೆ ಒಂದು, ಬೇಲೂರು ಕೇಶವದಾಸರು ಉದ್ಧರಿಸಿರುವ ಕೀರ್ತನೆ ಇನ್ನೊಂದು. ಇವೆರಡು ಮಾತ್ರ ಲಭಿಸಿವೆ. ಇವನಿಗಿಂತ ಹಿಂದೆ ಅಚಲಾನಂದ ದಾಸನೆಂಬುವನೊಬ್ಬನಿದ್ದನೆಂದು ಹೇಳಿಕೆಯುಂಟು. ಆದರೆ ಆತನ ಕೀರ್ತನೆಗಳಾವುವೂ ಲಭಿಸಿಲ್ಲ.

ಡಾ॥ಶೀಲ : ಅಂತೂ ಈ ಶತಮಾನದಲ್ಲಿ ಚಂಪೂ, ಷಟ್ಪದಿ, ರಗಳೆ, ಸಾಂಗತ್ಯ, ಹಾಡು, ವಚನ–ಈ ಎಲ್ಲ ಬಗೆಯ ಕಾವ್ಯಗಳೂ ಹುಟ್ಟಿದುವು. ಜೈನರು, ಶೈವರು ಮತ್ತು ವೈಷ್ಣವರೂ ಕನ್ನಡ ಸಾಹಿತ್ಯ ಕೈಂಕರ್ಯವನ್ನು ನಡೆಸಿದರು.

ಡಾ॥ರಾಮು : ಹದಿನಾಲ್ಕನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿ ಜನಪ್ರಿಯವಾಗಿರುವ ಬಸವಪುರಾಣವೆಂಬ ಷಟ್ಪದೀಕಾವ್ಯ ರಚಿತವಾಯಿತಾದರೂ ಇನ್ನೂ ಚಂಪೂಕಾವ್ಯಗಳ ಪ್ರಾಶಸ್ತ್ಯ ತಗ್ಗಿರಲಿಲ್ಲ. ಚೌಂಡರಸ ಅಭಿನವ ದಶಕುಮಾರಚರಿತೆ ಎಂಬ ಚಂಪೂ ಕೃತಿಯನ್ನು ಬರೆದ. ದಂಡಿ ರಚಿಸಿದ ದಶಕುಮಾರ ಚರಿತೆಯೆಂಬ ಸಂಸ್ಕೃತ ಕಾವ್ಯವೇ ಇದರ ಮೂಲ. ಮಗಧ ರಾಜ್ಯದ ಕುಸುಮಪುರದ ಅರಸನಾದ ರಾಜ ಹಂಸ ರಾಜ್ಯಭ್ರಷ್ಟನಾಗಿ ಅರಣ್ಯದಲ್ಲಿ ನೆಲೆಸಿದ್ದಾಗ ಹುಟ್ಟಿದ ಮಗನ ಜೊತೆಯಲ್ಲಿ ತನ್ನ ಏಳು ಜನ ಮಂತ್ರಿಗಳ ಮಕ್ಕಳನ್ನೂ ಅಲ್ಲಿಗೆ ಬಂದು ಸೇರಿದ ಇನ್ನಿಬ್ಬರು ಹುಡುಗರನ್ನೂ ಸಲಹಿ ಬೆಳೆಸಿದನಂತೆ. ಆ ಹತ್ತು ಜನ ಕುಮಾರರ ಜೀವನದ ವೃತ್ತಾಂತವೇ ದಶಕುಮಾರಚರಿತೆ. ಇದಲ್ಲದೆ ಚೌಂಡರಸ ನಳಚಂಪೂ ಎಂಬ ಇನ್ನೊಂದು ಸುಂದರಕಾವ್ಯವನ್ನೂ ಬರೆದಿದ್ದಾನೆ.

ಡಾ॥ಶೀಲ : ಭೀಮಕವಿಯ ಬಸವಪುರಾಣ ಈ ಕಾಲದ ಮುಖ್ಯವಾದ ಷಟ್ಪದೀಕಾವ್ಯ. ಪ್ರತಿ ಸಂಧಿಯ ಕೊನೆಯಲ್ಲಿಯೂ ಪಾಲ್ಕುರಿಕೆ ಸೋಮನ ಸ್ಮರಣೆಯಿದೆ. ಕನಸಿನಲ್ಲಿ ಪಾಲ್ಕುರಿಕೆ ಸೋಮ ದರ್ಶನ ಕೊಟ್ಟು ಬರೆದುಕೊಳ್ಳುವಂತೆ ಆಜ್ಞಾಪಿಸಿದನೆಂದೂ ಅದರಂತೆ ತಾನು ಬಸವಪುರಾಣವನ್ನು ಬರೆದೆನೆಂದೂ ಭೀಮಕವಿ ಹೇಳಿಕೊಂಡಿದ್ದಾನೆ.

ಬಸವಪುರಾಣ ಎಂಟು ಸಂಧಿಗಳುಳ್ಳ ಭಾಮಿನೀ ಷಟ್ಪದಿಯ ಕಾವ್ಯ. ಇದರಲ್ಲಿ ಬಸವಣ್ಣ ಮಾಡಿದ ಪವಾಡಗಳ ವರ್ಣನೆ ಚೆನ್ನಾಗಿ ಮೂಡಿಬಂದಿದೆ.

ಡಾ॥ರಾಮು : ಉಭಯ ಕವಿತಾವಿಳಾಸನೆಂದು ಪ್ರಸಿದ್ಧನಾದ ನಾಗರಾಜನೆಂಬ ಜೈನಕವಿ ಪುಣ್ಯಾಸ್ರವ ಎಂಬ ಹನ್ನೆರಡು ಅಧಿಕಾರಗಳುಳ್ಳ ಚಂಪೂ ಗ್ರಂಥವನ್ನು ರಚಿಸಿ ಜೈನ ಸಾಗಾರ (ಗೃಹಸ್ಥ) ಧರ್ಮವನ್ನು ವಿವರಿಸಿದ್ದಾನೆ. ಬಂಧುವರ್ಮ ಮತ್ತು ನಯಸೇನರ ಹಾಗೆ ಇವನೂ ಜಿನಧರ್ಮಾಚರಣೆಯಿಂದ ಪ್ರಸಿದ್ಧರಾದ ಪುರಾಣಪುರುಷರ ಕಥೆಗಳನ್ನು ಹೇಳಿದ್ದಾನೆ. ಸುಲಲಿತ ಕವಿತಾಕಲ್ಪವಲ್ಲೀವಸಂತ, ಸರಸ್ವತೀ ಮುಖತಿಲಕ, ಭಾರತೀ ಭಾಳನೇತ್ರ ಎಂದು ಕವಿ ಹೆಮ್ಮೆಯಿಂದ ತನ್ನ ಬಿರುದುಗಳನ್ನು ಹೊಗಳಿಕೊಂಡಿದ್ದಾನೆ.

ಡಾ॥ಶೀಲ : ಈ ಶತಾಬ್ದದ ಶ್ರೇಷ್ಠಕವಿ ಮಧುರ. ಇವನು ಹದಿನೈದನೆಯ ತೀರ್ಥಂಕರನಾದ ಧರ್ಮನಾಥಸ್ವಾಮಿಯ ಚರಿತ್ರೆಯನ್ನು ಬರೆದಿದ್ದಾನೆ. ಆದರೆ ಇವನ ಧರ್ಮನಾಥ ಪುರಾಣದ ಸಮಗ್ರಪ್ರತಿ ಲಭಿಸಿಲ್ಲ.

ಇವರು ಗುಮ್ಮಟಸ್ತುತಿ ಎಂಬ ಒಂದು ಅಷ್ಟಕವನ್ನೂ ಬರೆದಿದ್ದಾನೆ. ಭೂನಾಥನಾಸ್ಥಾನಚೂಡಾಮಣಿ, ಮಧುರ ಕವೀಂದ್ರ ಎಂದು ಹೇಳಿಕೊಂಡಿರುವುದರಿಂದ ಇವು ಬಹುಶಃ ಹರಿಹರನ ಆಸ್ಥಾನದಲ್ಲಿ ಮನ್ನಣೆ ಪಡೆದಿರ ಬಹುದು. ಬುಕ್ಕರಾಜನ ಮಗನಾದ ಹರಿಹರನ ಪ್ರಧಾನಿ ಮುದ್ದ ದಂಡೇಶ ಈ ಕವಿಯ ಪೋಷಕ. ಮಧುರ ಆತ್ಮಪ್ರಶಂಸೆಯಲ್ಲಿ ಹಿಂತೆಗೆದಿಲ್ಲ.

ಡಾ॥ರಾಮು : ಆದರೆ ಈಗ ದೊರೆತಿರುವ ನಾಲ್ಕು ಆಶ್ವಾಸಗಳಲ್ಲಿ ಕಥೆಗಿಂತ ವರ್ಣನೆಯೇ ಹೆಚ್ಚಾಗಿದೆಯೆಂದು ತೋರುತ್ತದಾದರೂ ಇವನ ವರ್ಣನೆಗಳು ಬಹಳ ರಮ್ಯವಾಗಿವೆ. ಕಾವ್ಯ ಪಂಡಿತರಿಗೇ ಹೊರತು ಸಾಮಾನ್ಯ ಜನಕ್ಕೆ ವಿಷಯವಲ್ಲವೆಂದು ಮಧುರನ ಮತ.

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೇ ಬೀದಿ ವಱುವ ಬೀರನ ಕತೆಯೇ

ಎಂದು ಮಧುರನ ಸವಾಲು. ಇವನು ಪಂಡಿತ ಪಕ್ಷಪಾತಿ. ಪಂಪನನ್ನೂ ನೇಮಿಚಂದ್ರ ಜನ್ನರನ್ನೂ ಮಧುರ ಹೊಗಳಿದ್ದಾನೆ.

ಡಾ॥ಶೀಲ : ಹದಿನೈದನೆಯ ಶತಮಾನದಲ್ಲಿ ಚಂಪೂಕಾವ್ಯಗಳ ಪ್ರಾಬಲ್ಯ ಕಾಣಬರದು. ಷಟ್ಪದಿ ಸಾಂಗತ್ಯ ಮತ್ತು ತ್ರಿಪದಿಗಳ ಬಳಕೆಯೇ ಹೆಚ್ಚು. ಈ ಶತಾಬ್ದದಲ್ಲಿ ಕನ್ನಡ ಅತ್ಯಂತ ಸ್ವತಂತ್ರ ಮನೋಧರ್ಮದ ಷಟ್ಪದೀ ಕವಿ ಕುಮಾರವ್ಯಾಸ ಅವತರಿಸಿ ತನ್ನ ಗದುಗಿನ ಭಾರತವನ್ನು ರಚಿಸಿದ್ದಾನೆ. ಚಾಮರಸ ಅಲ್ಲಮ ಪ್ರಭುವಿನ ಚರಿತ್ರೆಯನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದುದು ಈ ಕಾಲದಲ್ಲಿಯೇ. ಇವರಲ್ಲದೆ ಲಕ್ಕಣ್ಣ ದಂಡೇಶ, ಭಾಸ್ಕರ ಮೊದಲಾದ ಇನ್ನೂ ಕೆಲವರು ತಮ್ಮ ಕೃತಿಗಳನ್ನು ಬರೆದರು. ವಚನ ರಚನೆ ಹೆಚ್ಚಾಗಿ ನಡೆದಂತೆ ಕಾಣುವುದಿಲ್ಲ. ಹಿಂದಿನವರ ವಚನಗಳನ್ನು ಷಟ್ಸ್ಥಲಗಳಿಗೆ ಅನುಗುಣವಾಗಿ ವಿಂಗಡಿಸುವುದು, ಅವುಗಳಿಗೆ ಟೀಕೆ ಬರೆಯುವುದು ಮುಂತಾದ ಕೆಲಸಗಳು ನಡೆದುವು.

ಡಾ॥ರಾಮು : ಕಲ್ಯಾಣ ಕೀರ್ತಿಯ ಕಾಮನ ಕಥೆ, ತೆರಕಣಾಂಬಿ ಬೊಮ್ಮರಸನ ಜೀವಂಧರ ಸಾಂಗತ್ಯ ಮೊದಲಾದ ಸಾಂಗತ್ಯಕಾವ್ಯಗಳೂ ಭಾಸ್ಕರನ ಜೀವಂಧರ ಚರಿತ್ರೆ, ಬೊಮ್ಮರಸನ ಸೌಂದರಪುರಾಣ, ಲಕ್ಕಣ್ಣದಂಡೇಶನ ಶಿವತತ್ತ್ವ ಚಿಂತಾಮಣಿ–ಎಂಬ ಷಟ್ಪದಿ ಕಾವ್ಯಗಳೂ ಬೆಳಕಿಗೆ ಬಂದುವು, ಆದರೆ ಈ ಶತಾಬ್ದದಲ್ಲಿ ಪ್ರಧಾನರಾಗಿ ಕಾಣುವ ಕವಿಗಳಿಬ್ಬರೇ–ಚಾಮರಸ ಮತ್ತು ಕುಮಾರವ್ಯಾಸ.

ಡಾ॥ಶೀಲ : ಚಾಮರಸನ ಪ್ರಭುಲಿಂಗಲೀಲೆ ವೀರಶೈವ ಸಾಹಿತ್ಯದಲ್ಲಿ ಉನ್ನತಸ್ಥಾನ ಗಳಿಸಿದ ಕಾವ್ಯ. ಹೆಸರೇ ಸೂಚಿಸುವಂತೆ ಇದು ಅಲ್ಲಮ ಪ್ರಭುವಿನ ಚರಿತ್ರೆ. ಈ ಕಾವ್ಯದ ಆದಿಭಾಗದಲ್ಲಿ ಬರುವ ಮಾಯಾನಿರಸನ ಪ್ರಕರಣ ಬಹಳ ಸ್ವಾರಸ್ಯವಾಗಿದ್ದು ಉತ್ತಮಕಾವ್ಯ ಗುಣಗಳನ್ನೊಳಗೊಂಡಿದೆ. ಆಮೇಲೆ ಅಲ್ಲಮ ಊರಿಂದ ಊರಿಗೆ ಸಂಚರಿಸಿ ತನ್ನ ಭಕ್ತರನ್ನು ಸಂಧಿಸಿ ಅವರಿಗೆ ಜ್ಞಾನೋಪದೇಶ ಮಾಡಿದ ಕಥೆ ವಿವರವಾಗಿ ಮೂಡಿಬಂದಿದೆ.

ಡಾ॥ರಾಮು : ಆನುಷಂಗಿಕವಾಗಿ ಈ ಕಾವ್ಯದಲ್ಲಿ ಬಸವ, ಸಿದ್ಧರಾಮ, ಮುಕ್ತಾಯುಕ್ಕ, ಮಹದೇವಿ, ಗೋರಕ್ಷ ಮೊದಲಾದ ಶರಣಶರಣೆಯರ ಚರಿತ್ರೆಯೂ ಬಂದಿದೆ. ಅಲ್ಲಮನ ಹಿರಿಮೆ, ಲೋಕಕಾರುಣ್ಯ, ಮಹಿಮಾತಿಶಯ

ಮುಂತಾದ ಅಂಶಗಳನ್ನು ಚಾಮರಸ ಯಶಸ್ವಿಯಾಗಿ ಚಿತ್ರಿಸಿದ್ದಾನೆ. ಹರಿಹರ ಹೇಳಿರುವ ಈ ಭಕ್ತರ ಕಥೆಗಳಿಗೂ ಚಾಮರಸ ಹೇಳಿರುವ ಕಥೆಗಳಿಗೂ ಹಲವು ಅಂಶಗಳಲ್ಲಿ ವ್ಯತ್ಯಾಸವಿದೆ.

ಡಾ॥ಶೀಲ : ಕುಮಾರವ್ಯಾಸನೆಂದು ಹೆಸರಾಗಿರುವ ನಾರಣಪ್ಪ ಗದುಗಿನ ವೀರನಾರಾಯಣ ಸ್ವಾಮಿಯ ಭಕ್ತ. ಆ ದೇವರ ದಯೆಯಿಂದ ಸ್ಫೂರ್ತಿ ಪಡೆದು ಕೃತಿರಚನೆ ಮಾಡಿದ. ವೀರನಾರಾಯಣನ ಕಿಂಕರನೆಂದು ಹೇಳಿಕೊಳ್ಳು ವುದರಲ್ಲೇ ಕವಿಗೆ ಬಹಳ ಸಂತೋಷ. ಆದ್ದರಿಂದಲೇ ಅವನ ಹೆಸರು ನಾರಣಪ್ಪನೆ, ಕುಮಾರವ್ಯಾಸನೆ, ಶುಕರೂಪನೆ ಎಂದು ನಿರ್ಣಯವಾಗದೆ ವಿದ್ವಾಂಸರಲ್ಲಿ ಚರ್ಚೆ ನಡೆದಿದೆ. ನಾರಣಪ್ಪ ಶಾನುಭೋಗರ ಮನೆತನ ದವನೆಂದೂ ಕೋಳಿವಾಡ ಗ್ರಾಮದ ನಿವಾಸಿಯೆಂದೂ ಜನಶ್ರುತಿ. ವ್ಯಾಸರ ಪರಮಾನುಗ್ರಹಕ್ಕೆ ಪಾತ್ರನಾದು ದರಿಂದ ಕುಮಾರವ್ಯಾಸನೆಂಬ ಹೆಸರಿನಲ್ಲಿಯೇ ಈತ ಕಾವ್ಯರಚನೆಮಾಡಿದ್ದಾನೆ.

ಡಾ॥ರಾಮು : ನಾರಣಪ್ಪ ವ್ಯಾಸಪ್ರಣೀತವಾದ ಭಾರತ ಕಥೆಯನ್ನೇ ಹೇಳಬೇಕೆಂದು ಸಂಕಲ್ಪಿಸಿದವ. ಆದರೆ ಲಕ್ಷಶ್ಲೋಕಗಳಷ್ಟು ವಿಸ್ತಾರವಾದ ಆ ಮಹಾಕಾವ್ಯವನ್ನು ಯಥಾತಥವಾಗಿ ಅನುವಾದ ಮಾಡುವುದು ಸಾಧ್ಯವಾಗದೆಂದು ಮನಗಂಡು ಅದನ್ನು ಸಂಗ್ರಹ ಮಾಡಿದ್ದಾನೆ. ಭಾರತಕಥೆಯನ್ನು ಸಂಪೂರ್ಣವಾಗಿ ರಚಿಸಲು ಉದ್ದೇಶಿಸಿದಂತೆಯೂ ಕಾಣದು. ಧರ್ಮರಾಯನ ಪಟ್ಟಾಭಿಷೇಕದ ಕಥೆಯೊಡನೆ ಕೃತಿ ಮುಗಿದಿದೆ.

ಡಾ॥ಶೀಲ : ತನ್ನ ಕೃತಿಗೆ ಕವಿ ಕರ್ಣಾಟಕಭಾರತಕಥಾಮಂಜರಿ ಎಂದು ಹೆಸರು ಕೊಟ್ಟಿರುವನಾದರೂ ಅದು ಕನ್ನಡ ಭಾರತ, ಗದುಗಿನ ಭಾರತ ಎಂದೇ ಪ್ರಸಿದ್ಧವಾಗಿದೆ. ನಾರಣಪ್ಪನ ಈ ದಶಪರ್ವಭಾರತ ಅತ್ಯಂತ ಜನಪ್ರಿಯವಾಗಿದ್ದು ಪಂಡಿತರ ಮನ್ನಣೆಗೆ ಪಾತ್ರವಾಗಿದೆ.

ಡಾ॥ರಾಮು : ನಾರಣಪ್ಪ ಹುಟ್ಟು ಕವಿ. ವೀರನಾರಾಯಣಸ್ವಾಮಿಯ ಕೃಪೆಯಿಂದ ಅವನಿಗೆ ಕವಿತಾಶಕ್ತಿ ಬಂದಿತೆಂದು ಹೇಳಿಕೊಂಡಿದ್ದಾನೆ. ಈತನ ಕಾವ್ಯದಲ್ಲಿ ರಸದ ಹೊನಲೇ ಹರಿದಿದೆಯೆಂದು ಹೇಳಿದರೆ ಹೆಚ್ಚಲ್ಲ. ನಾರಣಪ್ಪ ಭಕ್ತಿಯೋಗಿ. ಶ್ರೀಕೃಷ್ಣನಲ್ಲಿ ಅವನಿಗೆ ಅನುಪಮವಾದ ಭಕ್ತಿ. ಅವನ ದೃಷ್ಟಿಯಲ್ಲಿ ಭಾರತಕ್ಕೆ ಕೃಷ್ಣನೇ ಕಥಾನಾಯಕ. ಅವನೇ ಭಾರತ ಸೂತ್ರಧಾರ. ಉಳಿದ ಪಾತ್ರಗಳು ಅವನ ಕೈಗೊಂಬೆಗಳು. ಭಾರತ ಕೃಷ್ಣರಾಯನ ಚರಿತೆ, ಕಪಟನಾಟಕ ಸೂತ್ರಧಾರಿಯೆನಿಸಿದ ಶ್ರೀಕೃಷ್ಣನ ಲೀಲಾವಿಲಾಸವೇ ಭಾರತ.

ಡಾ॥ಶೀಲ : ಸನ್ನಿವೇಶ ರಚನೆ ಪಾತ್ರಚಿತ್ರಣಗಳಲ್ಲಿ ನಾರಣಪ್ಪ ಅನನ್ಯ ಸಾಧಾರಣವಾದ ಸಾಮರ್ಥ್ಯ ಹೊಂದಿದ್ದಾನೆ. ಕನ್ನಡ ಮಾತುಗಳ ಜೀವ ನಾಡಿಯನ್ನು ಕಂಡುಕೊಂಡವನು. ಉಚಿತ ಪದ ಜೋಡಣೆಯಲ್ಲಿ ಇವನು ಎತ್ತಿದ ಕೈ. ಇವನಿಗೆ ಸಂಸ್ಕೃತವನ್ನು ಕಂಡರೆ ದ್ವೇಷವಿಲ್ಲ. ಸಂಸ್ಕೃತವನ್ನು ಹದವರಿತು ಬಳಸಿದ್ದಾನಾದರೂ ಕನ್ನಡದ ಮಾತುಗಳನ್ನು ವಿಪುಲವಾಗಿ ಬಳಸಿ ತನ್ನ ಕೃತಿಗೆ ಹೆಚ್ಚಾದ ಮೆರುಗು ಕೊಟ್ಟಿದ್ದಾನೆ. ಅವನು ವಾಗ್ವೈಭವ ವಾಚಕರನ್ನು ಬೆರಗುಗೊಳಿಸುತ್ತದೆ, ಯಾವ ದೃಷ್ಟಿಯಿಂದ ನೋಡಿದರೂ ಕುಮಾರವ್ಯಾಸ ಮೊದಲದರ್ಜೆಯ ಕವಿಯೆಂದು ಮನಗಾಣಬಹುದು.

ಡಾ॥ರಾಮು : ತನ್ನ ಭಾರತ 'ಕಾವ್ಯಕ್ಕೆ ಗುರು' ಎಂದು ಕವಿ ಹೇಳಿಕೊಂಡಿರುವುದು ಒಣಜಂಬದ ಮಾತಲ್ಲ. ಅದು ಅರಸುಗಳಿಗೆ ವೀರ, ದ್ವಿಜರಿಗೆ ಪರಮವೇದದ ಸಾರ. ಪಂಡಿತರಿಗೆ ಅಲಂಕಾರ, ವಿರಹಿಗಳಿಗೆ ಶೃಂಗಾರ, ಯೋಗೀಶ್ವರರಿಗೆ ಪರಮತತ್ತ್ವ ವಿಚಾರ – ಹೀಗೆ ಯಾರಿಗೆ ಏನು ಬೇಕಾದರೂ ಕೊಡುವ ಕಲ್ಪತರುವಿನಂಥ ಕಾವ್ಯವದು.

ಡಾ॥ಶೀಲ : ಹದಿನಾರನೆಯ ಶತಮಾನದಲ್ಲಿ ಕನ್ನಡಕ್ಕೆ ವಿಶಿಷ್ಟವಾದ ಸೇವೆ ಸಲ್ಲಿಸಿದ ವೈಷ್ಣವ ದಾಸರನ್ನು ಮೊದಲು ಸ್ಮರಿಸಬೇಕು. ಅವರು ಮತಪ್ರಚಾರದ ಉದ್ದೇಶದಿಂದಲೇ ಕೃತಿರಚನೆ ಮಾಡಿದರೂ ಅವರ ಕೃತಿಗಳಲ್ಲಿ

ಹೃದ್ಯವಾದ ಭಾವನಿರೂಪಣೆಯಿದೆ. ಜೀವನದ ಸಮಸ್ಯೆಗಳ ವಿಮರ್ಶೆ, ಸಾಮಾಜಿಕ ಲೋಪದೋಷಗಳನ್ನು ಖಂಡಿಸಿ ಸಮಾಜ ಸುಧಾರಣೆ ಮಾಡುವ ಪ್ರಯತ್ನ, ಭಗವನ್ಮಹಿಮಾಕಥನ – ಇವು ದಾಸರ ಕೃತಿಗಳ ಪ್ರಧಾನ ಲಕ್ಷಣಗಳು.

ಡಾ॥ರಾಮು : ಹದಿಮೂರನೆಯ ಶತಮಾನದ ನರಹರಿತೀರ್ಥನಾದ ಮೇಲೆ ಕೀರ್ತನ ಸಾಹಿತ್ಯವನ್ನು ಕನ್ನಡ ದಲ್ಲಿ ರಚಿಸಿ ಪ್ರಸಿದ್ಧನಾದವನೆಂದರೆ ಮುಳಬಾಗಿಲು ಶ್ರೀಪಾದರಾಯ. ಸಂಸ್ಕೃತ ಕನ್ನಡಗಳಲ್ಲಿ ವಿಶೇಷ ಪಾಂಡಿತ್ಯ ಗಳಿಸಿದ್ದ ಈತ ರಂಗವಿಠಲ ಎಂಬ ಅಂಕಿತದಲ್ಲಿ ಹಲವು ಕೀರ್ತನೆಗಳನ್ನು ರಚಿಸಿದ್ದಾನೆ. ಈತ ಮುಳಬಾಗಿಲ ಮಠದ ಪೀಠಾಧೀಶ.

ಡಾ॥ಶೀಲ : ಈತನ ಶಿಷ್ಯನೇ ಪ್ರಸಿದ್ಧನಾದ ವ್ಯಾಸರಾಯಸ್ವಾಮಿ. ವ್ಯಾಸರಾಯನೂ ಹಲವು ಕೀರ್ತನೆಗಳನ್ನು ರಚಿಸಿದ. ಆದರೆ ಅದಕ್ಕಿಂತ ಹೆಚ್ಚಾಗಿ ಆತ ಅನೇಕ ಹರಿದಾಸರಿಗೆ ಸ್ಫೂರ್ತಿ ನೀಡಿದ ಪರಮಗುರು. ಪುರಂದರದಾಸ, ಕನಕದಾಸ ಇಬ್ಬರೂ ವ್ಯಾಸರಾಯನ ಶಿಷ್ಯರು.

ಡಾ॥ರಾಮು : ವಿಜಯನಗರದ ಶ್ರೀಕೃಷ್ಣದೇವರಾಯನ ಭಕ್ತಿಗೌರವಗಳಿಗೆ ಪಾತ್ರನಾದ ವ್ಯಾಸರಾಯ ರಾಜನಿಗೆ ಕುಹೂ ಯೋಗ ಬಂದಾಗ ತಾನೇ ಸಿಂಹಾಸನದ ಮೇಲೆ ಕುಳಿತು ಅರಸನಿಗೆ ಒದಗಲಿದ್ದ ಹಾನಿಯನ್ನು ತಪ್ಪಿಸಿದನೆಂದು ಒಂದು ಕಥೆ. ಈತ ಸೋಸಲೆಯ ಮಠದ ಸ್ವಾಮಿ. ಸಂಸ್ಕೃತದಲ್ಲಿ ಮಹಾಪಂಡಿತನಾಗಿದ್ದರೂ ಮಧ್ವಮತತತ್ತ್ವಗಳನ್ನು ಪ್ರಚಾರ ಮಾಡುವ ಧ್ಯೇಯದಿಂದ ಕನ್ನಡದಲ್ಲಿ ತಾನೇ ಕೃತಿರಚನೆ ಮಾಡಿದುದಲ್ಲದೆ ಅನೇಕ ಹರಿದಾಸರನ್ನು ಈ ಮಹಾ ಕಾರ್ಯದಲ್ಲಿ ಈತ ತೊಡಗಿಸಿದ.

ಡಾ॥ಶೀಲ : ಈ ಶತಮಾನದಲ್ಲಿ ಪ್ರಸಿದ್ಧರಾದ ಹರಿದಾಸರೆಂದರೆ ಪುರಂದರದಾಸ, ಮತ್ತು ಕನಕದಾಸ, ಇವರಿಬ್ಬರೂ ಮೊದಲು ಲೌಕಿಕ ವ್ಯವಹಾರ ಮಗ್ನರಾಗಿದ್ದು ಯಾವುದೋ ಸನ್ನಿವೇಶದಲ್ಲಿ ವಿರಕ್ತಿ ಪಡೆದು ಐಶ್ವರ್ಯ ಅಧಿಕಾರಗಳ ವ್ಯಾಮೋಹವನ್ನು ತೊರೆದು ಭಗವದ್ಭಕ್ತರಾಗಿ ಹರಿಕೀರ್ತನೆ ಮಾಡುತ್ತ ನಾಡಿನಲ್ಲೆಲ್ಲ ಸಂಚರಿಸಿದರು. ಹರಿ ಸಂಕೀರ್ತನೆ ಹರಿಮಹಿಮಾನಿರೂಪಣೆಗಳೇ ಇವರ ಕೀರ್ತನೆಗಳ ವಸ್ತು. ತಮ್ಮ ದೇಶ ಸಂಚಾರದ ಕಾಲದಲ್ಲಿ ಗಮನಕ್ಕೆ ಬಂದ ಅನೇಕ ಸಾಮಾಜಿಕ ಸಮಸ್ಯೆಗಳನ್ನೂ ದಾಸರು ತಮ್ಮ ಕೀರ್ತನೆಗಳಲ್ಲಿ ಪ್ರಸ್ತಾಪಿಸಿದ್ದಾರೆ; ನಿತ್ಯುಪದೇಶವನ್ನೂ ಮಾಡಿದ್ದಾರೆ.

ಡಾ॥ರಾಮು : ಪುರಂದರದಾಸ ಮೊದಲು ಪುರಂದರಗಡದಲ್ಲಿ ಗಣ್ಯ ಶ್ರೀಮಂತನಾಗಿದ್ದು, ಲೇವಾದೇವಿ ನಡೆಸುತ್ತ ಬಹಳ ಲೋಭಿಯಾಗಿದ್ದನೆಂದೂ ಜ್ಞಾನೋದಯವಾದ ಮೇಲೆ ತನ್ನ ಸಮಸ್ತ ಐಶ್ವರ್ಯವನ್ನೂ ದಾನಮಾಡಿ ಭಿಕ್ಷಾವೃತ್ತಿಯಿಂದ ಜೀವಿಸುತ್ತ ಹರಿಕೀರ್ತನೆ ಮಾಡುತ್ತ ನಾಡಿನಲ್ಲೆಲ್ಲ ಸಂಚರಿಸಿ ವಿಜಯನಗರಕ್ಕೆ ಹೋಗಿ ಅಲ್ಲಿ ವ್ಯಾಸರಾಯನನ್ನೂ ಕಂಡು ಅವನಿಂದ ಉಪದೇಶ ಪಡೆದು ಪುರಂದರವಿಠಲ ಎಂಬ ಅಂಕಿತದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದನೆಂದೂ ಪ್ರತೀತಿ.

ಡಾ॥ಶೀಲ : ಕರ್ಣಾಟಕ ಸಂಗೀತದ ಆದ್ಯ ಪ್ರವರ್ತಕರಲ್ಲಿ ಪುರಂದರದಾಸರು ಒಬ್ಬರು. ಇವನ ಕೀರ್ತನೆಗಳಲ್ಲಿ ದ್ವೈತಮತಪ್ರಚಾರ, ಹರಿಸರ್ವೋತ್ತಮತ್ವ ನಿರೂಪಣೆ ಮೊದಲಾದ ಅಂಶಗಳಿಗೆ ಪ್ರಾಮುಖ್ಯವಿದೆ. ಭಕ್ತಿ ಸಾಧನೆ ಮಾಡಿ ಸಿದ್ಧಿಹೊಂದಿದ ತನ್ನ ಅಧ್ಯಾತ್ಮ ಜೀವನದ ಚರಿತ್ರೆಯನ್ನು ಪುರಂದರದಾಸ ಅನೇಕ ಕಡೆ ತನ್ನ ಹಲವಾರು ಕೀರ್ತನೆಗಳಲ್ಲಿ ಹೇಳಿಕೊಂಡಿದ್ದಾನೆ. ಹರಿಸೇವೆ, ಹರಿಕೀರ್ತನೆ ಹರಿಭಕ್ತರ ನಿರಂತರ ಕೈಂಕರ್ಯ – ಇವು ಜೀವಿಯನ್ನು ಸಂಸಾರ ಬಂಧನದಿಂದ ಬಿಡುಗಡೆ ಮಾಡಿಸಿ ಪಾರುಮಾಡುವ ಪರಮೋಪಾಯಗಳು. ಆದರೆ

ಇಲ್ಲ ಮಾನವರೂ ಒಂದೇ ರೀತಿಯಾಗಿ ದೀಕ್ಷೆವಹಿಸಿ ಇವುಗಳನ್ನೆಲ್ಲ ಏಕಚಿತ್ತದಿಂದ ಸಾಧಿಸಲು ಸಾಧ್ಯವಿಲ್ಲ. ಅಂಥ ದುರ್ಬಲರಿಗಾಗಿ ಪುರಂದರದಾಸ ಒಂದು ಸುಲಭ ಪೂಜೆಯನ್ನು ಸೂಚಿಸುತ್ತಾನೆ.

ಸುಲಭ ಪೂಜೆಯ ಮಾಡಿ ಬಲವಿಲ್ಲದವರು.

ನಳಿನನಾಭನ ಪಾದನಳಿನ ಸೇವಕರು

ಎಂದೇ ಈತನ ಒಂದು ಕೀರ್ತನೆಯ ಪಲ್ಲವಿ. ಅನುದಿನವೂ ನಾವು ಮಾಡುವ ಕೆಲಸಗಳನ್ನೇ ಹರಿಪೂಜೆಯೆಂದು ಭಾವಿಸಿ ನಡೆದರೆ ಹರಿ ಅದರಿಂದ ಸುಪ್ರೀತನಾಗುವನಂತೆ ಇರುಳು ಹಚ್ಚುವ ದೀಪ ಹರಿಗೆ ನಿರಾಜನವು.

ಡಾ॥ರಾಮು : ತಿರುಗಾಡಿ ದಣಿಯುವುದೇ ಹರಿಗೆ ಪ್ರದಕ್ಷಿಣೆಯು ನೀಡಿದ ಮಾತುಗಳೆಲ್ಲ ಕಡಲಶಯನನ ಜಪವು. ಹೀಗೆ ಭಾವಿಸಿಕೊಂಡು ತಮ್ಮ ನಿತ್ಯಕರ್ಮಗಳನ್ನು ಭಗವಂತನ ಆರಾಧನೆಯೆಂದು ನಂಬಿ ಮಾಡಿದರೆ ನಡು ಮನೆಯು ಅಂಗಳವು ಉಡುಪಿ ವೈಕುಂಠಗಳು. ಹೀಗೆಂದು ಕವಿ ಅಭಯ ನೀಡುತ್ತಾನೆ.

ಡಾ॥ಶೀಲ : ಪುರಂದರದಾಸ ವಿಜಯನಗರದಲ್ಲಿದ್ದಾಗಲೇ ಅಲ್ಲಿಗೆ ಕನಕದಾಸನೂ ಬಂದ. ವ್ಯಾಸರಾಯಸ್ವಾಮಿ ಕನಕನಿಗೆ ಅನುಗ್ರಹ ಮಾಡಿದ್ದು ವ್ಯಾಸಮುನಿಯ ಮಠದವರಿಗೆ ಸಹಿಸಲಿಲ್ಲವೆಂಬ ಸಂಗತಿಯನ್ನು ಪುರಂದರ ದಾಸ ತನ್ನ ಒಂದು ಕೀರ್ತನೆಯಲ್ಲಿ ಪ್ರಸ್ತಾಪಿಸಿದ್ದಾನೆ.

ಡಾ॥ರಾಮು : ಕನಕದಾಸ ಬೇಡರ ಜಾತಿಯಲ್ಲಿ ಹುಟ್ಟಿ ಪಾಳೆಯಗಾರನಾಗಿದ್ದು ವೈರಾಗ್ಯ ಹುಟ್ಟಿದ ಮೇಲೆ ಹರಿದಾಸನಾಗಿ ಕನ್ನಡನಾಡಿನಲ್ಲೆಲ್ಲ ಸಂಚರಿಸಿ ಮುಕ್ತನಾದ. ಈತ ಅನೇಕ ಕೀರ್ತನೆಗಳನ್ನೇ ಅಲ್ಲದೆ ಹರಿಭಕ್ತಿಸಾರ, ಮೋಹನತರಂಗಿಣಿ, ರಾಮಧಾನ್ಯ ಚರಿತ್ರೆ ಮತ್ತು ನಳಚರಿತ್ರೆ ಎಂಬ ಕಾವ್ಯಗಳನ್ನೂ ರಚಿಸಿದ್ದಾನೆ. ಕಾಗಿನೆಲೆ ಆದಿಕೇಶವಸ್ವಾಮಿ ಇವನ ಇಷ್ಟದೈವ. ಆತನ ಅಂಕಿತದಲ್ಲಿಯೇ ಕನಕ ಕೀರ್ತನೆಗಳನ್ನು ಕಟ್ಟಿದ್ದಾನೆ.

ಡಾ॥ಶೀಲ : ಮೋಹನ ತರಂಗಿಣಿ ಶೃಂಗಾರರಸ ಪ್ರಧಾನವಾದ ಸಾಂಗತ್ಯ ಗ್ರಂಥ. ಇದರಲ್ಲಿ ಶ್ರೀಕೃಷ್ಣ ಮಹಿಮಾ ಕಥನ ಮುಖ್ಯವಾಗಿದೆ. ಹರಿಭಕ್ತಿಸಾರ ಮತ್ತು ನಳಚರಿತ್ರೆಗಳು ಲೋಕ ಪ್ರಸಿದ್ಧವಾಗಿವೆ.

ಡಾ॥ರಾಮು : ಹಯವದನ ಎಂಬ ಅಂಕಿತದಲ್ಲಿ ಹಲವು ಕೀರ್ತನೆಗಳನ್ನೂ ವೈಕುಂಠ ವರ್ಣನೆ, ಲಕ್ಷ್ಮಿಶೋಭಾನೆ, ಸ್ವಪ್ನಗದ್ಯ, ಭ್ರಮರಗೀತ ಎಂಬ ಕೃತಿಗಳನ್ನು ರಚಿಸಿ ಪ್ರಸಿದ್ಧನಾಗಿರುವ ವಾದಿರಾಜನೂ ಈ ಕಾಲದವನೇ. ಈತ ಉಡುಪಿಯ ಕೃಷ್ಣಮಠದ ಅಧ್ಯಕ್ಷನಾಗಿದ್ದ.

ಡಾ॥ಶೀಲ : ದಾಸ ಸಾಹಿತ್ಯದ ಜೊತೆಜೊತೆಯಲ್ಲಿಯೇ ಈ ಕಾಲದಲ್ಲಿ ಷಟ್ಪದೀಕಾವ್ಯಗಳ ರಚನೆಯೂ ವಿಶೇಷವಾಗಿ ನಡೆಯಿತು. ಕುಮಾರ ವಾಲ್ಮೀಕಿಯೆಂದು ಹೆಸರಿಟ್ಟುಕೊಂಡ ತೊರೆವೆಯ ನರಹರಿ ವಾಲ್ಮೀಕಿ ರಾಮಾಯಣವನ್ನು ಅನುಸರಿಸಿ ಕನ್ನಡದಲ್ಲಿ ಭಾಮಿನಿ ಷಟ್ಪದಿಯ ಒಂದು ಕಾವ್ಯವನ್ನು ರಚಿಸಿದ್ದಾನೆ. ಇದಕ್ಕೆ ತೊರವೆಯ ರಾಮಾಯಣ ಎಂದೇ ಹೆಸರಾಗಿದೆ. ಬ್ರಾಹ್ಮಣ ಕವಿಗಳು ಬರೆದ ರಾಮಾಯಣಗಳಲ್ಲಿ ಇದೇ ಮೊದಲನೆಯದು. ಈತ ಕುಮಾರವ್ಯಾಸನ ಮಾದರಿಯಲ್ಲಿ ಕಾವ್ಯ ಕಟ್ಟಲು ಹೆಣಗಿದ್ದಾನೆ. ಆದರಿವನು ನಾರಣಪ್ಪನಷ್ಟು ಶಕ್ತನಲ್ಲ. ಅವನಿಗೆ ಲಭಿಸಿದ್ದ ಪ್ರಾಸಾದಿಕವಾಣಿ ಇವನಿಗೆ ಇರಲಿಲ್ಲ. ಹೀಗಿದ್ದರೂ ಲಭಿಸಿರುವ ಕನ್ನಡ ರಾಮಾಯಣಗಳಲ್ಲಿ ಇದು ಉತ್ಕೃಷ್ಟವಾದುದೆಂದು ತೋರುತ್ತದೆ.

ಡಾ॥ರಾಮು : ಕುಮಾರವ್ಯಾಸ ಹೇಳದೇ ಬಿಟ್ಟ ಭಾರತದ ಉತ್ತರಭಾಗವನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದ ತಿಮ್ಮಣ್ಣನೂ ಈ ಕಾಲದವನೇ, ಶ್ರೀ ಕೃಷ್ಣದೇವರಾಯನೇ ಇವನನ್ನು ಭಾರತ ರಚನಾಕಾರ್ಯಕ್ಕೆ ತೊಡಗಿಸಿದ. ಶಾಂತಿಪರ್ವದಿಂದ ಕೊನೆಯವರೆಗೂ ತಿಮ್ಮಣ್ಣ ಭಾರತವನ್ನು ಬರೆದು ಮುಗಿಸಿದ್ದಾನೆ. ಇವನ ಕೃತಿಯಲ್ಲಿ

ತೆಲುಗಿನ ಭಾರತಕರ್ತರಲ್ಲೊಬ್ಬನಾದ ತಿಕ್ಕನ ಸೋಮಯಾಜಿಯ ಪ್ರಭಾವ ವಿಶೇಷವಾಗಿ ಕಾಣುತ್ತದೆ. ಆದರೆ ತಿಕ್ಕನನ ವಚೋವಿಲಾಸವಾಗಲಿ ನಾರಣಪ್ಪನ ಪ್ರತಿಭಾತಿಶಯವಾಗಲಿ ಈತನ ಕೃತಿಯಲ್ಲಿ ಕಾಣಿಸುವುದಿಲ್ಲ.

ಡಾ॥ಶೀಲ : ಕನ್ನಡ ಭಾಗವತವನ್ನು ರಚಿಸಿದ ಚಾಟುವಿಠಲನಾಥನೂ ಈ ಕಾಲದವನೇ. ಭಾಗವತದ ಕೊನೆಯ ಸ್ಕಂಧದಲ್ಲಿ ಚಾಟುವಿಠಲನೆಂಬ ಹೆಸರೇ ಬಂದಿದೆಯಾದರೂ ಉಳಿದ ಭಾಗಗಳಲ್ಲೆಲ್ಲ ಸದಾನಂದಯೋಗಿ ಎಂಬ ಹೆಸರೇ ಇದೆ. ಗ್ರಂಥದ ಉದ್ದಕ್ಕೂ ನಿತ್ಯಾತ್ಮ ಎಂಬ ಅಂಕಿತವಿದೆ. ಈತ ಅಚ್ಯುತಾಣ್ಯನೆಂಬ ಯತಿಯ ಶಿಷ್ಯ. ಆತನ ಪ್ರೇರಣೆಯಿಂದಲೇ ಭವತಾಕರಕವಾದ ಈ ಗ್ರಂಥವನ್ನು ರಚಿಸತೊಡಗಿದುದಾಗಿ ಹೇಳಿಕೊಂಡಿದ್ದಾನೆ.

ಡಾ॥ರಾಮು : ಭಾಗವತದ ಅರ್ಥವನ್ನು ಸಂಗ್ರಹವಾಗಿ ಸುಲಭ ಶೈಲಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಹೇಳುವುದು ಕವಿಯ ಧ್ಯೇಯ. ಹರಿಗುಣಸ್ತುತಿ, ಹರಿಪದಾಂಬುಜ ಶರಣಜನ ಸಂಕೀರ್ತನಗಳೇ ಈ ಭಾಗವತ ಕಾವ್ಯದ ಮುಖ್ಯ ಅಂಶಗಳು.

ಪ್ರತಿಯೊಂದು ಸ್ಕಂದಕ್ಕೂ ಪ್ರತ್ಯೇಕವಾದ ಪೀಠಿಕೆಯಿರುವುದರಿಂದಲೂ ಅಲ್ಲಲ್ಲಿ ವಿದ್ಯಾಯೋಗಿ, ನಿರ್ವಾಣನಾಥ, ಚಾಟುವಿಠಲ, ಸದಾನಂದ ಎಂಬ ಬೇರೆ ಬೇರೆ ಹೆಸರುಗಳು ಬಂದಿರುವುದರಿಂದಲೂ ಈ ಕಾವ್ಯವನ್ನು ಹಲವು ಕವಿಗಳು ಬರೆದಿರಬೇಕೆಂಬ ಊಹೆಗೆ ಅವಕಾಶವಾಗಿದೆ. ಹನ್ನೆರಡು ಸಾವಿರಕ್ಕೂ ಹೆಚ್ಚಿನ ಪದ್ಯಗಳನ್ನೊಳಗೊಂಡ ಈ ಭಾಗವತ ವಿಸ್ತಾರವಾದ ಕಾವ್ಯವಾಗಿದೆ. ಈ ಕೃತಿಯೂ ಕುಮಾರವ್ಯಾಸನಿಂದ ಪ್ರಭಾವಿತನಾಗಿರುವ ಸಂಗತಿ ಸುವೇದ್ಯವಾಗಿದೆ.

ಡಾ॥ಶೀಲ : ವೈಷ್ಣವ ಕಾವ್ಯಗಳು ರಚನೆಯಾಗುತ್ತಿದ್ದಂತೆಯೇ ಆ ಕಾಲದಲ್ಲಿ ವಿರೂಪಾಕ್ಷ ಪಂಡಿತ, ಸಿಂಗಿರಾಜ ಮೊದಲಾದ ವೀರಶೈವ ಕವಿಗಳೂ ಷಟ್ಪದೀ ಕಾವ್ಯಗಳನ್ನು ರಚಿಸಿದರು. ಸಿಂಗಿರಾಜನ ಬಸವಚರಿತ್ರೆಗೆ ವಲಬಸವಚಾರಿತ್ರ ಎಂದು ಹೆಸರಿದೆ. ಅದು ಬಹುಶಃ ವಿಮಲಬಸವಚಾರಿತ್ರ ಎಂದು ಇದ್ದಿರಬೇಕು. ಇದನ್ನು ಸಾಮಾನ್ಯವಾಗಿ ಸಿಂಗಿರಾಜಪುರಾಣ ಎಂದೇ ಕರೆಯುತ್ತಾರೆ. ಇದರಲ್ಲಿ ಬಸವಣ್ಣನ ಅನೇಕ ಪವಾಡಗಳ ವರ್ಣನೆ ಬಂದಿದೆ. ಇದು ವಾರ್ಧಕ ಷಟ್ಪದಿಯಲ್ಲಿದೆ. ಅಲ್ಲಲ್ಲಿ ಉಳಿದ ಷಟ್ಪದೀಪದ್ಯಗಳೂ ಬಂದಿವೆ. ಶಿವನ ಆಸ್ಥಾನದ ಇಬ್ಬರು ದ್ವಾರಪಾಲಕರು ಶಾಪಹತರಾಗಿ ಭೂಮಿಯ ಮೇಲೆ ಬಿಜ್ಜಳ, ಕರ್ಣದೇವರಾಗಿ ಹುಟ್ಟಿದರಂತೆ.

ಡಾ॥ರಾಮು : ನಂದಿ ಕೈಲಾಸದಲ್ಲಿ ತಾನು ಧರಿಸಿದ್ದ ಲಿಂಗವನ್ನು ಕಳೆದುಕೊಂಡಿದ್ದರಿಂದ ಆಸ್ಥಾನಕ್ಕೆ ಪ್ರವೇಶ ದೊರೆಯದೆ ಶಿವನ ಆಣತಿಯಂತೆ ಬಸವಣ್ಣನಾಗಿ ಭೂಲೋಕದಲ್ಲಿ ಹುಟ್ಟಿ ತನ್ನ ಎಂಟನೆಯ ವಯಸ್ಸಿನಲ್ಲಿ ಒಬ್ಬ ಹುಡುಗನನ್ನು ಬಾವಿಗೆ ತಳ್ಳಿದನೆಂಬ ಅಪವಾದಕ್ಕೆ ಸಿಕ್ಕಿ ತನ್ನ ಸೋದರಿಯೊಡನೆ ಕಪ್ಪಡಿ ಸಂಗಮಕ್ಕೆ ಹೊರಟು ಹೋದನೆಂದೂ ಹೇಳಲಾಗಿದೆ. ವಿರೂಪಾಕ್ಷ ವಿರಚಿತವಾದ ಚನ್ನಬಸವ ಪುರಾಣ ಜನಪ್ರಿಯವಾದ ವಾರ್ಧಕ ಷಟ್ಪದೀಕಾವ್ಯ ಗುರುಲಿಂಗವಿಭು ಬರೆದ ಭಿಕ್ಷಾಟನ ಚರಿತ್ರೆ ಸ್ವಾರಸ್ಯವಾದ ಕಾವ್ಯ. ಶಿವ ದ್ವಾರಾವತಿಗೆ ಹೋಗಿ ಭಿಕ್ಷಾಟನೆ ಮಾಡಿ ಬ್ರಹ್ಮಕಪಾಲವನ್ನು ತುಂಬುವಂತೆ ಶ್ರೀಕೃಷ್ಣನಿಗೆ ಹೇಳಲು ಅದು ಅವನಿಂದ ಸಾಧ್ಯವಾಗಲಿಲ್ಲ.

ಡಾ॥ಶೀಲ : ಆಗ ಅವನು ಭಾರತ ಯುದ್ಧ ಹೂಡಿ ಆ ಕಪಾಲವನ್ನು ರಕ್ತದಿಂದ ತುಂಬಿದನೆಂಬುದೇ ಈ ಕಾವ್ಯದ ಕಥಾವಸ್ತು. ಕಥೆಗಿಂತ ಕವಿಯ ವಚೋವಿಲಾಸವೇ ಆಕರ್ಷಕವಾಗಿದೆ. ಇವನ ಕಾವ್ಯ ವಸ್ತುಕಕವೀಂದ್ರರ, ವರ್ಣಕಕವೀಶ್ವರರ ಕರ್ಣಾಭರಣ. ಆಶು, ಮಧುರಂ, ಚಿತ್ರ, ವಿಸ್ತಾರ ಎಂಬ ನಾಲ್ಕು ಬಗೆಯಲ್ಲಿಯೇ ಈತ ಕಾವ್ಯ ವಿರಚಿಸಲು ಬಲ್ಲನಂತೆ. ಈ ಮೋಹಕ ಕೃತಿ ರಸಿಕಾಭರಣ ಎಂಬ ಪ್ರಶಂಸೆ ಪೂರ್ಣವಾಗಿ ಸುಳ್ಳಲ್ಲ. ಹೆಸರು ಹಾಲಯ್ಯನು ಎರೆದುಣ್ಬು ದಂಬಲವು–ಎಂದುಸಿರುವರ ಗಾದೆಯಂತಲ್ಲವೆನ್ನೀಕೃತಿಯ ಹೆಸರು–ಎಂದು ಕವಿ ತನ್ನ ಕಾವ್ಯದ ಹಿರಿಮೆಯನ್ನು ಹೊಗಳಿಕೊಂಡಿದ್ದಾನೆ.

ಡಾ॥ರಾಮು : ಸಾಳ್ವನೆಂಬ ಜೈನಕವಿ ರಚಿಸಿದ ಜಿನಭಾರತ ಈ ಕಾಲದ ಇನ್ನೊಂದು ಗಣ್ಯ ಷಟ್ಪದೀಕಾವ್ಯ. ಇದಕ್ಕೆ ನೇಮೀಶ್ವರಚರಿತ್ರೆಯೆಂದೂ ಹೆಸರು. ಇತರ ಭಾರತಗಳು ದೂಷ್ಯವೆಂದೂ ತನ್ನ ಈ ಕೃತಿ ಜಿನಪಾವನವಾದ್ದರಿಂದ ಮಹಾಪವಿತ್ರವೆಂದೂ ಕವಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಇದು ಪಾಡುಗವಿತೆಯಾದ್ದರಿಂದ ಶಿಥಿಲದ್ವಿತ್ವ ಮುಂತಾದವನ್ನು ಇಲ್ಲಿ ನಿರೀಕ್ಷಿಸಬಾರದೆಂದು ಸಾಳ್ವ ಹೇಳಿಕೊಂಡಿದ್ದಾನೆ. ಈ ಕಾವ್ಯದಲ್ಲಿ ಹರಿವಂಶ ಕುರುವಂಶಗಳೆರಡರ ಕಥೆಯನ್ನೂ ಹೇಳಿದೆ.

ಡಾ॥ಶೀಲ : ದೊಡ್ಡಯ್ಯನ ಚಂದ್ರಪ್ರಭಚರಿತ್ರೆ, ರತ್ನಾಕರವರ್ಣಿಯ ಭರತೇಶವೈಭವ, ನಂಜುಂಡ ಕವಿಯ ಕುಮಾರರಾಮನ ಕಥೆ–ಇವು ಆ ಕಾಲದ ಪ್ರಧಾನವಾದ ಸಾಂಗತ್ಯಕಾವ್ಯಗಳು.

ಕರ್ಣಾಟ ದೇಶಾಧೀಶ್ವರನಾದ ಕಂಪನೃಪತಿಯ ಕುಮಾರ ರಾಮನಾಥನ ಚರಿತ್ರೆಯೇ ನಂಜುಂಡಕವಿಯ ಕಾವ್ಯದ ವಸ್ತು. ಈ ಕಾವ್ಯದಲ್ಲಿ ಅಂದಿನ ಕನ್ನಡ ನಾಡಿನ ಚರಿತ್ರೆಯ ಪರಿಚಯವಾಗುತ್ತದೆ. ಐತಿಹಾಸಿಕ ವಿಷಯವನ್ನು ಆರಿಸಿಕೊಂಡು ಕೃತಿ ರಚನೆ ಮಾಡಿದವರಲ್ಲಿ ನಂಜುಂಡಕವಿಯೇ ಮೊದಲಿಗನೆಂದು ತೋರುತ್ತದೆ. ಇವನಿಗೆ ಕವಿತಾವಿಶಾರದನೆಂದು ಬಿರುದು. ಕಾಳಿದಾಸನ ವಿಷಯದಲ್ಲಿ ನಂಜುಂಡನಿಗೆ ಬಹಳ ಭಕ್ತಿ.

ಕವಿತಾ ವನಿತೆಯ ಸಂಗಕೆ ಪೆಣ್ಗನ
ಸವಿಯೆಲ್ಲವೆಂದಾವಾಣಿ
ತವಕದಿಂ ಗಂಡುರೂಪಾಂತಳೆಂಬಂತಿರ್ದ
ಕವಿಕಾಳಿದಾಸಗೆಱಗುವೆ

ಎಂದು ಕವಿಕುಲಗುರುವೆನಿಸಿದ ಕಾಳಿದಾಸನನ್ನು ನಂಜುಂಡ ಹೊಸ ಬಗೆಯಾಗಿ ಹೊಗಳಿದ್ದಾನೆ.

ಡಾ॥ರಾಮು : ಕಾವ್ಯದಲ್ಲಿ ಬರುವ ಕುಮಾರರಾಮನ ಪರದಾರಾಸಹೋದರತ್ವ ಮತ್ತು ಯುದ್ಧರಂಗದಲ್ಲಿ ಆತ ತೋರಿದ ಸಾಹಸಗಳ ವರ್ಣನೆಗಳಿಂದಾಗಿ ಕಥೆಗೆ ವಿಶೇಷ ಆಕರ್ಷಣೆ ಒದಗಿದೆ. ಯುದ್ಧ ಚಿತ್ರಣವಂತೂ ಬಹುನೈಜವಾಗಿ ಮೂಡಿನಿಂತಿದೆ.

ಡಾ॥ಶೀಲ : ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ದಿವ್ಯಚರಿತ್ರೆಯೇ ದೊಡ್ಡಯ್ಯನ ಕಾವ್ಯವಸ್ತು. ಆದಿತೀರ್ಥಂಕರನ ಕಾಲದ ಭರತಚಕ್ರವರ್ತಿಯ ಬದುಕಿನ ಹಿರಿಮೆಯನ್ನು ಕೊಂಡಾಡುವುದೇ ರತ್ನಾಕರ ವರ್ಣಿಯ ವಿಸ್ತಾರವಾದ ಕೃತಿಯ ಏಕೈಕ ಧ್ಯೇಯ. ಹರಿಹರನಿಗೆ ರಗಳೆ ಹೇಗೆ ಒಲಿಯಿತೋ ರತ್ನಾಕರನಿಗೆ ಹಾಗೆ ಸಾಂಗತ್ಯ ಒಲಿದಿದೆಯೆನ್ನಬೇಕು. ಸಾಂಗತ್ಯ ಕವಿಗಳಲ್ಲಿ ಇವನು ಅಗ್ರಗಣ್ಯನೆನ್ನಬಹುದು. ಇವನ ಧಾರಾವಾಹಿಯಾದ ಶೈಲಿ ಮೆಚ್ಚುವಂಥಾದ್ದು. ಭರತ ಗಣನೆಗೆ ಸಿಕ್ಕದ ರಾಜ್ಯೈಶ್ವರ್ಯದ ಸುಖೋಪಭೋಗಗಳಲ್ಲಿ ಓಲಾಡಿ ಕೊನೆಗೆ ಕ್ಷಣಮಾತ್ರದಲ್ಲಿ ಕರ್ಮವನ್ನು ಸುಟ್ಟು ಜಿನನಾದ ವೈಭವವನ್ನು ಕವಿ ಈ ಕಾವ್ಯದಲ್ಲಿ ವರ್ಣಿಸಿದ್ದಾನೆ. ಜನರು ಅಲ್ಪರ ಕಥೆಗಳಿಗೆ ಮನಸ್ಸು ಕೊಟ್ಟು ಕೆಡಬಾರದೆಂಬ ಉದ್ದೇಶದಿಂದ ಅಂಗಸುಖಿಯ ಮೋಕ್ಷಸುಖಿಯ ಕಾವ್ಯವನಿಷ್ಟು ಶೃಂಗಾರದಲಿ ಹೇಳಿದುದಾಗಿ ಘೋಷಿಸಿದ್ದಾನೆ. ಸುಖಭೋಗದಲ್ಲಿ ಭಾಗವಹಿಸಿದರೂ ಪರಮ ವೈರಾಗ್ಯ ಭಾವದಿಂದ ನಡೆದುಕೊಳ್ಳುವ ಭರತನ ಮನೋಧರ್ಮ ಕಾವ್ಯದುದ್ದಕ್ಕೂ ಕಂಡು ಬರುತ್ತದೆ.

ಡಾ॥ರಾಮು : ಮೊದಲಿಗೆ ಪಂಪಕವಿ ಆದಿ ಪುರಾಣದಲ್ಲಿ ಭರತ ಬಾಹುಬಲಿಗಳ ಯುದ್ಧ ಸಂದರ್ಭವನ್ನು ಲೋಕ ಪ್ರಸಿದ್ಧವಾದ ರೀತಿಯಲ್ಲಿ ಚಿತ್ರಿಸಿ ಕೃತಾರ್ಥನಾದನಷ್ಟೆ. ಇಲ್ಲಿ ಭರತೇಶ ವೈಭವದಲ್ಲಿ ರತ್ನಾಕರವರ್ಣಿ ಅದೇ ಸಂದರ್ಭವನ್ನೆತ್ತಿಕೊಂಡು ಚಮತ್ಕಾರವಾಗಿ ಅದಕ್ಕೊಂದು ತಿರುವು ಕೊಟ್ಟು ಯುದ್ಧವೇ ನಡೆಯದಂತೆ

ಮಾಡಿದ್ದಾನೆ. ಈ ಭಾಗವೂ ಮೊದಲಿನ ಭೋಗಭಾಗವೂ ಬಹು ಸುಂದರವಾಗಿ ರೂಪುಗೊಂಡಿವೆ. ಕಾವ್ಯದ ಉದ್ದಕ್ಕೂ ಪುಟ್ಟ ಸಾಂಗತ್ಯದ ಮಿತವ್ಯಾಪ್ತಿಯಲ್ಲಿ ಕವಿ ತೋರುವ ವರ್ಣನಾ ಸಾಮರ್ಥ್ಯ ಅನನ್ಯ ಸಾಧಾರಣವಾದುದು. ಈ ಶತಾಬ್ದದ ಜೈನಕವಿಗಳಲ್ಲಿ ರತ್ನಾಕರ ನಿಸ್ಸಂಶಯವಾಗಿ ಅಗ್ರಗಣ್ಯ. ಭರತೇಶವೈಭವವನ್ನೇ ಅಲ್ಲದೆ ಈತ ತ್ರಿಲೋಕ ಶತಕ ಮತ್ತು ಅಪರಾಜಿತೇಶ್ವರ ಶತಕ ಎಂಬ ಎರಡು ಶತಕಗಳನ್ನೂ ರಚಿಸಿದ್ದಾನೆ. ಇವುಗಳಲ್ಲಿ ನೀತಿ ವೈರಾಗ್ಯ, ಆತ್ಮವಿಚಾರಗಳನ್ನು ಜೈನಮತಾನುಸಾರದ ಪ್ರಪಂಚ ಸ್ವರೂಪವನ್ನು ವರ್ಣಿಸಲಾಗಿದೆ.

ಡಾ॥ಶೀಲ : ಷಟ್ಪದಿ, ಸಾಂಗತ್ಯ, ಕೀರ್ತನೆಗಳೇ ಅಲ್ಲದೆ ಈ ಕಾಲದಲ್ಲಿ ಕೆಲವು ಚಂಪೂ ಕೃತಿಗಳೂ ಬೆಳಕಿಗೆ ಬಂದವು. ಸುರಂಗಕವಿಯ ತ್ರಿಷಷ್ಟಿಪುರಾತನರ ಚರಿತ್ರೆ, ವೀರಭದ್ರರಾಜನ ವೀರಭದ್ರವಿಜಯ ಮೊದಲಾದವನ್ನು ಹೆಸರಿಸಬಹುದು.

ಡಾ॥ರಾಮು : ನಿಜಗುಣಶಿವಯೋಗಿ ಅನುಭವಸಾರವೆಂಬ ಒಂದು ತ್ರಿಪದಿಯ ಗ್ರಂಥವನ್ನೇ ರಚಿಸಿದ್ದಾನೆ. ತ್ರಿಪದಿ ಬಹಳ ಹಿಂದಿನ ಕಾಲದಲ್ಲಿಯೇ ಬಳಕೆಯಲ್ಲಿದ್ದತಾದರೂ ಒಂದು ಇಡೀ ಗ್ರಂಥವನ್ನೇ ಆ ಛಂದಸ್ಸಿನಲ್ಲಿ ಬರೆದವರಲ್ಲಿ ನಿಜಗುಣ ಶಿವಯೋಗಿಯೇ ಮೊದಲನೆಯವ. ಅರುವತ್ತು ಮೂವರ ತ್ರಿಪದಿ ಎಂಬ ಇನ್ನೊಂದು ತ್ರಿಪದೀ ಗ್ರಂಥವೂ ಇವನದೇ. ಅನುಭವಸಾರವೆಂಬುದು ಗುರುಶಿಷ್ಯ ಸಂವಾದರೂಪದ ಗ್ರಂಥ. ಸಕಲ ವೇದಾಂತಸಾರವನ್ನೇ ತಿಳಿಯುವಂತೆ ಸಾಧಕರಿಗೆ ಬರೆದೆನು – ಎಂಬುದು ಕವಿಯ ಪ್ರತಿಜ್ಞೆ. ಈ ಕವಿ ಕೆಲವು ಹಾಡುಗಳನ್ನೂ ವಿವೇಕ ಚಿಂತಾಮಣಿಯೆಂಬ ಗದ್ಯಗ್ರಂಥವನ್ನೂ ಪರಮಾನುಭವ ಬೋಧೆ ಎಂಬ ಒಂದು ಸಾಂಗತ್ಯ ಗ್ರಂಥವನ್ನೂ ರಚಿಸಿದ್ದಾನೆ.

ಡಾ॥ಶೀಲ : ಅಭಿನವವಾದಿವಿದ್ಯಾನಂದನೆಂಬ ಒಬ್ಬ ಜೈನ ಕವಿ ಈ ಶತಾಬ್ದದಲ್ಲಿ ಒಂದು ಸಂಕಲನ ಗ್ರಂಥವನ್ನು ರಚಿಸಿದ್ದಾನೆ. ಇದು ಬಹಳ ಮಟ್ಟಿಗೆ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವವನ್ನು ಹೋಲುತ್ತದೆ. ಇವನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಾನು ಪದ್ಯಗಳನ್ನು ಆಯ್ಕೆ ಮಾಡಿದ ಮೂಲ ಕಾವ್ಯಗಳ ಹೆಸರುಗಳನ್ನೂ ಹೇಳಿದ್ದಾನೆ. ಆದ್ದರಿಂದ ಹಿಂದಿನ ಕವಿಗಳ ಕಾಲನಿರ್ಣಯಕ್ಕೆ ಈ ಕೃತಿ ಸಹಾಯಕವಾಗಿದೆ. ವಿಜಯ ಸಂವತ್ಸರದ ಭಾದ್ರಪದ ಬಹುಳ ಮೂರರಲ್ಲಿ ಶ್ರೀಮದಭಿನವ ವಾದಿವಿದ್ಯಾನಂದಸ್ವಾಮಿಗಳು ಭಲ್ಲಾತಕೀಪುರವರಾಧೀಶ್ವರ ವೈರಾಗಿಗೆ ಬರೆಸಿಕೊಟ್ಟ ಕಾವ್ಯಸಾರ ಎಂದು ಹೇಳಿರುವುದರಿಂದ ಈ ವಿದ್ಯಾನಂದ ಯಾವುದೋ ಮಠದ ಸ್ವಾಮಿಯಾಗಿದ್ದಿರಬಹುದೆಂದು ತೋರುತ್ತದೆ.

ಡಾ॥ರಾಮು : ರಸರತ್ನಾಕರ ಮತ್ತು ಶಾರದಾವಿಲಾಸ ಎಂಬ ಎರಡು ಶಾಸ್ತ್ರಗಳು ಈ ಕಾಲದಲ್ಲಿ ಹುಟ್ಟಿದವು. ಕನ್ನಡದಲ್ಲಿ ಧ್ವನಿ ವಿಷಯಕವಾದ ಗ್ರಂಥವೆಂದರೆ ಈ ಶಾರದಾ ವಿಲಾಸವೊಂದೇ ಎಂದು ತೋರುತ್ತದೆ.

ಡಾ॥ಶೀಲ : ಹದಿನೇಳನೆಯ ಶತಾಬ್ದ ಮೈಸೂರು ರಾಜರು ಅಭಿವೃದ್ಧಿಗೆ ಬಂದಕಾಲ. ಚಾಮರಾಜ ಮತ್ತು ಚಿಕ್ಕದೇವರಾಯರು ಕವಿಪೋಷಕರಾಗಿ ಅನೇಕ ಕನ್ನಡ ಕೃತಿಗಳ ರಚನೆಗೆ ಪ್ರೇರಕರಾದರು.

ಚಿಕ್ಕದೇವರಾಯ ಸ್ವಯಂ ಕವಿಯೂ ಆಗಿದ್ದ. ಈ ಕಾಲದಲ್ಲಿ ವೈಷ್ಣವ ಸಾಹಿತ್ಯ ವಿಶೇಷವಾಗಿ ಬೆಳೆಯಿತು. 1617ರಿಂದ 1637ರ ವರೆಗೆ ರಾಜ್ಯವಾಳಿದ ಚಾಮರಾಜ ವಿರೂಪಾಕ್ಷನೆಂಬ ಮಹಾವಿದ್ವಾಂಸನಿಂದ ವಾಲ್ಮೀಕಿ ರಾಮಾಯಣಕ್ಕೆ ಗದ್ಯರೂಪವಾದ ಟೀಕೆಯನ್ನು ಬರೆಯಿಸಿದ. ಇದಕ್ಕೆ ಚಾಮರಾಜೋಕ್ತಿವಿಲಾಸವೆಂದು ಹೆಸರು. ಈ ಗ್ರಂಥದ ಆದಿಯಲ್ಲಿ ವಿಷ್ವಕ್ಸೇನ ಮತ್ತು ಗಣೇಶರ ಸ್ತೋತ್ರವಿದೆ. ಈ ಅರಸನ ಆಶ್ರಯದಲ್ಲಿಯೇ ಬ್ರಹ್ಮೋತ್ತರ ಖಂಡ ಟೀಕೆ ಅಥವಾ ಮಣಿ ಪ್ರಕಾಶ ಎಂಬ 22 ಸಂಧಿಗಳ ಒಂದು ವ್ಯಾಖ್ಯಾನ ಗ್ರಂಥದ ರಚನೆ ನಡೆಯಿತು.

ಡಾ॥ಶೀಲ : ಚಿಕ್ಕದೇವರಾಯ ಮೈಸೂರು ರಾಜ್ಯವನ್ನು ವಿಸ್ತಾರ ಮಾಡಿ ಬಹಳ ಪ್ರಭಾವಶಾಲಿಯಾಗಿದ್ದ ದೊರೆ. ಈತ ಸ್ವಯಂ ಕವಿ, ಸಾಹಿತ್ಯವಿದ್ಯಾನಿಕಷಪ್ರಸ್ತರಂ, ರಸಿಕಜನಕರ್ಣರಸಾಯನೀಕೃತಸಂಗೀತವಿಸ್ತರಂ–ಎಂಬ ಬಿರುದುಗಳು ಈ ಪ್ರಭುವಿಗೆ ಸಂದಿವೆ. ಚಿಕ್ಕದೇವರಾಜಬಿನ್ನಪ ಎಂಬ ಗದ್ಯಗ್ರಂಥ ವಿಶಿಷ್ಟಾದ್ವೈತ ಮತತತ್ತ್ವಗಳನ್ನು ನಿರೂಪಿಸುವ ಮೂವತ್ತು ಬಿನ್ನಪದಗಳನ್ನೊಳಗೊಂಡಿದೆ. ಮೇಲುಕೋಟೆ ನಾರಾಯಣಸ್ವಾಮಿಯಲ್ಲಿ ಕವಿ ಭಕ್ತಿಯಿಂದ ನಿವೇದಿಸಿಕೊಂಡ ಬಿನ್ನಪಗಳ ಸಂಗ್ರಹವಿದು.

ಡಾ॥ರಾಮು : ಗೀತಗೋಪಾಲ ಎಂಬುದು ಜಯದೇವನ ಗೀತಗೋವಿಂದ ಮಾದರಿಯಲ್ಲಿ ರಚಿತವಾದ ಭಕ್ತಿಪ್ರದಾನವಾದ ಗೀತೆಸಂಕಲನ. ಇದರಲ್ಲಿನ ಅನೇಕ ಹಾಡುಗಳು ಸಂಗೀತಕ್ಕೆ ಬಹಳ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಈ ಕೃತಿಯನ್ನು ಅರಸನ ಆಶ್ರಿತನಾದ ತಿರುಮಲಾಚಾರ್ಯನೆಂಬ ಕವಿ ರಚಿಸಿದನೆಂಬ ಸಂದೇಹವೂ ಇದೆ. ಕೆಲವು ಹಾಡುಗಳಲ್ಲಿ ತಿರುಮಲಾಚಾರ್ಯನ ಅಂಕಿತವಿದೆ.

ಡಾ॥ಶೀಲ : ಈ ಎರಡೂ ಗ್ರಂಥಗಳಲ್ಲಿ ಸ್ಪಷ್ಟವಾದ ಧರ್ಮನಿರೂಪಣೆಯಿರುವುದರೊಂದಿಗೆ ಕಾವ್ಯತೆಯೂ ಎದ್ದು ಕಾಣುತ್ತದೆ. ಚಿಕ್ಕದೇವರಾಜಸೂಕ್ತಿವಿಲಾಸ ಎಂಬ ಹೆಸರಿನಲ್ಲಿ ಸಂಸ್ಕೃತ ಭಾಗವತಕ್ಕೆ ಬರೆದ ಕನ್ನಡ ಟೀಕೆಯೂ ಶಾಂತಿಪರ್ವದಿಂದ ತೊಡಗಿ ಭಾರತದ ಉಳಿದ ಪರ್ವಗಳಿಗೆ ಬರೆದ ಒಂದೊಂದು ಟೀಕೆಯೂ ಈ ರಾಜ ಕಾಲದಲ್ಲಿ ರಚಿತವಾಗಿವೆ. ವೈಷ್ಣವರಿಗೆ ಆದರಣೀಯವಾದ ಮಹಾ ಗ್ರಂಥಗಳಿಗೆ ಕನ್ನಡ ಟೀಕೆ ಬರೆಯುವ ಸಂಪ್ರದಾಯ ಈ ಕಾಲದಲ್ಲಿ ಬೆಳೆಯಿತು. ಚಿಕ್ಕದೇವರಾಜನ ಆಶ್ರಿತನಾದ ಚಿಕ್ಕುಪಾಧ್ಯಾಯನೆಂಬ ಬ್ರಾಹ್ಮಣ ಕಾಮಂದಕನೀತಿ. ಶೇಷಧರ್ಮ, ಯದುಗಿರಿ ಮಹಾತ್ಮೆ ಮೊದಲಾದ ಹಲವು ಗದ್ಯ ಗ್ರಂಥಗಳನ್ನು ರಚಿಸಿದ ; ಶುಕಸಪ್ತತಿಯೆಂಬ ಸಂಸ್ಕೃತ ಕೃತಿಯನ್ನೂ, ವಿಷ್ಣುಪುರಾಣವನ್ನೂ ಕನ್ನಡಕ್ಕೆ ಅನುವಾದ ಮಾಡಿದ.

ಡಾ॥ರಾಮು : ಚಿಕ್ಕುಪಾಧ್ಯಾಯ ಇಪ್ಪತ್ತೆಂಟಕ್ಕಿಂತ ಹೆಚ್ಚಿನ ಕೃತಿಗಳನ್ನು ಕನ್ನಡದಲ್ಲಿ ರಚಿಸಿದ್ದಾನೆ. ಅವುಗಳಲ್ಲಿ ಹಲವು ಚಂಪೂಕಾವ್ಯಗಳೂ ಸಾಂಗತ್ಯಕೃತಿಗಳೂ ಇವೆ. ಎಲ್ಲ ಕೃತಿಗಳಲ್ಲಿಯೂ ಶ್ರೀವೈಷ್ಣವಸಿದ್ಧಾಂತ ಪ್ರತಿಪಾದನೆಗೇ ಪ್ರಾಮುಖ್ಯ. ನೀತಿಪ್ರಚಾರ, ಭಗವದ್ಗುಣಗಾನ, ಹಲವು ಪುಣ್ಯಕ್ಷೇತ್ರಗಳ ಮಹಿಮಾನಿರೂಪಣೆ ಇವು ಕವಿಯ ಮುಖ್ಯ ಗುರಿಗಳು.

ಡಾ॥ಶೀಲ : ತಿರುಮಲಾರ್ಯ ಚಿಕ್ಕದೇವರಾಯನ ಬಾಲ್ಯಸ್ನೇಹಿತನಾದ ಕವಿ. ಅವನೊಲ್ಮೆಪುಮಾಕೃತಿವೆತ್ತವೊಲೆಸೆವ ಸುಕೃತಿ ತಿರುಮಲೆಯಾರ್ಯಂ – ಎಂದು ಅವನೇ ಹೇಳಿಕೊಂಡಿದ್ದಾನೆ. ಈತ ಅಪ್ರತಿಮವೀರಚರಿತೆ ಎಂಬ ಅಲಂಕಾರಶಾಸ್ತ್ರ ಕೃತಿಯನ್ನೂ, ಚಿಕ್ಕದೇವರಾಯವಂಶಾವಳಿ ಎಂಬ ಗದ್ಯಗ್ರಂಥವನ್ನೂ ರಚಿಸಿದ್ದಾನೆ. ಅಪ್ರತಿಮವೀರ ಎಂಬುದು ಅರಸನ ಪ್ರೀತಿಯ ಬಿರುದು. ಅವನ, ಪರಾಕ್ರಮ ವರ್ಣನೆಯನ್ನೊಳಗೊಂಡ ಉದಾಹರಣ ಪದ್ಯಗಳ ಗ್ರಂಥವಾದ್ದರಿಂದ ಇವನ ಅಲಂಕಾರ ಶಾಸ್ತ್ರ ಗ್ರಂಥಕ್ಕೆ ಅಪ್ರತಿಮವೀರಚರಿತೆ ಎಂಬ ಹೆಸರು. ಚಿಕ್ಕದೇವರಾಯವಂಶಾವಳಿ ಅಪೂರ್ಣ ಗ್ರಂಥ.

ಡಾ॥ರಾಮು : ಅರಸನ ಬಾಲ್ಯದ ವರ್ಣನೆಯಾಗುತ್ತಲೇ ಕಾವ್ಯ ನಿಂತು ಹೋಗಿದೆ. ಉದ್ದೇಶ ಪೂರ್ವಕವಾಗಿ ಆ ಕಾಲದ ಆಡುಮಾತನ್ನು ಬಿಟ್ಟು ಹಳಗನ್ನಡದಲ್ಲಿ ಬರೆದ ಕೃತಿ ಇದು. ಇದರಲ್ಲಿಯೂ ಅಳಹಿಯ ಸಿಂಗರಾರ್ಯನ ಕಥೆಯ ಸಂದರ್ಭದಲ್ಲಿ ವಿಶಿಷ್ಟಾದ್ವೈತ ಮತತತ್ತ್ವಗಳ ನಿರೂಪಣೆ ಬಂದಿದೆ. ಈತನ ಚಿಕ್ಕದೇವರಾಜವಿಜಯ ಎಂಬ ಚಂಪೂಕಾವ್ಯವೂ ಅಸಮಗ್ರವಾಗಿದ್ದು ಅದರ ಆರು ಆಶ್ವಾಸಗಳು ಮಾತ್ರ ದೊರೆತಿವೆ. ಈ ಕಾಲದಲ್ಲಿ ಚಂಪೂ ಸಂಪ್ರದಾಯದ ಪುನರುಜ್ಜೀವನದ ಪ್ರಯತ್ನ ನಡೆಯಿತಾದರೂ ಕೃತಿಗಳಾವುವೂ ಪಂಪ ರನ್ನರ ಅಂತಸ್ತಿಗೇರಲಾರದೆ ಹೋದುವು.

ಡಾ॥ಶೀಲ : ಈ ಕಾಲದ ಅತ್ಯಂತ ಪ್ರೌಢ ಚಂಪೂಕವಿ ಷಡಕ್ಷರ ದೇವ. ಈತ ರಾಜಶೇಖರ ವಿಲಾಸ. ಶಬರಶಂಕರವಿಲಾಸ ಮತ್ತು ಬಸವರಾಜವಿಜಯ ಎಂಬ ಮೂರು ಚಂಪೂಕಾವ್ಯಗಳನ್ನು ರಚಿಸಿದ್ದಾನೆ. ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಅಮಿತವಾದ ಪಾಂಡಿತ್ಯಗಳಿಸಿ ಅಪೂರ್ವವಾದ ಭಾಷಾ ಪ್ರಭುತ್ವವನ್ನು ಹೊಂದಿದ್ದ ಕವಿ ಈತ. ಈತ ವರ್ಣಣಾಕುಶಲ. ಪ್ರಧಾನವಾಗಿ ಪಂಡಿತ ಕವಿ. ಇವನಲ್ಲಿ ಸಂಸ್ಕೃತಪದಗಳ ಬಳಕೆ ವಿಶೇಷ. ರಾಜಶೇಖರವಿಲಾಸವೆಂಬುದು ಸತ್ಯೇಂದ್ರ ಚೋಳನ ಮಗ ರಾಜಶೇಖರನ ವೀಥೀವಿಹಾರಕಾಲದಲ್ಲಿ ಶಿವಭಕ್ತ ಬಾಲಕನೊಬ್ಬ ಕುದುರೆಯ ಕಾಲಿಗೆ ಸಿಕ್ಕಿ ಸಾಯಲು ಅರಸನಿಂದ ಮರಣದಂಡನೆಗೆ ಗುರಿಯಾದ ರಾಜಶೇಖರ ಶಿವಭಕ್ತಿಯ ಪ್ರಭಾವದಿಂದ ತಾನೂ ಬದುಕಿ ಇತರರನ್ನೂ ಉಜ್ಜೀವಿಸಿದ ಕಥೆ. ಕಥೆ ಸ್ವಲ್ಪ, ವರ್ಣನೆ ಹೆಚ್ಚು. ಈ ಸಣ್ಣ ಕಥೆಯೇ ಷಡಕ್ಷರಿಯ ಕೈಲಿ ಹದಿನಾಲ್ಕು ಆಶ್ವಾಸಗಳ ವಿಸ್ತಾರವಾದ ಚಂಪೂಕಾವ್ಯವಾಗಿ ಬೆಳೆದಿದೆ. ಶಬರ ಶಂಕರವಿಲಾಸ, ಅದರ ಹೆಸರೇ ಹೇಳುವಂತೆ ಕಿರಾತಾರ್ಜುನೀಯ ವೃತ್ತಾಂತವನ್ನು ಹೇಳುವ ಕಾವ್ಯ. ಬಸವರಾಜ ವಿಜಯ ಅಥವಾ ವೃಷಭಾರಾಜೇಂದ್ರ ವಿಜಯ ಬಸವಣ್ಣನವರ ಜೀವನ ವೃತ್ತಾಂತವನ್ನು ಹೇಳುವ ಕೃತಿ. ಬಹಳ ಮಟ್ಟಿಗೆ ಇದು ಪಾಲ್ಕುರಿಕೆ ಸೋಮನಾಥನ ಕೃತಿಯನ್ನು ಅನುಸರಿಸುತ್ತದೆ.

ಡಾ॥ರಾಮು : ಶಿಂಗರಾರ್ಯನೆಂಬ ರಾಜಾಶ್ರಿತನಾದ ಶ್ರೀವೈಷ್ಣವ ಕವಿ ಮಿತ್ರವಿಂದಾ ಗೋವಿಂದ ಎಂಬ ಒಂದು ನಾಟಕ ಬರೆದಿದ್ದಾನೆ. ರತ್ನಾವಳಿ ನಾಟಕದ ಆಧಾರದಿಂದ ರಚಿತವಾದ ಈ ಕೃತಿಯಲ್ಲಿ ವತ್ಸರಾಜನಿಗೆ ಪ್ರತಿಯಾಗಿ ಶ್ರೀಕೃಷ್ಣನೇ ಕಥಾನಾಯಕ. ಮಿತ್ರವಿಂದೆಯೇ ನಾಯಕಿ. ಕನ್ನಡದ ಮೊದಲ ನಾಟಕವಿದು.

ಡಾ॥ಶೀಲ : ಈ ಕಾಲದ ಮುಖ್ಯ ಕಬ್ಬಿಗಿತಿ ಸಂಚಿಯ ಹೊನ್ನಮ್ಮ. ಈಕೆ ಚಿಕ್ಕದೇವರಾಯನ ಅಂತಃಪುರದ ಊಳಿಗದವಳು; ಅರಸಿಯ ಆಣತಿಯಂತೆ ಹದಿಬದೆಯ ಧರ್ಮ ಎಂಬ ಚಿಕ್ಕದಾದರೂ ಚೊಕ್ಕವಾದ ಒಂದು ಸಾಂಗತ್ಯ ಗ್ರಂಥವನ್ನು ರಚಿಸಿದ್ದಾಳೆ. ಇದು ಒಂಬತ್ತು ಸಂಧಿಗಳ ಪುಟ್ಟ ಕೃತಿ. ರಾಮಾಯಣ ಭಾರತಗಳಿಂದಲೂ ಮನ್ವಾದಿಧರ್ಮಶಾಸ್ತ್ರಗಳಿಂದಲೂ ಉಪಯುಕ್ತ ವಿಷಯಗಳನ್ನು ಸಂಗ್ರಹಿಸಿ, ಈ ಗ್ರಂಥ ಬರೆದಂತೆ ಹೊನ್ನಮ್ಮ ಹೇಳಿಕೊಂಡಿದ್ದಾಳೆ. ಇದರಲ್ಲಿ ಸ್ತ್ರೀಧರ್ಮದ ನಿರೂಪಣೆ ಇದೆ. ಇವಳ ಅನೇಕ ಅಭಿಪ್ರಾಯಗಳು ಎಲ್ಲ ಕಾಲಕ್ಕೂ ಅನ್ವಯಿಸುವ ನೀತಿಗಳಾಗಿದ್ದು ಅವನ್ನು ಹೇಳಿರುವ ರೀತಿ ಬಹಳ ಹಿತವಾಗಿದೆ.

ಡಾ॥ರಾಮು : ಈ ಕಾಲದ ಇನ್ನಿಬ್ಬರು ಗಣ್ಯರಾದ ಜನಪ್ರಿಯ ಕವಿಗಳೆಂದರೆ ರಂಗನಾಥ ಮತ್ತು ಲಕ್ಷ್ಮೀಶ. ರಂಗನಾಥ ಅಥವಾ ಮಹಾಲಿಂಗರಂಗ ಎಂದು ಪ್ರಸಿದ್ದನಾಗಿರುವ ಕವಿ ಅನುಭವಾಮೃತ ಎಂಬ ಹನ್ನೊಂದು ಅಧ್ಯಾಯಗಳ ಕಾವ್ಯವನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದ್ದಾನೆ. ಅಖಿಳವೇದಾಂತಾರ್ಥವನ್ನು ಸಂಗ್ರಹಿಸಿ ಹೇಳುವೆ ಸಕಲರಿಗೆ ತಿಳಿವಂತೆ – ಎಂದು ಸಂಕಲ್ಪಿಸಿ ಕವಿ ಅಧಿಕಾರನಿರ್ಣಯ, ವೈರಾಗ್ಯ, ಪರಮಾತ್ಮಪದ ನಿರ್ಣಯ, ಮಾಯಾ ಮಿಥ್ಯಾತ್ವ, ಜೀವನ್ಮುಕ್ತಿ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿದ್ದಾನೆ. ಕನ್ನಡದ ಪ್ರಾಶಸ್ತ್ಯ, ವಿಷಯದಲ್ಲಿ ಇವನ ಉಕ್ತಿಗಳು ಬಹಳ ಪ್ರಸಿದ್ಧವಾಗಿವೆ. ಈ ಕವಿಗೆ ರಂಗಾವಧೂತನೆಂಬ ಹೆಸರೂ ಉಂಟು. ಇವನು ಸಹವಾಸಿ ವಂಶದ ಮಹಾಲಿಂಗದೇವನ ಮಗ.

ಪರಮಹಂಸ ಪರಿವ್ರಾಜಕಾಚಾರ್ಯ ಸಹಜಾನಂದನ ಶಿಷ್ಯನಾದ ಈ ಕವಿ ಅದ್ವೈತ ತತ್ತ್ವವನ್ನು ಸರಳ ಭಾಷೆಯಲ್ಲಿ ನಿರೂಪಿಸಿದ್ದಾನೆ. ಜ್ಞಾನಸಿಂಧುವನ್ನು ಬರೆದ ಚಿದಾನಂದಾವಧೂತ ಬಹಳ ಮಟ್ಟಿಗೆ ಈ ಗ್ರಂಥವನ್ನೇ ಅನುಸರಿಸುವಂತೆ ತೋರುತ್ತದೆ.

ಡಾ॥ಶೀಲ : ಕನ್ನಡನಾಡಿನಲ್ಲಿ ವಿಶೇಷ ಪ್ರಚಾರವಾಗಿ ಬಹಳ ಜನಪ್ರಿಯವಾಗಿರುವ ಜೈಮಿನಿ ಭಾರತವನ್ನು ರಚಿಸಿದ ಕವಿಶ್ರೇಷ್ಠ – ಲಕ್ಷ್ಮೀಶ. ಈತನ ಕಾಲದ ವಿಚಾರದಲ್ಲಿಯೂ ಸ್ಥಳದ ವಿಚಾರದಲ್ಲಿಯೂ ವಿದ್ವಾಂಸರಲ್ಲಿ

ತೀವ್ರವಾದ ಅಭಿಪ್ರಾಯ ಭೇದವಿದೆ. ಲಕ್ಷೀಶ ತಾನು ಕರ್ಣಾಟಕವಿಚೈತ್ರವನಚೂತನೆಂದು ತನ್ನ ಪ್ರಾಶಸ್ತ್ಯವನ್ನು ಹೇಳಿಕೊಂಡಿದ್ದಾನೆ. ಕೃತಿ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದ್ದು ಅರ್ಥ ಚಮತ್ಕಾರಗಳಿಂದಲೂ ಶಬ್ದಾಲಂಕಾರ ಅರ್ಥಾಲಂಕಾರಗಳಿಂದಲೂ ತುಂಬಿದ್ದು ಕನ್ನಡನಾಡಿನಲ್ಲಿ ಅತಿಶಯ ಪ್ರಾಶಸ್ತ್ಯವನ್ನು ಗಳಿಸಿಕೊಂಡಿದೆ. ಲಕ್ಷ್ಮೀಶನಿಂಚರದಿಂಪು ರಸಿಕಜನಮನೋರಂಜಕವಾಗಿದೆ.

ಡಾ॥ರಾಮು : ಧರ್ಮರಾಯನ ಅಶ್ವಮೇಧಯಾಗದ ವೃತ್ತಾಂತವನ್ನೇ ಪ್ರಧಾನ ಕಥಾವಸ್ತುವಾಗಿ ಉಳ್ಳ ಈ ಕಾವ್ಯದಲ್ಲಿ ಅನೇಕ ವೀರ ಶೃಂಗಾರ ರಸಪ್ರಧಾನವಾದ ಕಥೆಗಳು ಬರುತ್ತವೆ. ಅಲ್ಲದೆ ಶ್ರೀಕೃಷ್ಣ ಅರ್ಜುನನಿಗೆ ಅನೇಕ ಪ್ರಸಂಗಗಳಲ್ಲಿ ರಕ್ಷಣೆ ನೀಡಿದ ಕಥನವೂ ಇದರಲ್ಲಿದೆ. ಪುಣ್ಯಮಿದು ಕೃಷ್ಣಚರಿತಾಮೃತಂ–ಎಂದೇ ಲಕ್ಷ್ಮೀಶ ತನ್ನ ಕಾವ್ಯವನ್ನು ವರ್ಣಿಸಿದ್ದಾನೆ. ಆದ್ದರಿಂದ ಭಕ್ತರಿಗೆ ಇದು ಬಹಳ ಪ್ರಿಯವಾದ ಕಾವ್ಯ.

ವೃಷಕೇತು ಬಭ್ರುವಾಹನ ಕಾಳಗ, ಸುಧನ್ವನ ಕಾಳಗ ಮೊದಲಾದ ಯುದ್ಧಕಥೆಗಳೂ ಚಂದ್ರಹಾಸ ಮೊದಲಾದ ಭಕ್ತರ ಕಥನಗಳೂ ಸೇರಿ ಈ ಕಾವ್ಯ ಲೋಕಪ್ರಿಯವೆನಿಸಿದೆ. ಮಹಾಭಾರತದ ಈ ಕಥೆಯ ನಡುವೆ ಕವಿ ಚಮತ್ಕಾರದಿಂದ ಉತ್ತರ ರಾಮಾಯಣದ ಕಥಾಸನ್ನಿವೇಶವನ್ನು ದೃಷ್ಟಾಂತವಾಗಿ ತಂದು ಬಹು ಸಮರ್ಥರೀತಿಯಲ್ಲಿ ನಿರ್ವಹಿಸಿದ್ದಾನೆ. ಭಾರತದ ಯುದ್ಧ ವೃತ್ತಾಂತಗಳಿಂದ ತೃಪ್ತಿಪಡೆಯದೆ ಕವಿ ಇದರಲ್ಲಿ ಲವಕುಶರ ಕಾಳಗದ ಕಥೆಯನ್ನೂ ಸವಿಸ್ತಾರವಾಗಿ ವರ್ಣಿಸಿದ್ದಾನೆ.

ಡಾ॥ಶೀಲ : ಚಂಪೂ, ಷಟ್ಪದೀ, ಗದ್ಯ, ಸಾಂಗತ್ಯ ಮೊದಲಾದ ವಿವಿಧ ಪ್ರಕಾರದ ಗ್ರಂಥಗಳ ರಚನೆ ಈ ಶತಾಬ್ದದಲ್ಲಿ ಸಮೃದ್ಧಿಯಾಗಿ ನಡೆಯುತ್ತಿದ್ದಾಗಲೇ ಆದಿಕಾಲದಿಂದ ಬೆಳೆದು ಬಂದ ಜನಪದ ಸಾಹಿತ್ಯವೂ ಜೊತೆಜೊತೆಯಾಗಿ ಬೆಳೆದು ಬಂದಿತ್ತೆಂದು ತಿಳಿಯಬೇಕಾಗಿದೆ. ಇಂಥ ಜಾನಪದ ಕವಿಗಳು ತಮ್ಮ ಹೆಸರನ್ನೂ ತಿಳಿಸದೆ ತಮ್ಮ ಕೃತಿಗಳನ್ನು ಗಾಳಿಯಲ್ಲಿ ತೇಲಿಬಿಟ್ಟಿದ್ದಾರೆ. ಗರತಿಯ ಹಾಡು, ಲಾವಣಿ, ಮೊದಲಾದುವು ಬಹಳ ಹಿಂದಿನಿಂದಲೂ ಬಳಕೆಯಲ್ಲಿದ್ದಿರಬೇಕು.

ಡಾ॥ರಾಮು : ಇಂಥ ಜಾನಪದ ಕವಿಗಳೆಲ್ಲರ ಪ್ರತಿನಿಧಿಯೆಂಬಂತೆ ಒಬ್ಬ ಸರ್ವಜ್ಞ ಈ ಕಾಲದಲ್ಲಿ ಪ್ರಸಿದ್ಧನಾಗಿದ್ದಾನೆ. ಇವನ ನಿಜವಾದ ಹೆಸರೇನೊ ತಿಳಿಯದು. ಇವನ ಜನ್ಮವೃತ್ತಾಂತ ಖಚಿತವಾಗಿ ಗೊತ್ತಿಲ್ಲ. ಆದರೆ ಇವನು ಕನ್ನಡನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಸರ್ವಜ್ಞನೆಂಬ ಅಂಕಿತದಲ್ಲಿ ಅನೇಕ ತ್ರಿಪದಿಗಳನ್ನೂ ಹಾಡಿದ್ದಾನೆ. ಇವನ ಪದ್ಯಗಳು ವೀರಶೈವಧರ್ಮದ ತಿರುಳನ್ನು ಹೇಳುತ್ತವೆ. ಅದಕ್ಕಿಂತ ಮಿಗಿಲಾಗಿ ಅಂದಿನ ಜನ ಜೀವನದ ನಾನಾ ಸುಖದುಃಖಗಳನ್ನು ಅವು ವರ್ಣಿಸುತ್ತವೆ. ಸರ್ವಜ್ಞ ಆಶುಕವಿ, ಕುಂತಲ್ಲಿ ನಿಂತಲ್ಲಿ ಪದ ಹೇಳುವ ಸಂಪ್ರದಾಯಕ್ಕೆ ಆತ ಸೇರಿದವ. ಜೈನಯತಿಗಳ ಹಿರಿಮೆಯನ್ನು ಮನಗಂಡಾಗ ಸರ್ವಜ್ಞ ಅವರನ್ನು ಹೊಗಳಲು ಹಿಂಜರಿಯುವುದಿಲ್ಲ.

ಡಾ॥ಶೀಲ : ಶ್ರವಣರು ತಪ್ಪಾಡಿದಂದು ಉಪ್ಪು ಸಪ್ಪಗಾಗುತ್ತದೆಯಂತೆ, ಸರ್ಪನಿಗೆ ಬಾಲವೆರಡಾಗುತ್ತದೆಯಂತೆ, ಹಾಗೆಯೇ ನೀತಿಯನರಿದ ವಿಪ್ರನು ಜಗದೊಳು ಜ್ಯೋತಿಯಿದ್ದಂತೆ ಎಂದು ಹೇಳಲೂ ಸರ್ವಜ್ಞನಿಗೆ ಸಂತೋಷ.

ಮಲೆನಾಡಿಗೆ ಹೋಗಿ ಅಲ್ಲಿನ ಚಳಿಗಾಳಿಗಳಿಗೆ ಸಿಕ್ಕಿ ನೊಂದು ಮಲೆನಾಡ ಕಾಡು ಸಾಕೆಂದವ ಸರ್ವಜ್ಞ ಮಲೆನಾಡಿನ ಅತಿಥಿಸತ್ಕಾರವನ್ನು ಪಡೆದು ಸಂತುಷ್ಟನಾದಾಗ ಮಲನಾಡನಲ್ಲೆನ್ನಬಹುದೆ – ಎಂದು ಯಾವ ಸಂಕೋಚವೂ ಇಲ್ಲದೆ ಆತ ಹೊಗಳಿದ್ದಾನೆ.

ಡಾ॥ರಾಮು : ಸರ್ವಜ್ಞ ಸಾಮಯಿಕ ಕವಿ; ನೀತಿಪ್ರಚಾರಕ; ಸಮಾಜ ಸುಧಾರಣೆಗೆ ಶ್ರಮಿಸಿದವ. ತನ್ನ ಅಭಿಪ್ರಾಯಗಳನ್ನು ಸುಲಭವಾದ ಭಾಷೆಯಲ್ಲಿ ತ್ರಿಪದಿ ರೂಪದಲ್ಲಿ ಬಹು ಅಂದವಾಗಿ ಈತ ನಿರೂಪಿಸಿದ್ದಾನೆ.

ಡಾ॥ಶೀಲ : ಈ ಶತಮಾನದ ದೊಡ್ಡ ವೈಯಾಕರಣ ಭಟ್ಟಾಕಳಂಕನನ್ನು ಮರೆಯಲಾಗದು. ಈತ ಶಬ್ದಾನು ಶಾಸನವೆಂಬ ಪ್ರೌಢವ್ಯಾಕರಣ ಗ್ರಂಥವನ್ನು ರಚಿಸಿದ್ದಾನೆ. ನಾಗವರ್ಮ ಹಿಂದೆ ಭಾಷಾಭೂಷಣವನ್ನು ಬರೆದ ಹಾಗೆ ಇವನೂ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಸೂತ್ರ, ವೃತ್ತಿ, ವ್ಯಾಖ್ಯಾನ, ಮೂರು ಸಂಸ್ಕೃತದಲ್ಲಿಯೇ ಇವೆ. ನಾಲ್ಕು ಪಾದಗಳಾಗಿ ವಿಂಗಡನೆಗೊಂಡು ಸುಮಾರು ಆರುನೂರು ಸೂತ್ರಗಳಿಂದ ಕೂಡಿದ ಈ ಶಾಸ್ತ್ರಗ್ರಂಥಕ್ಕೆ ಭಟ್ಟಾಕಳಂಕ ಭಾಷಾಮಂಜರೀ ಎಂಬ ವೃತ್ತಿಯನ್ನೂ ಮಂಜರಿಮಕರಂದವೆಂಬ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಕನ್ನಡ ಭಾಷೆಯ ಅಗ್ಗಳಿಕೆಯನನೀತ ಮನಸಾರ ಉದ್ಘೋಷಿಸಿದ್ದಾನೆ.

ಡಾ॥ರಾಮು : ಹದಿನೆಂಟನೆಯ ಶತಮಾನದಲ್ಲಿ ಕಂಠೀರವ ನರಸರಾಜ ಒಡೆಯರು ಕವಿಪೋಷಕರಾಗಿ ಅನೇಕ ಕನ್ನಡ ಕವಿಗಳಿಗೆ ಆಶ್ರಯದಾತರಾಗಿದ್ದರು. ಶಾಲ್ಯದ ಕೃಷ್ಣರಾಜ ಕನ್ನಡ ತೆಲುಗು ಸಂಸ್ಕೃತದಲ್ಲಿ ಕೃತಿರಚನೆ ಮಾಡಿದ್ದಾನೆ. ಹೈದರಾಲಿಯ ಬಳಿ ಮಂತ್ರಿಯಾಗಿದ್ದ ವೆಂಕಾಮಾತ್ಯ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಕನ್ನಡ ಕವಿಗಳಲ್ಲಿ ಭಾಸನ ಹೆಸರನ್ನು ಹೇಳಿರುವಾತ ಇವನೊಬ್ಬನೇ ಎಂದು ತಿಳಿಯುತ್ತದೆ. ಇವನು ಹನುಮದ್ವಿಲಾಸ, ಇಂದಿರಾಭ್ಯುದಯ ಮತ್ತು ರಾಮಾಯಣಗಳನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದಾನೆ.

ಡಾ॥ಶೀಲ : 1800ರಿಂದ ಈಚೆಗೆ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು ರಾಜ್ಯವಾಳಿ ಕವಿಪೋಷಕರಾದರು. ಮುಮ್ಮಡಿ ಕೃಷ್ಣರಾಜಒಡೆಯರು ಸ್ವಯಂ ಕವಿಗಳೂ ಆಗಿದ್ದರು. ಆಶ್ರಿತರಾದ ಅನೇಕ ವಿದ್ವಾಂಸರಿಂದ ಅವರು ಹಲವು ಕೃತಿಗಳನ್ನು ಕನ್ನಡದಲ್ಲಿ ಬರೆಯಿಸಿದರು. ಇವರ ಹೆಸರಿನಲ್ಲಿ ಐವತ್ತಕ್ಕಿಂತ ಹೆಚ್ಚು ಗ್ರಂಥಗಳಿವೆ. ಕೃಷ್ಣರಾಜವಾಣೀವಿಲಾಸಭಾರತ. ಶಾಕುಂತಲ ನಾಟಕ ನವೀನ ಟೀಕೆ ಇವು ಬಹಳ ಪ್ರಸಿದ್ಧವಾಗಿವೆ. ಇವರ ಕಾಲದಲ್ಲಿಯೇ ಹೊಸಗನ್ನಡ ಗದ್ಯ ಆರಂಭವಾಯಿತೆಂದು ಹೇಳಬಹುದು. ಇವರ ಆಶ್ರಿತರಾದ ಕೆಂಪು ನಾರಾಯಣ ಬರೆದಿರುವ ಮುದ್ರಾಮಂಜೂಷ ಹೊಸಗನ್ನಡ ಶೈಲಿಯಲ್ಲೇ ಇದೆ.

ಚಂದ್ರಗುಪ್ತ ಚಾಣಕ್ಯರ ವೃತ್ತಾಂತವನ್ನೊಳಗೊಂಡ ಈ ಗದ್ಯಗ್ರಂಥ ತನ್ನ ಗಂಭೀರವಾದ ಭಾಷಾಶೈಲಿಯಿಂದ ಕನ್ನಡಿಗರಿಗೆ ಅಚ್ಚುಮೆಚ್ಚಾಗಿದೆ.

ಡಾ॥ರಾಮು : ಆಮೇಲೆ ಶ್ರೀಚಾಮರಾಜ ಒಡೆಯರ ಆಸ್ಥಾನ ಕವಿ ಬಸಪ್ಪಶಾಸ್ತ್ರಿಗಳು ಅಭಿಜ್ಞಾನ ಶಾಕುಂತಲ, ಚಂಡಕೌಶಿಕ, ಉತ್ತರರಾಮಚರಿತ್ರೆ ಎಂಬ ನಾಟಕಗಳನ್ನು ಭರ್ತೃಹರಿಯ ಸುಭಾಷಿತಗಳನ್ನೂ ಕನ್ನಡಿಸಿದರು. ಸಾವಿತ್ರೀ ಚರಿತ್ರೆ ಮತ್ತು ದಮಯಂತೀ ಸ್ವಯಂವರವೆಂಬ ಕಾವ್ಯಗಳನ್ನು ಸ್ವತಃ ಕಟ್ಟಿದರು. ಇಂಗ್ಲಿಷಿನ ಒಥೆಲೋ ನಾಟಕದ ಆಧಾರದಿಂದ ಶೂರಸೇನ ಚರಿತ್ರೆ ಎಂಬ ನಾಟಕವನ್ನು ಬರೆದರು. ಅಂದಿನಿಂದ ಸಂಸ್ಕೃತ ನಾಟಕಗಳ ಕನ್ನಡ ಪರಿವರ್ತನೆ ವಿಶೇಷವಾಗಿ ನಡೆಯಿತು.

ಡಾ॥ಶೀಲ : ಇಂಗ್ಲಿಷ್ ಭಾಷಾಸಾಹಿತ್ಯಗಳ ಪರಿಚಯ ಬೆಳೆದ ಮೇಲೆ ಕನ್ನಡದಲ್ಲಿ ಕಾದಂಬರಿ, ಸಣ್ಣಕಥೆ, ಪ್ರಹಸನ, ಲಘು ಪ್ರಬಂಧ, ಭಾವಗೀತೆ, ಮೊದಲಾದ ವಿವಿಧ ಪ್ರಕಾರಗಳು ಬಳಕೆಗೆ ಬಂದುವು.

ಡಾ॥ರಾಮು : ಪ್ರಾಚೀನ ಛಂದಸ್ಸುಗಳನ್ನು ಕೈಬಿಟ್ಟು ಹೊಸ ಬಗೆಯ ಪದ್ಯರಚನೆ ಆರಂಭವಾಯಿತು. ವೃತ್ತಪತ್ರಿಕೆಗಳು ಹುಟ್ಟಿ ಕನ್ನಡದ ಬಹುಮುಖವಾದ ಅಭಿವೃದ್ಧಿ ಪ್ರಾರಂಭವಾಯಿತು.

ಡಾ॥ಶೀಲ : ಬಂಗಾಳಿ, ಹಿಂದಿ, ತಮಿಳು ಮರಾಠಿ ಮೊದಲಾದ ಭಾಷೆಗಳಿಂದಲೂ ಕಥೆ ಕಾದಂಬರಿಗಳ ಅನುವಾದಗಳು ಬರತೊಡಗಿದವು.

ಡಾ॥ರಾಮು : ಇಂದು ಕನ್ನಡದಲ್ಲಿಯೇ ಆಧುನಿಕ ವಿಜ್ಞಾನವನ್ನೂ ಕಲಿಸಬೇಕೆಂಬ ಸಂಕಲ್ಪದಿಂದ ತಜ್ಞರು ವೈಜ್ಞಾನಿಕ ಗ್ರಂಥಗಳನ್ನೂ ರಚಿಸುತ್ತಿದ್ದಾರೆ.

ಡಾ॥ಶೀಲ : ಪ್ರಾಚ್ಯ ವಿದ್ಯಾಸಂಶೋಧನೆಗೆ ಆರಂಭವಾಗಿ ಅನೇಕ ಶಾಸನಗಳನ್ನು ಬೆಳಕಿಗೆ ತರಲಾಗಿದೆ.

ಡಾ॥ರಾಮು : ಪ್ರಾಚೀನ ಗ್ರಂಥಗಳನ್ನು ಶೋಧಿಸಿ ಅಚ್ಚು ಮಾಡಿಸುವ ಕೆಲಸ ಬಹು ಹಿಂದಿನಿಂದ ನಡೆಯುತ್ತಿದೆ.

ಡಾ॥ಶೀಲ : ರಸಾತ್ಮಕವಾದ ಕಾವ್ಯಗಳಿಂದ ಕೂಡಿ ಓದುಗರಿಗೆ ಆನಂದವಾಹಿನಿಯಾಗಿದ್ದ ಕನ್ನಡ ಈಗ ಲೋಕ ಪರಿಚಯವನ್ನೂ ಶಾಸ್ತ್ರ ಪರಿಚಯವನ್ನೂ ನೀಡುವ ಜ್ಞಾನವಾಹಿನಿಯೂ ಆಗುತ್ತಿದೆ.

# 13. ಸುಭಾಷಿತ

ಡಾ॥ಶೀಲ : ಸುಭಾಷಿತ ಎಂದರೇನು ?
ಡಾ॥ರಾಮು: ಪದಗಳು ಮಿತ, ಆದರೆ ಹಿತ, ವಿಚಾರ ಪೂರಿತ, ಅರ್ಥಪೂರಿತ–ಇದೇ ಸುಭಾಷಿತ.

ಡಾ॥ಶೀಲ : ಸುಭಾಷಿತ ಎಲ್ಲಿಂದ ಉದಯವಾಗಿ ಹರಿದು ಬರುತ್ತದೆ ?
ಡಾ॥ರಾಮು: ಸುಭಾಷಿತವೆಂಬ ಜ್ಞಾನಸುಧೆಯು ಪ್ರತಿಭಾನ್ವಿತರ ಮಾನಸ ಸರೋವರದಿಂದ ಹರಿದುಬಂತು.

ಡಾ॥ಶೀಲ : ಸುಭಾಷಿತ ಮಾನವನ ಮೇಲೆ ಏನು ಪರಿಣಾಮ ಬೀರುತ್ತದೆ ?

ಡಾ॥ರಾಮು: ಸುಭಾಷಿತ ಮಾನವನ ತನು, ಮನ, ಹೃದಯಗಳನ್ನು ಅರಳಿಸುತ್ತದೆ.

ಡಾ॥ಶೀಲ : ಸುಭಾಷಿತ ಮಾನವನ ತನು, ಮನ, ಹೃದಯಗಳನ್ನು ಹೇಗೆ ಅರಳಿಸುತ್ತದೆ ?

ಡಾ॥ರಾಮು: ಸುಭಾಷಿತ ಓದಿದ ಕೂಡಲೇ ಹೊಳೆಯುತ್ತದೆ ಪದಗಳ ಮರ್ಮ. ವಾಕ್ಯಗಳ ಸೂಕ್ಷ್ಮ.

ಶ್ರೇಯಸ್ಕರ ವಿಚಾರಗಳನ್ನು ಸುಂದರವಾಗಿ ಮುಂದಿಡುತ್ತ, ವಿನೋದ ಮಾಡುತ್ತ, ಮುದ ನೀಡುತ್ತ, ಮನವನ್ನು ಅರಳಿಸುತ್ತ ಹೋಗುತ್ತದೆ.

ಸಜ್ಜನರನ್ನೂ, ಅವರ ಸದ್ಗುಣಗಳನ್ನೂ ಬಣ್ಣಿಸುವ ವಿನ್ಯಾಸದಿಂದಲೇ, ದುರ್ಜನರ ಧೂರ್ತತನವನ್ನು ಘೋಷಿರುತ್ತದೆ – ಈ ಸುಭಾಷಿತ

ಧರ್ಮವು ವ್ಯಕ್ತಿಗೆ ಧನ್ಯತೆಯನ್ನು ತಂದುಕೊಡುತ್ತದೆ. ಅಧರ್ಮವು ಪಾತಾಳಕ್ಕೆ ತಳ್ಳುತ್ತದೆ. – ಎಂಬುದನ್ನು ನಿಖರವಾಗಿ ನಿರ್ದೇಶಿಸುತ್ತದೆ – ಈ ಸುಭಾಷಿತ

## ಸುಭಾಷಿತ ವಿವರಣೆ

ಡಾ॥ಶೀಲ : ವಿದ್ಯಾವಂತನು ವಿನಯವಂತನಾದರೆ, ವಿಶ್ವವೇ ಅವನಡಿಗೆ ಬಾಗುತ್ತದೆ.
ಶ್ರೀಮಂತನು ವಿನಯವಂತನಾದರೆ, ವಿಶ್ವವೇ ವಿಸ್ಮಯಗೊಳ್ಳುತ್ತದೆ.

ಡಾ॥ರಾಮು: ನಾಲಿಗೆ ಕೇಳಿದ್ದನ್ನೆಲ್ಲ ಕೊಡುವವನೇ ಭೋಗಿ
ಹೊಟ್ಟೆಗೆ ಹಿತವಾದದ್ದನ್ನು ಕೊಡುವವನೇ ಯೋಗಿ

ಡಾ॥ಶೀಲ : ಜೇನಿಲ್ಲದ ಹೂವನ್ನು ಕೊಂಡಾಡಿದರೇನು ಫಲ ?
ದಾನ ಮಾಡದ ಧನಿಕನಿಂದ ಯಾರಿಗೇನು ಫಲ ?

ಡಾ॥ರಾಮು: ಉಪ್ಪು ತಿಂದಾಗ, ಬಾಯಾರುವಷ್ಟೇ ಸತ್ಯ,
ಖಾರ ತಿಂದಾಗ, ಕಣ್ಣೀರು ಇಳಿಯುವಷ್ಟೇ ಸತ್ಯ.

ಡಾ॥ಶೀಲ : ಬಾಹ್ಯ ವಿಷಯಗಳನ್ನು ಅವಲಂಬಿಸಿರುವುದೇ ದು:ಖ.
ತನ್ನಲ್ಲಿ ತಾನಿರುವುದೇ ಸುಖ.

ಡಾ॥ರಾಮು: ಪಾಂಡಿತ್ಯದೊಂದಿಗೆ ಲೋಕಾನುಭವವೂ ಸೇರಿಕೊಂಡಾಗ,
ಆಡಿದ ಪ್ರತಿಯೊಂದು ಮಾತೂ ಮುತ್ತಾಗುತ್ತದೆ.

ಡಾ॥ಶೀಲ : ಚಂದ್ರನ ತಂಪು ತಂಪಲ್ಲ, ಹಿಮವು ಕೂಡ ತಂಪಲ್ಲ
ಸಾಧುಸಂತರ ದಿವ್ಯ ಸಂಗ ತಂಪಿನಲ್ಲೂ ತಂಪು.

ಡಾ॥ರಾಮು: ಹರಿ ಮುನಿದರೆ ಗುರು ಪೊರೆಯುವನು,
ಗುರು ಮುನಿದರೆ ಹರಿ ತೊರೆಯುವನು

ಡಾ॥ಶೀಲ : ಮಾತಿಗೂ ಒಂದು ಮಹತ್ವವಿದೆ
ಮೌನಕ್ಕೂ ಒಂದು ಮಹತ್ವವಿದೆ.

ಡಾ॥ರಾಮು: ಸಾಗರದಲ್ಲೇಳವ ನೀರಿನ ಅಲೆಗಳಿಗಿಂತ,
ಮನದಲ್ಲೇಳುವ ಆಸೆಗಳ ಅಲೆಗಳೇ ಅಧಿಕ !

ಡಾ॥ಶೀಲ : ನಿಸ್ವಾರ್ಥದಿಂದ ಪರಮಾರ್ಥ,
ಸ್ವಾರ್ಥದಿಂದ ಅನರ್ಥ

ಡಾ॥ರಾಮು: ನಂದದಿರುವ ಮಂದಹಾಸದವನು
ಸಚ್ಚಿದಾನಂದನ ಕಂದನೆನಿಸುವನು

ಡಾ॥ಶೀಲ : ವಿವೇಚಿಸಬಲ್ಲವರಿಗೆ ಮಾತ್ರವೆ
ವಿಪತ್ತುಗಳಿಂದ ವಿಮೋಚನೆ

ಡಾ॥ರಾಮು: ಆಹಾರ, ವಿಶ್ರಾಂತಿ, ಸಂತೋಷ ಈ ಮೂರೇ ಉತ್ತಮ ವೈದ್ಯರು
ಆರೋಗ್ಯವೊಂದಿದ್ದರೆ ವೈಭವದಲ್ಲಿ ಅರಸನನ್ನು ನಾಚಿಸಬಹುದು.

ಡಾ॥ಶೀಲ : ಜಗದ ಮೋಹ ಇರುವ ತನಕ, ಭಕ್ತಿ ಮೊಳೆಯದಲ್ಲಿ
ಮೋಹವ ತ್ಯಜಿಸಿ, ಹರಿಯನ್ನು ಭಜಿಸೆ, ಭಕ್ತಿ ಬೆಳೆವುದಲ್ಲಿ

ಡಾ॥ರಾಮು: ಸಕ್ಕರೆಯ ಸಿಹಿ ಬಹಳ ಕಾಲ ನಮ್ಮ ನಾಲಿಗೆಯ ಮೇಲೆ ಉಳಿಯುವುದಿಲ್ಲ.
ಆದರೆ ಹಿತನುಡಿಯ ಸಿಹಿ ನಮ್ಮ ಹೃದಯದಲ್ಲಿ ಬಹಳ ಕಾಲ ಉಳಿಯುತ್ತದೆ.

ಡಾ॥ಶೀಲ : ಭಗವಂತನನ್ನು ಪೂಜಿಸಬೇಕೆಂಬ ವಿಷಯ ಎಲ್ಲರಿಗೂ ತಿಳಿದಿದೆ.
ಭಗವಂತನನ್ನು ಪ್ರೀತಿಸಬೇಕೆಂಬ ವಿಷಯ ಜನರಿನ್ನೂ ತಿಳಿಯಬೇಕಾಗಿದೆ.

ಡಾ॥ರಾಮು: ಕೋಪ-ತಾಪ ಕಳೆದಿಹ ಮನಕ್ಕೆ, ವೈರಿಗಳಾರೂ ಇಲ್ಲ
ಕೋಪವ ತ್ಯಜಿಸಿ, ಕರುಣೆಯ ಹರಿಸೆ, ಲೋಕದಿ ಮಿತ್ರರೆ ಎಲ್ಲ

ಡಾ||ಶೀಲ : ಇತರರ ದೋಷವ ನೋಡುತ, ಹಾಸ್ಯಗೈವರೆಲ್ಲ
ಅವರಲ್ಲೆ ಇಹುದು ಅಸಂಖ್ಯ ದೋಷ, ಅದರ ನೆನಪೆ ಇಲ್ಲ

ಡಾ||ರಾಮು: ಮಾಸಲು ಮುಖವೂ ಮಿಂಚುವುದು ಮುಗುಳ್ನಕ್ಕರೆ
ಕಷ್ಟವೂ ಇಲ್ಲ, ನಷ್ಟವೂ ಇಲ್ಲ ನಸುನಕ್ಕರೆ

ಡಾ||ಶೀಲ : ಸರ್ವರೂ ಬಯಸುವುದು ಸಹಶೀಲನ ಸಖ್ಯವನ್ನೇ ಹೊರತು,
ಸಿಡಿಮಿಡಿಗೊಳ್ಳುವವನ ಸಹವಾಸವನ್ನಲ್ಲ

ಡಾ||ರಾಮು: ಸಹನೆಯನ್ನು ಅಭ್ಯಸಿಸುತ್ತ ಬಂದಂತೆ
ಮುಖದಲ್ಲಿ ವರ್ಚಸ್ಸು ವರ್ಧಿಸುತ್ತದೆ.
ತೇಜಸ್ಸು ಮಿನುಗುತ್ತದೆ.

ಡಾ||ಶೀಲ : ಅಜ್ಞಾನದಂತಹ ರೋಗವಿಲ್ಲ
ಸುಜ್ಞಾನಿಯಂತಹ ವೈದ್ಯನಿಲ್ಲ

ಡಾ||ರಾಮು: ನೆರವಾಗು ಎಲ್ಲರಿಗೂ,
ಹೊರೆಯಾಗದಿರು ಯಾರಿಗೂ.

ಡಾ||ಶೀಲ : ಅನುಭವವಿಲ್ಲದವನ ಬರಿ ಮಾತು,
ಬಿದಿರಿನ ಬುಟ್ಟಿಯಲ್ಲಿ ನೀರು ತುಂಬಿದಂತೆ

ಡಾ||ರಾಮು: ಅತೃಪ್ತಿಯೇ ದೊಡ್ಡ ದು:ಖ
ತೃಪ್ತಿಯೇ ಪರಮ ಸುಖ

ಡಾ||ಶೀಲ : ಮನಮಂದಿರದಲ್ಲಿ ಬರಿಯ ಕತ್ತಲು
ಧ್ಯಾನ ಮಾಡಿದಾಗ ಜ್ಯೋತಿ ಸುತ್ತಲು

ಡಾ||ರಾಮು: ಪ್ರಸನ್ನ ಮನದ ಪ್ರತೀಕ ಮಂದಹಾಸ,
ಉತ್ಕಟ ಸಂತಸದ ಸಂಕೇತ ಅಟ್ಟಹಾಸ

ಡಾ||ಶೀಲ : ಶರೀರವೆಂತೆಂಬ ಹೊಲವನ್ನು ಹಸನುಮಾಡಿ,
ಪರತತ್ವವೆಂಬ ಬೆಳೆಯನ್ನು ಬೆಳೆದುಣ್ಣಿರೊ,

ಡಾ||ರಾಮು: ಓದಿ, ಬರೆದು ಪಂಡಿತನಾಗುವುದು ಅತಿಶಯವೇನಲ್ಲ
ಕಾಮವ ದಹಿಸಿ, ಮನವ ಜಯಿಸುವುದು ಸುಲಭದ ಮಾತಲ್ಲ

ಡಾ||ಶೀಲ : ಭೋಜನದ ವೇಳೆಯಲ್ಲಿ
ವಿವೇಕಿಯ ಲಕ್ಷ್ಯ ಹೊಟ್ಟೆಯ ಕಡೆಗೆ

ವಿಲಾಸಿಯ ಲಕ್ಷ್ಯ ನಾಲಿಗೆಯ ಕಡೆಗೆ

ಡಾ||ರಾಮು: ನಾಲಿಗೆಯ ಮೇಲೆ ಹಿಡಿತವಿದ್ದರೆ
ರೋಗವೂ ಬರುವುದಿಲ್ಲ.
ಜಗಳವೂ ಹುಟ್ಟುವುದಿಲ್ಲ.

ಡಾ||ಶೀಲ : ಕೋಟಿ ಚಂದ್ರ ಕೋಟಿ ಸೂರ್ಯ ಹುಟ್ಟಿಬಂದರೂ
ಅಜ್ಞಾನವೆಂಬ ಘೋರಾಂಧಕಾರ ಅಳಿಯದು
ಗುರುಕೃಪೆಯಾಯಿತೆಂದರೆ, ಕೋಟಿ ಜನ್ಮಗಳ ಕತ್ತಲೂ ಉಳಿಯದು !

ಡಾ||ರಾಮು: ಆರೋಗ್ಯವೇ ಉತ್ತಮ ಉಡುಗೊರೆ,
ತೃಪ್ತಿಯೇ ಉತ್ತಮ ಧನ
ವಿಶ್ವಾಸವೇ ಅತ್ಯುತ್ತಮ ಬಾಂಧವ್ಯ.

ಡಾ||ಶೀಲ : ಆಚರಿಸಿದ್ದನ್ನೇ ಬೋಧಿಸಬಲ್ಲ ಗುರುವೊಬ್ಬನಿದ್ದರೆ,
ಬೋಧಿಸಿದ್ದನ್ನು ಆಚರಿಸಬಲ್ಲ ಶಿಷ್ಯನೊಬ್ಬನಿದ್ದರೆ
ಅವರನ್ನು ಕಂಡ ಜನ ಬೆರಗಾಗರೆ ?

ಡಾ||ರಾಮು: ನಾಗಾಭರಣವಿರಲಿ ನಾಗಭೂಷಣನಿಗೆ
ನಗೆಯ ಆಭರಣ ನಮ್ಮಯ ಪಾಲಿಗೆ
ಸರಿಸಾಟಿಯಾಗುವುದೆ ಮುಗುಳ್ನಗೆಗೆ ?

ಡಾ||ಶೀಲ : ಮಾನವನ ಮನಸ್ಸು
ಚಿನ್ನದ ಗಣಿಯೂ ಹೌದು,
ಕಸದ ಬುಟ್ಟಿಯೂ ಹೌದು.

ಡಾ||ರಾಮು: ಜನನ ಉಚಿತ,

ಜೀವನ ಅನಿಶ್ಚಿತ,

ಮರಣ ಖಚಿತ.

ಡಾ||ಶೀಲ : ನೀಡಿದ್ದನ್ನು ಮರೆಯುವವರು
ಪಡೆದಿದ್ದನ್ನು ಮರೆಯದವರು
ನಿಜವಾಗಿಯೂ ಧನ್ಯರು

ಡಾ||ರಾಮು: ಆಶಾವಾದಿ ದೋಸೆ ಕಾಣುತ್ತಾನೆ.
ನಿರಾಶಾವಾದಿ ಅದರ ತೂತು ನೋಡುತ್ತಾನೆ.
ವಾಸ್ತವವಾದಿ ಅದನ್ನು ತಿನ್ನುತ್ತಾನೆ.

**ಡಾ॥ಶೀಲ** : ಧನವಿರುವವರು ಧನದಾನ ಮಾಡುತ್ತಾರೆ.
ಧಾನ್ಯವಿರುವವರು ಧಾನ್ಯದಾನ ಮಾಡುತ್ತಾರೆ.
ಹೆಚ್ಚಿನವರು ವಾಗ್ದಾನ ಮಾಡುತ್ತಾರೆ.

**ಡಾ॥ರಾಮು**: ಊಳಿಗವು ವ್ಯಕ್ತಿತ್ವವನ್ನು ನಾಶಗೊಳಿಸುತ್ತದೆ.
ಮುದಿತನವು ಸೌಂದರ್ಯವನ್ನು ಕೆಡಿಸುತ್ತದೆ.
ಯಾಚನೆಯು ಸಕಲ ಸದ್ಗುಣಗಳನ್ನೂ ಧ್ವಂಸ ಮಾಡುತ್ತದೆ.

**ಡಾ॥ಶೀಲ** : ಮೈತೊಳೆದರೆ ಏನಾಯಿತು
ಮನದ ಕೊಳೆಯು ಹೋದೀತೆ ?
ಮನವನ್ನು ಮಂಥಿಸಿ ವಿವೇಚನೆ ನಡೆಸೆ,
ಮನ ನಿರ್ಮಲವಹುದು.

**ಡಾ॥ರಾಮು**: ಹಸಿದವನಿಗೆ ಅನ್ನದ ಮೇಲಣ ಆಸೆ,
ಅನ್ನ ದೊರೆತರೆ, ಚಿನ್ನದ ಮೇಲಣ ಆಸೆ,
ಚಿನ್ನ ದೊರೆತರೆ, ಹೆಣ್ಣಿನ ಮೇಲಣ ಆಸೆ,
ಹೆಣ್ಣು ದೊರೆತರೆ, ಮನ್ನಣೆಯ ಆಸೆ.

**ಡಾ॥ಶೀಲ** : ಸದಾ ಭಗವಂತನ ಚಿಂತನೆಯಲ್ಲಿರುವವರಿಗೆ
ಲೌಕಿಕ ಚಿಂತೆಗೆ ಎಲ್ಲಿದೆ ಸಮಯ ?
ಸದಾ ಲೌಕಿಕ ಚಿಂತೆಯಲ್ಲೇ ಮುಳುಗಿದವರಿಗೆ
ಭಗವತ್ ಚಿಂತನೆಗೆ ಎಲ್ಲಿದೆ ಸಮಯ ?

**ಡಾ॥ಶೀಲ** : ಅತಿಯಾಗಿ ತಿಂದರೆ ಅಜೀರ್ಣ
ಅತಿ ಕಡಿಮೆ ತಿಂದರೆ ನಿಶ್ಯಕ್ತಿ,
ಮಿತವಾಗಿ ತಿಂದರೆ ಹಿತ
ಆದರೆ, ಆ ಮಿತಿಯನ್ನು ಕಂಡವರು ಎಷ್ಟು ಜನ ?

**ಡಾ॥ರಾಮು**: ಅರಿತು ಬಾಳಿದರೆ, ಬಾಳು ಬಂಗಾರ,
ಬೆರೆತು ಬಾಳಿದರೆ ಬಾಳು ಶೃಂಗಾರ,
ಅರಿತು - ಬೆರೆತು ಬಾಳಿದರೆ,
ಅದುವೇ ಜೀವನ ಸಾಕ್ಷಾತ್ಕಾರ.

**ಡಾ॥ರಾಮು**: ದುರ್ಬಲನಿಗೆ ರಾಜನೇ ಬಲ,
ಮಗುವಿಗೆ ಅಳುವುದೇ ಬಲ
ದಡ್ಡನಿಗೆ ಬಾಯಿ ಮುಚ್ಚಿಕೊಂಡಿರುವುದೇ ಬಲ.
ಕಳ್ಳನಿಗೆ ಸುಳ್ಳೇ ಬಲ.

ಡಾ||ಶೀಲ : ಹೃದಯವೆ ದ್ವಾರಕೆ,
ಮನ ಮಥುರೆ
ಶರೀರವೇ ಕಾಶಿ,
ನವದ್ವಾರದ ಈ ದೇಗುಲದಿ
ಒಳಗೆ ಇಹುದು ಜ್ಯೋತಿ

ಡಾ||ರಾಮು: ಮನಮಂದಿರದಲ್ಲಿ ಬಲಿಯ ಕತ್ತಲು
ಧ್ಯಾನ ಮಾಡಿದಾಗ ಜ್ಯೋತಿ ಸುತ್ತಲು
ಆಚಾರಕ್ಕೆ ಅರಸಾಗು,
ನೀತಿಗೆ ಪ್ರಭುವಾಗು,
ಮಾತಿನಲ್ಲಿ ಚೂಡಾಮಣಿಯಾಗು,
ಜಗಕೆಲ್ಲ ಜ್ಯೋತಿಯಾಗು.

ಡಾ||ಶೀಲ : ಭಾವಿಸುವ ಮನಸ್ಸು ಚೊಕ್ಕಟವಾಗಿರಲಿ,
ನೋಡುವ ದೃಷ್ಟಿ ನಿರ್ಮಲವಾಗಿರಲಿ,
ಮಾಡುವ ಕೈಗಳು ಮಡಿಯಿಂದಿರಲಿ,
ಕೇಳುವ ಕಿವಿಗಳು ಎಚ್ಚರಿಕೆಯಿಂದಿರಲಿ,

ಡಾ||ರಾಮು: ಬಡವನಿಗೆ ಇಂದ್ರಿಯಭೋಗವೇ ವಿಷ,
ಕಾರ್ಯ ಹೀನನಿಗೆ ಯುದ್ಧವೇ ವಿಷ,
ಅಭ್ಯಾಸ ಮಾಡದವನಿಗೆ ಶಾಸ್ತ್ರ ಜ್ಞಾನವೇ ವಿಷ,
ಅಜೀರ್ಣ ರೋಗಿಗೆ ಭೋಜನವೇ ವಿಷ.

ಡಾ||ಶೀಲ : ನಿದ್ರೆಗೆ ಸಮನಾದ ಕಣ್ಣಿಲ್ಲ,
ಸತ್ಯಕ್ಕೆ ಸಮನಾದ ತಪಸ್ಸಿಲ್ಲ,
ಮೋಹಕ್ಕೆ ಸಮನಾದ ದುಃಖವಿಲ್ಲ.
ತ್ಯಾಗಕ್ಕೆ ಸಮನಾದ ಸುಖವಿಲ್ಲ.

ಡಾ||ರಾಮು: ಯೌವನವನ್ನು ಕಾಪಾಡುವುದು ಕಾಯಕ
ದೇಹದಾರ್ಢ್ಯವನ್ನು ಹೆಚ್ಚಿಸುವುದು ಕಾಯಕ
ಮನಸ್ಸನ್ನು ತಿಳಿಯಾಗಿಡುವುದು ಕಾಯಕ
ನಮ್ಮನ್ನು ದೀರ್ಘಾಯುವಾಗಿಸುವುದು ಕಾಯಕ

ಡಾ||ಶೀಲ : ನನಗೆ ಮುಪ್ಪಿದೆ,
ನಿಮಗೆ ಮುಪ್ಪಿದೆ,
ಎಲ್ಲರಿಗೂ ಮುಪ್ಪಿದೆ,
ಮುಗುಳ್ನಗೆಗೆ ಮಾತ್ರ ಮುಪ್ಪಿಲ್ಲ.

**ಡಾ॥ರಾಮು:** ಕೃತಯುಗದಲ್ಲಿ ತಪಸ್ಸು ಶ್ರೇಷ್ಠ
ತ್ರೇತಾಯುಗದಲ್ಲಿ ಜ್ಞಾನ ಶ್ರೇಷ್ಠ
ದ್ವಾಪರಯುಗದಲ್ಲಿ ಯಜ್ಞ ಶ್ರೇಷ್ಠ
ಕಲಿಯುಗದಲ್ಲಿ ದಾನವೇ ಶ್ರೇಷ್ಠ

**ಡಾ॥ಶೀಲ :** ಮಾತು ಸವಿ ಸಕ್ಕರೆಯಂತೆ,
ಕೃತಿಯೋ ವಿಷಪೂರಿತ
ಮಾತಿನಂತೆ ಕೃತಿಯಾದರೆ
ವಿಷವೂ ಅಮೃತವಹುದು.

**ಡಾ॥ರಾಮು:** ತನುವ ತೋಟವ ಮಾಡಿ,
ಮನದ ಗುದ್ದಲಿ ಮಾಡಿ,
ಭ್ರಾಂತಿಯ ಬೇರ ಕಳೆದು,
ಬೆಳಕ ಪಡೆಯುವ,

**ಡಾ॥ಶೀಲ :** ಸಾಧು ಸಂಗದಿಂದ
ಚಂದಗೊಳಿಸು ಮನವನು
ಚಂದಗೊಂಡ ಮನದಿ
ನೀ ಉಣುವೆ ಶಾಂತಿಸುಧೆಯನ್ನು

**ಡಾ॥ರಾಮು:** ವಿಷ್ಣುವು ಅಲಂಕಾರ ಪ್ರಿಯನು,
ಶಿವನು ಅಭಿಷೇಕ ಪ್ರಿಯನು,
ಸೂರ್ಯನು ನಮಸ್ಕಾರ ಪ್ರಿಯನು,
ಬ್ರಾಹ್ಮಣನು ಭೋಜನ ಪ್ರಿಯನು.

**ಡಾ॥ಶೀಲ :** ದಯೆಯೆಂಬ ಸದ್ಗುಣವಿರುವಲ್ಲಿ ಧರ್ಮವಿರುತ್ತದೆ.
ಲೋಭವೆಂಬ ದುರ್ಗುಣವಿರುವಲ್ಲಿ ಪಾಪವಿರುತ್ತದೆ.
ಕ್ರೋಧವೆಂಬ ದುರ್ಗುಣವಿರುವಲ್ಲಿ ಮೃತ್ಯುವಿರುತ್ತದೆ.
ಕ್ಷಮೆಯೆಂಬ ಸದ್ಗುಣವಿರುವಲ್ಲಿ ಸ್ವಯಂ ಪ್ರಭುವೇ ಇರುತ್ತಾನೆ.

**ಡಾ॥ರಾಮು:** ಉತ್ತಮ ವಸ್ತ್ರವನ್ನು ಧರಿಸಿದವನು ಸಭೆಯನ್ನು ಗೆದ್ದನೆಂದೇ ಅರ್ಥ,
ಹಸು ಇರತಕ್ಕವನು ಮೃಷ್ಟಾನ್ನವನ್ನು ಗೆದ್ದನೆಂದೇ ಅರ್ಥ,
ವಾಹನವಿರತಕ್ಕವನು ದಾರಿಯನ್ನು ಗೆದ್ದನೆಂದೇ ಅರ್ಥ,
ಶೀಲವಂತನು ಸರ್ವವನ್ನೂ ಗೆದ್ದನೆಂದೇ ಅರ್ಥ.

**ಡಾ॥ಶೀಲ :** ಬದುಕಲು ಧನ ಬೇಕು, ಸ್ವಲ್ಪ ಕಡಿಮೆಯಾದರೂ ಚಿಂತಿಸಬೇಕಿಲ್ಲ.
ಬದುಕಲು ಅನ್ನಬೇಕು, ಸ್ವಲ್ಪ ಕಡಿಮೆಯಾದರೂ ಕೊರಗಬೇಕಿಲ್ಲ.
ಆದರೆ ವ್ಯಕ್ತಿತ್ವಕ್ಕೆ ಕಳಸಪ್ರಾಯವಾದ ಗೌರವ, ಮಾನ,
ಮರ್ಯಾದೆ ನಶಿಸದಂತೆ ನೋಡಿಕೊಳ್ಳಬೇಕು.

**ಡಾ॥ರಾಮು:** ನುಡಿದಂತೆ ನಡೆವವನು
ಅವನೆ ಸತ್ಯವಂತ
ದೇವರ ಸನ್ನಿಧಿಯಲ್ಲಿ ಅವ ಪಡೆವ
ಆನಂದ ಅನಂತ

**ಡಾ॥ಶೀಲ :** ದಾನವೇ ಕೈಗಳಿಗೆ ಆಭರಣ,
ಸತ್ಯವಚನವೇ ಕಂಠಕ್ಕೆ ಆಭರಣ,
ಸದ್ವಿಚಾರ ಶ್ರವಣವೇ ಕಿವಿಗಳಿಗೆ ಆಭರಣ,
ಇತರ ಆಭರಣವೆಲ್ಲ ಬರೀ ವಿಡಂಬನ.

**ಡಾ॥ರಾಮು:** ಮನಷ್ಯನಿಗೆ ರೂಪವು ಆಭರಣ,
ರೂಪಕ್ಕೆ ಗುಣಗಳೇ ಆಭರಣ
ಗುಣಗಳಿಗೆ ಜ್ಞಾನವೇ ಆಭರಣ,
ಜ್ಞಾನಕ್ಕೆ ಕ್ಷಮಾಗುಣವೇ ಆಭರಣ.

**ಡಾ॥ಶೀಲ :** ಕಷ್ಟಕಾಲದಲ್ಲಿ ಧೈರ್ಯ
ಸಂಪತ್ತು ಒದಗಿದಾಗ ತಾಳ್ಮೆ
ಸಭೆಯಲ್ಲಿ ಮಾತಿನ ಜಾಣ್ಮೆ
ಯುದ್ಧದಲ್ಲಿ ಪರಾಕ್ರಮ
ಕೀರ್ತಿ ಗಳಿಸುವಲ್ಲಿ ಆಸಕ್ತಿ
ಸಧ್ಗಂಥ ವಿದ್ಯಾಭ್ಯಾಸದಲ್ಲಿಯೂ ಆಸಕ್ತಿ
ಇವು ಮಹಾತ್ಮರಿಗೆ ಸಹಜ ಸಿದ್ಧವಾದ ಗುಣಗಳು

**ಡಾ॥ರಾಮು:** ಮಾತು ಬಲ್ಲವ ಬೆಲ್ಲ ತಿನ್ನುತ್ತಾನೆ.
ಮಾತು ಬಲ್ಲವ ಮನೆ ಕಟ್ಟುತ್ತಾನೆ.
ಮಾತು ಬಲ್ಲವ ಬೇಕಾದ್ದನ್ನು ಸಾಧಿಸುತ್ತಾನೆ.

**ಡಾ॥ಶೀಲ :** ಮಾತೇ ಸರಸ್ವತೀ ಮಾತೆ
ಸಮಯೋಚಿತ ಮಾತನ್ನಾಡಿ
ಸಂತೋಷವನ್ನುಂಟು ಮಾಡುವುದೇ
ಸರಸ್ವತಿಯ ಸೇವೆ, ಸರಸ್ವತೀ ಪೂಜೆ

**ಡಾ॥ರಾಮು:** ಸಹನೆಗೆ ಸಮನಾದ ತಪಸ್ಸಿಲ್ಲ
ಸಂತೃಪ್ತಿಗೆ ಸಮನಾದ ಸಂತೋಷವಿಲ್ಲ

**ಡಾ॥ಶೀಲ :** ವೀರರಿಗೆ ಧಿರತೆಯೇ ಆಭರಣ

ಅಧಿಕಾರಿಗಳಿಗೆ ದಕ್ಷತೆಯೇ ಆಭರಣ
ಸಜ್ಜನರಿಗೆ ಸದ್ಗುಣಗಳೇ ಆಭರಣ.

**ಡಾ॥ರಾಮು:** ಸತ್ಯವಂತನ ಮಾತು ಸಾರ್ಥಕ,
ಕೀರ್ತಿಶಾಲಿಯ ವ್ಯಕ್ತಿತ್ವ ಸಾರ್ಥಕ,
ಧರ್ಮನಿಷ್ಠನ ಜೀವನ ಸಾರ್ಥಕ,
ಪರೋಪಕಾರಿಯ ಶರೀರ ಸಾರ್ಥಕ,
ದಾನಶೀಲನ ಸಂಪತ್ತು ಸಾರ್ಥಕ,

**ಡಾ॥ಶೀಲ :** ಗುರುಕೃಪೆ ದೊರಕಿದಾಗ
ಮನಸ್ಸು ಶುದ್ಧವಾದಾಗ
ಚಿತ್ತ ಏಕಾಗ್ರಗೊಂಡಾಗ
ಧ್ಯಾನ ಸಿದ್ಧಿಸುತ್ತದೆ.
ಜ್ಞಾನ ಮಿಂಚುತ್ತದೆ.

**ಡಾ॥ರಾಮು:** ಕೋಪವೇ ಯಮರಾಜ
ಆಸೆಯೇ ವೈತರಣೀ ನದಿ
ವಿದ್ಯೆಯೇ ಕಾಮಧೇನು
ಸಂತೋಷವೇ ನಂದನವನ

**ಡಾ॥ಶೀಲ :** ಇಚ್ಛಾಶಕ್ತಿ ಕುದುರೆ ಆಗಿ,
ಜ್ಞಾನಶಕ್ತಿ ಸಾರಥಿ ಆಗಿ,
ರಥವನ್ನೆಳೆಯುವ ಶಕ್ತಿ
ಕ್ರಿಯಾಶಕ್ತಿ ಆದಾಗ,
ಜೀವನಯಾತ್ರೆ ಸುಗಮ.

**ಡಾ॥ರಾಮು:** ದಾನವೇ ಯಶಸ್ಸಿಗೆ ಮಾರ್ಗ,
ಸತ್ಯವು ಸ್ವರ್ಗಕ್ಕೆ ಮಾರ್ಗ,
ಶೀಲವೇ ಸುಖಕ್ಕೆ ಮಾರ್ಗ
ಎಲ್ಲಾ ಲಾಭಗಳಿಗಿಂತಲೂ
ಆರೋಗ್ಯ ಲಾಭವೇ ಶ್ರೇಷ್ಠ.

**ಡಾ॥ಶೀಲ :** ದ್ವೇಷ ಬುದ್ಧಿಯನ್ನು ತಿನ್ನುತ್ತದೆ
ಅಹಂಕಾರ ಜ್ಞಾನವನ್ನು ತಿನ್ನುತ್ತದೆ.
ಮೋಹ ಮರ್ಯಾದೆಯನ್ನು ತಿನ್ನುತ್ತದೆ.
ಚಿಂತೆ ಆಯುಷ್ಯವನ್ನು ತಿನ್ನುತ್ತದೆ.
ಪ್ರಾಯಶ್ಚಿತ್ತ ಪಾಪವನ್ನು ತಿನ್ನುತ್ತದೆ.

**ಡಾ॥ರಾಮು:** ಸುಭಾಷಿತದ ರುಚಿಯ ಮುಂದೆ:

ದ್ರಾಕ್ಷಿಯು ಬಾಡಿತು.
ಸಕ್ಕರೆಯು ಕಲ್ಲಾಯಿತು.
ಅಮೃತವು ಹೆದರಿ ಸ್ವರ್ಗಕ್ಕೆ ಹೋಯಿತು !

ಹಾಲಿನೊಳಗಿದೆ ಬೆಣ್ಣೆ
ಬೀಜದೊಳಗಿದೆ ಎಣ್ಣೆ
ನಿನ್ನಯ ದೇವ ನಿನ್ನೊಳಗಿಹನೈ
ಕೈಲಾದರೆ ನೋಡೈ.

ಡಾ॥ಶೀಲ : ಪರಮಾತ್ಮನ ಸ್ಮರಣೆ, ಧ್ಯಾನಗಳಿಂದ ಸಂಪನ್ನನಾದ ಬದುಕು ನಿತ್ಯಸುಂದರ, ನಿತ್ಯಸುರಕ್ಷಿತ !

ಡಾ॥ರಾಮು: ಪ್ರಾರ್ಥಿಸದೆ ಇರಬೇಡ,
ಪ್ರಾರ್ಥಿಸದೆ ಉಣಬೇಡ.

ಜೀವಾತ್ಮನು ಪರಮಾತ್ಮನೊಡನೆ ಸಂಭಾಷಿಸುವುದೇ ಪ್ರಾರ್ಥನೆ.

ಪ್ರಾರ್ಥನೆಯು ಬೆಳಗಿನ ಬೀಗದಕೈ, ಸಂಜೆಯ ಚಿಲಕ.

ಮನಸ್ಸಿಗೆ ಶಾಂತಿ, ಬದುಕಿಗೆ ಬೆಳಕು, ಜೀವನದ ಹೋರಾಟಕ್ಕೆ ಧೈರ್ಯ

ಇವು ಪ್ರಾರ್ಥನೆಯಿಂದ ಲಭಿಸುತ್ತವೆ.

ಡಾ॥ಶೀಲ : ಪ್ರಾರ್ಥನೆಯನ್ನು ಮಾತು, ಮಂತ್ರ, ಮೌನಜಪ, ಆಂತರಿಕ ಅಥವಾ ಬಾಹ್ಯ ಪೂಜೆ ಮಾಡಿದ ನಂತರ :-

1) ಆತ್ಮ ವಿಶ್ವಾಸ ವರ್ಧಿಸಬೇಕು.
2) ಉತ್ಸಾಹ, ಮನಸ್ಥೈರ್ಯ, ಮನಶ್ಶುದ್ಧಿ - ಉಂಟಾಗಬೇಕು.
3) ಶಾಂತಿ, ಸಂತೋಷಗಳು ಉಂಟಾಗಬೇಕು.

ಡಾ॥ರಾಮು: ಮಾನವನ ಮನಸ್ಸು- ಒಂದು ದೊಡ್ಡ ಬುಟ್ಟಿ,

ಅದರಲ್ಲಿ ಅವನು ಮಲ್ಲಿಗೆ ತುಂಬಿಕೊಳ್ಳುವನೋ,

ಮಾಲಿನ್ಯ ತುಂಬಿಕೊಳ್ಳುವನೋ

ಎಂಬುದು ಅವರವರ ಅಭಿರುಚಿಗೆ ಬಿಟ್ಟಿದ್ದು.

ಡಾ॥ಶೀಲ : ಪ್ರತಿಯೊಂದು ಕ್ಷಣದಲ್ಲೂ ವಿದ್ಯೆಯನ್ನು ಗಳಿಸುತ್ತಿರಬೇಕು.
ಕ್ಷಣ ನಷ್ಟವಾದರೆ, ವಿದ್ಯೆ ಎಲ್ಲಿಯದು ?
ವಿದ್ಯೆಯು ವಿನಯವನ್ನು ಕೊಡುತ್ತದೆ.

ಡಾ॥ರಾಮು: ವಿನಯದಿಂದ ಅರ್ಹತೆ ಬರುತ್ತದೆ.
ಅರ್ಹತೆಯಿಂದ ಧನಪ್ರಾಪ್ತಿ.
ಧನದಿಂದ ಧರ್ಮವೂ,
ಧರ್ಮದಿಂದ ಸುಖವೂ ಉಂಟಾಗುತ್ತದೆ.

**ಡಾ॥ಶೀಲ** : ಚಿಂತೆ ಮಾಡಿದರೆ ಮುಪ್ಪು ಆವರಿಸೀತು !

ಚಿಂತೆ ಮಾಡಿದರೆ ಉಪಯೋಗವಾದೀತು !
ಮುತ್ತು ಕಳೆದರೆ ಹುಡುಕಬಹುದು.
ಹೊತ್ತು ಕಳೆದರೆ ಸಿಗಲಾರದು.
ಮಂದಹಾಸವೇ ಚಂದ,
ಅಂದವಾದ ಮುಖದಲ್ಲಿ ಇನ್ನೂ ಚಂದ
ಮಾಸಲು ಮುಖವೂ ಮಿಂಚುವುದು ಮುಗುಳ್ನಕ್ಕರೆ
ಕಷ್ಟವು ಇಲ್ಲ, ನಷ್ಟವೂ ಇಲ್ಲ ನಸುನಕ್ಕರೆ.

**ಡಾ॥ರಾಮು:** ಮುಖ ಎಷ್ಟೇ ಸುಂದರವಾಗಿದ್ದರೂ

ಮಂದಹಾಸವೊಂದು ಮಿನುಗದಿದ್ದರೆ,

ಶೋಭೆಬಾರದು

**ಡಾ॥ಶೀಲ** : ಮೌನವನ್ನಾಚರಿಸಿದರೆ,

ಜಗಳ ನಿಲ್ಲುತ್ತದೆ.

ಸಮಾಧಾನ ಉದಿಸುತ್ತದೆ,

ಶಾಂತಿ ನೆಲಸುತ್ತದೆ.

**ಡಾ॥ಶೀಲ** : ಕೌಶಲ್ಯದಿಂದ ಕೆಲಸ ಮಾಡುವ ಮನುಷ್ಯ,

ಉನ್ನತಿಗೇರುವ ಬಗೆ ಬಲು ಚಂದ.

ಸದ್ಗುಣಿಗಳನ್ನು ಕಂಡು ಹೊಗಳುವುದಕ್ಕಿಂತ

ಅವರನ್ನು ಅನುಸರಿಸುವುದು ಮೇಲು.

**ಡಾ॥ಶೀಲ** : ದುರ್ಗುಣಿಗಳನ್ನು ಕಂಡು ತೆಗಳುವುದಕ್ಕಿಂತ,

ನಮ್ಮ ಅಂತರಂಗವನ್ನೇ ಒಮ್ಮೆ ನೋಡಿಕೊಳ್ಳುವುದು ಮೇಲು,

ಮತ್ಸರಿಸುವವರ ನಡುವೆ ಮೆರೆದಾಡುವುದಕ್ಕಿಂತ,

ಮಂಕರ ನಡುವೆ ಮೌನವಾಗಿರುವುದೇ ಲೇಸು,

**ಡಾ॥ಶೀಲ** : ಅತ್ಯಂತ ಕನಿಷ್ಠವಾದದ್ದನ್ನೂ ಚೆನ್ನಾಗಿ ಮಾಡಿದರೆ,

ಅದರಿಂದ ಅದ್ಭುತ ಫಲಪ್ರಾಪ್ತಿ.

**ಕಾರ್ಯನಿರತವಾದವನಿಗೆ ಅಳುವುದಕ್ಕೆ ಹೊತ್ತು ಇರುವುದಿಲ್ಲ.**

ಗುಣವಿಲ್ಲದಿದ್ದರೆ - ರೂಪ ವ್ಯರ್ಥ
ನಮ್ರತೆಯಿಲ್ಲದಿದ್ದರೆ - ವಿದ್ಯೆ ವ್ಯರ್ಥ

ಉಪಯೋಗಿಸದಿದ್ದರೆ - ಹಣ ವ್ಯರ್ಥ
ಹಸಿವೆ ಇಲ್ಲದಿದ್ದರೆ - ಭೋಜನೆ ವ್ಯರ್ಥ
ಪ್ರಜ್ಞೆ ಇಲ್ಲದಿದ್ದರೆ - ಪ್ರತಿಭೆ ವ್ಯರ್ಥ
ಗುರಿಯಿಲ್ಲದಿದ್ದರೆ - ಸಾಧನೆ ವ್ಯರ್ಥ

ಡಾ॥ಶೀಲ : **ಸಜ್ಜನರ ಸಂಗವು**

1) ಬುದ್ಧಿಯ ಜಡತ್ವವನ್ನು ಹೋಗಲಾಡಿಸುತ್ತದೆ.
2) ಮಾತಿನಲ್ಲಿ ಸತ್ಯವನ್ನು ಚಿಮುಕಿಸುತ್ತದೆ.
3) ಗೌರವವನ್ನು ವರ್ಧಿಸುತ್ತದೆ
4) ಪಾಪವನ್ನು ದೂರ ಮಾಡುತ್ತದೆ.
5) ಮನಸ್ಸನ್ನು ಪ್ರಸನ್ನಗೊಳಿಸುತ್ತದೆ
6) ಎಲ್ಲಡೆ ಕೀರ್ತಿಯನ್ನು ತರುತ್ತದೆ.

ಡಾ॥ಶೀಲ : ಚಿಂತೆಯೇ ನಿವೃತ್ತಿ, ಚಿಂತನೆಯೇ ಪ್ರವೃತ್ತಿ

ಡಾ॥ರಾಮು: ಮೂಢನ ಪಾಲಿಗೆ ನಿವೃತ್ತಿಯೂ ಪ್ರವೃತ್ತಿಯಾಗಿ ಪರಿಣಮಿಸುತ್ತದೆ. ಜ್ಞಾನಿಯಾದವನಿಗೆ ಪ್ರವೃತ್ತಿಯೂ ನಿವೃತ್ತಿಯ ಫಲವನ್ನು ನೀಡುತ್ತದೆ.

ಡಾ॥ಶೀಲ : ನಾವು ತ್ಯಾಗ ಮಾಡುವುದು ಕ್ಷುಲ್ಲಕವಾದ ವಿಷಯಾನಂದವನ್ನು ಪ್ರತಿಯಾಗಿ ನಾವು ಪಡೆಯುವುದ ಮಹತ್ತಾದ ಅಮೃತಾನಂದವನ್ನು

ಡಾ॥ರಾಮು: ಬಂಧನವನ್ನು ಬಿಗಿಗೊಳಿಸುತ್ತ ಬರುವುದು ಪ್ರಾಪಂಚಿಕ ಅನುಭವದ ಸ್ವಭಾವ. ಬಂಧನವನ್ನು ಬಿಡಿಸುತ್ತ ಹೋಗುವುದು ಆಧ್ಯಾತ್ಮಿಕ ಅನುಭವದ ಪ್ರಭಾವ.

ಡಾ॥ಶೀಲ : ಹೊನ್ನಿನ ಬಯಕೆಯುಳ್ಳವರಿಗೆ ತಾವು ಕೋಟ್ಯಾಧೀಶರಾದರೂ ತೃಪ್ತಿಯಲ್ಲ! ಮಣ್ಣಿನ ಬಯಕೆಯುಳ್ಳವರಿಗೆ ಕೋಟಿ ಎಕರೆ ಭೂಮಿಯಿದ್ದರೂ ತೃಪ್ತಿಯಿಲ್ಲ!

ಡಾ॥ರಾಮು: ಸತ್ಯವನ್ನು ಹೇಳುವವನು, ಸ್ವಾರ್ಥವನ್ನು ಗೆದ್ದವನು ಮತ್ತು ಶಾಂತಿಪಡೆದವನು ನಿಜವಾಗಿಯೂ ಸುಖಿ.

ಡಾ॥ಶೀಲ : ಜಿಪುಣ ಮತ್ತು ಉದಾರಿ ಇವರಿಬ್ಬರಿಗೂ ತಾವು ಅನುಭವಿಸಬೇಕು ಎಂಬ ಇಚ್ಛೆ ಇಲ್ಲ; ಇಬ್ಬರೂ ಮತ್ತೊಬ್ಬರಿಗಾಗಿಯೇ ಹಣ ಕೂಡಿಡುತ್ತಾರೆ ! ಆದರೂ ಇಬ್ಬರಲ್ಲೂ ಇರುವ ವ್ಯತ್ಯಾಸ ಅಪಾರ.

ಡಾ॥ರಾಮು: ಕಷ್ಟಪಟ್ಟು ನ್ಯಾಯದಿಂದ ಸಂಪಾದಿಸಿದ ಹಣವನ್ನು ಪ್ರೀತಿಯಿಂದ, ಸಂತೋಷದಿಂದ, ಪ್ರತ್ಯುಪಕಾರದ ಪ್ರತೀಕ್ಷೆಯಿಲ್ಲದೆ, ಯೋಗ್ಯರಿಗೆ ಕೊಡುವುದೇ ದಾನ.

ಡಾ॥ಶೀಲ : ಹೆಮ್ಮರಗಳೂ ಉರುಳಿ ಬೀಳುತ್ತವೆ. ನದಿ, ಕೆರೆ, ಬಾವಿಗಳಲ್ಲಿ ನೀರು ಕೂಡ ಬತ್ತಿಹೋಗುತ್ತದೆ. ಆದರೆ, ಮಾನವರು ಈ ಜನ್ಮದಲ್ಲಿ ಮಾಡಿದ ದಾನಧರ್ಮಗಳಾ

ಗಲೀ, ಹೋಮವಾಗಲೀ, ನಾಶವಾಗದೆ, ತಮ್ಮ ಫಲಗಳನ್ನು ಮುಂದಿನ ಜನ್ಮದಲ್ಲಿಯೂ ಕೊಡುತ್ತವೆ.

ಡಾ॥ರಾಮು: ಸೂರ್ಯನು ಕಮಲಗಳ ಸಮೂಹವನ್ನು ಅರಳಿಸುತ್ತಾನೆ. ಚಂದಿರನು ನೈದಿಲೆಗಳ ಗುಂಪನ್ನು ವಿಕಾಸಗೊಳಿಸುತ್ತಾನೆ.

ಯಾರೂ ಕೇಳದಿದ್ದರೂ ಮೋಡಗಳು ತಂಪನೆಯ ಮಳೆಯನ್ನು ಸುರಿಸುತ್ತವೆ. ಮಹಾತ್ಮರು ಪರರ ಪ್ರೇರಣೆಯಿಲ್ಲದೆ, ತಾವಾಗಿಯೇ ಪರಹಿತ ಕಾರ್ಯಗಳಲ್ಲಿ ತೊಡಗುತ್ತಾರೆ.

ಡಾ॥ಶೀಲ : ತರುಲತೆಗಳು ಲೋಕಹಿತಕ್ಕಾಗಿಯೇ ಕುಡಿಯೊಡೆಯುತ್ತವೆ. ಚಿಗುರುತ್ತವೆ. ಹೂ, ಕಾಯಿ, ಹಣ್ಣುಗಳನ್ನು ಪ್ರ ತಿಫಲದ ನಿರೀಕ್ಷೆಯಿಲ್ಲದೆ ತಲೆಬಾಗಿ ಲೋಕಕ್ಕೆ ಸಮರ್ಪಿಸುತ್ತವೆ.

ಡಾ॥ರಾಮು: ಲೋಕಹಿತಂ ಕರಣೀಯಂ - ಎಂಬ ಪರೋಪಕಾರದ ಧ್ಯೇಯಾದರ್ಶಗಳು ನಮ್ಮಲ್ಲಿ ಚಿಗುರು, ಪರಾರ್ಥಕ್ಕಾಗಿ ದುಡಿದು, ಈ ಮಾನವ ಜೀವನವನ್ನು ಧನ್ಯತೆಯ ತೀರಕ್ಕೆ ಒಯ್ದಾಗ ಮಾತ್ರ ಸಾರ್ಥಕವಾದೀತು ನಮ್ಮ ಬಾಳ್ವೆ.

ಡಾ॥ಶೀಲ : ಕೆಚ್ಚಲು ತುಂಬ ಹಾಲನ್ನು ತುಂಬಿಕೊಂಡ ಗೋಮಾತೆಯು ಮಾನವರ ಉಪಕಾರಕ್ಕಾಗಿ' ಆಜೀವಪರ್ಯಂತ ಸಮರ್ಪಿಸುತ್ತವೆ.

ಡಾ॥ಶೀಲ : ಮಿತಾಹಾರದ ಮಹತ್ವವನ್ನು ಎಷ್ಟೇ ತಿಳಿದಿದ್ದರೂ, ಮದುವೆ ಮನೆಯಲ್ಲೋ, ಸಂತೋಷದ ಕೂಟದಲ್ಲೋ, ಭೋಜನದ ವೇಳೆಯಲ್ಲಿ ಜಿಹ್ವಾಚಾಪಲ್ಯಕ್ಕೆ ಒಳಗಾಗದಂತೆ ತಮ್ಮ ನಾಲಿಗೆಯನ್ನು ತಾವೇ ಹತೋಟಿಯಲ್ಲಿ ಇಟ್ಟಿರಬೇಕಾಗುತ್ತದೆ - ಇದೇ ಆತ್ಮಶಿಕ್ಷಣ.

ಡಾ॥ರಾಮು: ಸದ್ಗ್ರಂಥಗಳಿಂದ ಮಾರ್ಗದರ್ಶನ ದೊರೆತರೂ, ಗುರುಹಿರಿಯರಿಂದ ದಿಗ್ದರ್ಶನ ಏದ್ದರೂ, ಪರಿಸರದ ಪ್ರಭಾವದಿಂದ, ತಮ್ಮ ತಮ್ಮ ಮನದಲ್ಲಿ ಕಾಮ, ಕ್ರೋಧ, ಲೋಭ, ಮೋಹಾದಿಗಳನ್ನು ನಿಗ್ರಹಿಸಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು.

ಡಾ॥ಶೀಲ : ಲೌಕಿಕ ಹಾಗೂ ಪಾರಮಾರ್ಥಿಕ ಯಶಸ್ಸಿಗೆ - ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಗಳನ್ನು ಅಳವಡಿಸಿಕೊಂಡು ಬಳಸಿಕೊಳ್ಳುವುದೇ ವಿವೇಕ.

ಡಾ॥ರಾಮು: ಇಚ್ಛಾಶಕ್ತಿ ಕುದುರೆ ಆಗಿ, ಜ್ಞಾನಶಕ್ತಿ ಸಾರಥಿ ಆಗಿ, ರಥವನ್ನೆಳೆಯುವ ಶಕ್ತಿ ಕ್ರಿಯಾಶಕ್ತಿ ಆದಾಗ, ಜೀವನಯಾತ್ರೆ ಸುಗಮ.

ಡಾ॥ಶೀಲ : ಹೊಟ್ಟೆ ಹಸಿದವನು ಅನ್ನಕ್ಕಾಗಿ ಹಂಬಲಿಸುವಲ್ಲಿ ಎಂಥ ವ್ಯಾಕುಲತೆ! ಎಂಥ ತೀವ್ರತೆ! ಎಂಥ ಪ್ರಾಮಾಣಿಕತೆ! ಹಾಗೆಯೇ

1) ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುವಲ್ಲಿ
2) ಧಾರ್ಮಿಕರು ಧರ್ಮಾನುಷ್ಠಾನ ಮಾಡುವಲ್ಲಿ
3) ಭಕ್ತರು ಪ್ರಾರ್ಥನೆ ಮಾಡುವಲ್ಲಿ

ಇಂಥ ವ್ಯಾಕುಲತೆ! ಇಂಥ ತೀವ್ರತೆ! ಇಂಥ ಪ್ರಾಮಾಣಿಕತೆ ಇದ್ದಿದ್ದರೆ!

1) ನಮ್ಮ ಕಣ್ಮುಂದೆ ಹರಡಿರುವ ಅನಂತ ಆಕಾಶವು ನಿರ್ಮಲ,

2) ನಿರಂತರ ಬೀಸುತ್ತಿರುವ ಗಾಳಿಯೂ ನಿರ್ಮಲ,
3) ಉರಿಯುತ್ತಿರುವ ಅಗ್ನಿಯು ನಿರ್ಮಲವ್ರೋ ನಿರ್ಮಲ.
4) ಸಕಲ ಜೀವಿಗಳ ಜೀವನಾಧಾರವಾದ ನೀರೂ ನಿರ್ಮಲ,
5) ನಮ್ಮನ್ನು ಸಹನೆಯಿಂದ ಹೊತ್ತು ನಿಂತಿರುವ ಭೂಮಾತೆಯ ಮಣ್ಣೂ ನಿರ್ಮಲ,
6) ನಮ್ಮ ಹೃನ್ಮನಗಳನ್ನು ರಂಜಿಸುತ್ತಿರವ ವನಸ್ಪತಿಯೂ ನಿರ್ಮಲ,
7) ವನರಾಜಿಯಿಂದ ಒಡಮಾಡುವ ಕುಸುಮಗಳೂ ನಿರ್ಮಲ,
8) ಭಗವಂತನ ನಿತ್ಯನಿರ್ಮಲವಾದ ಈ ಸೃಷ್ಟಿಯಲ್ಲಿ ಎಲ್ಲವ್ರೂ ನಿರ್ಮಲ.

**ಆದರೆ ಒಂದನ್ನುಳಿದು, ಅದು - ಮನುಷ್ಯನ ಮನಸ್ಸು.**

ಡಾ॥ರಾಮು: ಸಾವಿನ ಆಚೆಗೆ ಬಂಧು - ಮಿತ್ರರು ಯಾರೂ ನೆರವಿಗೆಬಾರರು. ಅವರ ಮಸಣದ ವರೆಗೆ ಬಂದಾರು, ವ್ಯಕ್ತಿಯ ಶವವನ್ನು ಸುಟ್ಟು ಹಿಂತಿರುಗಿಯಾರು.

ಡಾ॥ಶೀಲ : ಎಲ್ಲ ಆಸೆಗಳೂ ಪೂರ್ತಿಯಾಗುವುದು ಅಸಂಭವ
ಆಸೆಗಳ ಹೆಚ್ಚಳದಿಂದ ದುಃಖ ಅಧಿಕವಾಗುತ್ತದೆ
ಆಸೆಗಳಿಂದ ಮುಕ್ತಿಯೇ ಪರಮಸುಖ.

ಡಾ॥ರಾಮು: **ವಯಸ್ಸಾದಂತೆಲ್ಲಾ** : ಕೂದಲು ಉದುರುತ್ತವೆ' ಹಲ್ಲುಗಳು ಅಲ್ಲಾಡುತ್ತವೆ' ಕಣ್ಣುಗಳು ಮಂಜಾಗುತ್ತವೆ' ಕಿವಿಗಳು ಶಕ್ತಿಗುಂದುತ್ತವೆ. ಆದರೆ' ಶಕ್ತಿಗುಂದದೆ ಇರುವುದು' ಆಸೆಯೊಂದೇ !

ಡಾ॥ರಾಮು: 1) ನೆಮ್ಮದಿಯ ಜೀವನಕ್ಕೆ ಅಗತ್ಯವಾದದ್ದನ್ನು ಬಯಸಿದರೆ - ಅದು ಆಸೆ.
2) ಅಗತ್ಯಕ್ಕಿಂತ ಅಧಿಕವಾದದ್ದು ಬಯಸಿದರೆ - ಅತ್ಯಾಸೆ.
3) ಅನ್ಯರ ಅಗತ್ಯಗಳಿಗೆ ತಡೆಯೊಡ್ಡಿ' ತನ್ನ ಸ್ವಾರ್ಥ ಸಾಧಿಸಿಕೊಂಡರೆ - ದುರಾಸೆ.
4) ಬಯಕೆ ಈಡೇರದೆ ಇದ್ದಾಗ ಉಂಟಾಗುವುದೇ - ನಿರಾಸೆ.
5) ಬಯಕೆ ಈಡೇರುವ ಸಂಭವವೇ ಇಲ್ಲದಂತಾದಾಗ' ಉಂಟಾಗುವುದೇ - ಹತಾಸೆ.

ಡಾ॥ಶೀಲ : ಶೋಕವೇ ಮಹಾಶತ್ರು ವಿವೇಕದಿಂದ ಶೋಕವನ್ನು ಜಯಿಸಬೇಕು. ಶೋಕವು ಮನುಷ್ಯನ ಶೌರ್ಯ' ಮಾನಸಿಕ ಧೈರ್ಯ ಬುದ್ಧಿಯ ವಿವೇಕ ಸಾಮರ್ಥ್ಯವೆಲ್ಲವನ್ನೂ ನಾಶಮಾಡುತ್ತದೆ. ಆದ್ದರಿಂದ ಶೋಕವನ್ನು ವಿವೇಕದಿಂದ ಗೆಲ್ಲಬೇಕು.

ಡಾ॥ರಾಮು: ಸಿಟ್ಟು' ಹೊಟ್ಟೆಕಿಚ್ಚು' ಹಗೆತನ' ಚಿಂತೆಗಳನ್ನು ಉಳ್ಳವರಿಗೆ ರೋಗಗಳು ಬೇಗನೆ ಗುಣವಾಗುವುದಿಲ್ಲ. ಆದ್ದರಿಂದ ಅವನ್ನು ವರ್ಜಿಸಿ' ಮನಸ್ಸು' ಪ್ರೀತಿ' ಸಹಾನುಭೂತಿ' ಪರೋಪಕಾರಗಳಿಂದ ತುಂಬಿರುವಂತೆ ನೋಡಿಕೊಳ್ಳಬೇಕು.

ಡಾ॥ಶೀಲ : ಸೇವೆ' ವಿನಯ ಮತ್ತು ಶುದ್ಧತೆಗಳು ನಮ್ಮ ಶೀಲದ ತಳಹದಿ.
ಡಾ॥ರಾಮು: ಸಕ್ಕರೆಯ ಸಿಹಿ ಬಹಳ ಕಾಲ ನಮ್ಮ ನಾಲಿಗೆಯ ಮೇಲೆ ಉಳಿಯುವುದಿಲ್ಲ.

ಆದರೆ ಹಿತನುಡಿಯ ಸಿಹಿ ನಮ್ಮ ಹೃದಯದಲ್ಲಿ ಬಹಳ ಕಾಲ ಉಳಿಯುತ್ತದೆ.

ಡಾ॥ಶೀಲ : ದುಗುಡದಿ ಸ್ಮರಣೆಯ ಮಾಡುವರೆಲ್ಲ' ಸುಖದಲಿ ಸ್ಮರಿಸುವರಿಲ್ಲ ಸುಖದಲ್ಲೂ ಸ್ಮರಣೆಯ ಗೈದರೆ' ದುಗುಡವೇಕೆ ಬಂದೀತು ?

ಡಾ॥ರಾಮು: ಶರೀರವೆಂತೆಂಬ ಹೊಲವನು ಹಸನುಮಾಡಿ'

ಪರತತ್ವವೆಂಬ ಬೆಳೆಯನು ಬೆಳೆದುಣ್ಣಿರೊ'

ಡಾ॥ಶೀಲ : ತನ್ನಲ್ಲಿ ಇರುವುದನ್ನು ಇತರರ ಉಪಕಾರಕ್ಕಾಗಿ' ನಿ:ಸ್ವಾರ್ಥ ಬುದ್ಧಿಯಿಂದ ನೀಡಿ ಅ ನನ್ನದಲ್ಲ ಅ ಎನ್ನುವುದೇ ದಾನ.

ಡಾ॥ರಾಮು: ತಾನು' ತನ್ನದು - ಎಂಬ ಸ್ವಾರ್ಥ ಬುದ್ಧಿಯ ಕರ್ಮ ಬಂಧನದಿಂದ ಜೀವಿಯು ಬಿಡುಗಡೆಯಾಗಲು ದಾನವೆಂಬ ಕರ್ಮವು ಸಹಾಯ ನೀಡುತ್ತದೆ.

ಡಾ॥ಶೀಲ : **ಹತ್ತು ಮುಖ್ಯವಾದ ದಾನಗಳು**

1) ಅನ್ನದಾನ 2) ವಿದ್ಯಾದಾನ 3) ಸಂಪತ್‌ದಾನ 4) ಭೂದಾನ
5) ಶ್ರಮದಾನ 6) ಆಶ್ರಯದಾನ 7) ಕನ್ಯಾದಾನ 8) ಗೋದಾನ
9) ಅಭಯದಾನ 10) ಆತ್ಮಬಲಿದಾನ

# 14.ಗಾದೆಗಳು

## ಜನಪ್ರಿಯ ಗಾದೆಗಳು

1. ವೇದ ಸುಳ್ಳಾದರು ಗಾದೆ ಸುಳ್ಳಾಗದು.
2. ಕೈ ಕೆಸರಾದರೆ ಬಾಯಿ ಮೊಸರು.
3. ಜಾಣನಿಗೆ ಮಾತಿನ ಪೆಟ್ಟು, ದಡ್ಡನಿಗೆ ದೊಣ್ಣೆ ಪೆಟ್ಟು.
4. ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬರಲ್ಲ.
5. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.
6. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ.
7. ಎತ್ತು ಏರಿಗೆಳೀತು, ಕೋಣ ನೀರಿಗೆಳೀತು.
8. ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತ ?
9. ಹೆಣ್ಣಿಗೆ ಹಟವಿರಬಾರದು, ಗಂಡಿಗೆ ಚಟವಿರಬಾರದು.
10. ಮಾತು ಬೆಳ್ಳಿ, ಮೌನ ಬಂಗಾರ.
11. ಮಾತು ಮನೆ ಮುರಿತು, ತೂತು ಓಲೆ ಕೆಡಿಸಿತು.
12. ಮನೆಗೆ ಮಾರಿ, ಊರಿಗೆ ಉಪಕಾರಿ.
13. ಮಂಗ ಮೊಸರು ತಿಂದು ಮೇಕೆ ಬಾಯಿಗೆ ಸವರಿದ ಹಾಗಾಯಿತು.
14. ಆಳಾಗಬಲ್ಲವನು ಅರಸನಾಗಬಲ್ಲ.
15. ಊರಿಗೆ ದೊರೆ ಆದರೂ ತಾಯಿಗೆ ಮಗನೆ.
16. ಹೆತ್ತವರಿಗೆ ಹೆಗ್ಗಣ ಮುದ್ದು.
17. ಮನಸಿದ್ದರೆ ಮಾರ್ಗ.
18. ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ ?
19. ಊರೆಲ್ಲ ದೋಚಿಕೊಂಡು ಹೋದಮೇಲೆ ಕೋಟೆ ಬಾಗಿಲು ಹಾಕಿದರಂತೆ.
20. ಮಾಡೋದೆಲ್ಲ ಅನಾಚಾರ, ಮನೆ ಮುಂದೆ ಬೃಂದಾವನ.
21. ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ.
22. ಆರಕ್ಕೇರಲಿಲ್ಲ, ಮೂರಕ್ಕಿಳಿಯಲಿಲ್ಲ.
23. ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಸೊಸೆ ಕಡೆ.
24. ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ.
25. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡಂತೆ.
26. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ
27. ತುಂಬಿದ ಕೊಡ ತುಳುಕುವುದಿಲ್ಲ.
28. ಬೆಕ್ಕು ಕಣ್ಣುಚ್ಚಿ ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗಲ್ವಾ ?
29. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ.

30. ಬೆಳ್ಳಗಿರೋದೆಲ್ಲ ಹಾಲಲ್ಲ. ಹೊಳೆಯೋದೆಲ್ಲ ಚಿನ್ನ ಅಲ್ಲ.

31. ಹತ್ತು ಕಟ್ಟೋ ಕಡೆ ಒಂದು ಮುತ್ತು ಕಟ್ಟು.

32. ಜಲ ಶೋಧಿಸಿ ನೀರು ತರಬೇಕು, ಕುಲ ಶೋಧಿಸಿ ಹೆಣ್ಣು ತರಬೇಕು.

33. ಚಿಂತೆ ಇಲ್ಲದವನಿಗೆ ಸಂತೇಲು ನಿದ್ದೆ.

34. ದೇವರು ವರ ಕೊಟ್ಟರು ಪೂಜಾರಿ ಕೊಡಬೇಕಲ್ಲ.

35. ನಾಯಿನ ಕರೆದುಕೊಂಡು ಹೋಗಿ ಸಿಂಹಾಸಾನದ ಮೇಲೆ ಕೂರಿಸಿದ ಹಾಗಾಯ್ತು.

36. ಹುಚ್ಚರ ಮದುವೆಯಲ್ಲಿ ಉಂಡವನೆ ಜಾಣ.

37. ಗಂಡ ಹೆಂಡರ ಜಗಳ ಉಂಡು ಮಲಗೋ ತನಕ.

38. ಹನಿ ಹನಿ ಸೇರಿದರೆ ಹಳ್ಳ, ತೆನೆ ತೆನೆ ಸೇರಿದರೆ ಬಳ್ಳ.

## ವಿವರಣೆ

ಡಾ॥ರಾಮು: ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ಹರಿದು ಬಂದಿರುವ ಬೋಧ ಪರವಾದ ಸೂಕ್ತಿಯೇ ಗಾದೆ (ಪ್ರಾವರ್ಬ್).

ಡಾ॥ಶೀಲ : ಕನ್ನಡದಲ್ಲಿ ಗಾದೆ ಪದಕ್ಕೆ ಸಂವಾದಿಯಾಗಿ ನಾಣ್ಣುಡಿ ಎಂಬ ಪದವೂ ಪ್ರಚಲಿತವಿದೆ. ಗಾದೆಗೆ ಸಾಮತಿ, ಸೂಕ್ತಿ, ಸೂತ್ರ, ಉದ್ಧರಣೆ, ಲೋಕೋಕ್ತಿ, ಪ್ರಾಚೀನೋಕ್ತಿ ಇತ್ಯಾದಿಗಳು ಬಳಕೆಯಾಗಿದ್ದರೂ ಮೂಲಾರ್ಥದಲ್ಲಿ ಇವೆಲ್ಲವೂ ಒಂದೇ ಎನ್ನಲಾಗುವುದಿಲ್ಲ.

ಡಾ॥ರಾಮು: ಗ್ರಾಮೀಣ ಜನ ಮಾತನಾಡುವಾಗಲೆಲ್ಲ ಗಾದೆಗಳು ಪುಂಖಾನುಪುಂಖವಾಗಿ ಬಳಸುವುದನ್ನು ಕಾಣುತ್ತೇವೆ.

ಡಾ॥ಶೀಲ : ಗಾದೆ ಆಡುಮಾತಿನ ಜೀವಸತ್ತ್ವ ಎಂಬುದನ್ನು ಇದು ತೋರಿಸಿಕೊಡುತ್ತದೆ. ಅವಿಲ್ಲದೆ ಹೋದರೆ ಮಾತು ಸಪ್ಪೆಯಾಗುತ್ತದೆ.

ಡಾ॥ರಾಮು: ಗಾದೆ ಜನಜೀವನದ ವ್ಯಾಪಕ ಸತ್ತ್ವ, ತತ್ತ್ವ – ನೂರು ಭಾವದ ನೂರು ವಿಷಯದ ನೂರು ಅಭಿವ್ಯಕ್ತಿ.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಯೇ ಗಾದೆಯ ಸ್ವರೂಪವನ್ನು ತಿಳಿಸುತ್ತದೆ. ಇದು ಆಕಾರದಲ್ಲಿ ವಾಮನನಾಗಿ ಅರ್ಥದಲ್ಲಿ ತ್ರಿವಿಕ್ರಮವೆನಿಸಿದೆ.

ಡಾ॥ಶೀಲ : ಊಟಕ್ಕೆ ಉಪ್ಪಿನಕಾಯಿಯಂತೆ ಗಾದೆ ಮಾತಿಗೆ ವ್ಯಂಜನಶಕ್ತಿಯನ್ನು ಒದಗಿಸುತ್ತದೆ.

ಡಾ॥ಶೀಲ : ಗ್ರಾಮಜೀವನಕ್ಕೆ ಕಾಲಿರಿಸಿದ ಕೂಡಲೇ ಇಂಥ ಗಾದೆಗಳ ಬಿಸಿ ತಾಗುತ್ತದೆ.

ಡಾ॥ರಾಮು: ಬೆಂಕಿಯ ಕಿಡಿಗಳಂತೆ ಕೆಲವಾದರೆ, ಇಬ್ಬನಿಯಂಥವು ಮತ್ತೆ ಕೆಲವು.

ಡಾ॥ಶೀಲ : ಕೆಲವು ಬೆಳದಿಂಗಳಿನಂತೆ ತಂಪಾದರೆ, ಮತ್ತೆ ಕೆಲವು ಬಿಸಿಲಿನಂತೆ ಮೈ ಸುಡುತ್ತವೆ;

ಡಾ॥ರಾಮು: ಕೆಲವು ಮುತ್ತಿಕ್ಕಿದರೆ, ಮತ್ತೆ ಕೆಲವು ಮುತ್ತಿಗೆ ಹಾಕುತ್ತವೆ.

ಡಾ॥ರಾಮು: ಇವು ಸೂಕ್ತ ಸಂದರ್ಭಗಳಲ್ಲಿ ತಾಳಿದ ಯೋಗ್ಯ ನಿರ್ಣಯಗಳು.

ಡಾ॥ಶೀಲ : ಗಾದೆ ಹಲವಾರು ಮಾತುಗಳ ಘಟಕ. ಆದ್ದರಿಂದಲೇ ಅದು ಸಾವಿರ ಮಾತಿನ ಸರದಾರ.

ಡಾ॥ರಾಮು: ಅದು ಹಲವರ ಜ್ಞಾನ, ಒಬ್ಬನ ವಿವೇಕ ವ್ಯಾಖ್ಯಾನವನ್ನು ಅಪೇಕ್ಷಿಸುವ ಹೇಳಿಕೆ.

ಡಾ॥ರಾಮು: ನನ್ನ ಅಭಿಪ್ರಾಯದಲ್ಲಿ ಗಾದೆಯೆಂದರೆ ಜನರ ಬಳಕೆಯಲ್ಲಿದ್ದು, ಈಗಲೂ ಇರುವ, ಉಪದೇಶಾತ್ಮಕ ಅಥವಾ ಸಲಹೆಯನ್ನು ನೀಡುವ, ನಿಜವಾದ ಅರ್ಥವನ್ನು ಮರೆಸಿ ಅಲಂಕಾರಿಕವಾಗಿ ವ್ಯಕ್ತವಾಗಿರುವ, ರೂಪಕ ಅಥವಾ ಗೂಢಾರ್ಥದ್ಯೋತಕವಾಗಿ ಕಾಣಿಸಿಕೋಳ್ಳುವ ಜನಾಂಗವೊಂದರ ಸೂಕ್ತಿ ಎಂದು ಎಸ್. ಜಿ. ಚಾಂಪಿಯನ್ ಹೇಳಿದ್ದಾನೆ.

ಡಾ॥ಶೀಲ : ಗಾದೆಗಳಲ್ಲಿ ನಾಲ್ಕು ಗುಣಗಳಿವೆ : ಸಂಕ್ಷಿಪ್ತತೆ, ವಿವೇಕ ಪೂರ್ಣತೆ, ತೀಕ್ಷ್ಣತೆ ಮತ್ತು ಜನಪ್ರಿಯತೆ.

ಡಾ॥ಶೀಲ : ಗಾದೆ ಸಾರ್ವಜನಿಕರ ಸ್ವೀಕಾರಾರ್ಹತೆಯನ್ನು ಪಡೆದುಕೊಂಡಿರುವುದು. ಗಾದೆಯ ಮತ್ತೊಂದು ಅಂಶ ವಿವೇಕಪೂರ್ಣತೆ.

ಡಾ॥ರಾಮು: ಗಾದೆ ಯಾವುದೇ ವಿಷಯವನ್ನು ಮನಮುಟ್ಟುವಂತೆ ಹೇಳುವ ಸ್ವಭಾವದು. ಒಮ್ಮೆಗೇ ನಮ್ಮ ಹೃದಯವನ್ನು ಆಕ್ರಮಿಸುವ ಸಾಮರ್ಥ್ಯಹೊಂದಿದೆ

ಡಾ॥ಶೀಲ : ಗಾದೆಯ ಮತ್ತೊಂದು ಮಹತ್ವದ ಲಕ್ಷಣ ಜನಪ್ರಿಯತೆ. ಒಟ್ಟಿನಲ್ಲಿ ಗಾದೆಗಳು ಚಿಕ್ಕವು, ಪ್ರಸಕ್ತ ವಿಷಯಕ್ಕೆ ಮಾತ್ರ ಸಂಬಂಧಿಸಿದವು, ರಚನೆಯಲ್ಲಿ ಒಪ್ಪವಾದವು, ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯೂರುವಂಥವು.

ಡಾ॥ರಾಮು: ಛಂದೋಬದ್ಧತೆ, ಪ್ರಾಸಾನುಪ್ರಾಸ, ಯಮಕ, ಪುನರಾವೃತ್ತಿ, ನಾಟಕೀಯತೆ, ಅಲಂಕಾರ ಇವುಗಳ ಯೋಜಿತ ಅಭಿವ್ಯಕ್ತಿಯೇ ಗಾದೆ.

ಡಾ॥ಶೀಲ : ಗಾದೆಗಳಲ್ಲಿ ಹಾಸ್ಯ ಮತ್ತು ವಿಡಂಬನೆಗಳೂ ಬರುತ್ತವೆ. ಇವೆರಡೂ ಕೆಲವೊಮ್ಮೆ ಒಂದಾಗಿಯೂ ಕೆಲವೊಮ್ಮೆ ಬೇರೆ ಬೇರೆಯಾಗಿಯೂ ಬರುತ್ತದೆ.

ಡಾ॥ರಾಮು: ಕೆಲವೊಮ್ಮೆ ತಿಳಿ ಹಾಸ್ಯದಲ್ಲಿಯೇ ವಿಡಂಬನೆ ಮೈತಾಳಬಲ್ಲದು. ಸಾಯ್ತೀನಿ ಸಾಯ್ತೀನಿ ಅಂಥ, ಸಾವಿರ ಕೋಳಿ ತಿಂದನಂತೆ. ಅನುಭವದ ಪ್ರಾಮಾಣಿಕತೆಗೆ ಕಾವ್ಯತೆಯ ಸೂಕ್ಷ್ಮ ದೃಷ್ಟಿಯನ್ನು ತೊಡಿಸುತ್ತದೆ.

ಡಾ॥ಶೀಲ : ಕೆಲವು ಗಾದೆಗಳು ಪೌರಾಣಿಕ ವಿಷಯವನ್ನು ಆಧರಿಸಿ ರಚನೆಯಾಗಿರುತ್ತವೆ.

ಉದಾಹರಣೆಗೆ, ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ : ಅಂತು ಇಂತು ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ – ಇತ್ಯಾದಿ.

ಡಾ॥ರಾಮು: ಕಾನೂನಿನ ಗಾದೆಗಳು ಕಾನೂನು ತತ್ತ್ವದ ಸಂಕ್ಷಿಪ್ತ ಹೇಳಿಕೆಗಳು. ವೈದ್ಯಕೀಯ ಗಾದೆಗಳು ಇನ್ನೊಂದು ಬಗೆಯವು. ಆರೋಗ್ಯವನ್ನು ಕುರಿತಾದ ಹಳೆಯ ನಿಯಮಗಳನ್ನು ಇವು ಹೇಳುತ್ತವೆ.

ಡಾ॥ಶೀಲ : ಹವಾಮಾನದ ಗಾದೆಗಳೂ ಸಾಂಪ್ರದಾಯಿಕವಾಗಿ ಬಂದಿವೆ. ಇವು ಋತುಮಾನಗಳ ವಿಷಯವನ್ನು ವ್ಯವಸಾಯ ವಿಷಯವನ್ನೂ ಕುರಿತು ಹೇಳುತ್ತವೆ. ಉದಾಹರಣೆಗೆ : ಅಶ್ವೀಜದಲ್ಲಿ ಹೊನ್ನು ಕರಗುವ ಬಿಸಿಲು, ಮಣ್ಣು ಕರಗುವ ಮಳೆ; ಅತ್ತದ ಮಳೆ ಎತ್ತಲಿಂದಾದರೂ ಬರುತ್ತದೆ; ರೋಹಿಣಿ ಮಳೆಯಲ್ಲಿ ಓಣಿಯೆಲ್ಲ ಜೋಳ, ಗೌರಿ ಹೊತ್ತಿಗೆ ಗಡಿಗೆ ಮುಳುಗಬೇಕು, ಇತ್ಯಾದಿ.

ಡಾ॥ರಾಮು: ಗಾದೆಗಳ ಸಾಮ್ಯ ಮತ್ತು ಸಾರ್ವತ್ರಿಕತೆ, ಸಮಾನ ಗಾದೆಗಳು ಜಗತ್ತಿನ ಎಲ್ಲಾ ಭಾಷೆಗಳಲ್ಲಿಯೂ ಕಾಣಸಿಗುತ್ತವೆ. ಅವನ್ನು ಅಂತರಾಷ್ಟ್ರೀಯ ಅಲೆಮಾರಿ ಎಂದು ಕರೆದರು, ಗಾದೆಗಳು ಪ್ರಯಾಣ ಮಾಡುತ್ತವೆ. ಗಾದೆಗಳ ದೇಶಾತೀತ ಭಾಷಾತೀತ. ಕಾರಣ ಮಾನವರೆಲ್ಲ ಒಂದೇ ರೀತಿ ಆಲೋಚಿಸುತ್ತಾರೆ.

ಡಾ॥ಶೀಲ : ಮೂಲಪ್ರವೃತ್ತಿಗಳಾದ ಪ್ರೀತಿ, ಹಸಿವು ಭಯಗಳು ಅಸಂಸ್ಕೃತ ಸುಸಂಸ್ಕೃತರೆನ್ನದೆ ಸಮಾನವಾಗಿರುವ ವಿಷಯಗಳು – ಈ ಪ್ರವೃತ್ತಿಗಳನ್ನು ನಾಗರಿಕತೆಗಳಾಗಲಿ ನಿವಾರಿಸಲಾರವು, ಮಾರ್ಪಡಿಸಲಾರವು, ಆದ್ದರಿಂದ ಗಾದೆಯ ಜ್ಞಾನ ಜಗತ್ತಿನಲ್ಲೆಲ್ಲ ಒಂದೆಯೇ ಭಿನ್ನತೆಯೇನಿದ್ದರೂ ಅದರ ಪ್ರಕಟಣೆಯಲ್ಲಿ.

ಡಾ॥ರಾಮು : ದೇಶಗಳ ಆಕ್ರಮಣ, ಅಂತರ್ಜಾತಿ ವಿವಾಹ, ರಾಜಕೀಯ ಸಾಂಸ್ಕೃತಿಕ ಸಂಬಂಧ ಮೊದಲಾದವುಗಳಿಂದ ಗಾದೆ ದೇಶದಿಂದ ದೇಶಕ್ಕೆ ಹೋಗಿರಲು ಸಾಧ್ಯವಿದೆ.

ಡಾ॥ಶೀಲ : ಗಾದೆಯ ಉಗಮ ಜನಪದ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದುದು. ಸಮಾಜದಷ್ಟು ಹಳೆಯದು. ಒಂದು ಕಡೆ ಗಾದೆ ಯಾರೊಬ್ಬ ಜನ್ಮದಾತನೂ ಇಲ್ಲದೆ ಕ್ರಮೇಣ ಜನತೆಯ ನಡುವೆ, ಜನತೆಯದಾಗಿ ವಿಕಾಸವಾದುದಾಗಿರಬೇಕು.

ಡಾ॥ರಾಮು : ಇನ್ನೊಂದು ಕಡೆ, ಸುತ್ತಮುತ್ತಲ ಜಗತ್ತಿನೊಡನೆ ಸಂಪರ್ಕ ಕಲ್ಪಿಸಿಕೊಳ್ಳುವಾಗ ಸಂದರ್ಭ ಸೂತ್ರವಾಗಿ ಬುದ್ಧಿವಂತನೊಬ್ಬನಿಂದ ಜಿಗಿದಿರಬೇಕು. ಹಲವರ ಅನ್ನಿಸಿಕೆ ಜ್ಞಾನಾನುಭವಗಳು ಒಬ್ಬನ ಸೃಷ್ಟಿವಿವೇಕದಲ್ಲಿ ಮೂಡಿ ಗಾದೆಯಾಯಿತು.

ಡಾ॥ಶೀಲ : ಗಾದೆ ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಬೆಳೆಯಿತು. ಉಳಿಯಿತು. ಈ ರೀತಿ ಪ್ರಯಾಣ ಮಾಡುವಾಗ ಗಾದೆ ಹರಿತವಾಯಿತು. ರೂಪಾಂತರಗಳನ್ನು ಪಡೆಯಿತು. ಸಾರ್ವತ್ರಿಕ ಜನಪ್ರಿಯತೆ ಗಳಿಸಿತು.

ಡಾ॥ರಾಮು : ಭಾಷಣಕಲೆಯಲ್ಲಿ ಮಾತಿಗೆ ಅಲಂಕಾರ ಕಟ್ಟಲು ಗಾದೆಗಳನ್ನು ಬಳಸುವುದುಂಟು.

ಡಾ॥ಶೀಲ : ಗಾದೆ ಜ್ಞಾನದ ಅನಂತ ಆಕಾಶವನ್ನು ನಿಂತಲ್ಲಿಯೇ ನೋಡಬಲ್ಲ ನೀತಿ ನಿರ್ಣಯಗಳ ದೂರದರ್ಶಕ.

ಡಾ॥ರಾಮು : ಗಾದೆ ಸಾಮಾನ್ಯ ಜನತೆಯ ವೇದ, ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ. ವೇದ ಕೆಲವರ ಮಾತು, ಗಾದೆ ಹಲವರ ನುಡಿ.

ಡಾ॥ಶೀಲ : ಇಂಗ್ಲಿಷ್ ಗಾದೆಯೊಂದು ಹೇಳುವ ಹಾಗೆ – ಕೆಲವರು ಹೇಳುವುದು ನಿಜವಾಗಬಹುದು, ಆದರೆ ಎಲ್ಲರೂ ಹೇಳುವುದು ನಿಜವಾಗೇ ಆಗುತ್ತದೆ.

ಡಾ॥ರಾಮು : ಗಾದೆಗಳ ಸೃಷ್ಟಿಗೆ ಹಾಗೂ ಪ್ರಸಾರಕ್ಕೆ ಕಾರಣರಾದ ಜನರ ಸಾಮಾಜಿಕ, ರಾಜಕೀಯ, ನೈತಿಕ ಹಾಗೂ ಧಾರ್ಮಿಕ ಆದರ್ಶಗಳಿಗೆ ನಂಬಲರ್ಹವಾದ ಸಾಕ್ಷ್ಯಗಳಾಗಿವೆ.

## ಕನ್ನಡದಲ್ಲಿ ಗಾದೆಗಳು :

ಡಾ॥ಶೀಲ : ಕನ್ನಡದಲ್ಲಿ ಗಾದೆಗಳಿಗೆ ಏನಿಲ್ಲವೆಂದರೂ ನೂರು ವರ್ಷಗಳ ಇತಿಹಾಸವಿದೆ. ಈ ಕ್ಷೇತ್ರದಲ್ಲಿ ಮೊದಲು ಕೆಲಸ ಮಾಡಿದವರು ಕ್ರೈಸ್ತ ಮಿಷನರಿಗಳೇ. 1894ರಲ್ಲಿ ಪ್ರಕಟವಾದ ಕಿಟ್ಟೆಲ್ ಅವರ ಶಬ್ದಕೋಶ ದಲ್ಲಿಯೇ ಅಪಾರ ಸಂಖ್ಯೆಯ ಗಾದೆಗಳನ್ನು ಕಾಣುತ್ತೇವೆ.

ಡಾ॥ರಾಮು : ಇದರಿಂದ ಇದರಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಗಾದೆಗಳಿರುವ ವಿಷಯ ಗೊತ್ತಾಗುತ್ತದೆ. ಒಂದು ಶತಕದ ಹಿಂದೆಯೇ ಕಿಟ್ಟೆಲ್ ಅವರು ಕರ್ನಾಟಕದ ನಾನಾ ಭಾಗಗಳಿಂದ ಗಾದೆಗಳನ್ನು ಸಂಗ್ರಹಿಸಿದ್ದರೆಂಬುದು ಗಮನಾರ್ಹ ಸಂಗತಿ.

ಡಾ॥ಶೀಲ : ಇದರ ತರುವಾಯ ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ಸಿನವರು ಕರ್ಣಾಟಕ ಲೋಕೋಕ್ತಿ ಎಂಬ ಗ್ರಂಥವೊಂದನ್ನು 1912ರಲ್ಲಿ ಪ್ರಕಟಿಸಿದರು. ಪುಸ್ತಕರೂಪದಲ್ಲಿ ಪ್ರಕಟವಾದ ಗಾದೆಗಳ ಸಂಕಲಗಳಲ್ಲಿ ಇದು ಮೊದಲನೆಯದು.

ಡಾ॥ರಾಮು : ಇದರ ಅನಂತರ ಪ್ರಕಟವಾದ ಪ್ರಮುಖ ಸಂಗ್ರಹವೆಂದರೆ ಎಚ್.ಎಸ್.ಅಚ್ಚಪ್ಪನವರ ಕನ್ನಡ ಗಾದೆಗಳು. 1944ರಲ್ಲಿ ಪ್ರಕಟವಾದ ಈ ಕೃತಿ 1959ರಲ್ಲಿ ಎರಡನೆಯ ಮುದ್ರಣವನ್ನೂ ಕಂಡಿತು. ಇದೊಂದು ಉತ್ತಮ ಸಂಕಲವಾಗಿದ್ದು, ಜನಪ್ರಿಯವಾಗಿದೆ.

ಡಾ॥ಶೀಲ : ಮುಂದಿನ ಗಮನಾರ್ಹ ಕೃತಿಯೆಂದರೆ 1959ರಲ್ಲಿ ಪ್ರಕಟವಾದ ಜಂಗಮಕೋಟಿ ಕೃಷ್ಣಶಾಸ್ತ್ರಿ ಅವರ ಗಾದೆಗಳ ಭಂಡಾರ ಭಾಗ 1 ಎಂಬ ಸಂಕಲನ. ಇದು ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದಿಂದ ಪ್ರಕಾಶನಗೊಂಡಿದೆ.

ಡಾ॥ರಾಮು : ಇದರಲ್ಲಿ ಮೂರು ಸಾವಿರಕ್ಕೂ ಹೆಚ್ಚು ಗಾದೆಗಳಿದ್ದು, ಅವನ್ನು ವಿಷಯಾನುಸಾರವಾಗಿ ವಿಂಗಡಿಸಿ ಅಕಾರಾದಿಯಾಗಿ ಕೊಡಲಾಗಿದೆ.

ಡಾ॥ಶೀಲ : ಈ ಸಂದರ್ಭದಲ್ಲಿ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಆಶ್ರಯದಲ್ಲಿ 1962ರಲ್ಲಿ ಪ್ರಕಟವಾದ ನಾಲ್‌ನುಡಿ–ನಾಣ್ಣುಡಿ ಎಂಬ ಗ್ರಂಥವನ್ನು ಅಗತ್ಯವಾಗಿ ನೆನೆಯಬೇಕು. ಕನ್ನಡ, ತೆಲುಗು, ತಮಿಳು, ಮಲಯಾಳ ಭಾಷೆಗಳಲ್ಲಿನ 467 ಸಮಾನ ಗಾದೆಗಳು ಇಲ್ಲಿ ಸಂಗ್ರಹಗೊಂಡಿವೆ.

ಡಾ॥ರಾಮು : 1963ರಲ್ಲಿ ಪ್ರಕಟವಾದ ಟಿ.ವಿ.ವೆಂಕಟರವಣಯ್ಯನವರ ಕನ್ನಡ ಗಾದೆಗಳ ಕೋಶ ಒಂದು ಉಲ್ಲೇಖನೀಯ ಕೃತಿಯಾಗಿದೆ. ಮೊದಲ ಮುದ್ರಣದಲ್ಲಿದ್ದ ಗಾದೆಗಳು ನಾಲ್ಕು ಸಾವಿರವಾದರೆ, ಎರಡನೆಯ ಮುದ್ರಣದಲ್ಲಿ ಎಂಟು ಸಾವಿರಕ್ಕೂ ಹೆಚ್ಚಿವೆ.

ಡಾ॥ಶೀಲ : ಕೊರವಂಜಿ ಪತ್ರಿಕೆಯಲ್ಲಿ ಬಂದ ನಾ. ಕಸ್ತೂರಿಯವರ ಸಾವಿರಾರು ಹೊಸ ಗಾದೆಗಳನ್ನು ಇಲ್ಲಿ ನೆನೆಯಬಹುದು. ಸಮಾಜದ ಕುಂದು ಕೊರತೆಗಳನ್ನು ವಿಡಂಬಿಸುವುದರಲ್ಲಿ ಇವು ಪರಿಣಾಮಕಾರಿಯಾದವು.

ಡಾ॥ರಾಮು : 1970ರಲ್ಲಿ ಪ್ರಕಟವಾದ ಎಚ್.ಜೆ.ಲಕ್ಕಪ್ಪಗೌಡರ ಇಬ್ಬನಿ. ಇದರಲ್ಲಿ ಸಾವಿರದ ಇನ್ನೂರು ಸ್ವತಂತ್ರ ಗಾದೆಗಳಿವೆ. ಆದರೆ ಇವು ಹೆಚ್ಚು ಗ್ರಾಮೀಣ ಸ್ವರೂಪದ್ದಾಗಿವೆ.

ಡಾ॥ಶೀಲ : ನಂ. ತಪಸ್ವೀ ಕುಮಾರ್ ಅವರ ಕನ್ನಡ ಗಾದೆಗಳ ಸಮೀಕ್ಷೆ ಎಂಬ ಪುಸ್ತಕ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರ ರಂಗದ ಗೃಹಸರಸ್ವತಿ ಗ್ರಂಥಮಾಲೆಯ ಪ್ರಕಟಣೆ ಇದು. ಇಲ್ಲಿ ಗಾದೆಗಳ ಹುಟ್ಟು ಬೆಳವಣಿಗೆ, ಸ್ವರೂಪಲಕ್ಷಣ ಮೊದಲಾದವನ್ನು ಚರ್ಚಿಸಿರುವುದಲ್ಲದೆ, ಗಾದೆಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ವಿಶ್ಲೇಷಿಸಲಾಗಿದೆ.

ಡಾ॥ರಾಮು : ಗಾದೆಗಳು ನಿತ್ಯ ಹುಟ್ಟುತ್ತವೆ, ನಿತ್ಯ ಸಾಯುತ್ತವೆ ಎಂಬ ಮಾತೊಂದಿದೆ. ಈಗ ಗಾದೆಗಳು ಹುಟ್ಟುತ್ತಿಲ್ಲ, ಹುಟ್ಟಿದ ಗಾದೆಗಳು ಸಾಯುತ್ತಿರುವುದಂತೂ ಖಂಡಿತ. ಹಾಗೆ ಸಾಯುವುದಕ್ಕಿಂತ ಮುಂಚೆ ಅವನ್ನು ಉಳಿಸಿಕೊಳ್ಳಬೇಕಾದದ್ದು ನಾಡಿನ ಆದ್ಯ ಕರ್ತವ್ಯವಾಗಿದೆ.

# 15. ಕಾದಂಬರಿಗಳು

ಡಾ॥ರಾಮು : ಒಂದು ಮಹತ್ತ್ವದ ಅರ್ಥದ ಐಕ್ಯ ಸಾಧಿತವಾಗುವಂತೆ ಒಂದಕ್ಕೊಂದನ್ನು ಹೊಂದಿಸಿದ ಕಾಲ್ಪನಿಕ ಸನ್ನಿವೇಶಗಳ ಶ್ರೇಣಿಯ ವೃತ್ತಾಂತವೇ ಕಾದಂಬರಿ.

ಡಾ॥ಶೀಲ : ಇಂಗ್ಲಿಷಿನ ನಾವೆಲ್ ಪದವೇ ಲ್ಯಾಟಿನಿನ ನೋವಸ್, ಎಂದರೆ ಹೊಸದು, ಎನ್ನುವ ಪದದಿಂದ ಬಂದದ್ದು. ಬಾಣನ ಕಾದಂಬರಿಯಿಂದ ಕನ್ನಡದಲ್ಲಿ ಕಾದಂಬರಿ ಎಂಬ ಹೆಸರು ಪ್ರಚುರವಾದುದು.

ಡಾ॥ರಾಮು : ಟಾಲ್‌ಸ್ಟಾಯಿಯ ಸಮರ ಮತ್ತು ಶಾಂತಿ (ವಾರ್ ಅಂಡ್ ಪೀಸ್), ಕಾರಂತರ ಮರಳಿ ಮಣ್ಣಿಗೆ, ಕುವೆಂಪು ಅವರ ಕಾನೂರು ಹೆಗ್ಗಡಿತಿ. ಇವು ಕಾದಂಬರಿಗಳು.

ಡಾ॥ಶೀಲ: ಕಾದಂಬರಿಯಲ್ಲಿ ಕಥಾವಸ್ತು ಕಾಲ್ಪನಿಕ ಸನ್ನಿವೇಶಗಳ ಶ್ರೇಣಿಯನ್ನು ಒಳಗೊಂಡಿರುತ್ತದೆಯಾದರೂ ಅದು ನಿರೂಪಿಸುವ ಘಟನೆಗಳು ನಿಜವಾಗಿ ನಡೆದುವು. ಅದರ ವೃತ್ತಾಂತ ಅಕ್ಷರಶ: ನಿಜ ಎಂಬ ಭಾವನೆಯನ್ನೇ ಮೂಡಿಸಲು ಕಾದಂಬರಿ ಪ್ರಯತ್ನಿಸುತ್ತದೆ.

ಡಾ॥ರಾಮು : ಕಾದಂಬರಿಯಲ್ಲಿ ಕಾದಂಬರಿಯ ಪಾತ್ರ ಮತ್ತು ಹೊರ ಜಗತ್ತುಗಳ ಪರಸ್ಪರ ಪ್ರತಿಕ್ರಿಯೆಯಿಂದ ಸನ್ನಿವೇಶಗಳ ಸರಪಳಿ ಬೆಳೆಯುತ್ತ ಹೋಗುತ್ತದೆ.

ಡಾ॥ಶೀಲ: ವಿಸ್ತಾರವಾದ ಕೃತಿಯನ್ನು ಒಂದು ಏಕವಾಗಿ ನಮ್ಮ ಅನುಭವಕ್ಕೆ ತಂದುಕೊಡುವುದರಲ್ಲಿ ಬಹುಮುಖ್ಯ ಸಾಧನ ಭಾಷೆ. ನಮ್ಮ ಗಮನ ಹಿಂದೆ ನಡೆದುದರತ್ತ ಹೋಗುವಂತೆ ಮತ್ತು ಮುಂದೆ ನಡೆಯಬಹುದಾದುದರತ್ತ ಮತ್ತೆ ಮತ್ತೆ ಸಾಗುವಂತೆ ಮಾಡಿ ಕೃತಿಯ ಭಾಷೆ ಇಡೀ ಕೃತಿಯ ಏಕವನ್ನು ಅನುಭವಕ್ಕೆ ತಂದುಕೊಡುತ್ತದೆ.

ಡಾ॥ರಾಮು : ಕಾದಂಬರಿ ಎಂದರೆ ಒಂದು ನಿರ್ದಿಷ್ಟ ಉದ್ದದ ಕಾಲ್ಪನಿಕ ಗದ್ಯ ಕೃತಿ. ನಿರ್ದಿಷ್ಟ ಉದ್ದ ಎಂದರೆ ಕನಿಷ್ಟ 50,000 ಪದಗಳು.

ಡಾ॥ಶೀಲ: ಅಧ್ಯಯನದ ಅನುಕೂಲಕ್ಕಾಗಿ ಕಥಾವಸ್ತು ಪಾತ್ರ, ಸನ್ನಿವೇಶ, ಭಾಷೆ, ಎಂದು ಬೇರೆ ಬೇರೆ ಅಂಶಗಳನ್ನು ಕುರಿತು ನಾವು ಮಾತನಾಡಬಹುದಾದರೂ ಇವೆಲ್ಲವೂ ಹೊಂದಿಕೊಂಡಾಗಲೇ ಮಹತ್ತ್ವದ ಅರ್ಥದ ಸಾಕ್ಷಾತ್ಕಾರವಾಗುವುದು.

ಡಾ॥ರಾಮು : ಜೀವನಕ್ಕೆ ಉತ್ಸಾಹ ಮತ್ತು ವಿಶ್ವಾಸಗಳ ಪ್ರತಿಕ್ರಿಯೆಯನ್ನು ಮಾತ್ರ ಮೂಡಿಸುವ ಸಾಹಸ ಕಾದಂಬರಿಗಳಲ್ಲಿ ಪಾತ್ರಕ್ಕಿಂತ ಸನ್ನಿವೇಶಗಳು ಪ್ರಧಾನ.

ಡಾ॥ಶೀಲ: ಕಾದಂಬರಿಗಳಲ್ಲಿ ಪಾತ್ರಗಳು, ಸನ್ನಿವೇಶಗಳು, ಭಾಷೆ ಎಲ್ಲವನ್ನು ನಿರೀಕ್ಷಿಸುತ್ತಾರೆ. ಈ ಎಲ್ಲ ಅಂಶಗಳನ್ನೂ ಬಳಸಿ, ಬೆರೆಸಿ, ಹೊಸದೊಂದು ಜಗತ್ತನ್ನು ಕಾದಂಬರಿಕಾರ ಸೃಷ್ಟಿಸಬೇಕು.

ಡಾ॥ರಾಮು : ಕಾದಂಬರಿಕಾರ ಕೃತಿ ಮೂಡಿಸಬೇಕಾದ ಅನುಭವಕ್ಕೆ ಭಂಗಬಾರದಂತೆ ಎಲ್ಲ ವಿವರಗಳನ್ನೂ ಆರಿಸಬೇಕು. ಸಮನ್ವಯಗೊಳಿಸಬೇಕು. ತಾನು ಆ ಜಗತ್ತಿನಲ್ಲಿದ್ದೂ ಹೊರಗೆ ನಿಲ್ಲಬೇಕು.

ಡಾ॥ಶೀಲ: ಜಪಾನಿನಲ್ಲಿ ಮುರಾಸಾಕಿ ಎಂಬಾಕೆ ಬರೆದ ಗೆಂಜಿಯ ಕಥೆ ಹಲವು ಹೆಣ್ಣುಗಳೊಡನೆ ಸರಸವಾಡಿದ ತರುಣನ ಕಥೆ. ಇದರಲ್ಲಿನ ಮಾನಸಿಕ ಅನುಭವಗಳ ವಿವರಗಳು ಇಂದಿಗೂ ಬೆರಗುಗೊಳಿಸುವಂಥವು.

ಡಾ॥ರಾಮು : ಇಂಗ್ಲೆಂಡಿನ ನಿಯತ ಕಾಲಿಕಗಳು ಧಾರವಾಹಿಯಾಗಿ ಕಾದಂಬರಿಗಳನ್ನು ಪ್ರಕಟಿಸುವ ಹೊಸ ವಿಧಾನವನ್ನು ಪ್ರಾರಂಭಿಸಿದುವು. ಇದರಿಂದ ಕಾದಂಬರಿಕಾರನಿಗೂ ಓದುಗನಿಗೂ ಹೊಸ ಬಾಂಧವ್ಯ ಏರ್ಪಟ್ಟಿತು. ಪ್ರತಿಭಾಗದ ಮುಕ್ತಾಯವೂ ಓದುಗನಲ್ಲಿ ಮುಂದಿನ ಭಾಗವನ್ನು ಓದುವಂತೆ ಪ್ರಚೋದಿಸುವಂತಿರಬೇಕಾದ್ದು ಅನಿವಾರ್ಯವಾಯಿತು.

ಡಾ॥ಶೀಲ: ವಾಸ್ತವಿಕತೆ ಎಂದರೇನು, ಸಹಜತೆ ಎಂದರೇನು ಎಂಬಂಥ ಪ್ರಶ್ನೆಗಳಿಗೆ ಕೃತಿಕಾರರು ಕಂಡುಕೊಂಡ ಉತ್ತರಗಳನ್ನು ವಿಮರ್ಶಕರು ಕಾದಂಬರಿಯನ್ನು ಬೇರೆ ಬೇರೆ ದೃಷ್ಟಿಗಳಿಂದ ವರ್ಗೀಕರಣ ಮಾಡಿದ್ದಾರೆ.

ಡಾ॥ರಾಮು : ಒಂದು ಸ್ಥೂಲವಾದ ವಿಂಗಡಣೆ ವಿಚಿತ್ರ ಕಾದಂಬರಿ ಸಾಹಸ ಕಾದಂಬರಿ, ನೈಜ ಕಾದಂಬರಿ ಎಂದು ವಿಚಿತ್ರ ಕಾದಂಬರಿಯನ್ನು ರೊಮಾನ್ಸ್ ರೂಪಕ್ಕೆ ಹೋಲಿಸಬಹುದು.

ಡಾ॥ಶೀಲ: ವಿಚಿತ್ರ ಕಾದಂಬರಿಯಲ್ಲಿ ಗಹನ ಸತ್ಯವೊಂದಿದ್ದರೆ, ಸಾಹಸ ಕಾದಂಬರಿಯಲ್ಲಿ ಕಥೆಯೇ ಮುಖ್ಯ.

ಡಾ॥ರಾಮು : ನಿತ್ಯಜೀವನವನ್ನೇ ವಸ್ತುವಾಗಿಟ್ಟುಕೊಂಡು ರಚಿತವಾದ ನೈಜ ಕಾದಂಬರಿಯ ತಿರುಳೆಂದರೆ ಅವರ ಕಷ್ಟ ಸುಖ, ಆಸೆ ನಿರಾಸೆ, ಸಮಸ್ಯೆ ನೆಲೆಗಳು, ಬಹುಮಟ್ಟಿಗೆ ಇವು ಸ್ತ್ರೀಪುರುಷರ ಆಕರ್ಷಣೀಯ ಕಥೆಗಳು.

ಡಾ॥ಶೀಲ: ಸಾಮಾನ್ಯಜನದ ಬಹುಮಂದಿಗೆ ಆಸಕ್ತಿಯನ್ನುಂಟುಮಾಡುತ್ತವಾಗಿ ಇವುಗಳ ಸಂಖ್ಯೆಯೂ ಹೆಚ್ಚು.

ಡಾ॥ರಾಮು : ಕಾದಂಬರಿಯಲ್ಲಿ ಒಂದು ಅಥವಾ ಒಂದೆರಡು ಮುಖ್ಯ ಪಾತ್ರಗಳ ಜೀವನವನ್ನು ಅಥವಾ ಜೀವನದ ಒಂದು ಭಾಗವನ್ನು ಘಟನೆಗಳ ಮೂಲಕ ನಿರೂಪಿಸುವುದು ಜೀವನವೃತ್ತಾಂತದ ರೀತಿಯ ಕಾದಂಬರಿಯ ವಿಧಾನ.

ಡಾ॥ಶೀಲ: ಬಿಗಿಯಾದ ಛಂದವಿಲ್ಲದೆ, ಒಬ್ಬ ನಾಯಕನ ಅನುಭವಗಳನ್ನು ಒಂದಾದ ಮೇಲೊಂದರಂತೆ ಬಿತ್ತರಿಸುವ ಕಾದಂಬರಿಗಳುಂಟು. ಇವು ಎರಡು ಬಗೆಯವು. ಸಾಹಸವಂತ ಮತ್ತು ಗುಣವಂತ ನಾಯಕನಾದರೆ ಸಾಹಸದ ಕಾದಂಬರಿ ಸೃಷ್ಟಿಯಾಗುತ್ತದೆ.

ಡಾ॥ಶೀಲ: ಎಲ್ಲ ಕಷ್ಟನಷ್ಟಗಳ ನಡುವೆ ಸ್ಥಿರವಾಗಿ ಬಂಡೆಯಂತೆ ನಿಂತ ಧರ್ಮನಿಷ್ಠೆಯನ್ನು ಚಿತ್ರಿಸುವುದೇ ಭಾವಾತಿರೇಕದ ಕಾದಂಬರಿಯ (ಸೆಂಟಿಮೆಂಟಲ್) ಉದ್ದೇಶ.

ಡಾ॥ರಾಮು : ಆಲಿವರ್ ಗೋಲ್ಡ್‌ಸ್ಮಿತ್‌ನ ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಕಾದಂಬರಿಯ ನಾಯಕ ಡಾಕ್ಟರ್ ಪ್ರಿಮ್‌ರೋಸ್ ಆಸ್ತಿಯನ್ನು ಕಳೆದುಕೊಂಡು, ಸೆರೆಮನೆ ಸೇರಿ ತನ್ನ ಹೆಣ್ಣುಮಕ್ಕಳಿಗೆ ತೀರ ಅನ್ಯಾಯ, ಅಪಮಾನಗಳಾದಾಗಲೂ ದೇವರಲ್ಲಿ ವಿಶ್ವಾಸವನ್ನು ಉಳಿಸಿಕೊಳ್ಳುತ್ತಾನೆ; ಕಡೆಗೆ ಧರ್ಮಕ್ಕೆ ಜಯವಾಗುತ್ತದೆ.

ಡಾ॥ಶೀಲ: ಒಂದು ಅಪರಾಧದ ಸಮಸ್ಯೆಯನ್ನು ಬಿಡಿಸುವುದರ ವೃತ್ತಾಂತದಿಂದ ಕುತೂಹಲವನ್ನು ಬೆಳೆಸುವುದು ಪತ್ತೇದಾರಿ ಕಾದಂಬರಿಯ ಉದ್ದೇಶ.

ಡಾ॥ರಾಮು: ಒಂದು ವಿಚಾರದೃಷ್ಟಿಯ ಪ್ರತಿಪಾದನೆಗಾಗಿ ರಚಿತವಾದದ್ದು ಥೀಸಿಸ್ ನಾವಲ್.

ಡಾ॥ಶೀಲ: ಸಮಕಾಲೀನ ಜೀವನದ ರೀತಿ ಮತ್ತು ಮೌಲ್ಯಗಳ ವಿರುದ್ಧ ಪ್ರತಿಭಟಿಸುವ ಯುವಕ ಮನೋಭಾವದ ಪ್ರತೀಕ. ಮನೋವೈಜ್ಞಾನಿಕ ಚಿಕಿತ್ಸೆ ಪಡೆಯುತ್ತಿರುವ ನಾಯಕನ ಆತ್ಮವೃತ್ತ ಇದು. ಅವನ ಅನುಭವ ಗೊಂದಲ, ದಿಗ್ಭ್ರಮೆ, ಭಯಭೀತಿಗಳನ್ನೆಲ್ಲ ಭಾಷೆಯ ಮೂಲಕ ಸಂವಹನಗೊಳಿಸುವ ಪ್ರಯತ್ನ ಇಲ್ಲಿದೆ.

ಡಾ॥ರಾಮು : ಕುಷ್ವಂತ್ ಸಿಂಗರ "ಐ ಷಲ್ ನಾಟ್ ಹಿಯರ್ ದಿ ನೈಟಿಂಗೇಲ್ಸ್" ಎಗೈನ್ ಎಂಬ ಪುಸ್ತಕದಲ್ಲಿ ಭಾರತದಲ್ಲಿ 1942–43ರ ಪರ್ವಕಾಲದ ಸಿಖ್ ಸಮುದಾಯದ ಜೀವನವನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ.

ಡಾ॥ರಾಮು : ಆಧುನಿಕ ಕಾಲದಲ್ಲಿ ಕಾದಂಬರಿ ಕ್ಷೇತ್ರದಲ್ಲಿ ಪ್ರಯೋಗಗಳಿಗೆ ಕೊನೆಯೇ ಇಲ್ಲ.

## ಪ್ರಪಂಚದ ಪ್ರಸಿದ್ಧ ಕಾದಂಬರಿಗಳು:

ಡಾ॥ರಾಮು : ಸ್ಪೇನ್ ದೇಶದ ಸರ್‌ವ್ಯಾಂಟಿಸ್ ಡಾನ್ ಕ್ವಿಕ್ಸಟ್‌ನ ಸಾಹಸಗಳು ಬೈಬಲನ್ನು ಬಿಟ್ಟರೆ ಪ್ರಪಂಚದಲ್ಲಿ ಅತಿ ಹೆಚ್ಚು ಬಾರಿ ಅನುವಾದವಾಗಿರುವ ಕೃತಿ ಎನ್ನುತ್ತಾರೆ.

ಡಾ॥ಶೀಲ: ಸಾಹಸವೀರರ ಅದ್ಭುತ ಸಾಧನೆಗಳ ಕಥೆಗಳನ್ನು ಓದಿ ತಾನೂ ಸಾಹಸಗಳನ್ನರಸಿ ಹೊರಟ ಕಥೆ ಕ್ವಿಕ್ಸಟ್‌ನ ಸಾಹಸಗಳು. ನಾಯಕನನ್ನು ನೋಡಿ ನಗುವಂತೆಯೇ ಮತ್ತೆ ಮತ್ತೆ ಕಠಿಣ ವಾಸ್ತವಿಕತೆಗೆ ಎದುರಾಗಿ ಸೋಲುವ ಅವನನ್ನು ಕಂಡು ಮರುಕ ಪಡುತ್ತೇವೆ. ಕೆಲವು ರೀತಿಗಳಲ್ಲಿ ಹುಚ್ಚನಾದರೂ ಆದರ್ಶ ಪ್ರಿಯನೂ ಸೌಜನ್ಯಶೀಲನೂ ನಿಜವಾಗಿ ಒಳ್ಳೆಯವನೂ ಆದ, ನಮ್ಮ ಮೆಚ್ಚಿಗೆಯನ್ನು ಗಳಿಸುವ, ಎಂದೆಂದೂ ಮರೆಯಲಾಗದ ಪಾತ್ರವನ್ನು ಸರ್‌ವ್ಯಾಂಟಿಸ್ ಚಿತ್ರಿಸಿದ್ದಾನೆ.

ಡಾ॥ರಾಮು : ಪ್ರಪಂಚದ ಸಾಹಿತ್ಯದಲ್ಲಿ ಅತಿ ಸಮರ್ಥ ವಿಡಂಬನೆಗಳಲ್ಲಿ ಒಂದೆನೆಸಿರುವುದು ವಾಲ್ಟೇರನ ಕಾಂಡೈಡ್, ಕಹಿಯಾದ, ಕತ್ತರಿಸುವ ಇಲ್ಲಿನ ವಿಡಂಬನೆಯಲ್ಲಿ ಮಾರ್ದವತೆ ಮತ್ತು ವಿವೇಕಗಳ ಗುಪ್ತವಾಹಿನಿಯೂ ಉಂಟು.

ಡಾ॥ಶೀಲ: ಮದಾಂ ಬವಾರಿ – ಕಾದಂಬರಿ ಸುಖಕ್ಕಾಗಿ ಹಂಬಲಿಸುವ ಒಬ್ಬ ಸಾಮಾನ್ಯ ಹೆಣ್ಣಿನ ಕಥೆ. ಕಾದಂಬರಿಯಿಂದ ಸಂಪೂರ್ಣವಾಗಿ ಹೊರಕ್ಕೆ ನಿಂತು ನಿಷ್ಠುರ ವಾಸ್ತವಿಕತೆಯನ್ನು ಪರಿಪಾಲಿಸಬೇಕೆನ್ನುವ ಪಂಥದ ಗುಸ್ತಾವ್ ಫ್ಲೋಬೇರನ ಕೃತಿ ಇದು. ಸುಖಕ್ಕಾಗಿ ಬೇರೆಲ್ಲವನ್ನೂ ಬಲಿಕೊಡುವ ಹೆಣ್ಣು ಸುಖಕ್ಕಾಗಿ ತೆರುವ ಬೆಲೆ ಸಾಮಾನ್ಯ ವ್ಯಭಿಚಾರದ ಕಥೆಯನ್ನು ವಿಶ್ವಸಾಹಿತ್ಯದ ಮಟ್ಟಕ್ಕೆ ಏರಿಸಿದೆ.

ಡಾ॥ಶೀಲ: ನೆಥಾನಿಯಲ್ ಹಾತಾರ್ನನ "ದಿ ಸ್ಕಾರ್ಲೆಟ್ ಲೆಟರ್" – ಮೂವರು ಪಾಪಿಗಳ – ವ್ಯಭಿಚಾರ ಮಾಡಿದ ಹೆಣ್ಣು, ಅವಳ ಗುಪ್ತಪ್ರಣಯಿ, ಅವಳ ಗಂಡ – ಇವರ ಕಥೆ. ಪಾಪದ ಅಸ್ವಾರ್ಥ ಬುದ್ಧಿಶಕ್ತಿಗೂ ಸಹಜಪ್ರವೃತ್ತಿಗೂ ಮನುಷ್ಯನ ಬಾಳಿನಲ್ಲಿ ನಡೆಯುವ ಘರ್ಷಣೆಯ ಶಕ್ತಿಯುತ ನಿರೂಪಣೆ ಇಲ್ಲಿದೆ.

ಡಾ॥ರಾಮು : ಮಾರ್ಕ್‌ಟ್ವೇನನ "ಹಕಲ್‌ಬರಿ ಫಿನ್‌ನ" ಸಾಹಸಗಳು – ಇದು ಮನುಷ್ಯ ತನ್ನ ಸಹಮಾನವರಿಗೆ ಎಷ್ಟು ಕ್ರೂರವಾಗಿರಬಲ್ಲ ಎಂಬುದರ ಗಂಭೀರ ಚಿತ್ರವನ್ನೂ ನೀಡುತ್ತದೆ. ಶಕ್ತಿಯುತರಾಗಿದ್ದು ಹೊಣೆ ಹೊತ್ತ ಅಮೆರಿಕದ ಜನ ತಮ್ಮನ್ನು ತಾವೇ ಅರ್ಥಮಾಡಿಕೊಳ್ಳುವ ಪ್ರಯತ್ನ ಇಲ್ಲಿ ಧ್ವನಿತವಾಗಿದೆ. ಸಮಾಜದ ನಿರ್ಬಂಧಗಳು ಮತ್ತು ನಾಗರಿಕತೆಗೂ ಹುಡುಗನ ನೈಜ ಪರಿಶುದ್ಧತೆಗೂ ನಡುವಣ ಘರ್ಷಣೆ ಇಲ್ಲಿ ಮಾನವೀಯವಾಗಿ ಚಿತ್ರಿತವಾಗಿದೆ.

ಡಾ॥ಶೀಲ: ಹೆನ್ರಿ ಜೇಮ್ಸ್‌ನ "ದಿ ಅಂಬ್ಯಾಸಡರ್ಸ್"ನಲ್ಲಿ – ಸ್ಟ್ರೆದರ್ ಎಂಬ ಪಾತ್ರದ ಮನಸ್ಸಿನ ಕಥೆ ಮನಸ್ಸಿನ ಬಾಗಿಲುಗಳನ್ನೂ ಕಿಟಕಿಗಳನ್ನೂ ತೆರೆದಿಟ್ಟಂತೆ ಭಾಸವಾಗುತ್ತದೆ. ವಿಲಿಯಂ ಫಾಕ್‌ನರ್‌ನ "ದಿ ಸೌಂಡ್ ಅಂಡ್ ದಿ ಫ್ಯೂರಿ" – ಪ್ರಾರಂಭದಲ್ಲಿ ಓದುಗರಿಗೆ ದಿಗ್ಭ್ರಮೆಯನ್ನು ಉಂಟುಮಾಡಿತು. ಇದರ ಮೊದಲ ಮೂರು ಭಾಗಗಳಲ್ಲಿ ಪ್ರಜ್ಞಾಪ್ರವಾಹದ ರೀತಿಯಲ್ಲಿ ಘಟನೆಗಳನ್ನು ಮೂರು ದೃಷ್ಟಿಗಳಿಂದ ಕಾಣುವುದು ಓದುಗರಿಗೆ ಸಾಧ್ಯವಾಗುತ್ತದೆ.

ಡಾ॥ಶೀಲ: ಇಡೀ ಜಗತ್ತಿನ ಕಾದಂಬರಿಗಳಲ್ಲಿ ಅತ್ಯುನ್ನತ ಶಿಖರಗಳಲ್ಲಿ ಒಂದು ಎನಿಸಿರುವುದು ಟಾಲ್ಸ್ ಟಾಯ್ ಬರೆದ "ವಾರ್ ಅಂಡ್ ಪೀಸ್". ಸಾರ್ವಭೌಮರಿಂದ ಹಿಡಿದು ಸೈನಿಕರು ಮತ್ತು ರೈತರವರೆಗೆ ಇಲ್ಲಿ ಹಲವು ವರ್ಗಗಳ ವೃತ್ತಿಗಳ ಅಂತಸ್ತುಗಳ ಮತ್ತು ಸ್ವಭಾವಗಳ ಪಾತ್ರಗಳ ವಿಶಿಷ್ಟ ಜಗತ್ತು ರೂಪುಗೊಂಡಿದೆ. ತನಗಾಗಿ ಬದುಕಬೇಕೇ ಇತರರಿಗಾಗಿ ಬದುಕಬೇಕೇ – ಈ ಎರಡು ದೃಷ್ಟಿಗಳ ಘರ್ಷಣೆ ಕಾದಂಬರಿಯಲ್ಲಿ ಅಂತರ್ಗತವಾಗಿದೆ. ದಾಸ್ತಯೆವ್‌ಸ್ಕಿಯ ಬ್ರದರ್ಸ್ ಕರಮಝಾವ್ – ಮೂವರು ಸೋದರರ ಕಥೆ. ರಷ್ಯದ ಜೀವನವನ್ನು ಕುರಿತು ತನ್ನ ಭಾವನೆಗಳನ್ನೆಲ್ಲ ಈ ಅಚ್ಚಿನಲ್ಲಿ ಕಾದಂಬರಿಕಾರ ಎರಕ ಹೊಯ್ದಿದ್ದಾನೆ. ಓದುಗನ ಮನಸ್ಸನ್ನು ಆವರಿಸಿ ಸ್ವಾಧೀನ ಮಾಡಿಕೊಂಡುಬಿಡುವ ಪರಿಣಾಮಕತೆ ಈ ಕೃತಿಯದು.

ಡಾ॥ಶೀಲ: ಪ್ಯಾಸ್ಟರ್‌ನಾಕ್‌ನ "ಡಾಕ್ಟರ್ ಜಿವಾಗೊ" – ಆಧುನಿಕ ರಷ್ಯದ 40 ವರ್ಷಗಳ ಚರಿತ್ರೆಯ ಹೋರಾಟ, ಭರವಸೆ, ಕಷ್ಟ, ನಿರಾಸೆ–ಎಲ್ಲವನ್ನು ಕಾದಂಬರಿ ಅಡಕಮಾಡಿಕೊಂಡಿದೆ. ಮಾನವನ ಸ್ವಾತಂತ್ರ್ಯಪ್ರೇಮದ ನೆಲದಲ್ಲಿ ಬೇರುಬಿಟ್ಟ ನೋವು, ಪ್ರೀತಿಗಳನ್ನು ರೂಪಿಸಿದ ಕೃತಿ ಇದು.

ಡಾ॥ರಾಮು : ಥಾಮಸ್ ಮ್ಯಾನ್‌ನದಿ ಮ್ಯಾಜಿಕ್ ಮೌಂಟನ್ – ಕಾದಂಬರಿಯ ನಾಯಕ ಏಕಾಂತಜೀವನ ಮತ್ತು ಸಾವುಗಳ ಆಕರ್ಷಣೆಗಳನ್ನು ಗೆದ್ದು ತನ್ನ ಜನರ ಸೇವೆಗೆ ಮುಡಿಪಾಗಲು ನಿಶ್ಚಯಿಸುವ ನಾಯಕ ತನ್ನ ವ್ಯಕ್ತಿತ್ವದಿಂದ ರಾಷ್ಟ್ರೀಯತೆಯನ್ನು ಮೀರಿದ ಆಧುನಿಕ ಮಾನವನ ಪ್ರತಿನಿಧಿಯಾಗುತ್ತಾನೆ.

ಡಾ॥ಶೀಲ : ಒಬ್ಬನೇ ಓದುಗನಿಗೆ ಟಾಲ್‌ಸ್ಟಾಯ್‌ಯ "ವಾರ್ ಅಂಡ್ ಪೀಸ್", ಆನ ಕರ್‌ನೀನ, ದಾಸ್ತಯೆವ್ ಸ್ಕಿಯ "ಕ್ರೈಮ್ ಅಂಡ್ ಪನಿಷ್‌ಮೆಂಟ್", ಕರಮಝಾವ್ ಸಹೋದರರು – ಇಂಥ ಕೃತಿಗಳಲ್ಲಿ ಒಂದನ್ನು ಆರಿಸಿ ಇನ್ನೊಂದನ್ನು ಬಿಡುವುದು ಕಷ್ಟವಾದೀತು.

## ಕನ್ನಡದಲ್ಲಿ ಈ ಎಪ್ಪತ್ತು ವರ್ಷಗಳಲ್ಲಿ ಕಾದಂಬರಿ ಕ್ಷೇತ್ರ ವಿಪುಲವಾಗಿ ಬೆಳೆದಿದೆ.

ಡಾ॥ರಾಮು : ಈ ಎಪ್ಪತ್ತು ವರ್ಷಗಳಲ್ಲಿ ಕಾದಂಬರಿ ಕ್ಷೇತ್ರ ಮರಾಠಿ, ಬಂಗಾಳೀ, ತಮಿಳು, ತೆಲುಗು, ಇಂಗ್ಲಿಷ್ ಮೊದಲಾದ ಭಾಷೆಗಳಿಂದ ಕನ್ನಡಕ್ಕೆ ಉತ್ತಮ ಕಾದಂಬರಿಗಳನ್ನು ಅನುವಾದ ಮಾಡಿಕೊಳ್ಳಲಾಗಿದೆ. ಬೇರೆ ಬೇರೆ ದೇಶಗಳ ಮತ್ತು ಭಾಷೆಗಳ ಕಾದಂಬರಿಗಳು ಅನುವಾದವಾಗುತ್ತಿವೆ.

ಡಾ॥ಶೀಲ : ಪ್ರಸಿದ್ಧ ಲೇಖಕರಾದ ಕುವೆಂಪು, ಶಿವರಾಮ ಕಾರಂತ, ಅನಕೃ, ತರಾಸು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ರಾವಬಹದ್ದೂರ, ಕೆ.ವಿ. ಅಯ್ಯರ್, ಬಿ. ಪುಟ್ಟಸ್ವಾಮಯ್ಯ – ಮೊದಲಾದವರು ಈ ಕ್ಷೇತ್ರದಲ್ಲಿ ಕೆಲಸಮಾಡಿದ್ದಾರೆ.

ಡಾ॥ರಾಮು : ಹಾಸನದ ರಾಜಾರಾಯರ 'ದ ಸರ್ಪೆಂಟ್ ಅಂಡ್ ದಿ ರೋಪ್'ನಿಂದ ಆರುಂಧತಿ ರಾಯ್ ಅವರ 'ದ ಗಾಡ್ ಆಫ್ ಸ್ಮಾಲ್ ಥಿಂಗ್ಸ್'ವರೆಗೆ ಭಾರತೀಯರು ಇಂಗ್ಲಿಷಿನಲ್ಲಿ ಬರೆದ ಹಲವು ಕಾದಂಬರಿಗಳು ಪಾಶ್ಚಾತ್ಯ ದೇಶಗಳಲ್ಲಿ ಗಮನ ಸೆಳೆದಿವೆ.

ಡಾ॥ಶೀಲ : ಕನ್ನಡದಲ್ಲಿಯೇ ತೇಜಸ್ವಿಯವರ 'ಕರ್ವಾಲೋ'ಯಿಂದ ಕಾ.ತ. ಚಿಕ್ಕಣ್ಣನವರ 'ದಂಡೆ'ಯವರೆಗೆ ಎಷ್ಟು ಪ್ರಯೋಗಗಳಾಗಿವೆ !

ಡಾ॥ರಾಮು : ಹಿಂದೆ ಕಾದಂಬರಿಯ ಕಥಾವಸ್ತು, ಪಾತ್ರ ವರ್ಣನೆ ಮೊದಲಾದ ಅಂಶಗಳನ್ನು ಆಧರಿಸಿ ಕಾದಂಬರಿಯ ಅಧ್ಯಯನವನ್ನು ಮಾಡಲಾಗುತ್ತಿತ್ತು. ಈ ವಿಧಾನವು ಬೆಳೆಯುತ್ತಿರುವ ಕಾದಂಬರಿಯ ಅಧ್ಯಯನಕ್ಕೆ ಸಾಲದಾಗಿ, 'ಪಾಯಿಂಟ್ ಆಫ್ ವ್ಯೂ', 'ಪ್ಯಾರಡಾಕ್ಸ್', 'ಸಿಂಬಲ್', 'ಟೆನ್‌ಷನ್', 'ಟೆಕ್‌ನೀಕ್ ಆ್ಯಸ್ ಡಿಸ್ಕವರಿ' ಮೊದಲಾದ ಪರಿಕಲ್ಪನೆಗಳು ಮಾಡಿಬಂದಿವೆ

ಡಾ॥ಶೀಲ : ಹೀಗೆ ಕಾದಂಬರಿಯ ತಾನು ವಿಸ್ತಾರಗೊಂಡು ವಿಮರ್ಶೆಯನ್ನೂ ಬೆಳೆಸುತ್ತಿದೆ. ಜಗತ್ತಿನ ಕಾದಂಬರೀ ಸಾಹಿತ್ಯ, ಅದ್ಭುತವಾಗಿ ಬೆಳೆಯುತ್ತಿದೆ.

# 16. ಕನ್ನಡ ಭಾಷೆ

**ಡಾ॥ರಾಮು** : ಕರ್ನಾಟಕ ರಾಜ್ಯದ ಜನರ ಮನೆಮಾತಾಗಿಯೂ ಭಾರತದ ಸಂವಿಧಾನದಲ್ಲಿ ಮಾನ್ಯತೆಪಡೆದ ಹದಿನೈದು ಭಾಷೆಗಳಲ್ಲಿ ಒಂದಾಗಿಯೂ ಇರುವ ಕನ್ನಡ ಭಾಷೆ ದ್ರಾವಿಡ ಭಾಷಾ ಪರಿವಾರದ ನಾಲ್ಕು ಪ್ರಮುಖ ಭಾಷೆಗಳಲ್ಲೊಂದು.

**ಡಾ॥ಶೀಲ** : ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಲು ಮತ್ತು ಕರ್ನಾಟಕ ಜನತೆಯ ಶಿಕ್ಷಣ ಮಾಧ್ಯಮ ವಾಗಲು ಸಮರ್ಥವಾಗಿದೆ. ಈ ಭಾಷೆ ಸುಸಂಸ್ಕೃತ ಜನಾಂಗವೊಂದರ ಆಡುನುಡಿಯಾಗಿಯೂ ಸಾಹಿತ್ಯರಚನೆಗೆ ಮಾಧ್ಯಮವಾಗಿಯೂ ವಿಕಾಸಗೊಂಡು ವಿಶ್ವಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಗಳನ್ನು ಸಲ್ಲಿಸಿದೆ.

**ಡಾ॥ರಾಮು** : ಕವಿರಾಜಮಾರ್ಗದಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿತ್ತು ಎನ್ನಲಾದ ಈ ಪ್ರದೇಶ ಈಗ ತುಂಬ ಸಂಕುಚಿತವಾಗಿ ಬೆಳಗಾಂ ಬೀದರ್ ಪ್ರದೇಶದಿಂದ ಕೊಡಗು ಮೈಸೂರುವರೆಗೂ ಅರಬ್ಬೀ ಸಮುದ್ರತೀರದಿಂದ ಕೋಲಾರ ಬಳ್ಳಾರಿವರೆಗೂ ಸೀಮಿತವಾಗಿದೆ.

**ಡಾ॥ರಾಮು** : ಕನ್ನಡ ಭಾಷೆಯನ್ನಾಡುವವರು ದ್ರಾವಿಡ ಜನಾಂಗಕ್ಕೆ ಸೇರಿದವರು. ಈ ಕರ್ಣಾಟಕ ಪ್ರದೇಶದಲ್ಲಿ ನೆಲೆಸಿದ ಗುಂಪಿನ ಉಪಭಾಷೆಯಲ್ಲಿ ಉಂಟಾದ ಮಾರ್ಪಾಡುಗಳಿಂದಾಗಿ ಅದು ಇತರ ಉಪಭಾಷೆಗಳಿಂದ ಪ್ರತ್ಯೇಕವಾಗಿ ಕನ್ನಡವೆನಿಸಿತು.

**ಡಾ॥ಶೀಲ** : ಒಂಬತ್ತು ಹತ್ತನೆಯ ಶತಮಾನಗಳ ಕವಿರಾಜಮಾರ್ಗ, ವಡ್ಡಾರಾಧನೆ, ಪಂಪಭಾರತ ಮುಂತಾದ ಗ್ರಂಥಗಳಲ್ಲಿ ಹಿಂದಿನ ಕವಿಗಳನ್ನು, ಕಾವ್ಯಪ್ರಕಾರಗಳನ್ನು ಸ್ಮರಿಸಿರುವುದರಿಂದಲೂ ಎಷ್ಟೋ ಶತಮಾನಗಳ ಹಿಂದೆಯೇ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಕೃಷಿಯಾಗಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದು.

**ಡಾ॥ರಾಮು:** ಆಧುನಿಕ ಕನ್ನಡದ ಆಡುಮಾತಿನ ಇತರ ಪ್ರಭೇದಗಳನ್ನು ಭೌಗೋಳಿಕವಾಗಿ ಕರಾವಳಿ ಕನ್ನಡ ಮತ್ತು ಒಳನಾಡಿನ ಕನ್ನಡವೆಂದು ವಿಭಜಿಸಬಹುದು. ಒಳನಾಡಿನ ಕನ್ನಡವನ್ನು ಉತ್ತರದ (ಧಾರವಾಡ) ಕನ್ನಡ ಮತ್ತು ದಕ್ಷಿಣದ (ಮೈಸೂರು) ಕನ್ನಡವೆಂದು ಸ್ಥೂಲವಾಗಿ ವಿಭಜಿಸಬಹುದು. ಬ್ರಾಹ್ಮಣರ ಭಾಷೆ, ಗೌಡರ ಭಾಷೆ, ಹರಿಜನರ ಭಾಷೆ ಎಂದು ಮುಂತಾಗಿ ಹಲವಾರು ಪ್ರಭೇದಗಳನ್ನು ಗಮನಿಸಬಹುದು.

**ಡಾ॥ಶೀಲ** : 19ನೆಯ ಶತಮಾನ ಜನಜೀವನದಲ್ಲಿ ಬ್ರಿಟಿಷರ ರೀತಿನೀತಿಗಳು, ಮೌಲ್ಯಗಳು, ಭಾಷೆ, ಸಾಹಿತ್ಯ ವಿದ್ಯಾಭ್ಯಾಸ ಎಲ್ಲ ಕನ್ನಡ ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಜನಜೀವನದ ಮೇಲೆ ಪ್ರಭಾವ ಬೀರಿದವು. ಎರಡು ಸಂಸ್ಕೃತಿಗಳು ಮುಖಾಮುಖಿಯಾದ ಕಾಲ ಕನ್ನಡಕ್ಕೆ ಕರ್ನಾಟಕಕ್ಕೆ, ಮುದ್ರಣ ಬಂದಿತು. 1843ರಲ್ಲಿ 'ಮಂಗಳೂರು ಸಮಾಚಾರ' ಪ್ರಾರಂಭವಾಗಿ ಕನ್ನಡ ಪತ್ರಿಕೋದ್ಯಮದ ಉದಯವಾಯಿತು.

**ಡಾ॥ರಾಮು:** 1853ರಲ್ಲಿ ಭಾರತಕ್ಕೆ ರೈಲು ಬಂದಿತು. 1898ರಲ್ಲಿ ಮೊದಲನೆಯ ಕಾರ್ ಬಂದಿತು. 1902ರಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಪ್ರಾರಂಭವಾಯಿತು. 1905ರಲ್ಲಿ ಶಿವನಸಮುದ್ರದಿಂದ ಬೆಂಗಳೂರಿಗೆ ವಿದ್ಯುಚ್ಛಕ್ತಿ ಬಂದಿತು.

**ಡಾ॥ಶೀಲ** : 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭವಾಯಿತು. ಇಂಗ್ಲಿಷ್ ವಿದ್ಯಾಭ್ಯಾಸವು ಪ್ರಾರಂಭವಾಗಿ, ಇಂಗ್ಲಿಷ್ ಭಾಷೆ ಮಾತ್ರವಲ್ಲದೆ ಇಂಗ್ಲಿಷ್ ಸಾಹಿತ್ಯ ಚರಿತ್ರೆ, ಮೌಲ್ಯಗಳು ಎಳೆಯರ ಬದುಕನ್ನು ಪ್ರವೇಶಿಸಿದವು.

ಡಾ॥ರಾಮು: ಪ್ರಜೆಯ ಹಕ್ಕುಗಳು, ವ್ಯಕ್ತಿಯಾಗಿ ವ್ಯಕ್ತಿಯ ಘನತೆ, ವಾಕ್ ಸ್ವಾತಂತ್ರ್ಯದಂತೆ ಸ್ವಾತಂತ್ರ್ಯಗಳು, ಆಡಳಿತದಲ್ಲಿ ಪ್ರಜೆಯ ಪಾಲುದಾರಿಕೆ ಇಂಥ ಪರಿಕಲ್ಪನೆಗಳು ಪರಿಚಿತವಾದವು.

ಡಾ॥ಶೀಲ : ಇದರಿಂದಾಗಿ ಭಾರತೀಯರು ತಮ್ಮ ಪರಂಪರೆಯನ್ನು ಅರ್ಥಮಾಡಿಕೊಳ್ಳಲು ಯತ್ನಿಸಿ ತಮ್ಮ ಸಮಾಜವನ್ನು ವಿಮರ್ಶಾತ್ಮಕವಾಗಿ ಕಾಣಲು ಪ್ರಾರಂಭಿಸಿದರು. ನೊಬೆಲ್ ಬಹುಮಾನ ಪಡೆದ ರವೀಂದ್ರನಾಥ ಠಾಕೂರರು ಭಾರತದ ಎಲ್ಲ ಭಾಷೆಗಳಲ್ಲಿನ ಸಾಹಿತ್ಯದ ಮೇಲೆಯೂ ಪ್ರಭಾವ ಬೀರಿದರು.

ಡಾ॥ರಾಮು: ಕನ್ನಡ ಸಮುದಾಯವು ತನ್ನ ಅಸ್ಮಿತೆಯನ್ನು (ಐಡೆಂಟಿಟಿ) ಗುರುತಿಸಿಕೊಳ್ಳುವ ಅನ್ವೇಷಣೆಯಲ್ಲಿ ಈ ಅನ್ವೇಷಣೆಯು ಸಾಹಿತ್ಯದ ಮೂಲಕವೂ ನಡೆಯಿತು.

ಡಾ॥ಶೀಲ : ಹೊಸ ಮನೋಧರ್ಮದ ಸಾಹಿತ್ಯದಿಂದ ಇಂಗ್ಲಿಷಿನಿಂದ, ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಗಳು ಬಂದವು.

ಡಾ॥ರಾಮು: ಮಂಜೇಶ್ವರ ಗೋವಿಂದ ಪೈ, ಪಂಜೆ ಮಂಗೇಶ ರಾಯರು ಹೊಸ ಪ್ರಯೋಗಗಳನ್ನು ಮಾಡಿದರು. ಧಾರವಾಡದಲ್ಲಿ ಮಧುರ ಚೆನ್ನ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಇವರ 'ಗೆಳೆಯರ ಬಳಗ' ಹೊಸ ಮನೋಧರ್ಮದ ಸಾಹಿತ್ಯದ ಸೃಷ್ಟಿಯಲ್ಲಿ ತೊಡಗಿಕೊಂಡಿತು.

ಡಾ॥ಶೀಲ : ಬಿ.ಎಂ. ಶ್ರೀ ಅವರ 'ಇಂಗ್ಲಿಷ್ ಗೀತೆಗಳು' ಹೊಸ ಯುಗದ ಬಾಗಿಲನ್ನು ತೆರೆಯಿತು. ಎಲ್ಲ ಮನುಷ್ಯರ ಸಮಾನತೆ, ಶಕ್ತಿಯ ಘನತೆ ಇವುಗಳು ಸಾಹಿತ್ಯಕ ಮೌಲ್ಯಗಳಾದವು.

ಡಾ॥ಶೀಲ : 'ಇಂಗ್ಲಿಷ್ ಗೀತೆಗಳು' ಹೊಸ ಛಂದಸ್ಸುಗಳನ್ನು ತಂದು ಕೊಟ್ಟಿತು. ಇಂಗ್ಲಿಷಿನಿಂದ ಕನ್ನಡಕ್ಕೆ ಹಲವು ಸಾಹಿತ್ಯ ಪ್ರಕಾರಗಳು ಅವುಗಳ ಒಳಪ್ರಕಾರಗಳೂ ಬಂದವು. ಭಾವಗೀತೆ, ಕಾದಂಬರಿ, ಟ್ರಾಜಿಡಿ, ಸುನೀತ, ಪ್ರಗಾಥ, ಸಣ್ಣಕಥೆ, ಏಕಾಂಕ ನಾಟಕ, ಲಲಿತ ಪ್ರಬಂಧ ಜೀವನ ಚರಿತ್ರೆ, ಆತ್ಮವೃತ್ತ ಎಲ್ಲವನ್ನು ಕನ್ನಡವು ದತ್ತು ತೆಗೆದುಕೊಂಡಿತು.

ಡಾ॥ರಾಮು: ನವೋದಯ ಯುಗವು ಕಾವ್ಯದ ಮೇಲೆ ಇಂಗ್ಲಿಷ್ ರೊಮಾಂಟಿಕ್ ಕಾವ್ಯದ ಪ್ರಭಾವವಿದ್ದರೂ ಗೋವಿಂದ ಪೈ, ಬಿ.ಎಂ.ಶ್ರೀ ಮೊದಲಾದವರು ಹೊಸ ಯುಗದ ಅಡಿಪಾಯ ಹಾಕಿದವರು.

ಡಾ॥ಶೀಲ : ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಕುವೆಂಪು ಇಬ್ಬರೂ ಭಾವಗೀತೆಯ ಸಾಧ್ಯತೆಗಳನ್ನು ಬಳಸಿಕೊಂಡರು. ಕುವೆಂಪು 'ಶ್ರೀ ರಾಮಾಯಣ ದರ್ಶನಂ 'ಮಹಾಕಾವ್ಯವನ್ನು ರಚಿಸಿದರು. ಡಿ.ವಿ.ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ. ಸೀತಾರಾಮಯ್ಯ, ಪು.ತಿ.ನರಸಿಂಹಾಚಾರ್, ವಿ.ಕೃ. ಗೋಕಾಕ್, ರಂ.ಶ್ರೀ. ಮುಗಳಿ, ಸಿದ್ಧಯ್ಯ ಪುರಾಣಿಕ, ಕೆ.ಎಸ್. ನರಸಿಂಹಸ್ವಾಮಿ, ಕೆ.ಎಸ್. ನಿಸಾರ್ ಅಹಮದ್ ಎಲ್ಲ ನವೋದಯವನ್ನು ಬೆಳಗಿದ ಕವಿಗಳು.

ಡಾ॥ರಾಮು: ನವೋದಯವನ್ನು ಬೆಳಗಿದ ಕವಿಗಳಲ್ಲಿ ಬಹು ಮಂದಿ ಹಾಡುಗಳನ್ನು ರಚಿಸಿದರು. ಕಥನ ಕವನಗಳನ್ನು ರಚಿಸಿದರು. ಭಾವಗೀತೆಗಳಲ್ಲಿ ಮನುಷ್ಯ ಜೀವನದ ಸುಖದುಃಖಗಳ, ಆಸೆ ಕನಸುಗಳು, ನಿರಾಸೆ ನೋವುಗಳು. ಪ್ರೇಮ–ಸ್ನೇಹಗಳು ಎಲ್ಲಕ್ಕೂ ಅನುಭವಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಭಾಷೆಯ ಶರೀರವನ್ನು ನೀಡಿದರು.

ಡಾ॥ಶೀಲ : ರಾಜರತ್ನಂ ಅವರ 'ರತ್ನನ ಪದಗಳು' ಈ ಯುಗದ ಕವಿಗಳ ಪ್ರಯೋಗ ಧೀರತೆಯ ಒಂದು ನಿದರ್ಶನ. ಹಲವರು ಹಳ್ಳಿಯ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿ ಜಾನಪದದೊಂದಿಗೆ ಸಂಪರ್ಕವನ್ನು ಉಳಿಸಿಕೊಂಡಿತು.

ಡಾ॥ಶೀಲ : ಪಾಶ್ಚಾತ್ಯ ಸಾಹಿತ್ಯದಿಂದ ಕನ್ನಡಕ್ಕೆ ಬಂದ ಪ್ರಕಾರಗಳಲ್ಲಿ ಕಾದಂಬರಿ ಒಂದು. ಗುಲ್ವಾಡಿ ವೆಂಕಟರಾವ್, ಎಂ.ಎಸ್. ಪುಟ್ಟಣ್ಣ ಈ ಕ್ಷೇತ್ರದಲ್ಲಿ ಮೊದಲು ಮೌಖಿಕ ಕೃತಿಗಳನ್ನು ರಚನೆ ಮಾಡಿದವರು. ಕುವೆಂಪು, ಶಿವರಾಮ ಕಾರಂತರು, ಇಬ್ಬರೂ ಸುತ್ತಮುತ್ತಲಿನ ಜೀವನವನ್ನು ಪು:ನ ಸೃಷ್ಟಿಸಿ, ಆ ಪ್ರಕ್ರಿಯೆಯಲ್ಲೆ ಆ ಜೀವನದ ವಿಮರ್ಶೆಯನ್ನು ಮಾಡಿದರು.

ಡಾ॥ರಾಮು: ಕಾರಂತ, ಕುವೆಂಪು ಎಸ್.ಎಲ್. ಭೈರಪ್ಪ ಗ್ರಾಮೀಣ ಜೀವನವನ್ನು ಬಹು ದೊಡ್ಡ ಪ್ರಮಾಣದಲ್ಲಿ ಕನ್ನಡ ಕಾದಂಬರಿಗೆ ತಂದುಕೊಟ್ಟರು.

ಡಾ॥ಶೀಲ : ತೀರ ಭಿನ್ನವಾಗಿ ಬರೆದವರು ದೇವುಡು ನರಸಿಂಹ ಶಾಸ್ತ್ರಿಗಳು 'ಅಂತರಂಗ'ದಲ್ಲಿ ಮನಸ್ಸಿನ ವ್ಯಾಪಾರಗಳನ್ನು ವಿಶ್ಲೇಷಿಸಿದರು. 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ', 'ಮಹಾದರ್ಶನ'ಗಳಲ್ಲಿ ದೇವುಡು ಪೌರಾಣಿಕ ಸಾಮಗ್ರಿಯನ್ನು ಅದ್ಭುತವಾಗಿ ಬಳಸಿಕೊಂಡು ಕಾದಂಬರಿಗೆ ಹೊಸ ಆಯಾಮ ನೀಡಿದರು.

ಡಾ॥ರಾಮು: ಗೋಕಾಕರ 'ಸಮರಸವೇ ಜೀವನ' ಮಹಾತ್ವಾಕಾಂಕ್ಷೆಯ ಕೃತಿ. ನಾಡಿನ ಚರಿತ್ರೆಯ ಒಬ್ಬ ಮಹಾನ್ ವ್ಯಕ್ತಿಯನ್ನು ಚಿತ್ರಿಸಿ ಕನ್ನಡಿಗರ ಅಭಿಮಾನವನ್ನು ಗಟ್ಟಿಗೊಳಿಸುತ್ತವೆ.

ಡಾ॥ಶೀಲ : ಮಾಸ್ತಿಯವರ ಎರಡು ಕಾದಂಬರಿಗಳು 'ಚೆನ್ನಬಸವನಾಯಕ' ಮತ್ತು 'ಚಿಕ್ಕ ವೀರ ರಾಜೇಂದ್ರ' ಕ್ಷೀಣ ಸ್ಥಿತಿಯಲ್ಲಿರುವ ರಾಜ್ಯವನ್ನು ಆರಿಸಿಕೊಂಡು ಒಂದು ಸಮುದಾಯದ ಅವನತಿಯ ಮೂಲವನ್ನು ಹುಡುಕುತ್ತವೆ.

ಡಾ॥ರಾಮು: ಶ್ರೀ ರಂಗರು, ಬೆಟಗೇರಿ ಕೃಷ್ಣಶರ್ಮ, ಎ.ಎಂ. ಇನಾಂದಾರ್, ಎಂ.ವಿ. ಸೀತಾರಾಮಯ್ಯ, ಕೆ.ವಿ.ಅಯ್ಯರ್, ರಂ.ಶ್ರೀ ಮುಗಳಿ, ಮಿರ್ಜಿ ಅಣ್ಣಾರಾವ್ ಮೊದಲಾದವರು ಕಾದಂಬರಿ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು.

ಡಾ॥ಶೀಲ : ಸಣ್ಣ ಕಥೆ ಪ್ರಕಾರವು ಮಾಸ್ತಿ (ಶ್ರೀನಿವಾಸ) ಅವರಿಗಾಗಿಯೇ ಕಾಯುತ್ತಿದ್ದಿತೋ ಎನ್ನುವಂತೆ ಅವರಿಂದ ಕನ್ನಡದಲ್ಲಿ ರೂಪ ಪಡೆಯಿತು. ಭಾರತೀಯ ಸಂಸ್ಕೃತಿಯ ಜೀವಂತ ಸ್ಪಂದನಕ್ಕೆ ಮಾಸ್ತಿಯವರ ಕಥೆಗಳನ್ನು ಓದಬೇಕು ಎನ್ನುವಂತಾಯಿತು. ಸುಮಾರು ಒಂದು ನೂರು ಸಣ್ಣ ಕಥೆಗಳನ್ನು ಬರೆದ ಶ್ರೀನಿವಾಸರು ಅದನ್ನು ತಮ್ಮ ಜೀವನ ಗ್ರಹಿಕೆಯ ಮಾಧ್ಯಮವನ್ನಾಗಿ ಮಾಡಿಕೊಂಡರು.

ಡಾ॥ರಾಮು: ಎ.ಆರ್. ಕೃಷ್ಣಶಾಸ್ತ್ರೀ, ಬೆಟಗೇರಿ ಕೃಷ್ಣಶರ್ಮರು, ಸಿ.ಕೆ. ವೆಂಟಕರಾಮಯ್ಯ, ಆನಂದ (ಎ.ಸೀತಾರಾಮು), ಕೆ.ಗೋಪಾಲಕೃಷ್ಣ ರಾವ್, ಎಂ.ವಿ. ಸೀತಾರಾಮಯ್ಯ, ಭಾರತೀಪ್ರಿಯ (ವೆಂಕಟರಾವ್), ಭಾರತೀ ಸುತ (ನಾರಾಯಣರಾವ್), ನರೇಂದ್ರ ಬಾಬು ಇಂಥ ಲೇಖಕರು. ಮಾಸ್ತಿಯವರ ಪರಂಪರೆಯಲ್ಲಿ ಬರೆದರು.

ಡಾ॥ಶೀಲ : ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಹಳ್ಳಿಯ ಜೀವನದ ಸುಖದುಃಖಗಳು, ಮುಗ್ಧತೆ ಸ್ಪರ್ಧೆ ದ್ವೇಷಗಳು ಎಲ್ಲವನ್ನು ಹಿಡಿದಿಟ್ಟು, ಹಾಸ್ಯದ ಲೇಪನ ಕೊಟ್ಟು, ಒಂದು ಜಗತ್ತನ್ನೆ ಸೃಷ್ಟಿಸಿದರು.

ಡಾ॥ರಾಮು: ನವೋದಯ ಯುಗವು ಗದ್ಯವನ್ನು ಬೆಳೆಸಿತು. ಇದೇ ಕಾಲದಲ್ಲಿ ಕನ್ನಡ ಪತ್ರಿಕೋದ್ಯಮವೂ ಗರಿಗೆದರಿತು. ಇದೂ ಗದ್ಯದ ಬೆಳೆವಣಿಗೆಗೆ ಸಹಕಾರಿಯಾಯಿತು.

ಡಾ॥ಶೀಲ : ಲಲಿತ ಪ್ರಬಂಧ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ ಮೊದಲಾದುವೆಲ್ಲ ಪಾಶ್ಚಾತ್ಯ ಸಾಹಿತ್ಯದಿಂದ ಬಂದ ಪ್ರಕಾರಗಳು. ಎ.ಎನ್.ಮೂರ್ತಿರಾಯರು ಈ ಪ್ರಕಾರವನ್ನು ಅದ್ಭುತವಾಗಿ ರೂಪಿಸಿದರು. ವಿ.ಸೀ, ಕುವೆಂಪು, ತೀ.ನಂ ಶ್ರೀಕಂಠಯ್ಯ, ಪುತಿನ, ಶಿವರಾಮ ಕಾರಂತ, ಹಿರೇಮಲ್ಲೂರ ಈಶ್ವರನ್, ಬೀಚಿರಾಯರು,

ಹಾ.ಮಾ.ನಾಯಕ, ಎನ್. ಪ್ರಹ್ಲಾದರಾವ್, ನಾ.ಕಸ್ತೂರಿ, ರಾಶಿ ಮೊದಲಾದವರೆಲ್ಲ, ಈ ಪ್ರಕಾರದಲ್ಲಿ ಕೃಷಿ ಮಾಡಿದರು.

ಡಾ॥ಶೀಲ : ಈ ಯುಗದಲ್ಲಿ ಗಾಂಧೀಜಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಶಿವಾಜಿ ಮೊದಲಾದವರ ಜೀವನ ಚರಿತ್ರೆಗಳು ಲೆಕ್ಕವಿಲ್ಲದಷ್ಟು ಬಂದವು. ಸಾಮಾನ್ಯವಾಗಿ ಇವುಗಳ ಉದ್ದೇಶ ಓದುಗರಲ್ಲಿ ದೇಶಾಭಿಮಾನವನ್ನು ಗಟ್ಟಿಗೊಳಿಸುವುದು, ಸಾರ್ಥಕ ಜೀವನದ ಮಾದರಿಗಳನ್ನು ಮುಂದಿಡುವುದು.

ಡಾ॥ರಾಮು: ಈ ಯುಗದಲ್ಲಿಯೇ ನವರತ್ನ ರಾಮರಾಯರ 'ಕೆಲವು ನೆನಪುಗಳು', ಮಾಸ್ತಿಯವರ 'ಭಾವ', ಕಾರಂತರ 'ಹುಚ್ಚು, ಮನಸ್ಸಿನ ಹತ್ತು ಮುಖಗಳು', ಗುಬ್ಬಿ ವೀರಣ್ಣನವರ 'ಕಲೆಯೇ ಕಾಯಕ' ಡಿ.ವಿ.ಜಿ. ಅವರ "ಜ್ಞಾಪಕ ಚಿತ್ರ ಶಾಲೆ", ಜೆ.ಪಿ. ರಾಜರತ್ನಂ ಅವರ 'ಹತ್ತುವರ್ಷಗಳು', ಎ.ಎನ್. ಮೂರ್ತಿ ರಾಯರ 'ಸಂಜೆಗಣ್ಣಿನ ಹಿನ್ನೋಟ', ವಾಸುದೇವಾಚಾರ್ಯರ 'ನಾ ಕಂಡ ಕಲಾವಿದರು', ಜವರೇಗೌಡರ 'ಹೋರಾಟದ ಬದುಕು' ಮೊದಲಾದವು ಈ ಪ್ರಕಾರವು ಸಾಧಿಸಿದ ಪ್ರಬುದ್ಧತೆಗೆ ಕನ್ನಡಿಗಳು.

ಡಾ॥ಶೀಲ : ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ ಎಂಬವರು 'ದಕ್ಷಿಣ ಭಾರತ ಯಾತ್ರೆ' ಎಂಬ ಪುಸ್ತಕವನ್ನು ಪ್ರಕಟಿಸಿದರು. ವಿಸೀ ಅವರ 'ಪಂಪಾಯಾತ್ರೆ' ಗೋಕಾಕರ 'ಸಮುದ್ರದಾಚೆಯಿಂದ', 'ಇಂದಲ್ಲ ನಾಳೆ', ಶಿವರಾಮ ಕಾರಂತರ 'ಅಬುವಿನಿಂದ ಬರಾಮಕ್ಕೆ', 'ಅಪೂರ್ವ ಪಶ್ಚಿಮ', ಬಿ.ಜಿ.ಎಲ್. ಸ್ವಾಮಿ ಅವರ 'ಅಮೆರಿಕದಲ್ಲಿ ನಾನು', ಹೀಗೆ ಹಲವಾರು ಒಳ್ಳೆಯ ಪ್ರವಾಸ ಅನುಭವಗಳು ಕನ್ನಡಗರಿಗೆ ದಕ್ಕಿವೆ.

ಡಾ॥ರಾಮು: 'ಬಾಲಿವಾಲಾ' ಎಂಬ ಪಾರ್ಸಿ ನಟತಂಡ ಬೆಂಗಳೂರಿಗೆ ಬಂದು ಜನರನ್ನು ಬೆರಗುಗೊಳಿಸಿತು. ಮಹಾರಾಜರಾಗಿದ್ದ ಚಾಮರಾಜ ಒಡೆಯರ ಪ್ರೇರಣೆಯಿಂದ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆ' ಪ್ರಾರಂಭವಾಯಿತು. ಆಸ್ಥಾನ ವಿದ್ವಾಂಸರು ಸಂಸ್ಕೃತದಿಂದ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು. ಅನಂತರ ಇಂಗ್ಲಿಷಿನಿಂದ ಷೇಕ್ಸ್‌ಪಿಯರ್ ಮತ್ತು ಇವರ ನಾಟಕಕಾರರ ನಾಟಕಗಳು ಅನುವಾದವಾದವು.

ಡಾ॥ರಾಮು: ಮೈಸೂರು ಸಂಸ್ಥಾನದಲ್ಲಿ ಮತ್ತು ಉತ್ತರ ಕರ್ನಾಟಕದಲ್ಲಿ ವೃತ್ತಿ ನಾಟಕ ಕಂಪೆನಿಗಳು ಪ್ರಾರಂಭವಾದವು. ಪ್ರಾರಂಭದಲ್ಲಿ ಇವು ಬಹುಮಟ್ಟಿಗೆ ಪೌರಾಣಿಕ ನಾಟಕಗಳನ್ನೆ ಆಡುತ್ತಿದ್ದವು. ಕ್ರಮೇಣ ಚಾರಿತ್ರಿಕ ನಾಟಕಗಳನ್ನೂ ಸಾಮಾಜಿಕ ನಾಟಕಗಳನ್ನೂ ಅಭಿನಯಿಸಲು ಪ್ರಾರಂಭಿಸಿದವು.

ಡಾ॥ಶೀಲ : ಪ್ರಾಚೀನ ಗ್ರೀಸಿನ ಮಹಾನ್ ನಾಟಕಕಾರ ಸಫೋಕ್ಲಿಸನ 'ಅಜಾಕ್ಸ್' ನಾಟಕವನ್ನು ಆಧರಿಸಿ 'ಶ್ರೀ' (ಬಿ.ಎಂ.ಶ್ರೀಕಂಠಯ್ಯ) ರಚಿಸಿದ 'ಅಶ್ವತ್ಥಾಮನ್' ಕನ್ನಡಕ್ಕೆ ಟ್ರಾಜಿಡಿಯನ್ನು ತಂದುಕೊಟ್ಟಿತು. ಶ್ರೀ ಅವರ ಹೆಜ್ಜೆಯನ್ನು ಅನುಸರಿಸಿ ವಿ.ಸೀ. 'ಆಗ್ರಹ'ವನ್ನು, ಕುವೆಂಪು 'ಬೆರಳ್-ಗೆ-ಕೊರಳ್' ನಾಟಕವನ್ನು ಬರೆದರು.

ಡಾ॥ಶೀಲ : ಹವ್ಯಾಸಿ ರಂಗಭೂಮಿಗೆ ಚೈತನ್ಯ ಕೊಟ್ಟವರು ಉತ್ತರ ಕರ್ನಾಟಕದಲ್ಲಿ ಶ್ರೀರಂಗರು, ಹಿಂದಿನ ಮೈಸೂರು ಸಂಸ್ಥಾನದಲ್ಲಿ ಕೈಲಾಸಂ ಸಾಮಾಜಿಕ ನಾಟಕಗಳನ್ನು ಬರೆದರು, ಸಮಕಾಲೀನ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ಕಂಡರು. ಹಾಸ್ಯವನ್ನೂ ವಿಡಂಬನೆಯನ್ನು ಬಳಸಿದರು.

ಡಾ॥ರಾಮು: ಕೈಲಾಸಂ ನಾಟಕಗಳಿಗಿಂತ ಶ್ರೀರಂಗರ ನಾಟಕಗಳಲ್ಲಿ ಬೌದ್ಧಿಕತೆ ತೀಕ್ಷ್ಣವಾಗಿದೆ. ಚಿಂತನೆ ತೀಕ್ಷ್ಣವಾಗಿದೆ. ಕೈಲಾಸಂ ಬಳಸಿದ ಭಾಷೆಯು ಅಂದು ಜನರನ್ನು ಆಕರ್ಷಿಸಿದರೂ ನಾಟಕಗಳಿಗೆ ಅಲ್ಪಾಯುಸ್ಸನ್ನು ಖಚಿತ ಮಾಡಿತು. ಶ್ರೀರಂಗರ ಪ್ರಯೋಗ ಪ್ರೀತಿ ಮನೆ ಮಾತಾಗಿದೆ. ಇಬ್ಬರ ಸಾಮಾಜಿಕ ನಾಟಕಗಳೂ ವಿಶೇಷ ಉಡುಪುಗಳನ್ನೂ ರಂಗಸಜ್ಜಿಕೆಯನ್ನೂ ಬೇಡುವುದಿಲ್ಲವಾದುದರಿಂದ ಸಣ್ಣ ಊರುಗಳಲ್ಲಿ

ಕೆಲವರು ತರುಣರು ಸೇರಿ ಈ ನಾಟಕಗಳನ್ನು ಪ್ರದರ್ಶಿಸುವುದು ಸಾಧ್ಯವಾಯಿತು, ನಾಟಕವು ಸಮಾಜದ ಬದುಕಿನ ಒಂದು ಭಾಗವಾಯಿತು.

ಡಾ॥ಶೀಲ : ಕೈಲಾಸಂ ಪರಂಪರೆಯಲ್ಲಿ ಕ್ಷೀರಸಾಗರ, ಕೈವಾರ ರಾಜಾರಾವ್ ಮೊದಲಾಗಿ ಹಲವರು ನಾಟಕಗಳನ್ನು ಬರೆದರೂ ಬಹು ಯಶಸ್ವಿಯಾದವರು ಪರ್ವತವಾಣಿ (ಸಿ.ನರಸಿಂಹರಾವ್) ಈ ಯಶಸ್ಸಿಗೆ ಎರಡು ಕಾರಣಗಳು–ಅವರ 'ಸ್ಟೇಜ್ ಸೆನ್ಸ್' (ರಂಗಭೂಮಿಯ ಸಂವೇದನೆ) ಮತ್ತು ಲವಲವಿಕೆಯ ಭಾಷೆ (ಹಲವೊಮ್ಮೆ ಭಾಷೆಯೇ ಕ್ರಿಯೆಯನ್ನು ಅಲ್ಲಲ್ಲಿ ನಡೆಸುವುದುಂಟು) ಪರ್ವತವಾಣಿ ಇಂಗ್ಲೆಂಡಿನ ನಾಟಕಕಾರರ ನಾಟಕಗಳನ್ನಲ್ಲದೆ ಫ್ರಾನ್ಸ್, ರಷ್ಯ ಮೊದಲಾದ ದೇಶಗಳ ನಾಟಕಕಾರರ ಕೃತಿಗಳನ್ನು ರೂಪಾಂತರಿಸಿದರು.

ಡಾ॥ರಾಮು: ಉತ್ತರ ಕರ್ನಾಟಕದಲ್ಲಿ 'ಅನಾಮಧೇಯ' (ಜಿ.ಬಿ. ಜೋಶಿ) ಮತ್ತು ಎನ್ಕೆ (ಎನ್. ಕುಲಕರ್ಣಿ) ಹಲವು ನಾಟಕಗಳನ್ನು ಬರೆದರು. ಬೇಂದ್ರೆಯವರು 'ಅವಿದ್ಧ ಪ್ರಯೋಗಗಳು' ಎಂದು ಕರೆದ 'ಟ್ರಾಜಿಡಿ'ಗಳನ್ನು ರಚಿಸಿದರು.

ಡಾ॥ಶೀಲ : ಬೆಂಗಳೂರಿನ ಮಟ್ಟಿಗೆ, ರವೀಂದ್ರ ಕಲಾಕ್ಷೇತ್ರವು ನಿರ್ಮಾಣವಾದದ್ದು ಕನ್ನಡ ರಂಗಭೂಮಿಗೆ ಬಹು ದೊಡ್ಡ ವರವಾಯಿತು.

ಡಾ॥ರಾಮು: ಡಿ.ವಿ.ಜಿ, ಮಾಸ್ತಿ ಎ.ಆರ್. ಕೃಷ್ಣಶಾಸ್ತ್ರೀ, ಕುವೆಂಪು, ಬೇಂದ್ರೆ, ಗೋಕಾಕ್, ತೀ.ನಂ.ಶ್ರೀ. ಎಂ.ಆರ್.ಶ್ರೀ ಮೊದಲಾದವರು ಸಾಹಿತ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯನ್ನು ರೂಪಿಸಿದರು.

ಡಾ॥ಶೀಲ : ಜೊತೆಗೆ ಹೊಸ ಸಾಹಿತ್ಯವನ್ನು ವಿವರಿಸಿದರು. ಸಾಹಿತ್ಯ ವಿಮರ್ಶೆಗೆ ಹೊಸ ಸಾಧನಗಳನ್ನು ಸಿದ್ಧಪಡಿಸಿದರು ಭಾಷೆಯನ್ನು ಹದಗೊಳಿಸಿದರು.

ಡಾ॥ರಾಮು: ಸುಮಾರು 1945ರ ಹೊತ್ತಿಗೆ ಕರ್ನಾಟಕದಲ್ಲಿ ಪ್ರಗತಿಶೀಲ ಗಾಳಿ ಬೀಸಲು ಪ್ರಾರಂಭವಾಯಿತು. ನವ್ಯ ಸಾಹಿತ್ಯವು ಕ್ರಾಂತಿ ಮನೋಧರ್ಮದ ಸಾಹಿತ್ಯವಲ್ಲ. ಬಹುಮಟ್ಟಿಗೆ ಇದರಲ್ಲಿ ಕಾಣುವುದು ಉದಾರ ಮನೋಧರ್ಮ. ವ್ಯಕ್ತಿಯ ಜನ್ಮ ಸಂದರ್ಭ ಏನೇ ಇರಲಿ, ಅವನು ಮನುಷ್ಯನಾದುದರಿಂದ ಅವನಿಗೆ ಘನತೆಯುಂಟು ಎಂಬ ತತ್ವವನ್ನು ಒಪ್ಪಿದ ಸಾಹಿತ್ಯ, ಎಲ್ಲ ಮನುಷ್ಯರ ಸಮಾನತೆಯನ್ನು ಒಪ್ಪಿದ ಸಾಹಿತ್ಯ, ನಿಸರ್ಗ ಜಡವಲ್ಲ ಜೀವರಹಿತವಲ್ಲ, ಮನುಷ್ಯನಿಗೂ ನಿಸರ್ಗಕ್ಕೂ ಒಂದು ವಿಶಿಷ್ಟವಾದ ಸಂಬಂಧವಿದೆ ಎನ್ನುವುದನ್ನು ಒಪ್ಪಿದ ಸಾಹಿತ್ಯ ಈ ಮಾತು ಕೆಲವರು ಸಾಹಿತಿಗಳಿಗೆ ಅನ್ವಯಿಸುವುದಕ್ಕೆ ಈ ಸಾಹಿತ್ಯ ಸಾಮಾಜಿಕ ಸುಧಾರಣೆಯ ಪರವಾಗಿ ಇದ್ದ ಸಾಹಿತ್ಯ.

ಡಾ॥ಶೀಲ : ಆದರೆ ಈ ಪ್ರಕ್ರಿಯೆಯಲ್ಲಿ ಒತ್ತು ಬಂದದ್ದು ವ್ಯಕ್ತಿಯ ಮೇಲೆ ಸಮಾಜವು ವ್ಯಕ್ತಿಗಳಿಂದಾದ್ದರಿಂದ ವ್ಯಕ್ತಿಗಳ ಸಂವೇದನೆ ಸೂಕ್ಷ್ಮಗೊಂಡರೆ, ಹೃದಯವಂತಿಕೆ ಮತ್ತು ನ್ಯಾಯ ಪ್ರಜ್ಞೆಗಳು ಬಲಗೊಂಡರೆ ಸಮಾಜಸುಧಾರಣೆ ಸಾಧ್ಯವಾಗುತ್ತದೆ ಎಂದು ಇವರ ನಂಬಿಕೆ.

ಡಾ॥ರಾಮು: ಈ ಅವಧಿಯಲ್ಲಿ ಗದ್ಯಕ್ಕೆ ವೈವಿಧ್ಯ ಬಂದಿತು, ಬಾಗುವ ಗುಣ (ಫ್ಲೆಕ್ಸಿಬಿಲಿಟಿ) ಮತ್ತು ನಮ್ಯತೆ (ಪ್ಲಾ ಸ್ಟಿಸಿಟಿ) ಲಭ್ಯವಾದವು. ಇದರಿಂದ ಇದು ನಿತ್ಯಜೀವನದ ಮತ್ತು ವ್ಯವಹಾರದ ಹತ್ತು ಹಲವು ಅಗತ್ಯಗಳನ್ನು ನಿರ್ವಹಿಸಲು ಹದವಾದಂತಾಯಿತು.

ಡಾ॥ರಾಮು: ಕಳೆದ ಶತಮಾನದ ನಾಲ್ಕನೆಯ ದಶಕದ ಹೊತ್ತಿಗೆ ದೇಶದಲ್ಲಿ ಹೊಸ ಚಿಂತನೆಯ ಗಾಳಿ ಬೀಸಲಾರಂಭಿಸಿತು. ಬಡತನ, ಶೋಷಣೆ, ಜಾತೀಯತೆ ಇವೆಲ್ಲ ತೊಲಗಬೇಕು, ಶೋಷಣೆ ಅನ್ಯಾಯ,

ಬಡತನಗಳ ವಿರುದ್ಧದ ಸಮರದಲ್ಲಿ ಸಾಹಿತಿ ಭಾಗವಹಿಸಬೇಕು, ಸಾಹಿತ್ಯವು ವಾಸ್ತವಕ್ಕೆ ಕನ್ನಡಿಯಾಗಬೇಕು, ಎಂಬ ವಾದ ಪ್ರಬಲವಾಯಿತು.

ಡಾ॥ಶೀಲ : ಮಹಾಕ್ರಾಂತಿಯನ್ನು ಸಾಧಿಸಿದ್ದ ರಷ್ಯದತ್ತ ಹಲವರು ಬುದ್ಧಿ ಜೀವಿಗಳ ಒಲವಿತ್ತು. ಮಾರ್ಕ್ಸ್ ಚಿಂತನೆ ಈ ನಾಡಿನ ಸಾಹಿತಿಗಳ ಮೇಲೆ ಪ್ರಭಾವ ಬೀರುತ್ತಿತ್ತು.

ಡಾ॥ರಾಮು: 1935ರಲ್ಲಿ ಲಕ್ನೋದಲ್ಲಿ ಪ್ರಗತಿಶೀಲ ಸಾಹಿತ್ಯದ ಮೊದಲನೆಯ ಸಮ್ಮೇಳನ ನಡೆಯಿತು, ಹಿಂದೀ ಸಾಹಿತಿ ಪ್ರೇಮಚಂದರು ಅಧ್ಯಕ್ಷರು. ಪ್ರಗತಿಶೀಲ ಗಾಳಿ ಕರ್ನಾಟಕದಲ್ಲಿಯೂ ಬೀಸಿತು. ಈ ಚಳವಳಿಗೆ ಅ.ನ.ಕೃ. (ಅ.ನ.ಕೃಷ್ಣರಾವ್) ನೇತಾರರಾದರು. ತ.ರಾ.ಸುಬ್ಬರಾವ್, ಬಸವರಾಜ ಕಟ್ಟಿಮನಿ, ನಿರಂಜನ್, ಎಸ್.ಅನಂತ ನಾರಾಯಣ, ಕೋ. ಚೆನ್ನಬಸಪ್ಪ ಮೊದಲಾದವರು ಪ್ರಗತಿಶೀಲ ಪಂಥದೊಡನೆ ತಮ್ಮನ್ನು ಗುರುತಿಸಿಕೊಂಡರು.

ಡಾ॥ಶೀಲ : ಪ್ರಗತಿಶೀಲ ಪಂಥವು ಮುಖ್ಯವಾಗಿ ಯಶಸ್ಸು ಕಂಡದ್ದು ಕಾದಂಬರಿ ಮತ್ತು ಸಣ್ಣ ಕಥೆ ಪ್ರಕಾರಗಳಲ್ಲಿ ಅನಕೃ, ತರಾಸು, ಕಟ್ಟಿಮನಿ, ನಿರಂಜನ ಎಲ್ಲರೂ ಈ ಎರಡು ಪ್ರಕಾರಗಳನ್ನು ಬಳಸಿಕೊಂಡರು.

ಡಾ॥ರಾಮು: ನಾಲ್ವರೂ ಹುಟ್ಟು ಕಥೆಗಾರರು. ಸೊಗಸಾಗಿ ಕಥೆಯನ್ನು ಹೇಳಬಲ್ಲವರು. ಅನಕೃಗೆ ಬರಹ ಸರಾಗವಾಗಿ ಬರುತ್ತಿತ್ತು. ನಗರೀಕರಣ, ಕೈಗಾರೀಕರಣಗಳ ಪ್ರಾರಂಭವಾದ ಯುಗದಲ್ಲಿ ಕುಟುಂಬ ವ್ಯವಸ್ಥೆಯು ಒತ್ತಡಗಳಿಗೆ ಒಳಗಾದುದನ್ನು ಅನಕೃ ಚಿತ್ರಿಸುತ್ತಾರೆ. ತರಾಸು ಬರಹದಲ್ಲಿ ಹೆಚ್ಚಿನ ಕಲೆಗಾರಿಕೆ ಇದೆ. ಅಂತಃಕರಣವನ್ನು ಕಲಕುವಂತೆ ಬರೆಯಬಲ್ಲವರು. ಕಟ್ಟಿಮನಿಯವರ ಬರಹದಲ್ಲಿ ಶಕ್ತಿ ಇದೆ.

ಡಾ॥ಶೀಲ : ಪ್ರಗತಿಶೀಲರು ಸಾಹಿತ್ಯದಿಂದ ಅವರೆಗೆ ದೂರವಾಗಿದ್ದ ವಸ್ತುಗಳನ್ನೂ ಅನುಭವಗಳಲ್ಲಿ ಸಾಹಿತ್ಯಕ್ಕೆ ತಂದರು. ಕಾರ್ಮಿಕರು, ವೇಶ್ಯೆಯರು ಮೊದಲಾದವರ ಬದುಕು ಈಗ ಸಾಹಿತ್ಯದ ಜಗತ್ತಿಗೆ ಬಂದಿತು.

ಡಾ॥ರಾಮು: ಸಾಹಿತಿಯು ಅನ್ಯಾಯಕ್ಕೆ, ದೋಷಣೆಗೆ ಒಳಗಾದವರ ವಿಷಯದಲ್ಲಿ ಅನುಕಂಪ ತೋರಿಸಿದರೆ ಸಾಲದು, ಅವನಿಗೊಂದು ಸಾಮಾಜಿಕ ಹೊಣೆ ಇದೆ. ಎನ್ನುವುದನ್ನು ಘೋಷಿಸಿ ಅನುಸರಿಸಿದವರು.

ಡಾ॥ಶೀಲ : ಸಾಹಿತಿಯನ್ನು ಸಮಾಜದ ಆತ್ಮ ಸಾಕ್ಷಿಯನ್ನಾಗಿ ಮಾಡಿದವರು ಪ್ರಗತಿಶೀಲರು 'ಸಂಧ್ಯಾರಾಗ', 'ಹಂಸಗೀತೆ', 'ಜ್ವಾಲಾಮುಖಿಯ ಮೇಲೆ', 'ರಂಗಮ್ಮನ ವಠಾರ' 'ಚಿರಸ್ಮರಣೆ', 'ಮೃತ್ಯುಂಜಯ'ಗಳಂಥ ಕಾದಂಬರಿಗಳನ್ನು ಹಲವು ಶ್ರೇಷ್ಠ ಕಥೆಗಳನ್ನು ಈ ಪಂಥವು ನೀಡಿತು.

ಡಾ॥ರಾಮು: ಕನ್ನಡ ಗದ್ಯವು ಶಕ್ತಿಯುತವಾಯಿತು, ಹರಿತವಾಯಿತು, ಇದು ಪ್ರಗತಿಶೀಲ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯದ ಒಂದು ಉಜ್ವಲ ಅಧ್ಯಾಯ.

ಡಾ॥ಶೀಲ : 1952–53ರ ಸುಮಾರಿನಲ್ಲಿ ಒಂದು ಪತ್ರಿಕೆಯ ವಿಶೇಷಾಂಕದಲ್ಲಿ ಗೋಪಾಲಕೃಷ್ಣ ಅಡಿಗರ 'ಕೃಷ್ಣನ ಕೊಳಲು' ಎನ್ನುವ ಕವನವು ಪ್ರಕಟವಾಯಿತು. ಇದರೊಂದಿಗೆ ನವ್ಯ ಮನೋಧರ್ಮ ಕನ್ನಡ ಸಾಹಿತ್ಯದಲ್ಲಿ ಪ್ರಕಟವಾಯಿತು.

ಡಾ॥ರಾಮು: ನವ್ಯ ಸಾಹಿತ್ಯವು ಇಲ್ಲಿಯ ನೆಲದ ಬೆಳೆಯೇ, ಬೇರೆಡೆಯಿಂದ ತಂದು ನೆಟ್ಟ ಸಸಿಯೇ ಎಂಬ ವಾದ ನಡೆದಿದೆ. ಅಭಿವ್ಯಕ್ತಿಯಲ್ಲಿ ಈ ಕಾವ್ಯವು ಮೊದಲು ಈ ಮನೋಧರ್ಮವು ಪ್ರಕಟವಾದದ್ದು ಕಾವ್ಯದಲ್ಲಿ ಟಿ.ಎಸ್. ಎಲಿಯೆಟ್, ಡಬ್ಲ್ಯು. ಎಚ್. ಆಡನ್ ಮೊದಲಾದವರ ಪ್ರಭಾವಕ್ಕೆ ಒಳಗಾಯಿತೆಂಬುದು ನಿಜ.

ಡಾ॥ಶೀಲ : ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಖ್ಯವಾಗಿ ಯುವಜನರಿಗೆ ಆದ ಹತಾಶೆ ಬಹು ನೋವಿನದು. ನಾಯಕರ ರೀತಿ ಆಡಳಿತ ಎರಡೂ ಭ್ರಾಂತಿ ನಿವಾರಣೆಯ ಕಹಿ ಪ್ರಕ್ರಿಯೆಗಳಾದವು. ಬಹು ಬೇಗ

ನವ್ಯ ಸಾಹಿತ್ಯವು ನವ್ಯ ಕಾವ್ಯ ಸಹ ಹೊರಗಿನ ಪ್ರಭಾವವನ್ನು ಕಳಚಿಕೊಂಡು ಸ್ವತಂತ್ರವಾಗಿ ಬೆಳೆದದ್ದನ್ನು ಕಾಣುತ್ತೇವೆ.

ಡಾ॥ರಾಮು: ನವ್ಯ ಸಾಹಿತಿ ಅಂತರ್ಮುಖಿಯಾದ. ಮನುಷ್ಯನ ಮನಸ್ಸಿನ ವ್ಯಾಪಾರಗಳ ರೀತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ. ಮನಸ್ಸು ಏಕಮುಖಿಯಾಗಿ, ತರ್ಕಬದ್ಧವಾಗಿ ಕೆಲಸ ಮಾಡುತ್ತದೆ ಎನ್ನುವುದು ವಾಸ್ತವದಿಂದ ಬಹುದೂರ ಇರುವ ಕಲ್ಪನೆ ಎಂದು ಗುರುತಿಸಿದ, ಮನಸ್ಸಿನಲ್ಲಿ ಹಲವು ಪದರಗಳಿವೆ, ಪ್ರವಾಹಗಳಿವೆ, ಒತ್ತಡಗಳು ಸೆಳೆತಗಳು ಇವೆ ಎನ್ನುವುದನ್ನು ಗುರುತಿಸಿ ಮನುಷ್ಯನ ಮನಸ್ಸನ್ನು ಗ್ರಹಿಸಲು ಯತ್ನಿಸಿದ.

ಡಾ॥ಶೀಲ : ವ್ಯಕ್ತಿಯ ಸ್ವಭಾವವೆನ್ನುವುದು ಹಲವು ಸ್ಪಷ್ಟವಾದ ಗುಣಗಳು ಬೇರೆ ಬೇರೆ ಪ್ರಮಾಣಗಳಲ್ಲಿ ಬೆರೆತು ಆದ ಮೊತ್ತ ಎನ್ನುವ ಕಲ್ಪನೆಯನ್ನು ಬಿಟ್ಟು. ಹಲವು ಸ್ಪಷ್ಟ ಮತ್ತು ಅಸ್ಪಷ್ಟ ಒತ್ತಡಗಳ ಮತ್ತು ಸೆಳೆತಗಳ ಪ್ರಭಾವದಲ್ಲಿ ಸ್ವಭಾವ ಕ್ರಿಯೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇದು 'ಅನ್‌ಪ್ರಿಡಿಕ್‌ಟಬಲ್' ಎಂಬ ದೃಷ್ಟಿ ಈ ಸಾಹಿತ್ಯದ್ದು.

ಡಾ॥ರಾಮು: ನಿರ್ಣಯ ಕೊಡುವುದಕ್ಕಿಂತ ಮುಖ್ಯವಾಗಿ ಅರ್ಥಮಾಡಿಕೊಳ್ಳುವುದು (To understand rather than to judge) ಈ ಸಾಹಿತ್ಯಕ್ಕೆ ಮುಖ್ಯವೆನಿಸಿತು. ಏಕೆಂದರೆ ಅರ್ಥ ಮಾಡಿಕೊಳ್ಳದೆ ತೀರ್ಪು ಕೊಡುವುದು ಸರಿಯಲ್ಲ.

ಡಾ॥ಶೀಲ : ಸಾಹಿತಿಯು ತನ್ನ ಉದ್ದೇಶಕ್ಕೆ ಮತ್ತು ಅನುಭವಕ್ಕೆ ಹೊಂದಿಕೊಂಡ ಭಾಷೆಯನ್ನು ರೂಪಿಸಿ ಕೊಳ್ಳಬೇಕಾಯಿತು. ಅದು ಅನುಭವದ ಶೋಧನೆ ಎಂಬ ಭಾವನೆಯಿಂದಲೂ ಭಾಷೆಯನ್ನು ಪ್ರಜ್ಞಾಪೂರ್ವಕ ವಾಗಿ ರೂಪಿಸಿಕೊಳ್ಳಬೇಕಾಯಿತು.

ಡಾ॥ರಾಮು: ನವೋದಯ ಪರಂಪರೆಯಲ್ಲಿ ಒಳ್ಳೆಯ ಕವನಗಳನ್ನು ಬರೆದಿದ್ದ ಗೋಪಾಲಕೃಷ್ಣ ಅಡಿಗರು ನವ್ಯಕಾವ್ಯದ ಶಿಲ್ಪಿಯಾದರು. 'ಗೊಂದಲಪುರ' ನವ್ಯಕಾವ್ಯವನ್ನು ಸ್ಥಾಪಿಸಿತು.

ಡಾ॥ಶೀಲ : ಇವರಂತೆಯೇ ನವೋದಯ ಪರಂಪರೆಯೊಳಗೆ ಕಾವ್ಯರಚನೆಯನ್ನು ಪ್ರಾರಂಭಿಸಿದ್ದ ರಾಮಚಂದ್ರ ಶರ್ಮರೂ ನವ್ಯಪಂಥಕ್ಕೆ ತಿರುಗಿದರು. ಬರೆದದ್ದು ಸ್ವಲ್ಪವಾದರು ಶಕ್ತಿಯುತವಾದ ಸೊಗಸಾದ ಕಾವ್ಯವನ್ನು ರಚಿಸಿದವರು ಗಂಗಾಧರ ಚಿತ್ತಾಲರು.

ಡಾ॥ರಾಮು: ಲಂಕೇಶ್, ಕೆ.ವಿ. ತಿರುಮಲೇಶ್, ಎ.ಕೆ.ರಾಮಾನುಜನ್, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ ಎಲ್ಲ ನವ್ಯಕವನಗಳನ್ನು ಬರೆದರು. ಪ್ರಾರಂಭದಲ್ಲಿ ನವ್ಯಕಾವ್ಯವೂ ತೀವ್ರ ಟೀಕೆಯನ್ನು ಎದುರಿಸಿದರೂ ಬೇಗ ಬೇರೂರಿತು.

ಡಾ॥ಶೀಲ : ನವೋದಯ ಪರಂಪರೆಯಲ್ಲಿ ಬರೆದು ಅಸಾಧಾರಣ ಜನಪ್ರಿಯತೆಯನ್ನು ಗಳಿಸಿದ್ದ ನರಸಿಂಹಸ್ವಾಮಿಯವರೂ ನವ್ಯ ಮಾರ್ಗದಲ್ಲಿ ಯಶಸ್ವಿ ಕವನಗಳನ್ನು ಬರೆದರು.

ಡಾ॥ರಾಮು: ನವ್ಯ ಸಾಹಿತ್ಯ ಪಂಥವು ಶ್ರೇಷ್ಠ ಕಾದಂಬರಿಗಳನ್ನೂ ಕಥೆಗಳನ್ನೂ ಕೊಟ್ಟಿತು. ಈ ಕಥಾ ಸಾಹಿತ್ಯವು ಕಾಫ, ಕಾಮು, ಜೀನ್ ಪಾಲ್ ಸಾರ್ತೆ ಮೊದಲಾದ ಪಾಶ್ಚಾತ್ಯ ಕಾದಂಬರಿಕಾರರ ಪ್ರಭಾವಕ್ಕೆ ಒಳಗಾಯಿತು.

ಡಾ॥ಶೀಲ : ವಿಶಾಲ ವಿಶ್ವಕ್ಕೂ ಅದರಲ್ಲಿ ವಾಸಿಸುವ ಮನುಷ್ಯನಿಗೂ ಅರ್ಥವತ್ತಾದ ಸಂಬಂಧವಿಲ್ಲ. 'ಅನಾಥ ಪ್ರಜ್ಞೆ' ಇದನ್ನು ನಡೆಸುವ ಶಕ್ತಿಯಾಯಿತು. ಮನುಷ್ಯನು ವಿಶ್ವಕ್ಕೆ ಬೇಡದ ಮಗು, ತನ್ನ ಬದುಕಿಗೆ ಅರ್ಥವನ್ನು ತಾನೇ ಕಂಡುಕೊಳ್ಳಬೇಕು ಎಂಬ ಜೀವನ ದೃಷ್ಟಿ ಲೇಖಕರಿಗೆ ಪ್ರಿಯವಾಯಿತು.

ಡಾ॥ರಾಮು: ಈ ಕಾದಂಬರಿಗಳಲ್ಲಿ ಪಾತ್ರದ ಕಲ್ಪನೆ ಹೊಸ ರೀತಿಯದು. ಒಬ್ಬ ವ್ಯಕ್ತಿ ಎಂದರೆ ಸ್ಪಷ್ಟವಾಗಿ ಗುರುತಿಸಬಹುದಾದ ಗುಣಗಳ ಮೊತ್ತ, ಮನುಷ್ಯನ ಮನಸ್ಸು ತರ್ಕಬದ್ಧವಾಗಿ ಕೆಲಸ ಮಾಡುತ್ತದೆ. ಇಂಥ ಸ್ವೀಕೃತ ಭಾವನೆಗಳು ಹಿಂದೆ ಸರಿದವು. ಮಾನವ ಸ್ವಭಾವವನ್ನು ಅರ್ಥಮಾಡಿಕೊಳ್ಳಲು ಹಲವು ಹೊಸ ಪ್ರಯೋಗಗಳಾದವು.

ಡಾ॥ಶೀಲ : ಪ್ರಜ್ಞಾಪ್ರವಾಹ (ಸ್ಟ್ರೀಮ್ ಆಫ್ ಕಾನ್ಷಸ್‌ನೆಸ್) ಮತ್ತು ಅಂತರಂಗ ಏಕವ್ಯಕ್ತಿ ಭಾಷಣ (ಇಂಟೀರಿಯರ್ ಮಾನಲೋಗ್) ಪರಿಕಲ್ಪನೆಗಳು ಬಳಕೆಯಾದವು. ಬದುಕಿನ ನಿರಂತರ ಪ್ರವಾಹವನ್ನನುಸರಿಸಿ ಕಥೆ ಕಾದಂಬರಿಗಳ ಕ್ರಿಯೆ ತೆರೆದ ಮುಕ್ತಾಯವಾದವು. (ಓಪನ್ ಎಂಡೆಡ್). ಸಂಕೇತಗಳು ಭಾಷೆಯ ಮಿತವ್ಯಯ ಧ್ವನಿಶಕ್ತಿ ಇವಕ್ಕೆ ಹೆಚ್ಚಿನ ಗಮನ ದೊರೆಯಿತು.

ಡಾ॥ರಾಮು: ಸಾಹಿತ್ಯವು ಸಂಪೂರ್ಣವಾದ, ಅರ್ಥವಾದ ಅನುಭವದ ನಿರೂಪಣೆಯಲ್ಲ, ಭಾಷೆಯ ಮೂಲಕ ಅನುಭವದ ಶೋಧನೆ ಎಂಬ ದೃಷ್ಟಿಯು ಇಲ್ಲಿಯೂ ಕೆಲಸ ಮಾಡಿತು.

ಡಾ॥ಶೀಲ : ನವ್ಯದ ಮುನ್ಸೂಚನೆಯನ್ನು ತರಾಸು ಅವರ ಕಾದಂಬರಿ 'ಬಿಡುಗಡೆಯ ಬೇಡಿ', ಕಥೆ '0–0=0' ಮುಂತಾದ ಪ್ರಗತಿಶೀಲ ಬರಹಗಳಲ್ಲೆ ಕಾಣಬಹುದು. ಶಾಂತಿನಾಥ ದೇಸಾಯಿ ಅವರ 'ಮುಕ್ತಿ' ಕಾದಂಬರಿಯನ್ನು ಕನ್ನಡದಲ್ಲಿ ಮೊದಲ ಕಾದಂಬರಿ ಎಂದು ಗುರುತಿಸಲಾಗಿದೆ. ಬಹು ಜನರ ಗಮನವನ್ನು ಸೆಳೆದದ್ದು ಯು.ಆರ್.ಅನಂತಮೂರ್ತಿಯವರ 'ಸಂಸ್ಕಾರ'. ಶಾಂತಿನಾಥ ದೇಸಾಯಿ, ಅನಂತಮೂರ್ತಿ, ಯಶವಂತ ಚಿತ್ತಾಲ, ಲಂಕೇಶ್, ವೈಕುಂಠರಾಜು, ಶ್ರೀ ಕೃಷ್ಣ ಆಲನಹಳ್ಳಿ, ಎ.ಕೆ. ರಾಮಾನುಜನ್ ಮೊದಲಾದವರು ನವ್ಯ ಕಾದಂಬರಿ ಕಥಾ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು.

ಡಾ॥ರಾಮು: ನವ್ಯ ಯುಗದಲ್ಲಿ ಗದ್ಯ ಹೊಸ ಹರಿತವನ್ನು ಶಕ್ತಿಯನ್ನು ಪಡೆದುಕೊಂಡಿತು. ಆದರೆ ಲಲಿತ ಪ್ರಬಂಧ ಒಣಗಿ ಹೋಯಿತು. ಜೀವನಚರಿತ್ರೆ, ಆತ್ಮ ವೃತ್ತಗಳು ಹಿಂದೆ ಸರಿದವು. ಗದ್ಯ ಬೆಳೆದದ್ದು ಕಥಾಸಾಹಿತ್ಯ ನಾಟಕ ಮತ್ತು ವಿಮರ್ಶೆಗಳ ಮೂಲಕ.

ಡಾ॥ಶೀಲ : 1950ರ ಮೇ 11ರಂದು ಯೂರೋಪಿನಲ್ಲಿ ಅಯೆನೆಸ್ಕೊನ 'ದ ಬಾಲ್ಡ್ ಪ್ರಿಮಾ ದೊನ್ನಾ' ಪ್ರಕಟವಾಯಿತು. ಇದೊಂದು 'ಆಬ್ಸರ್ಡ್ (ಅಸಂಗತ) ನಾಟಕ. ಇದರ ಆಧಾರದ ಮೇಲೆ ಸುಮತೀಂದ್ರ ನಾಡಿಗರು ರಚಿಸಿದ 'ಬೊಕ್ಕ ತಲೆಯ ನರ್ತಕಿ' 1966ರಲ್ಲಿ ಬೆಂಗಳೂರಿನಲ್ಲಿ ಪ್ರದರ್ಶಿತವಾಯಿತು. ಇದರೊಂದಿಗೆ ಅಸಂಗತ ನಾಟಕ ಕನ್ನಡಕ್ಕೆ ಬಂದಿತು.

ಡಾ॥ರಾಮು: ಜೀವನದ ಅಸಂಗತತೆ, ಅರ್ಥಶೂನ್ಯತೆಗಳನ್ನು ಪ್ರೇಕ್ಷಕರ ಅನುಭವಕ್ಕೆ ತಂದುಕೊಡುವುದು ಇದರ ಉದ್ದೇಶ. ಭಾಷೆಯು ವ್ಯಕ್ತಿ ವ್ಯಕ್ತಿಗಳ ನಡುವೆ ಮೇಲ್ಮೈ ಸ್ತರದಲ್ಲಿ ಮಾತ್ರ ಸಂಪರ್ಕವನ್ನು ಕಲ್ಪಿಸಬಲ್ಲದು. ಅದರಾಚೆ ಅದು ಬಾಂಧವ್ಯಗಳನ್ನು ರೂಪಿಸಲಾರದು,

ಡಾ॥ಶೀಲ : ಹೀಗಾಗಿ ಬದುಕಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಒಂದು ದ್ವೀಪವೇ ಎನ್ನುವ ಗ್ರಹಿಕೆಯೂ ಈ ಪಂಥದ ನಾಟಕಗಳ ಹಿಂದಿದೆ. ಆದುದರಿಂದ ಇಲ್ಲಿ ಭಾಷೆಯ ಬಳಕೆಯೂ ವಿಶಿಷ್ಟವೇ. ಸ್ವಲ್ಪ ಕಾಲ ಅಸಂಗತ ನಾಟಕ ಕನ್ನಡ ರಂಗಮಂದಿರದಲ್ಲಿ ಎದ್ದು ಕಾಣುತ್ತಿತ್ತು.

ಡಾ॥ರಾಮು: ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಎನ್.ರತ್ನ, ಚಂದ್ರಕಾಂತ ಕುಸನೂರ ಅಸಂಗತ ನಾಟಕಗಳನ್ನು ಬರೆದರು. ಆದರೆ ಇದು ಈ ನೆಲದ ಸಸಿಯಲ್ಲ, ಇಲ್ಲಿ ಬೇರು ಬಿಡಲಿಲ್ಲ. ಲಂಕೇಶರ 'ತೆರೆಗಳು' 'ಥಿಯೇಟರ್ ಆಫ್ ಕ್ರೂಯೆಲ್ಟಿ'ಗೆ ಉದಾಹರಣೆ.

ಡಾ॥ಶೀಲ : ಗಿರೀಶ ಕಾರ್ನಾಡರು ನವ್ಯ ಯುಗದ ವಿಶಿಷ್ಟ ಪ್ರತಿಭೆ. ಅವರ 'ತುಘಲಕ್' ರಂಗಭೂಮಿಯಲ್ಲಿ ಅದ್ಭುತ ಯಶಸ್ಸನ್ನು ಕಂಡಿತು. ನಾಟಕದಿಂದ ನಾಟಕಕ್ಕೆ ಬೆಳೆಯುತ್ತ ಹೋದ ಕಾರ್ನಾಡರು ಐತಿಹಾಸಿಕ ಮತ್ತು ಪೌರಾಣಿಕ ಸಾಮಗ್ರಿಗಳನ್ನು ಬದುಕಿನ ಶೋಧನೆಗಾಗಿ ಬಳಸಿಕೊಂಡರು.

ಡಾ॥ರಾಮು: 1970ರ ದಶಕವು ಕನ್ನಡ ನಾಟಕ ಮತ್ತು ರಂಗಭೂಮಿಗೆ ಉಜ್ವಲ ಅವಧಿ. ಶ್ರೀರಂಗರೂ ಬಿ.ವಿ.ಕಾರಂತರೂ ಬೆಂಗಳೂರಿನಲ್ಲಿ ನೆಲೆಸಿದ್ದು, ಪ್ರತಿಭಾವಂತ ನಿರ್ದೇಶಕರೂ ನಟನಟಿಯರೂ ರಂಗಭೂಮಿಗೆ ಬಂದದ್ದು ಎಲ್ಲ ರಂಗಭೂಮಿಯ ಶ್ರೀಮಂತಿಕೆಗೆ ಸಾಧನವಾದವು.

ಡಾ॥ಶೀಲ : ಇದೇ ಕಾಲದಲ್ಲಿ ಬೀದಿಯ ನಾಟಕವೂ ಚಟುವಟಿಕೆಯಿಂದ ಕೆಲಸ ಮಾಡಿತೆನ್ನುವುದು ಗಮನಾರ್ಹ. ಎ.ಎಸ್.ಮೂರ್ತಿ, ಡಾ.ವಿಜಯಾ ಮೊದಲಾದವರು ವಿಶೇಷ ಆಸಕ್ತಿ ವಹಿಸಿ ಬೀದಿಯ ನಾಟಕಗಳನ್ನು ಬೆಂಗಳೂರಿನ ಜನಜೀವನದ ಒಂದು ಭಾಗವನ್ನಾಗಿ ಮಾಡಿದರು.

ಡಾ॥ರಾಮು: ಸಾಹಿತ್ಯ ವಿಮರ್ಶೆಯು ನವ್ಯ ಯುಗದಲ್ಲಿ ಹೊಸ ಆಯಾಮಗಳನ್ನು ಪಡೆದು ಕೊಂಡಿತು. ಹಿಂದಿನ ವಿಮರ್ಶೆಯಿಂದ ಬಹು ಭಿನ್ನವಾದ ವಿಮರ್ಶೆ ಕಾಣಿಸಿಕೊಂಡಿತು. ವಿಶ್ಲೇಷಣೆ ಮತ್ತು ತೌಲನಿಕ ಅಭ್ಯಾಸ ವಿಮರ್ಶೆಯ ಎರಡು ಉಪಕರಣಗಳು ಎಂದು ಟಿ.ಎಸ್.ಎಲಿಯಟ್ ಹೇಳಿದ ಮಾತು ಮಾರ್ಗದರ್ಶಿಯಾಯಿತು.

ಡಾ॥ಶೀಲ : "ಸಾಹಿತ್ಯ ಸೃಷ್ಟಿಯ ಕೆಲಸ ಒಬ್ಬ ವ್ಯಕ್ತಿ ಏಕಾಂತದಲ್ಲಿ ತನ್ನ ಅಂತರಾತ್ಮವನ್ನು ಮುಖಾಮುಖಿ ಸಂಧಿಸಿ ನಿಂತು ಮಾಡುವ ಕೆಲಸ". ಇಂಥ ಗ್ರಹಿಕೆಗಳ ಮೇಲೆ ರೂಪನಿಷ್ಠ ವಿಮರ್ಶೆಯು ರೂಪತಾಳಿತು.

ಡಾ॥ರಾಮು: ಒಂದು ಸಾಹಿತ್ಯ ಕೃತಿಯ 'ಟೆಕ್ಸ್ಟ್' ಯಾವುದು, ಕೃತಿಯ 'ಅರ್ಥ' ಎಂದರೇನು ಇಂಥ ಪ್ರಶ್ನೆಗಳು ಮೊದಲ ಬಾರಿಗೆ ಕೇಳಿಬಂದವು.

ಡಾ॥ಶೀಲ : ಸಾಹಿತ್ಯ ಕೃತಿಯು ಹೇಳುವುದನ್ನೆಲ್ಲ ಭಾಷೆಯ ಮೂಲಕವೇ ಹೇಳಬೇಕು, ಕೃತಿಯಲ್ಲಿ 'ಸಂಭವಿಸು'ವದೆಲ್ಲ ಭಾಷೆಯ ಮೂಲಕವೇ 'ಸಂಭವಿಸ'ಬೇಕು ಎನ್ನುವ ಗ್ರಹಿಕೆಯಿಂದ ಸಾಹಿತ್ಯದಲ್ಲಿ ಭಾಷೆಯ ಬಳಕೆಯ ಹೊಣೆಗಾರಿಕೆಗೆ ಒತ್ತು ಬಂದಿತು. 'ಎಕ್ಸ್‌ಪ್ಲಿಕೇಷನ್' ಅನ್ವಯ ವಿಮರ್ಶೆ ಅದ್ಭುತವಾಗಿ ಬೆಳೆಯಿತು. ಹಿಂದಿನ ಕೃತಿಗಳ ಪುನರ್ಮೌಲೀಕರಣವೂ ಆಯಿತು.

ಡಾ॥ರಾಮು: ಗೋಪಾಲಕೃಷ್ಣ ಅಡಿಗರೇ ಸೂಕ್ಷ್ಮ ಸಂವೇದನೆಯ ಮೊದಲ ಪಂಕ್ತಿಯ ವಿಮರ್ಶಕರು. ಈ ಯುಗದಲ್ಲಿ ಬಹು ಸಮರ್ಥ ವಿಮರ್ಶಕರು ಕಾಣಿಸಿಕೊಂಡರು. ಕೆ.ನರಸಿಂಹಮೂರ್ತಿ, ಎಂ.ಜಿ. ಕೃಷ್ಣಮೂರ್ತಿ, ಯು.ಆರ್. ಅನಂತಮೂರ್ತಿ, ಕೀರ್ತಿನಾಥ ಕುರ್ತಕೋಟಿ, ಶಂಕರ ಮುಖಾಶಿ ಪುಣೇಕರ್, ಲಂಕೇಶ್, ಗಿರಡ್ಡಿ ಗೋವಿಂದ ರಾಜ, ಟಿ.ಪಿ. ಅಶೋಕ, ಜಿ.ಎಚ್. ನಾಯಕ ಮೊದಲಾದವರು ನವ್ಯ ವಿಮರ್ಶೆಯನ್ನು ಬೆಳೆಸಿದರು. ಜಿ.ಎಸ್. ಆಮೂರ, ಸಿ.ಎನ್. ರಾಮಚಂದ್ರನ್ ಮೊದಲಾದವರು ಕನ್ನಡ ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮಗಳನ್ನು ಜೋಡಿಸಿದ್ದಾರೆ.

ಡಾ॥ಶೀಲ : 1975ರ ಹೊತ್ತಿಗೆ ನವ್ಯ ಸಾಹಿತ್ಯದ ಹೊಳಪು ಮಾಸ ತೊಡಗಿತು. ನವ್ಯ ಪಂಥದಲ್ಲಿ ಆಸಕ್ತಿಯಿಂದ ತೊಡಗಿಕೊಂಡಿದ್ದ ಪೂರ್ಣಚಂದ್ರ ತೇಜಸ್ವಿ, ಸುಮತೀಂದ್ರ ನಾಡಿಗ ಮೊದಲಾದವರು ಆ ಪಂಥವನ್ನು ನಿರಾಕರಿಸಿದರು.

ಡಾ॥ರಾಮು: ನವ್ಯ ಪಂಥವನ್ನು ಬಹು ಉತ್ಸಾಹದಿಂದ ಸಮರ್ಥಿಸುತ್ತಿದ್ದ ಶಾಂತಿನಾಥ ದೇಸಾಯಿಯವರೆಗೆ ಒಂದೆಡೆಯಲ್ಲಿ 'ಈ ನವ್ಯ ಪ್ರಜ್ಞೆ ಎಷ್ಟು ಆಳಕ್ಕೆ ಹೋಗಬಹುದೋ ಅಷ್ಟಕ್ಕೆ ಸೀಮಿತವಾಗಿದೆ. ಆಳವಾಗಿ

ಹೋದಷ್ಟೂ 'ಮನುಷ್ಯತೆ'ಯಿಂದ ದೂರ ಹೋಗುವ ಸಂಭವವೂ ಹೆಚ್ಚು. ಗ್ವಾಸೇ ಎಂಬ ವಿಚಾರವಂತ ಹೇಳುವುದೆಂದರೆ ನವ್ಯ ಸಾಹಿತ್ಯದಲ್ಲಿ 'ಅಮಾನವೀಕರಣ'ದ ಕ್ರಿಯೆ (ಡಿಹ್ಯೂಮನೈ ಜೇಷನ್) ನಡೆಯುತ್ತದೆ ಎಂದು ಬರೆದಿದ್ದಾರೆ.

ಡಾ॥ಶೀಲ : ನವ್ಯ ಸಾಹಿತ್ಯವು ಕಳೆಗುಂದಿದುಕ್ಕೆ ಈ 'ಡಿಹ್ಯೂಮನೈ ಜೇಷನ್' ಒಂದು ಕಾರಣ. ಮತ್ತೊಂದು ಮಿತಿ ಇಲ್ಲದೆ ಆತ್ಮರತಿ. ಸಾಹಿತ್ಯ 'ಆರ್ಗನೈಸ್ಡ್ ಎಕ್ಸ್‌ಪೀರಿಯನ್ಸ್' ಮತ್ತು 'ಸಿಗ್ನಿಫಿಕೆಂಟ್ ಎಕ್ಸ್‌ಪೀರಿಯನ್ಸ್' ಬರಬರುತ್ತ ನವ್ಯ ಸಾಹಿತಿಗಳು ಇದನ್ನು ಮರೆತರು. ಮನಸ್ಸಿನ ಖಯಾಲಿಗಳೆಲ್ಲ ಸಾಹಿತ್ಯದ ವಸ್ತುಗಳಾದವು' 'ಪೋಸಿಂಗ್' ಪ್ರಾರಂಭವಾಯಿತು. ಮುಖ್ಯವಾಗಿ ಈ ಸಾಹಿತ್ಯಕ್ಕೆ ಸಾಮಾಜಿಕ ಕಾಳಜಿ ಇಲ್ಲ ಎನ್ನುವಂತಾಯಿತು. ನವ್ಯ ಸಾಹಿತ್ಯದಲ್ಲಿ ಬಹುಬೇಗ ಏಕತಾನತೆ ಮೂಡಿತು.

ಡಾ॥ರಾಮು: 1975ರಲ್ಲಿ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಪ್ರಕಟವಾಯಿತು. 1977ರಲ್ಲಿ ವಿಜಯ ಪಾಟೀಲ್, ಮಂಗ್ಳೂರ್ ವಿಜಯ ಅವರು ಸಂಪಾದಿಸಿದ 'ಕೆಂಪು ಕಾವ್ಯ' ಪ್ರಕಟವಾಯಿತು. ಬಂಡಾಯ ದಲಿತ ಯುಗದ ಉದಯವಾಯಿತು.

ಡಾ॥ಶೀಲ : ಈ ಸಾಹಿತ್ಯಕ್ಕೂ ಪ್ರಗತಿಶೀಲ ಸಾಹಿತ್ಯಕ್ಕೂ ಸಾಮ್ಯಗಳಿವೆ. ಒಂದು ಮುಖ್ಯ ವ್ಯತ್ಯಾಸ ಪ್ರಗತಿಶೀಲ ಸಾಹಿತ್ಯದ ಕಾಲದಲ್ಲಿ ದಲಿತರಲ್ಲದವರು ದಲಿತರ ಬಗ್ಗೆ ಸಹಾನುಭೂತಿಯಿಂದ ಬರೆದರು. ಆದರೆ ಈ ಯುಗದಲ್ಲಿ ದಲಿತರೇ ಸಾಹಿತ್ಯ ರಚನೆ ಮಾಡಿದರೂ. ಶತಮಾನಗಳ ಕಾಲ ಕತ್ತಲೆಯಲ್ಲಿ ಬದುಕಿ ಅಪಮಾನವನ್ನು ಉಂಡವರು ಈಗ ತಮ್ಮ ಅನಿಸಿಕೆಗಳಿಗೆ ಧೈರ್ಯವಾಗಿ ಮಾತಿನ ರೂಪ ಕೊಟ್ಟರು.

ಡಾ॥ರಾಮು: ಎರಡು ಪಂಥಗಳೂ ಸಾಹಿತ್ಯವನ್ನು ಸಾಮಾಜಿಕ ಕ್ರಾಂತಿಯ ಸಾಧನವನ್ನಾಗಿ ಕಂಡವು. ಎರಡು ಪಂಥಗಳೂ ಸಮಾಜದ ಅನ್ಯಾಯ ಶೋಷಣೆ, ಆಷಾಡಭೂತಿತನಗಳನ್ನು ವಿರೋಧಿಸಿದವು. ಎರಡೂ ಮಾರ್ಕ್ಸಿಸ್ಟ್ ಚಿಂತನೆಯ ಪ್ರಭಾವಕ್ಕೆ ಒಳಗಾದವು. ಎರಡೂ, ಸಾಹಿತಿಯಿಂದ ಸಾಮಾಜಿಕ ಬದ್ಧತೆಯನ್ನು ಸೈದ್ಧಾಂತಿಕ ಬದ್ಧತೆಯನ್ನೂ ಬಯಸಿದವು.

ಡಾ॥ಶೀಲ : ದಲಿತ ಸಾಹಿತ್ಯದಲ್ಲಿ ಪ್ರಾರಂಭದಲ್ಲಿ ಆಕ್ರೋಶ ಎದ್ದು ಕಾಣುತ್ತಿತ್ತು. ಆದರೆ ಬಹುಬೇಗ ಆಕ್ರೋಶವು ನಿಯಂತ್ರಣಕ್ಕೆ ಬಂದಿತು. ವಿಶ್ಲೇಷಣೆ ಮತ್ತು ಚಿಂತನೆಗಳತ್ತ ಗಮನ ಹರಿಯಿತು.

ಡಾ॥ರಾಮು: ನವ್ಯ ಪಂಥದ ಹಲವರು ಪ್ರಮುಖ ಸಾಹಿತಿಗಳು ಬಂಡಾಯ ಪಂಥಕ್ಕೆ ಬಂದರು. ಲಂಕೇಶ್, ಚಂದ್ರಶೇಖರ ಪಾಟೀಲ್ ಪೂರ್ಣಚಂದ್ರ ತೇಜಸ್ವಿ ಎಲ್ಲ ಬಂಡಾಯ ಬರಹಗಾರರಾದರು. ನವ್ಯದಲ್ಲಿ ಸಾಹಿತ್ಯ ಕೃತಿಯ ರೂಪ ಮತ್ತು ಶಿಲ್ಪಗಳಿಗೆ ಗಮನಕೊಡುವ ಶಿಸ್ತನ್ನು ಮೈಗೂಡಿಸಿಕೊಂಡ ಇವರ ಆಗಮನದಿಂದ ಬಂಡಾಯ ಬರಹವು ಸಾಹಿತ್ಯವಾಗಿಯೂ ಬಹು ಬೇಗ ಮೌಲಿಕವಾಯಿತು.

ಡಾ॥ಶೀಲ : ಸಿದ್ಧಲಿಂಗಯ್ಯ, ಇಂದೂಧರ ಹೊನ್ನಾಪುರ, ಅರವಿಂದ ಮಾಲಗತ್ತಿ, ಚನ್ನಣ್ಣ ವಾಲಿಕಾರ, ಆರ್ಕೆ ಮಣಿಪಾಲ, ಸರಜೂ ಕಾಟ್ಕರ್ ಮುಂತಾದವರು ದಲಿತ ಕಾವ್ಯಕ್ಕೆ ಕಸುವನ್ನೂ ವೈವಿಧ್ಯವನ್ನೂ ತಂದುಕೊಟ್ಟರು.

ಡಾ॥ರಾಮು: ದಲಿತ ಸಾಹಿತ್ಯದಲ್ಲಿ ಸಣ್ಣ ಕಥೆ, ಕಾದಂಬರಿ ಕ್ಷೇತ್ರದಲ್ಲಿ ಕೂಡಲೇ ಕಣ್ಣು ಸೆಳೆದವರು ದೇವನೂರು ಮಹಾದೇವ. ಅವರ 'ಒಡಲಾಳ' ಮತ್ತು 'ಕುಸುಮಬಾಲೆ' ಈ ಪಂಥದ ಸಾಹಿತ್ಯದ ಶಿಖರಗಳೆನ್ನಬಹುದು.

ಡಾ॥ಶೀಲ : ಈ ಕಾಲದ ಒಂದು ಪ್ರಮುಖ ಬೆಳವಣಿಗೆ ಎಂದರೆ ಮುಸ್ಲಿಂ ಬರಹಗಾರರು ಗಮನಾರ್ಹ ಸಂಖ್ಯೆಯಲ್ಲಿ ಬರೆಯಲು ಪ್ರಾರಂಭಿಸಿದ್ದು ಮತ್ತು ಸಮಾಜದ ಇತರ ಸಮುದಾಯಗಳಂತೆ ತಮ್ಮ

ಸಮುದಾಯವನ್ನು ವಿಮರ್ಶೆಯ ಕಣ್ಣಿನಿಂದ ನೋಡಿದ್ದು. ಈ ಬೆಳವಣಿಗೆಯಿಂದಾಗಿ ಕನ್ನಡ ಸಾಹಿತ್ಯದಲ್ಲಿ ಹೊಸದೊಂದು ಸಂವೇದನೆ ಸಾಕಷ್ಟು ಗಮನ ಸೆಳೆಯುವಂತೆ ಅಭಿವ್ಯಕ್ತಿ ಪಡೆಯಿತು.

ಡಾ॥ರಾಮು: ದಲಿತ ಸಾಹಿತ್ಯ ವಿಮರ್ಶೆಯು ಕಾಣಿಸಿಕೊಳ್ಳುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಯಿತು. ಪ್ರಾರಂಭದಲ್ಲಿ ಆಕ್ರೋಶ, ಹೇಳಿಕೆಗಳು ಕಾಣುತ್ತಿದ್ದವು. ಆದರೆ ಬಹು ಬೇಗ, ಬಂಡಾಯ ದಲಿತ ವಿಮರ್ಶಕರು ಸಾಮಾಜಿಕ ಕ್ರಾಂತಿಯನ್ನು ಆಯುಧವನ್ನಾಗಿ ಕಂಡರೂ ಇದು ಸಾಹಿತ್ಯವೂ ಆಗಿರಬೇಕೆಂಬುದನ್ನು ಗುರುತಿಸಿ, ಸಾಹಿತ್ಯದ ಅಧ್ಯಯನದ ಮೂಲಭೂತ ಪ್ರಶ್ನೆಗಳಿಗೆ ಉತ್ತರ ಕಾಣುವ ಪ್ರಯತ್ನವು ಪ್ರಾರಂಭವಾಯಿತು,

ಡಾ॥ಶೀಲ : ಅನ್ವಯಿಕ ವಿಮರ್ಶೆಯೂ ಪ್ರಾರಂಭವಾಯಿತು. ಈ ವಿಮರ್ಶೆ ಬಹುಮಟ್ಟಿಗೆ ಸಾಂಸ್ಕೃತಿಕ ಅಧ್ಯಯನದ ಮಾರ್ಗಕ್ಕೆ ಸೇರಿದ್ದು. ಮಾರ್ಕ್ಸ್ ಪಂಥದ ಪ್ರಭಾವಕ್ಕೆ ಒಳಗಾದದ್ದು. ಭಾರತದ ಸಂಸ್ಕೃತಿ ಏಕ ಮುಖವಾದುದು. ಇದು ಬಹು ಮುಖೀ ಸಂಸ್ಕೃತಿ, ಬಹು ಕಾಲದಿಂದ ಇದರ ಒಂದು ಪದರಕ್ಕೆ ಅತಿ ಪ್ರಾಧಾನ್ಯ ಸಂದಿದೆ, ಇತರ ಮುಖಗಳ ಅಸ್ತಿತ್ವವನ್ನು ಕೊಡುಗೆಯನ್ನು ಗುರುತಿಸಬೇಕು, ಗೌರವಿಸಬೇಕು ಎನ್ನುವುದು ಇದರ ನಿಲುವು.

ಡಾ॥ರಾಮು: ಆಧುನಿಕ ಕನ್ನಡ ಸಾಹಿತ್ಯದ ಸಮೀಕ್ಷೆ ಮಾಡುವಾಗ ಗಮನಿಸಬೇಕಾದ ಕೆಲವು ಅಂಶಗಳಿವೆ. ಮೊದಲನೆಯದು, ಈ ಸಮೀಕ್ಷೆಯಲ್ಲಿ, ಸಾಮಾನ್ಯವಾಗಿ ಸ್ವೀಕೃತವಾಗಿರುವ ನವೋದಯ, ಪ್ರಗತಿಶೀಲ, ನವ್ಯ ಬಂಡಾಯ ದಲಿತ ಎನ್ನುವ ಘಟ್ಟಗಳ ಚೌಕಟ್ಟನ್ನು ಸ್ವೀಕರಿಸಿದೆ. ಈ ಹೆಸರುಗಳೂ ಆಯಾ ಘಟ್ಟದ ಮುಖ್ಯ ಸಾಹಿತ್ಯಕ ಮನೋಧರ್ಮವಷ್ಟನ್ನೆ ಸೂಚಿಸುತ್ತವೆ. ಯಾವ ಘಟ್ಟದಲ್ಲಿಯೂ ಒಂದು ಮನೋಧರ್ಮದ ಅಥವಾ ಪಂಥದ ಏಕಸ್ವಾಮ್ಯವಿರಲಿಲ್ಲ.

ಡಾ॥ಶೀಲ : ನವೋದಯ ಬರಹಗಾರರು ಬಹು ಕಾಲ 'ನವೋದಯ' ಎಂಬ ಶಬ್ದವನ್ನು ಬಳಸುತ್ತಿರಲಿಲ್ಲ, ತಾವು ಒಂದು ಪಂಥ ಎಂದು ಗುರುತಿಸಿಕೊಳ್ಳಲಿಲ್ಲ, ಒಂದು ಪ್ರಣಾಳಿಕೆಗೆ ಬದ್ಧರಾಗಿ ಬರೆಯಲಿಲ್ಲ. ತಾವು ಒಂದು ಪಂಥ ಎಂದು ಮೊದಲು ಗುರುತಿಸಿಕೊಂಡವರು ಪ್ರಗತಿಶೀಲರು.

ಡಾ॥ರಾಮು: ನವೋದಯ ಘಟ್ಟದಲ್ಲಿ ಬರೆದ ಕುವೆಂಪು, ಶ್ರೀರಂಗ, ಕಾರಂತ, ಬೀಚಿ ಪ್ರಗತಿಶೀಲ ಮನೋಧರ್ಮವನ್ನು ಬಂಡಾಯ ಮನೋಧರ್ಮವನ್ನು ಮೆರೆಯುತ್ತಾರೆ.

ಡಾ॥ಶೀಲ : ಪ್ರಗತಿಶೀಲ ಪಂಥದ ಪ್ರಧಾನ ಬರಹಗಾರರಾದ ಅ.ನ.ಕೃ, ತ.ರಾ.ಸು, ನಿರಂಜನರು ಬರೆದ ಹಲವು ಕಾದಂಬರಿಗಳ ಮತ್ತು ಕಥೆಗಳ ಮನೋಧರ್ಮ ನವ್ಯವೇ. ಕಾರಂತರ 'ಅಳಿದ ಮೇಲೆ' ನವ್ಯ ಕಾದಂಬರಿಯಾದೀತು. .

ಡಾ॥ರಾಮು: ನವೋದಯದ ಬಹು ಜನಪ್ರಿಯ ಕವಿ ಕೆ.ಎಸ್.ನರಸಿಂಹಸ್ವಾಮಿ ಸೊಗಸಾದ ನವ್ಯ ಕವನಗಳನ್ನು ರಚಿಸಿ ಅನಂತರ ನವೋದಯ ಮಾರ್ಗಕ್ಕೆ ಹಿಂದಿರುಗಿದರು.

ಡಾ॥ಶೀಲ : ಪ್ರಗತಿಶೀಲ ಪಂಥದಿಂದ ಪ್ರಾರಂಭವಾಗಿ ಪ್ರತಿ ಪಂಥದ ಮಿತಿಗಳನ್ನು ಗುರುತಿಸಿ ಅದನ್ನು ತಿರಸ್ಕರಿಸಿ ಅಥವಾ ಮೀರಿ ಬರೆದರು. ಐತಿಹಾಸಿಕ ಕಾದಂಬರಿಗಳನ್ನು ಬರೆದ ಅ.ನ.ಕೃ. ಮತ್ತು ಬಸವರಾಜ ಕಟ್ಟಿಮನಿ ಉದಾಹರಣೆಗಳು.

ಡಾ॥ರಾಮು: ಎರಡನೆಯದಾಗಿ, ಪ್ರತಿಯೊಂದು ಘಟ್ಟದಲ್ಲಿಯೂ ಸಾಹಿತ್ಯ ರಚನೆಯನ್ನು ಪ್ರಾರಂಭಿಸಿದ ಹಲವು ಹಿರಿಯ ಸಾಹಿತಿಗಳು ಯಾವ ಒಂದು ಪಂಥದೊಂದಿಗೂ ತಮ್ಮನ್ನು ಗುರುತಿಸಿಕೊಳ್ಳದೆ ಬರೆಯುತ್ತ ಹೋದುದನ್ನು ಕಾಣುತ್ತೇವೆ.

ಡಾ॥ಶೀಲ : ಜಿ.ಎಸ್.ಶಿವರುದ್ರಪ್ಪ, ಎಸ್.ಆರ್.ಎಕ್ಕುಂಡಿ, ಎಸ್.ಎಲ್.ಭೈರಪ್ಪ, ಡಿ.ಆರ್. ನಾಗರಾಜ್, ಇಂಥ ಕೆಲವರು ಸಾಹಿತಿಗಳು.

ಡಾ॥ರಾಮು: 20ನೆಯ ಶತಮಾನದ ಕಡೆಯ ಮೂರು ದಶಕಗಳಲ್ಲಿ ಭೈರಪ್ಪನವರು ವಿಶಿಷ್ಟ ಕಾದಂಬರಿಕಾರ ರಾಗಿದ್ದರು ಇವರು ಕಾದಂಬರಿ ಸಾಹಿತ್ಯಕ್ಕೆ ತಂದ ಅನುಭವಗಳು ಸಮೃದ್ಧಿ, ಸ್ಪಷ್ಟವಾದ ಗಟ್ಟಿ ಪಾತ್ರಗಳ ಸೃಷ್ಟಿ ಕಾದಂಬರಿಯನ್ನು ವೈಚಾರಿಕತೆಯನ್ನು ಹಬ್ಬಿಸುವ ಶಕ್ತಿ ಇವು ಅಪೂರ್ವವಾದವು.

ಡಾ॥ಶೀಲ : ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಲ್ಲಿ ಇಂಥ ಸಾಹಿತಿಗಳ ಸಂಖ್ಯೆ ಹೆಚ್ಚಿದೆ. ಈ ಅವಧಿಯಲ್ಲಿ ಯಾವ ಒಂದು ಮನೋಧರ್ಮವಾಗಲಿ ಪಂಥವಾಗಲಿ ಪ್ರಮುಖವಾಯಿತು ಎನ್ನುವಂತಿಲ್ಲ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಎಚ್.ಎಸ್.ವೆಂಕಟೇಶಮೂರ್ತಿ, ಎಂ.ಎನ್. ವ್ಯಾಸರಾವ್, ರಾಘವೇಂದ್ರ ಪಾಟೀಲ, ಎಚ್.ಎಸ್.ಶಿವಪ್ರಕಾಶ್, ವಿವೇಕಶಾನಭಾಗ, ದೊಡ್ಡರಂಗೇಗೌಡ, ವೈದೇಹಿ, ಚಿ.ಸರ್ವಮಂಗಳಾ ಜಯಂತ ಕಾಯ್ಕಿಣಿ, ಡುಂಡಿರಾಜ್ ಮೊದಲಾದವರ ಯುಗವನ್ನು ಯಾವ ಪಂಥದೊಂದಿಗೆ ಜೋಡಿಸುವುದು?

ಡಾ॥ರಾಮು: ಮೂರನೆಯ ಅಂಶ, ಯಾವ ಪಂಥದ ಮನೋಧರ್ಮವು ಸಂಪೂರ್ಣವಾಗಿ ಮಾಯವಾಗಿಲ್ಲ ಎನ್ನುವುದು. ಪ್ರಗತಿಶೀಲರು 'ರಾಜಸೇವಾಸಕ್ತರ, ರಾಜಸೇವಾ ಪ್ರಸಕ್ತರ, ಜರತಾರಿ ರುಮಾಲುಗಳ' ಸಾಹಿತ್ಯ ಬೇಡ ಎಂದು ಸಾರಿದರೂ, ಪ್ರಗತಿಶೀಲ ಸಾಹಿತ್ಯವು ಕ್ರಾಂತಿ ಮನೋಧರ್ಮದ ಸ್ಪರ್ಶ ಪಡೆದ ನವೋದಯ ಸಾಹಿತ್ಯ ಎಂಬುದು ಕಾಲಕಳೆದಂತೆ ಸ್ಪಷ್ಟವಾಗಿದೆ.

ಡಾ॥ಶೀಲ : ನವ್ಯ ಸಾಹಿತ್ಯವು ಪ್ರಾರಂಭದಲ್ಲಿ ನವೋದಯ ಸಾಹಿತ್ಯವನ್ನು ಪ್ರಗತಿಶೀಲ ಸಾಹಿತ್ಯವನ್ನು ಕಟುವಾಗಿ ಟೀಕಿಸಿತು. ಆದರೆ ನವೋದಯ ಮಾನವತಾ ಮನೋಧರ್ಮ (ಹ್ಯೂಮನಿಸಂ) ಅನ್ನು ಕಡೆಗಣಿಸಿ ವ್ಯಕ್ತಿಯ ಅನಾಥ ಪ್ರಜ್ಞೆ ಮತ್ತು ಒಳಜಗತ್ತಿಗೇ ಒತ್ತು ಕೊಟ್ಟ ನವ್ಯ ಸಾಹಿತ್ಯವು ಸಾಮಾಜಿಕ ಕಾಳಜಿಯನ್ನು ಬೆಳೆಸಿಕೊಳ್ಳಬೇಕಾಯಿತು.

ಡಾ॥ರಾಮು: 'ಸಂಸ್ಕಾರ' ದ ನಂತರ ಭಾರತೀಪುರ ಬರಬೇಕಾಯಿತು, 'ಬದುಕು' ನಂತರ 'ಮುಸ್ಸಂಜೆಯ ಕಥಾಪ್ರಸಂಗ' ಬರಬೇಕಾಯಿತು. ನವ್ಯವನ್ನು ಟೀಕಿಸಿದ ಬಂಡಾಯ ದಲಿತ ಸಾಹಿತಿಗಳೂ ಮನಸ್ಸಿನ ವ್ಯಾಪಾರಕ್ಕೆ ಗಮನ ಕೊಡದಿರಲು ಸಾಧ್ಯವಾಗಲಿಲ್ಲ. ಪಾತ್ರದ ಮನಸ್ಸಿನೊಳಗಿನಿಂದ ಜಗತ್ತನ್ನು ಕಾಣುವ ತಂತ್ರವನ್ನು ಸಾಕಷ್ಟು ಬಳಸಿಕೊಂಡಿದ್ದಾರೆ.

ಡಾ॥ಶೀಲ : ಇಂದು ಸಾಹಿತ್ಯವನ್ನು ಗಂಭೀರವಾಗಿ ಸ್ವೀಕರಿಸಿ ಹೊಣೆಗಾರಿಕೆಯಿಂದ ಬರೆಯುತ್ತಿರುವ ಯಾರ ಮನಸ್ಸಿನಲ್ಲಾದರು ಪಂಪನಿಂದ ಈವರೆಗಿನ, ಮುಖ್ಯವಾಗಿ ವಚನ ಸಾಹಿತ್ಯ ನವೋದಯ ಪ್ರಗತಿಶೀಲ ನವ್ಯ ಬಂಡಾಯ ಮತ್ತು ದಲಿತ ಮನೋಧರ್ಮಗಳ ಪ್ರಜ್ಞೆ ಇದ್ದೇ ಇರುತ್ತದೆ.

ಡಾ॥ರಾಮು: 19ನೆಯ ಶತಮಾನದ ಅಂತ್ಯ ಮತ್ತು 20ನೆಯ ಶತಮಾನದ ಪ್ರಾರಂಭದ ಅವಧಿಗಳಲ್ಲಿ ಮಹಿಳಾ ಸಾಹಿತ್ಯವನ್ನು ಕುರಿತು ಬರೆಯುವುದು ಕಷ್ಟವಾಗಿತ್ತು. ನಾಡಿನಲ್ಲಿಯೆ ಅಕ್ಷರಸ್ಥರ ಸಂಖ್ಯೆ ಬಹು ಕಡಮೆ ಇದ್ದಿದ್ದರಿಂದ ಮಹಿಳೆಯರ ಸ್ಥಿತಿಯನ್ನು ಊಹಿಸಿಕೊಳ್ಳಬಹುದು. ಅಕ್ಷರಸ್ಥ ಮಹಿಳೆಯರ ಸಂಖ್ಯೆ ಶೇಕಡಾ ಮೂರು ಇದ್ದಂತೆ ತೋರುತ್ತದೆ.

ಡಾ॥ಶೀಲ : ನಂಜನಗೂಡು ತಿರುಮಲಾಂಬ, ಆರ್.ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಶ್ಯಾಮಲದೇವಿ, ತಿರುಮಲೆ ರಾಜಮ್ಮ, ಸರಸ್ವತಿ ಬಾಯಿ ರಾಜವಾಡೆ ('ಗಿರಿಬಾಲೆ') ಇವರು ಪ್ರಾರಂಭದ ಲೇಖಕಿಯರೆಂದು ಕಾಣುತ್ತದೆ.

ಡಾ||ರಾಮು: ಬಹು ಬೇಗ ಪ್ರಸಿದ್ಧಿಯನ್ನು ಕಂಡವರು 'ತ್ರಿವೇಣಿ' ಕಾವ್ಯನಾಮದ ಅನಸೂಯ (1928–1963). ಮುಖ್ಯವಾಗಿ ಗಂಡು–ಹೆಣ್ಣಿನ ಸರ್ಕಾರಿ ಹೊರವಲಯ ಮುದ್ರಣಾಲಯ ಜೀವನ, ಕುಟುಂಬ ಜೀವನ ಅವರ ವಸ್ತು ಮನಶ್ಶಾಸ್ತ್ರದ ತಿಳಿವಳಿಕೆಯನ್ನು ಕಾದಂಬರಿಗಳಲ್ಲಿ ಬಳಸಿಕೊಳ್ಳಲು ಪ್ರಯತ್ನಿಸಿದರು.

ಡಾ||ಶೀಲ : 20ನೆಯ ಶತಮಾನದ ಮಧ್ಯ ಭಾಗದಲ್ಲಿ ಅನೇಕ ಮಹಿಳೆಯರು ಸಾಹಿತ್ಯ ರಚನೆ ಪ್ರಾರಂಭಿಸಿದರು. ಮುಖ್ಯವಾಗಿ ಸಣ್ಣ ಕಥೆ, ಕಾದಂಬರಿ ಮಾಧ್ಯಮಗಳನ್ನು ಆರಿಸಿಕೊಂಡರು. ಎಂ.ಕೆ.ಇಂದಿರಾ, ಅನುಪಮಾ ನಿರಂಜನ, ಹೆಚ್.ಎಸ್. ಪಾರ್ವತಿ ಪ್ರಾರಂಭದ ದಶಕಗಳಲ್ಲಿ ಮಹಿಳೆಯರು ಕಥೆ ಕಾದಂಬರಿಗಳನ್ನು ಕೌಟುಂಬಿಕ ಜೀವನದ ಸುತ್ತಲೇ ಹೆಣೆದರು, ನವೋದಯ ಸಾಹಿತ್ಯದ ಮೌಲ್ಯಗಳೇ ಇವರ ಮೌಲ್ಯಗಳಾದವು.

ಡಾ||ರಾಮು: ಆದರೆ ಅನಂತರದ ದಶಕಗಳಲ್ಲಿ ಬೆರಗುಗೊಳಿಸುವ ಪರಿವರ್ತನೆಯಾಯಿತು. ಪ್ರಶ್ನಿಸುವ ಮನೋಧರ್ಮ, ಹೊಸ ಮೌಲ್ಯಗಳ ಹುಡುಕಾಟ ಇವು ಕಾಣುತ್ತವೆ. ಹಿಂದೆ ನವೋದಯ ಮನೋಧರ್ಮದಲ್ಲಿ ಬರೆಯುತ್ತಿದ್ದ ಲೇಖಕಿಯರೂ ಹೊಸ ಮನೋಧರ್ಮವನ್ನು ಬೆಳೆಸಿಕೊಂಡರು.

ಡಾ||ಶೀಲ : ಎಚ್.ವಿ. ಸಾವಿತ್ರಮ್ಮ, ಡಾ. ನಿರುಪಮಾ, ಅನುಪಮಾ ನಿರಂಜನ, ಎಚ್.ಎಸ್. ಪಾರ್ವತಿ, ಮೊದಲಾದವರ ಕೃತಿಗಳಲ್ಲಿ ಈ ಹೊಸ ಮನೋಧರ್ಮ ಪ್ರಕಟವಾಗಿದೆ.

ಡಾ||ರಾಮು: ವೀಣಾ ಶಾಂತೇಶ್ವರ, ಸಾರಾ ಅಬೂಬಕ್ಕರ್, ನೇಮಿಚಂದ್ರ ವೈದೇಹಿ, ಮೊದಲಾದವರು ಹೊಸ ಮನೋಧರ್ಮದ ಲೇಖಕಿಯರು. ಹೊಸ ಮನೋಧರ್ಮ ಹೊಸ ಉದ್ದೇಶಗಳಿಗೆ ಅನುಗುಣವಾಗಿ ತಂತ್ರದಲ್ಲಿಯ ಬದಲಾವಣೆಗಳಾದವು. ಲೇಖಕಿಯರು ಬಹು ಮಟ್ಟಿಗೆ ಕಥೆ ಕಾದಂಬರಿಗಳಿಗೇ ತಮ್ಮ ಬರಹವನ್ನು ಸೀಮಿತ ಗೊಳಿಸಿಕೊಂಡಿದ್ದರು.

ಡಾ||ಶೀಲ : ಹೊಸ ಯುಗದಲ್ಲಿ ಕಾವ್ಯ, ಪ್ರಬಂಧ, ಸಂಶೋಧನೆ, ಸಾಹಿತ್ಯ ವಿಮರ್ಶೆಗಳಲ್ಲಿಯೂ ಅವರ ಸಾಧನೆ ಗಮನಾರ್ಹವಾಗಿದೆ. ಸ್ತ್ರೀವಾದ ವಿಮರ್ಶೆಯು ಬೆಳೆಯುತ್ತಿದೆ.

ಡಾ||ರಾಮು: ಸ.ಉಷಾ, ಪ್ರತಿಭಾ ನಂದ ಕುಮಾರ್, ಎಂ.ಆರ್.ಕಮಲ, ಎಚ್.ಎಲ್. ಪುಷ್ಪ ಮೊದಲಾದವರು ನವ್ಯವಿರುವ ಕಾವ್ಯ ಬರೆದಿದ್ದಾರೆ.

ಡಾ||ಶೀಲ : ಡಾ. ವಿಜಯಾ ಅವರು ಬೀದಿ ನಾಟಕ ಮಾಧ್ಯಮವನ್ನು ಶಕ್ತಿ ಶಾಲಿಯಾಗಿ ಬಳಸಿಕೊಂಡರು.

ಡಾ||ರಾಮು: ಟಿ.ಸುನಂದಮ್ಮ ಹಾಸ್ಯ ಸಾಹಿತ್ಯವನ್ನು ನೀಡಿದ್ದಾರೆ.

ಡಾ||ಶೀಲ : ಮೌಲಿಕವಾದ ಸಾಹಿತ್ಯವನ್ನು ಮಹಿಳೆಯರು ರಚಿಸಿದ್ದಾರೆ, ರಚಿಸುತ್ತಿದ್ದಾರೆ ಬಂಡಾಯ ದಲಿತ ಮನೋಧರ್ಮವು ಮಹಿಳಾ ಸಾಹಿತ್ಯದಲ್ಲಿಯೂ ಪ್ರಕಟವಾಗುತ್ತಿದೆ, ಗೀತಾ ನಾಗಭೂಷಣ ಅವರ 'ಬದುಕು' ಕಾದಂಬರಿಯು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

ಡಾ||ರಾಮು: ನವೋದಯ ಸಾಹಿತ್ಯದ ಸಾಧನೆಗಳಲ್ಲಿ ಒಂದು ಮಕ್ಕಳ ಸಾಹಿತ್ಯದ ಸೃಷ್ಟಿ. ಪಂಜೆ ಮಂಗೇಶರಾಯರು, ಕುವೆಂಪು, ಜೆ.ಪಿ.ರಾಜರತ್ನಂ, ಹೊಯ್ಸಳ, ಬಿ.ಶ್ರೀ.ಪಾಂಡುರಂಗರಾವ್ ಮೊದಲಾದವರು ಪ್ರಾರಂಭದ ಘಟ್ಟದಲ್ಲಿ ಮಕ್ಕಳಿಗಾಗಿ ಸೊಗಸಾದ ಸಾಹಿತ್ಯವನ್ನು ರಚಿಸಿದರು.

ಡಾ||ಶೀಲ : ಈಚಿಗಿನ ವರ್ಷಗಳಲ್ಲಿ ಸಿದ್ದಯ್ಯ ಪುರಾಣಿಕ ('ಕಾವ್ಯಾನಂದ'), ಟಿ.ಎಸ್.ನಾಗರಾಜ ಶೆಟ್ಟಿ, ಎಚ್.ಎಸ್. ವೆಂಕಟೇಶ್ ಮೂರ್ತಿ, ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟ, ಸುಮತೀಂದ್ರ ನಾಡಿಗ ಮೊದಲಾದವರು ಮತ್ತೆ ಪ್ರಕಾರಕ್ಕೆ ಜೀವಂತಿಕೆಯನ್ನು ತಂದುಕೊಟ್ಟಿದ್ದಾರೆ.

# 17. ಕನ್ನಡದಲ್ಲಿ ವಿಚಾರ ಸಾಹಿತ್ಯ

ಡಾ॥ರಾಮು: ಜ್ಞಾನ, ವಿಜ್ಞಾನ, ದರ್ಶನ, ಮತಶಾಸ್ತ್ರ, ವಿದ್ಯೆ, ಕಲೆ, ವಿಮರ್ಶೆ, ರಾಜಕಾರಣ, ತಂತ್ರವಿಧಾನ, ಇತಿಹಾಸ, ಸಂಸ್ಕೃತಿ – ಹೀಗೆ ವಿಚಾರಸಾಹಿತ್ಯ ಬೆಳೆದು ವಿವಿಧ ಪ್ರಕಾರದ್ದಾಗಿದೆ.

ವಿಚಾರಸಾಹಿತ್ಯದಲ್ಲಿ ವೈಚಾರಿಕತೆಯ ಬಗೆಗಳು ಹೀಗಿವೆ :

ಡಾ॥ಶೀಲ : 1 ವಿಚಾರದ ಸ್ವರೂಪ, ಉಗಮ, ಪ್ರಕ್ರಿಯೆ, ಅದರ ಯಥಾರ್ಥತೆಯ ನಿಯಮಗಳನ್ನು ಕುರಿತ ಸಾಹಿತ್ಯ.

ಡಾ॥ರಾಮು: 2 ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಜೀವನದ ಸಾರ್ವಜನಿಕ ವೈಯಕ್ತಿಕ ಅಂಗದ ವಿವಿಧ ವಿಚಾರ ಸರಣಿಗಳ ಹಿನ್ನೆಲೆ, ತಳಹದಿಯಾದ ಕೆಲವೊಂದು ಪತ್ರ ವ್ಯವಹಾರಗಳೂ ನಿಶ್ಚಿತ ಸಿದ್ಧಾಂತಗಳೂ ವಾದಗಳೂ ಮತ್ತು ಅವುಗಳ ಚರ್ಚೆ–ಮೊದಲಾದುವನ್ನು ಕುರಿತ ಸಾಹಿತ್ಯ.

ಡಾ॥ಶೀಲ : 3 ಪಾರಂಪರ್ಯವಾಗಿ ನಂಬಿಬಂದಿದ್ದು ಅಸಂದಿಗ್ಧವೆಂದು ಸ್ವತಃಸಿದ್ಧವೆಂದು ಗೃಹೀತ ಕೃತ್ಯಗಳೆಂದು ಇವು ಕಟ್ಟಿಕೊಂಡ ಅಸ್ಪಷ್ಟಧಾರಣೆ–ಧೋರಣೆಗಳ ಪುಂಜ ಮತ್ತು ಅದರ ಇತ್ಯರ್ಥಕ್ಕೆ ಹೊರಟ ಸಾಹಿತ್ಯ.

ಡಾ॥ರಾಮು: 4 ಮುಂದೆ ವಿಷಯದ ಸದ್ಯಃ ಪ್ರಯೋಜನವನ್ನು ಮೀರಿದ ಒಂದ ವೈಚಾರಿಕ ಮಗ್ಗಲು, ವ್ಯಷ್ಟಿ–ಸಮಷ್ಟಿಯ ಬಾಳಿನ ವ್ಯಾವಹಾರಿಕ ಪಾತಳಿಯ ಒಳಮೈಯಾಗಿರುವ ಪಾರಮಾರ್ಥಿಕ ಅಂತಸ್ತು ಇವುಗಳ ಬಗೆಗಿನ ಪ್ರತಿಪಾದನೆ, ಪ್ರತಿವಾದ–ನಿಷ್ಕರ್ಷೆಗಳಿಗೆ ಮೀಸಲಾದ ಸಾಹಿತ್ಯ – ಇಲ್ಲಿ ವಿಚಾರಕ್ಕಿಂತ ವಿಚಾರದ ಬಗ್ಗೆ ಇಟ್ಟುಕೊಂಡ ಒಲವು ನಿಲುವುಗಳಿಗೆ ಹೆಚ್ಚು ಪ್ರಾಶಸ್ತ್ಯ.

ಡಾ॥ಶೀಲ : ಸಾಹಿತ್ಯ ಕುರಿತೇ ಬೆಳೆದ ಸಾಹಿತ್ಯ. ಶಾಸ್ತ್ರೀಯವಾದ ತಾರತಮ್ಯ ವಿವೇಕ ಭೇದಾಭೇದ ಲಕ್ಷಣ. ಸಾಹಿತ್ಯದ ಯಾವ ಅಂಗವನ್ನು ಸತತ ಸಮೀಕ್ಷೆಗೆ, ಮೌಲ್ಯಮಾಪನಕ್ಕೆ ಗುರಿಪಡಿಸಲಿಕ್ಕೆ ಕೆಲವೊಂದು ಸರ್ವಸಾಮಾನ್ಯ ಸರ್ವಸನ್ಮಾನ್ಯ ತತ್ತ್ವಗಳನ್ನು ಪ್ರಸ್ತಾಪಿಸುವ ಶುದ್ಧ ಮತ್ತು ಉಚ್ಚವಿಮರ್ಶೆ ; ಕವಿ–ಕೃತಿಗಳ ಅನ್ಯೋನ್ಯ ಅನನ್ಯಸಂಬಂಧಗಳನ್ನು ನಿರೂಪಿಸುವ ಅನುಭವದ ಸಂಭಾರವನ್ನು ಜೀವನದ ಸಂಸ್ಕೃತವನ್ನಾಗಿ ಮಾಡುವ, ಸಾಹಿತ್ಯವನ್ನು ಜೀವನದ ವಿಮರ್ಶೆಯಾಗಿ ನೋಡುವ ಮಂತ್ರ–ತಂತ್ರಗಳನ್ನು ವ್ಯಾಖ್ಯಾನಿಸುವ ಸಾಹಿತ್ಯ.

ಡಾ॥ರಾಮು: ಇಂಥ ವಿಚಾರಸಾಹಿತ್ಯದ ಶೈಲಿಯಲ್ಲಿ ಎರಡು ವಿಧ : ಒಂದು, ಮನಗಾಣಿಸುವಂಥದು, ಇನ್ನೊಂದು ಮನವೊಲಿಸುವಂಥದು. ಅದು ಬೋಧಕ, ಇದು ವೇದಕ ಮಾದರಿಯ ವಿಚಾರಸಾಹಿತ್ಯದಲ್ಲಿ ಇವೆರಡರ ಸಮತೋಲ–ಸಮತೂಕಗಳ ಎರಕವಿರುತ್ತದೆ.

ಡಾ॥ಶೀಲ : ದ. ರಾ. ಬೇಂದ್ರೆ, ಕೆ. ವಿ. ಪುಟ್ಟಪ್ಪ, ಹಾ. ಮಾ. ನಾಯಕ, ಕೀರ್ತಿನಾಥ ಕುರ್ತಕೋಟಿ, ಗೋಪಾಲಕೃಷ್ಣ. ಅಡಿಗ, ಅನಕೃ. ದೇಜಗೌ. ಕಾರಂತ, ಇವರ ವೈಚಾರಿಕ ಬರಹಗಳು ಇದಕ್ಕೆ ಈಚಿನ ಒಂದು ಉದಾಹರಣೆ.

ಡಾ॥ರಾಮು: ಭಾರತೀಯ ತತ್ತ್ವಜ್ಞಾನದ ನಿಧಿಗಳೆನಿಸಿದ ವೇದ, ಉಪನಿಷತ್ತು, ಭಗವದ್ಗೀತೆ ಬ್ರಹ್ಮಸೂತ್ರ, ಸಾಂಖ್ಯಾಕಾರಿಕೆ, ಶ್ರೀಕರಭಾಷ್ಯ. ತರ್ಕಸಂಗ್ರಹ, ನ್ಯಾಯಯೋಗ್ಯ ವ್ಯಾಕರಣ, ನಿರುಕ್ತ, ಆಮೇಲೆ ಮತಾಚಾರ್ಯರುಗಳ ಪ್ರಸ್ಥಾನತ್ರಯಿಯ ಭಾಷ್ಯಗಳು, ಯೋಗವಾಸಿಷ್ಠ, ಷಡ್ದರ್ಶನಗಳು–ಮುಂತಾದ ವೈದಿಕ ತತ್ತ್ವಶಾಸ್ತ್ರಗಳಂತೆಯೇ ಬೌದ್ಧ, ಜೈನಮತಗಳ ಆಗಮಗ್ರಂಥಗಳಲ್ಲಿಯೂ ಅನೇಕ ಋಗ್ವೇದದ ನಾರದೀಯ ಸೂಕ್ತ, ಅಥರ್ವವೇದದ ಮಂತ್ರಗಳಲ್ಲಿಯೂ ಕಂಡುಬರುವ ಪ್ರಾಚೀನರ ವೈಚಾರಿಕ ಸಾಹಸದ ವೈಖರಿ ನಮ್ಮನ್ನು ಚಕಿತಗೊಳಿಸುತ್ತದೆ.

ಡಾ॥ಶೀಲ : ಶಾಸನಯುಗದ ಶಿಲಾಲಿಖಿತ ಸಾಹಿತ್ಯದಲ್ಲಿಯೂ ವೈಚಾರಿಕ ಅಂಶಗಳು ಇಲ್ಲದಿಲ್ಲ. ಆದರೆ ಅದು ಸಾಹಿತ್ಯಪ್ರಕಾರಕ್ಕೆ ಸಲ್ಲಲಿಕ್ಕಿಲ್ಲ. 10–11ನೆಯ ಶತಮಾನದವರೆಗೆ ಜೈನಸಾಹಿತ್ಯ ತನ್ನ ದಾರ್ಶನಿಕ ಅಂಗದಲ್ಲಿಯೂ ವಿಕಾಸಗೊಂಡಿತ್ತು. ಸಾಹಿತ್ಯದಲ್ಲಿ ಜ್ಞಾನ ಮತ್ತು ಭಾವ (ರಸ) ಎಂಬ ಎರಡು ಪ್ರಕಾರಗಳನ್ನು ಕಲ್ಪಿಸಿದರೆ ಜ್ಞಾನ ಸಾಹಿತ್ಯದ ಅಂಗವಾಗಿ ವ್ಯಾಕರಣ, ಛಂದಸ್ಸು, ಕಾವ್ಯರೀತಿ, ಲಕ್ಷಣಾದಿಗಳ ಸಾಹಿತ್ಯ ಕನ್ನಡದಲ್ಲಿ ಅಷ್ಟರೊಳಗೆ ಆಗಿತ್ತು. ಇದಕ್ಕೆ ಕವಿರಾಜಮಾರ್ಗವೇ ಸಾಕ್ಷಿ. ಮುಂದೆ ಕೇಶಿರಾಜನ ಶಬ್ದಮಣಿದರ್ಪಣ. ಭಟ್ಟಾಕಳಂಕನ ಶಬ್ದಾನುಶಾಸನ ಅಲ್ಲದೆ ಆಯುರ್ವೇದ ಜ್ಯೋತಿಷ್ಯ ಮುಂತಾದುವುಗಳನ್ನು ಕುರಿತ ಗ್ರಂಥಗಳೂ ಆ ಯುಗದ ವೈಚಾರಿಕ ವಾಙ್ಮಯದ ಭಾಗವೇ ಸರಿ.

ಡಾ॥ರಾಮು: ಅನಂತರ 12ನೆಯ ಶತಮಾನದಲ್ಲಿ ವೀರಶೈವ ಸಾಹಿತ್ಯಧಾರೆ ಹರಿಯತೊಡಗಿತು. ಅಂದಿನ ವಿಚಾರಸರಣಿ ಅನಿವಾರ್ಯವಾಗಿ ಮತೀಯ ಸಂಪ್ರದಾಯದಲ್ಲಿ ವಿವಿಧ ವಿನ್ಯಾಸಗಳನ್ನು ತೋರಿತು. ಭಕ್ತಿ–ಜ್ಞಾನ–ವೈರಾಗ್ಯ–ಶರಣಾರ್ತಿ, ಅನುಭಾವ, ನೀತಿಧರ್ಮಗಳ ಪ್ರಚಾರ ಪುರಸ್ಕಾರಗಳ ಧ್ವನಿಯಾಯಿತು. ಅಲ್ಲಿಯೂ ಗದ್ಯಕ್ಕಿಂತ ಪದ್ಯದ ರೂಪವೇ ಈ ಸಾಹಿತ್ಯಕ್ಕೆ ಮಾಧ್ಯಮವಾಯಿತು.

ಡಾ॥ಶೀಲ : ವಿಚಾರಸಾಹಿತ್ಯದ ಪ್ರಧಾನ ಕ್ಷೇತ್ರಗಳೆಂದರೆ

1 ಶಾಲೆಕಾಲೇಜುಗಳ ಪಠ್ಯಪುಸ್ತಕಗಳ ಹಾಗೂ ಪ್ರಾಧ್ಯಾಪಕರ ಲೇಖನ ಪ್ರಪಂಚ ಮತ್ತು

2 ವಿಶ್ವವಿದ್ಯಾನಿಲಯಗಳ ಪ್ರಚಾರೋಪನ್ಯಾಸಗಳ ವ್ಯಾಸಂಗ ವಿಸ್ತರಣೆಯ ಫಲವಾದ ಜನಪ್ರಿಯ ಶಾಸ್ತ್ರೀಯ ಗ್ರಂಥ ನಿರ್ಮಿತಿವಾದವು.

ಡಾ॥ರಾಮು: ಮೈಸೂರು ಮತ್ತು ಕರ್ನಾಟಕ ವಿದ್ಯಾಪೀಠಗಳಿಂದ 400ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಇಲ್ಲಿ ಮೌಲಿಕ ಸಂಶೋಧನೆ ಇದ್ದರೂ ಅದರ ಪರಿಣಾಮ ಕಡಿಮೆ. ಸಂಗ್ರಹ, ಸಂಪಾದನೆಗಳೇ ಹೆಚ್ಚು. ಒಂದು ಮಾತು ನಿಜ. ಮೂಲಭೂತವಾದ ಶಾಸ್ತ್ರವಿಷಯಗಳನ್ನು ಶುದ್ಧ ಕನ್ನಡದ ಮೂಲಕ ಜನಸಾಮಾನ್ಯರಿಗೂ ಒದಗಿಸಿದ ಕೀರ್ತಿ ಈ ಪ್ರಕಟಣೆಗಳಿಗೆ ಸಲ್ಲುತ್ತದೆ.

ಡಾ॥ಶೀಲ : ಇದರಿಂದ ಜನತೆಯಲ್ಲಿ ವೈಚಾರಿಕ ಮನೋಧರ್ಮ ಅಂಕುರಿಸಿ ಬೆಳೆಯುತ್ತಿದೆಯೆನ್ನಬಹುದು. ಇಂಥ ಸನ್ನಿವೇಶ ನಿಜವಾದ ವೈಚಾರಿಕ ಸಾಹಿತ್ಯ ಬೆಳೆಯಲು ಬಲು ಅನುಕೂಲವಾದದ್ದು.

ಡಾ॥ರಾಮು: ಆಧುನಿಕ ಯುಗದ ಆರಂಭದ ದಶಕಗಳಲ್ಲಿ ವಚನಶಾಸ್ತ್ರದ ಮೇಲೆ ಬೆಳಕು ಚೆಲ್ಲಿದವರು ರಾವ್‌ಬಹಾದ್ದೂರ್ ಹಳಕಟ್ಟಿ, ಉತ್ತಂಗಿ ಸರ್ವಜ್ಞನನ್ನು ಬೆಳಕಿನಲ್ಲಿ ತಂದಿರಿಸಿದರೆ, ಆರ್ಯ ದ್ರಾವಿಡ ಜನಾಂಗದ ಮೂಲ ಮತ್ತು ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆಯನ್ನು ಕುರಿತು ಅಗಾಧ ಪರಿಶ್ರಮದಿಂದ

ಸಂಶೋಧನೆಯನ್ನು ಮಾಡಿದವರು – ಶಂ. ಬಾ. ಜೋಶಿ, ಶೂನ್ಯಸಂಪಾದನೆಯನ್ನು ಕುರಿತು ಗ್ರಂಥ ರಚಿಸಿರುವ ಡಾ. ತಿಪ್ಪೇರುದ್ರಸ್ವಾಮಿ, ಛಂದೋವಿಕಾಸವನ್ನು ಬರೆದ ಡಿ. ಎಸ್. ಕರ್ಕಿ–ಇಂಥ ಮಹನೀಯರನ್ನು ಇಲ್ಲಿ ಸ್ಮರಿಸಲೇಬೇಕು.

ಡಾ॥ಶೀಲ : ಹಾಗೆಯೆ, ಒಂದು ತಲೆಮಾರಿನ ಇತಿಹಾಸಪ್ರಜ್ಞೆಯನ್ನು, ಸ್ವಾಭಿಮಾನವನ್ನು ಬಡೆದೆಬ್ಬಿಸಿದ ಕರ್ನಾಟಕ ಗತವೈಭವದ ಲೇಖಕರಾದ ಆಲೂರ ವೆಂಕಟರಾಯರು ಕನ್ನಡದ ಕುಲಪುರೋಹಿತರೆಂದು ಯಥಾರ್ಥವಾಗಿಯೆ ಹೆಸರಾದರು.

ಡಾ॥ರಾಮು: ಪ್ರಾಚೀನ ಕವಿಗಳ ಕಾಲನಿರ್ಣಯದಲ್ಲಿ ಕವಿ ಗೋವಿಂದ ಪೈಗಳು ಧನ್ಯಸೇವೆ ಸಲ್ಲಿಸಿದ್ದಾರೆ. ವ್ಯಾವಸಾಯಿಕ ಇತಿಹಾಸ ಸಂಶೋಧನೆಯಲ್ಲಿ ಡಾ. ಪಾಂಡುರಂಗರಾವ್ ದೇಸಾಯಿ, ತಿರುಮಲೆ ತಾತಾಚಾರ್ಯ ಶರ್ಮರೂ ಗಣ್ಯ ಕೆಲಸ ಮಾಡಿದ್ದಾರೆ.

ಡಾ॥ಶೀಲ : ಭಾವ (ರಸ) ಸಾಹಿತ್ಯ ವಿಮರ್ಶನ ಕ್ಷೇತ್ರದಲ್ಲಿ ತೀ. ನಂ. ಶ್ರೀಕಂಠಯ್ಯನವರ ಭಾರತೀಯ ಕಾವ್ಯಮೀಮಾಂಸೆ, ದ. ರಾ. ಬೇಂದ್ರೆಯವರ ಸಾಹಿತ್ಯ ಮತ್ತು ವಿಮರ್ಶೆ.

ಡಾ॥ರಾಮು: ಗೋಪಾಲಕೃಷ್ಣ ಅಡಿಗರ ಮಣ್ಣಿನ ವಾಸನೆ, ಬಿ. ಎಚ್. ಶ್ರೀಧರ ಕಾವ್ಯಸೂತ್ರ ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ, ಶಿವರುದ್ರಪ್ಪನವರ ವಿಮರ್ಶೆಯ ಪೂರ್ವಪಶ್ಚಿಮ ಹಾಗೂ ಸೌಂದರ್ಯಸಮೀಕ್ಷೆ, ಕೀರ್ತಿನಾಥ ಕುರ್ತಕೋಟಿಯವರ ಕನ್ನಡ ಸಾಹಿತ್ಯ ಪ್ರಕಾರಗಳನ್ನು ವಿಮರ್ಶಿಸುವ ಇತಿಹಾಸ ಲೇಖನಗಳು– ಇವೇ ಕೆಲವು ಈ ಕ್ಷೇತ್ರದಲ್ಲಿಯ ವೈಚಾರಿಕ ಪ್ರಗತಿಯ ಮೈಲಿಗಲ್ಲುಗಳು.

ಡಾ॥ಶೀಲ : ಇತ್ತೀಚೆಗೆ ಶಿವರಾಮಕಾರಂತರ ವಿಚಾರ ಸಾಹಿತ್ಯ ನಿರ್ಮಾಣವೆಂಬ ಪುಸ್ತಕ ಮಹತ್ತ್ವಪೂರ್ಣವಾಗಿದೆ. ಅದೇ ರೀತಿ ವಿ. ಸೀತಾರಾಮಯ್ಯನವರ ಸಾಹಿತ್ಯ, ಸಂಪ್ರದಾಯ ಮತ್ತು ಹೊಸ ಮಾರ್ಗ, ಮುಗಳಿಯವರ ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ಇವು ವೈಶಿಷ್ಟ್ಯ ಪೂರ್ಣವಾಗಿವೆ.

ಡಾ॥ರಾಮು: ಡಿ. ವಿ. ಜಿ. ಅವರ ಜೀವನ ಸೌಂದರ್ಯ ಮತ್ತು ಸಾಹಿತ್ಯ ಕನ್ನಡದ ವೈಚಾರಿಕ ವೈಭವಕ್ಕೆ ಒಂದು ಭೂಷಣ. ಎಸ್. ವಿ. ರಂಗಣ್ಣನವರ ರುಚಿ, ಶ್ರೀರಂಗರ ನಗೆ, ಅದೇ ವಿಷಯದ ಮೇಲಿನ ಸುಂಕಾಪುರರವರ ಹೆಬ್ಬೊತ್ತಗೆ, ಅ. ನ. ಕೃ. ಅವರ ಸಾಹಿತ್ಯ ಮತ್ತು ಕಾಮಪ್ರಚೋದನೆ, ವೀರಶೈವಸಾಹಿತ್ಯ ಮತ್ತು ಸಂಸ್ಕೃತಿ, ವಿ. ಸೀ ಅವರ ಹಣಪ್ರಪಂಚ, ಶ್ರೀರಂಗರ ಶಾರದೆಯ ಸಂಹಾರ, ರಂಗನಾಥ ದಿವಾಕರರ ಗಾಂಧೀವಾದ, ಗೌರೀಶ ಕಾಯ್ಕಿಣಿ ಅವರ ಮಾರ್ಕ್ಸ್‌ವಾದ, ಭೈರಪ್ಪನವರ ಸತ್ಯ ಮತ್ತು ಸೌಂದರ್ಯ, ಹಾಲಪ್ಪನವರ ರಾಜಕಾರಣದ ಮೂಲ ಸೂತ್ರಗಳು, ಎನ್. ಆರ್. ರಾವ್‌ರವರ ರಾಜಕೀಯ ಜಿಜ್ಞಾಸೆ–ಇವೆಲ್ಲ ತತ್ತ್ವವಿವೇಚನೆಯ ಗಮನೀಯ ಗ್ರಂಥಗಳೆಂದು ಗುರುತಿಸಬಹುದು.

ಡಾ॥ಶೀಲ : ಮತೀಯ ಸಿದ್ಧಾಂತಗಳನ್ನು ಕುರಿತು ಅನೇಕ ಗ್ರಂಥಗಳು ಪ್ರಕಟವಾಗಿವೆ. ಆದರೆ ಅವು ಹೆಚ್ಚಾಗಿ ವರ್ಣನಾತ್ಮಕ. ವಿವರಣಾತ್ಮಕಗಳೇ ಹೊರತು ವಿಶ್ಲೇಷಣೆ, ತೌಲನಿಕವಿಮರ್ಶೆ ಮಾಡುವಂಥವು ಅಲ್ಲ.

ಡಾ॥ರಾಮು: ಜೈನಮತ, ತತ್ತ್ವಗಳ ಬಗ್ಗೆ ಮಿರ್ಜಿ ಅಣ್ಣಾರಾಯರ ಗ್ರಂಥ ಉಲ್ಲೇಖನೀಯವಾಗಿದೆ. ನಿಜವಾದ ವಿಚಾರಸಾಹಿತ್ಯವೆಂಬ ದೃಷ್ಟಿಯಿಂದ ಸ್ವಾನುಭವದಿಂದ ಬದುಕಿನ ಮರ್ಮವನ್ನರಿತ ತನ್ನ ವಿಚಾರಧಾರೆಯನ್ನು

ಕಾರಂತರು ಬಾಳ್ವೆಯ ಬೆಳಕು., ಡಿ. ವಿ. ಜಿ. ಯವರು ಬಾಳಿಗೊಂದು ನಂಬಿಕೆ ಈ ಗ್ರಂಥಗಳಲ್ಲಿ ಪ್ರಕಟಿಸಿದ್ದಾರೆ. ಆದರೂ ಇಂಥ ಬರೆಹದ ಕೊರತೆ ವಿಶಾಲವಾಗಿಯೇ ಇದೆ.

ಡಾ॥ಶೀಲ : ಪ್ರಾಚೀನ ಕಾವ್ಯಕೃತಿಗಳ ಪುನರ್ವಿಮರ್ಶೆ, ಮೌಲ್ಯಮಾಪನಗಳು ತಕ್ಕಮಟ್ಟಿಗೆ ಕನ್ನಡದಲ್ಲಿ ಆಗಿವೆ. ಸಿ. ಕೆ. ವೆಂಕಟರಾಮಯ್ಯನವರು ಭಾಸನ ನಾಟಕಗಳ ಬಗ್ಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಆದಿಕವಿ ವಾಲ್ಮೀಕಿ ಮತ್ತು ಮಹಾಭಾರತದ ಬಗ್ಗೆ ಎ. ಆರ್. ಕೃಷ್ಣಶಾಸ್ತ್ರಿಗಳು ಸಂಸ್ಕೃತ ನಾಟಕಗಳ ಬಗ್ಗೆ ಎಸ್. ವಿ. ರಂಗಣ್ಣನವರು ಕಾಲಿದಾಸ ಮತ್ತು ಪಾಶ್ಚಾತ್ಯ ಗಂಭೀರ ನಾಟಕಗಳ ಬಗ್ಗೆ ವಿ. ಸೀ. ಯವರು ಕರ್ನಾಟಕ ಕಾದಂಬರಿಯ ಬಗ್ಗೆ ಮಹತ್ವದ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಡಾ॥ರಾಮು: ಶ್ರೀರಂಗರ ಗೀತಾಗಾಂಭೀರ್ಯ, ಡಿ. ವಿ. ಜಿ. ಯವರ ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ, ಬೇಂದ್ರೆಯವರ ಕನ್ನಡ ಸಾಹಿತ್ಯದ ನಾಲ್ಕು ನಾಯಕರತ್ನಗಳು, ಶಂ. ಬಾ. ಅವರ ಕರ್ಣನ ಮೂರು ಚಿತ್ರಗಳು, ಕೆ. ವಿ. ಪುಟ್ಟಪ್ಪನವರ ತಪೋನಂದನ, ದ್ರೌಪದಿಯ ಸಿರಿಮುಡಿ, ಮುಗಳಿಯವರ ತ್ವನಿಧಿ, ದೇಜಗೌ ಅವರ ಕೆಲವು ಕೃತಿಗಳು–ಮುಂತಾದವನ್ನು ಇಲ್ಲಿ ಎತ್ತಿ ಹೇಳಬಹುದು.

ಡಾ॥ಶೀಲ : ಇದೇ ಜಾಡಿನಲ್ಲಿ ಆರ್. ಆರ್. ದಿವಾಕರರ ವಚನಶಾಸ್ತ್ರರಹಸ್ಯ, ಉಪನಿಸ್ರಹಸ್ಯ, ಹಲಸಂಗಿ ಚನ್ನಮಲ್ಲಪ್ಪನವರ ಕಾಳರಾತ್ರಿ ಮತ್ತು ಅರವಿಂದರ ಪೂರ್ಣಯೋಗದ ಪರಿಚಯ ಮಾಡಿಕೊಡುವ ಅನುಭಾವೀ ಬರಹಗಳೂ ವಿಚಾರಣೀಯವಾಗಿವೆ.

ಡಾ॥ರಾಮು: ಪ್ರಗತಿ ಶೀಲಸಾಹಿತ್ಯದ ಚಳವಳಿಯಿಂದಾಗಿ ಅ. ನ. ಕೃ., ತ. ರಾ. ಸು., ಬಸವರಾಜ ಕಟ್ಟೀಮನಿ, ನಿರಂಜನ ಮುಂತಾದವರು ತಮ್ಮ ಲೇಖನದಲ್ಲಿ ಆರ್ಥಿಕ ರಾಜಕೀಯ ಪ್ರಜ್ಞೆಯ ವೈಚಾರಿಕತೆಯನ್ನು ತುಂಬಿದರು.

ಡಾ॥ಶೀಲ : ಒಂದನೆಯ ಮಹಾಯುದ್ಧದ ಅನಂತರ ಹೊಸ ಸಾಹಿತ್ಯ ಹುಟ್ಟಿತು. ಎರಡನೆಯ ಮಹಾಯುದ್ಧದ ನಂತರ ಹೊಸ ವಿಮರ್ಶೆ ಹುಟ್ಟಿಬಂದಿತು.

ಡಾ॥ರಾಮು: ಮೂವತ್ತರ ದಶಕದಲ್ಲಿ ಮಾರ್ಕ್ಸ್‌ವಾದೀ ದೃಷ್ಟಿ ತೆರೆದರೆ 50ರ ದಶಕದಲ್ಲಿ ಮನೋವೈಜ್ಞಾನಿಕ ದೃಷ್ಟಿ ಬೆಳಗಿತು. ಸಾಂಪ್ರದಾಯಿಕ ವಿಚಾರವನ್ನು ಆಧುನಿಕ ಭಾಷೆಯಲ್ಲಿ ದೇವುಡು ನರಸಿಂಹಶಾಸ್ತ್ರಿಗಳಂಥವರು ಯಶಸ್ವಿಯಾಗಿ ಕೊಡಲು ಯತ್ನಿಸಿದರು. ಗಾಂಧೀವಾದವನ್ನು ಸಿದ್ದವನಹಳ್ಳಿ ಕೃಷ್ಣಶರ್ಮರು ತಮ್ಮದೇ ಆದ ಲಲಿತಮಧುರ ಶೈಲಿಯಲ್ಲಿ ಕನ್ನಡಕ್ಕೆ ನೀಡಿದರು.

ಡಾ॥ಶೀಲ : ಹಾಗೆಯೇ ರವೀಂದ್ರನಾಥರು ಹಾಗೂ ಸರೋಜಿನಿ ನಾಯಿಡು ಅವರನ್ನು ಕುರಿತು ಎಸ್. ಎಸ್. ಒಡೆಯರು ಎರಡು ಸಮಾಲೋಚನಾತ್ಮಕ ಪುಸ್ತಕಗಳನ್ನು ನೀಡಿದ್ದಾರೆ.

ಡಾ॥ರಾಮು: ಅದೇ ರೀತಿ ಧಾರವಾಡಕರ, ಎನ್ಕೆ, ಆರ್. ಕೆ. ಕುಲಕರ್ಣಿ ಗೊರೂರು, ಗದಗಕರ ಮುಂತಾದವರ ಹರಟೆಗಳಲ್ಲಿಯೂ ವೈಚಾರಿಕ ಅಂಶ ಎದ್ದು ಕಾಣಿಸುವುದೂ ಇದೆ.

ಡಾ॥ಶೀಲ : ಇನ್ನು ಅನುವಾದ ರಂಗದಲ್ಲಿ ಅರವಿಂದರ ಭಾರತೀಯ ನವಜನ್ಮವನ್ನು ಬೇಂದ್ರೆಯವರೂ ಭಾರತೀಯ ರಾಜಧರ್ಮವನ್ನು ಎನ್. ಆರ್. ಮತ್ತು ಬಿ. ಎಚ್. ಶ್ರೀಧರರೂ ಜಾನ್ ಸ್ಟೂವರ್ಟ್ ಮಿಲ್ಲನ

ಲಿಬರ್ಟಿಯನ್ನು (ಸ್ವಾತಂತ್ರ್ಯ) ಇವರಿಬ್ಬರೂ ಧ್ವನ್ಯಾಲೋಕ ಮತ್ತು ಕಾವ್ಯಪ್ರಕಾಶಾದಿಗಳನ್ನು ಕೆ. ಕೃಷ್ಣಮೂರ್ತಿಯವರೂ ದಶರೂಪಕವನ್ನು ಕೆ. ವಿ. ಸುಬ್ಬಣ್ಣನವರೂ ಆಡ್ಲರನ ವ್ಯಕ್ತಿಮನೋ ವಿಜ್ಞಾನವನ್ನು (ಬಾಳಿನ ಗುಟ್ಟು) ಗೌರೀಶ ಕಾಯ್ಕಿಣಿಯವರೂ ಕನ್ನಡದಲ್ಲಿ ನೀಡಿದ್ದಾರೆ.

ಡಾ||ರಾಮು: ಅದೇ ರೀತಿ ಮನೋವಿಜ್ಞಾನದ ರಂಗದಲ್ಲಿ ಕುಪ್ಪುಸ್ವಾಮಿ ಅವರ ಮನೋವಿಜ್ಞಾನ, ಹನುಮಂತರಾಯರ ಮಾನದರ್ಪಣ, ಗೌರೀಶ ಕಾಯ್ಕಿಣಿಯವರ ಮನೋವಿಜ್ಞಾನದ ರೂಪರೇಖೆಗಳು, ಗಂಡು ಹೆಣ್ಣು ಮತ್ತು ಪ್ರೀತಿ, ಅಲ್ಲದೆ ಬುದ್ಧಿ ಪ್ರಾಮಾಣ್ಯವನ್ನು ಪುರಸ್ಕರಿಸುವ ಏಕಮೇವ ಪುಸ್ತಕ 'ವಿಚಾರವಾದ'– ಮುಂತಾದ ಕೆಲವು ಪ್ರಕಟಣೆಗಳನ್ನು ಹೆಸರಿಟ್ಟು ಹೇಳಬಹುದು.

ಡಾ||ಶೀಲ : ವಿಜ್ಞಾನರಂಗದಲ್ಲಿ ಪ್ರಾಧ್ಯಾಪಕರುಗಳ ಅನೇಕ ಗ್ರಂಥಗಳು ಪ್ರಕಟವಾಗಿವೆ. ಆದರೆ ವಿಜ್ಞಾನವನ್ನು ಕುರಿತು ಸಮುನ್ನತ ವೈಚಾರಿಕ ಕಾಣಿಕೆಯನ್ನು ದೊಡ್ಡ ಮೊತ್ತದಲ್ಲಿ ತಮ್ಮ ವಿಜ್ಞಾನಕೋಶದ ಮೂರು ಸಂಪುಟಗಳಲ್ಲಿ ಸಲ್ಲಿಸಿದವರು ಶಿವರಾಮ ಕಾರಂತರೇ ಸರಿ.

ಡಾ||ರಾಮು: ಪುರಂದರದಾಸ–ಕನಕದಾಸರ ಚತುಶ್ಶತಮಾನೋತ್ಸವಗಳ ನಿಮಿತ್ತ ಉಭಯ ದಾಸರ ಭಕ್ತಿಕಾವ್ಯದ ಬಗ್ಗೆ ಅನೇಕ ಲೇಖನಸಂಗ್ರಹಗಳ ಸುಗ್ಗಿಯೆ ಬೆಳೆದು ಬಂದಿತು.

ಡಾ||ಶೀಲ : ಹಾಗೆಯೇ ಷೇಕ್ಸ್‌ಪಿಯರನ ಆರನೆಯ ಶತಮಾನೋತ್ಸವದ ನಿಮಿತ್ತ ಹೊಸ ದಿಲ್ಲಿಯ ಕನ್ನಡ ಭಾರತೀ ಸಂಸ್ಥೆಯವರು ಒಂದು ಉತ್ಕೃಷ್ಟ ಪರಿಸಂವಾದಾತ್ಮಕ ಗ್ರಂಥವನ್ನು ಪ್ರಕಟಿಸಿದ್ದಾರೆ. ಎ. ಎನ್. ಮೂರ್ತಿರಾಯರೂ ಷೇಕ್ಸ್‌ಪಿಯರನ ಕೃತಿಗಳನ್ನು ಕುರಿತು ಒಂದು ಪರಿಚಯ ಗ್ರಂಥವನ್ನು ಬರೆದು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಮುಂದೆ ಗಾಂಧೀ ಶತಾಬ್ದಿಯ ನಿಮಿತ್ತವೂ ಗಾಂಧೀತತ್ತ್ವ ವಿಚಾರತೆಯ ಅನೇಕ ಲೇಖೋಪನ್ಯಾಸ ಸಂಗ್ರಹಗಳು ಬೆಳಕಿಗೆ ಬಂದಿವೆ. ಇವೆಲ್ಲವೂ ವಿಚಾರಸಾಹಿತ್ಯವೇ ಸರಿ.

ಡಾ||ರಾಮು: ಧಾರವಾಡದ ಮಿಂಚಿನಬಳ್ಳಿ ಪ್ರಕಾಶನ ಸಂಸ್ಥೆಯು ಬುರ್ಲಿ ಬಿಂದು ಮಾಧವಾಚಾರ್ಯರ ಅಸಹಾಯ ಶೂರತೆಯಿಂದ ಕಾಲುಶತಮಾನವನ್ನು ಮೀರಿ ಕೇವಲ ವಿಚಾರಸಾಹಿತ್ಯವನ್ನೇ ಪಂಥತೊಟ್ಟು ಪ್ರಕಟಿಸುತ್ತ ಬಂದಿರುವುದನ್ನು ಇಲ್ಲಿ ನೆನೆಯಬೇಕು.

ಡಾ||ಶೀಲ : ಹಾಗೆಯೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ಣಾಟಕ ಮತ್ತು ಅದರ ವಿಸ್ತರಣೆಗಳಾದ ವಿಜ್ಞಾನ ಕರ್ಣಾಟಕ ಮತ್ತು ಮಾನವಿಕ ಕರ್ಣಾಟಕ, ಕರ್ನಾಟಕ ವಿಶ್ವವಿದ್ಯಾನಿಲಯದ ಕರ್ನಾಟಕ ಭಾರತಿ ಮುಂತಾದ ನಿಯತಕಾಲಿಕಗಳೂ ಕನ್ನಡದಲ್ಲಿರುವ ವೈಚಾರಿಕ ವಾಙ್ಮಯ ಪ್ರಕಾಶನಕ್ಕೆ ಆಧಾರವಾಗಿವೆ.

ಡಾ||ರಾಮು: ಹೊಸ ವಿಮರ್ಶೆಯ ಪ್ರತಿಕ್ರಿಯಾಮಾಲೆಯೆಂಬಂತೆ ಸಾಕ್ಷಿ, ಸಂಕ್ರಮಣ, ಮನ್ವಂತರ ಇತ್ಯಾದಿ ನಿಯತಕಾಲಿಕಗಳು ಕೇವಲ ಸಾಹಿತ್ಯ ಚರ್ಚೆಗಾಗಿಯೇ ಮೀಸಲಾಗಿ ಹೊರಟಿದ್ದು ಶ್ಲಾಘನೀಯ ಸಾಹಸ.

ಡಾ||ಶೀಲ : ವಸ್ತುತಃ ವಿಚಾರಸಾಹಿತ್ಯ ವಿಸ್ತಾರವಾಗಿ ಬರಬೇಕಾದದ್ದು ಸಾಮಾಜಿಕ ವಿಚಾರ ಕ್ಷೇತ್ರದಲ್ಲಿ. ಇಂದು ಸ್ಥಿತ್ಯಂತರಗೊಳ್ಳುತ್ತಿರುವ ಸಾಮಾಜಿಕ ಜೀವನದ ಬಗ್ಗೆ ಆರ್ಥಿಕ, ಮನೋವೈಜ್ಞಾನಿಕ, ಮಾನವವಂಶ ಶಾಸ್ತ್ರೀಯ, ಸಾಂಸ್ಕೃತಿಕ–ಹೀಗೆ ನೂರು ಮುಖವಾಗಿ ಚಿಕಿತ್ಸೆ ನಡೆಯಬೇಕು.

ಡಾ॥ರಾಮು: ನಾಗರಿಕನ ಅಸಹಾಯ, ಏಕಾಂತ ವ್ಯಕ್ತಿತ್ವ, ನಾಯಕತ್ವ, ಬಹುರಾಷ್ಟ್ರಕ, ಬಹುಭಾಷಿಕ ರಾಷ್ಟ್ರೀಯತ್ವ, ಜಾತೀಯತೆ, ವಿಕಾಸಾಭಿವೃದ್ಧಿಯ ಸಾಂಸ್ಕೃತಿಕ ಫಲಿತಾಂಶ, ಪಕ್ಷಪದ್ಧತಿ, ಜನಾಭಿಪ್ರಾಯ ನಿರ್ಮಿತಿ, ಯುವಜನರ ಸಮಸ್ಯೆ–ಇಂಥ ವಿವಿಧ ಯಕ್ಷಪ್ರಶ್ನೆಗಳನ್ನು ಪರಿಶೀಲಿಸಿ ಪರಿಷ್ಕರಿಸುವುದಿರಲಿ, ಆ ಕುರಿತು ಪ್ರಜ್ಞೆಯನ್ನು ಜಾಗೃತಗೊಳಿಸಲು ಪರಿಸಂವಾದಗಳನ್ನು ಆರಂಭಿಸಬಲ್ಲ ಸಾಹಿತ್ಯ ಗುಣದಲ್ಲಿಯೂ ಗಾತ್ರದಲ್ಲಿಯೂ ತುಸು ಬೆಳೆದು ಬರಬೇಕು.

ಡಾ॥ಶೀಲ : ಇಂಥ ಸಾಮಾಜಿಕ ವಿಚಾರದಲ್ಲಿ ಶಂ. ಬಾ. ಜೋಶಿಯವರ ಸಮಾಜ ದರ್ಶನದ ಅನಂತರ ಶಾಸ್ತ್ರೀಯ ಚಿಕಿತ್ಸೆಗೆ ಕೈಹಾಕಿದ ಪುಸ್ತಕಗಳೆಂದರೆ ಎಚ್. ಎಂ. ಮರಳಸಿದ್ಧಯ್ಯನವರ ಸಮಾಜಕಾರ್ಯ ಮತ್ತು ಸಮಾಜಶಾಸ್ತ್ರದ ಕೆಲವು ಪಾಠಗಳು, ಎನ್. ಆರ್. ರಾವ್ ಅವರ ಜನಾಭಿಪ್ರಾಯ.

ಡಾ॥ರಾಮು: ಪ್ರಚಲಿತ ಸಾರ್ವಜನಿಕ ಚರಿತ್ರೆಯನ್ನು ಕುರಿತ ಕಾಣಿಕೆಯೆಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಜೀವನ ಮಾಸಿಕದ ಸಂಪಾದಕೀಯಗಳ ಲೋಕಚರಿತವೆಂಬ ಸಂಕಲನ. ಈ ಮಾದರಿಯ ಬರಹ ಕನ್ನಡಕ್ಕೆ ಅಪೂರ್ವವೆಂದರೆ ತಪ್ಪಿಲ್ಲ.

ಡಾ॥ಶೀಲ : ತನ್ಮಯತೆ ಮತ್ತು ತಾಟಸ್ಥ್ಯ, ತಪಶೀಲು ಮತ್ತು ತಾತ್ತ್ವಿಕತೆ–ಇವುಗಳ ನಡುವೆ ಒಂದು ತೂಕದ ತಕ್ಕ ಸಮನ್ವಯ ಸಾಧಿಸುವ ಪ್ರಜ್ಞಾಪರಿಷ್ಕಾರ ನಮ್ಮ ಸುಶಿಕ್ಷಿತ ವರ್ಗಗಳಲ್ಲಿ ಸ್ಥಿರವಾಗುವ ತನಕ ದೊಡ್ಡ ಪ್ರಮಾಣದ ವಿವಿಧ ಪ್ರಕಾರದ ವಿಚಾರಸಾಹಿತ್ಯಕ್ಕಾಗಿ ನಾವು ಕಾಯಬೇಕು.

ಡಾ॥ರಾಮು: ಆ ತನಕ ಶುಷ್ಕ ಪಠ್ಯಪುಸ್ತಕೀಯ ದೃಷ್ಟಿ ಮತ್ತು ಅಗ್ಗದ ಪತ್ರಿಕಾಪ್ರವೃತ್ತಿ, ಇವೆರಡರಿಂದಲೂ ತನ್ನನ್ನು ಕಾಪಾಡಿಕೊಂಡು ವಿಚಾರಸಾಹಿತ್ಯ ಸ್ವತಂತ್ರವಾಗಿ ಸಮೃದ್ಧವಾಗಿ ಬೆಳೆಯಬಹುದೆಂಬ ಭರವಸೆಯನ್ನು ಈ ಕ್ಷೇತ್ರದ ಈವರೆಗಿನ ಕೃಷಿಯಿಂದ ಕಾಣಬಹುದು.

# 18. ಕನ್ನಡದಲ್ಲಿ ವಿಶ್ವಕೋಶಗಳು

ಡಾ॥ರಾಮು: ಜ್ಞಾನದ ವಿವಿಧ ಶಾಖೆಗಳ ವ್ಯಾಪಕ ವಿವೇಚನೆಯನ್ನುಳ್ಳ, ಸಾಮಾನ್ಯವಾಗಿ ಬಿಡಿ ಲೇಖನಗಳನ್ನು ಅಕಾರಾದಿಯಾಗಿ ಒಳಗೊಂಡ ಲೇಖನ ಭಂಡಾರವೇ ವಿಶ್ವಕೋಶ. ಇದು ಸಾಮಾನ್ಯ ವಿಶ್ವಕೋಶದ ಲಕ್ಷಣ. ಡಾ॥ಶೀಲ: ಎನ್‌ಸೈಕ್ಲೋಪೀಡಿಯ ಅಮೆರಿಕಾನ, ಕಾಲಿಯರ್ಸ್ ಎನ್‌ಸೈಕ್ಲೋಪೀಡಿಯ–ಮೊದಲಾದುವು ಸಾಮಾನ್ಯ ವಿಶ್ವಕೋಶಕ್ಕೆ ಉತ್ತಮ ನಿದರ್ಶನಗಳು.

ಡಾ॥ರಾಮು: ಇವಲ್ಲದೆ ವಿಷಯಗಳಿಗೆ ಸಂಬಂಧಿಸಿದಂತೆ ವಿಷಯ ವಿಶ್ವಕೋಶಗಳೂ ಇವೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ ಮೆಕ್‌ಗ್ರಾ–ಹಿಲ್ ಎನ್‌ಸೈಕ್ಲೋಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ, ವ್ಯಾನ್ ನಾಸ್ ಟ್ರ್ಯಾಂಡ್ಸ್ ಸೈಂಟಿಫಿಕ್ ಎನ್‌ಸೈಕ್ಲೋಪಿಡಿಯ–ಇವು ಪ್ರಸಿದ್ಧವಿವೆ.

ಡಾ॥ಶೀಲ: ಇವಲ್ಲದೆ ಭೂವಿಜ್ಞಾನ, ಜೀವವಿಜ್ಞಾನ, ರಸಾಯನ ಶಾಸ್ತ್ರ, ಭೌತಶಾಸ್ತ್ರ, ಸಾಹಿತ್ಯ, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ, ಚರಿತ್ರೆ–ಇತ್ಯಾದಿ ವಿಷಯಗಳ ಬಗ್ಗೆ ಪ್ರತ್ಯೇಕ ವಿಶ್ವಕೋಶಗಳಿವೆ.

ಡಾ॥ರಾಮು: ಇವಲ್ಲದೆ ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ ಮೊದಲಾದ ದೇಶಗಳವರು ತಮ್ಮ ದೇಶಗಳನ್ನು ಕುರಿತೇ ವಿಶ್ವಕೋಶ ರಚನೆ ಮಾಡಿದ್ದಾರೆ. ರೀಡರ್ಸ್ ಡೈಜೆಸ್ಟ್ ಸಂಸ್ಥೆಯವರು ಮೂರು ಸಂಪುಟಗಳಲ್ಲಿ ವಿಶ್ವಕೋಶ ಮಾದರಿಯ ನಿಘಂಟೊಂದನ್ನು ತಯಾರಿಸಿದ್ದಾರೆ.

ಡಾ॥ಶೀಲ: ವಿಶ್ವಕೋಶದ ಗುಣವನ್ನು ನಿರ್ಧರಿಸುವುದು ಕೋಶಾತ್ಮಕವಾದ ಅದರ ನಿಘಂಟಿನ ಮಾದರಿ, ಎಲ್ಲ ವಿಶ್ವಕೋಶಗಳಲ್ಲೂ ಶೀರ್ಷಿಕೆಗಳನ್ನು ಅಕಾರಾದಿಯಾಗಿ ಜೋಡಿಸಿರುತ್ತಾರೆ. ಬೇಕಾದ ವಿಷಯವನ್ನು ಸುಲಭವಾಗಿ ತೋರಿಸುವುದೇ ಕೋಶಗಳ ಕೆಲಸ.

ಡಾ॥ರಾಮು: ಪ್ರತಿಯೊಂದು ಶೀರ್ಷಿಕೆಯ ಕೆಳಗೂ ಅದಕ್ಕೆ ಸಂಬಂಧಪಟ್ಟ ವಿಷಯ ಇರುತ್ತದಲ್ಲದೆ ಹೆಚ್ಚಿನ ವಿವರ ಬಯಸುವವರು ಇನ್ನೆಲ್ಲೆಲ್ಲಿ ನೋಡಬೇಕೆಂಬ ಸೂಚನೆಯೂ ಇರುತ್ತದೆ. ಯಾವ ವಿಶ್ವಕೋಶವೂ ಎಲ್ಲ ವಿಷಯಗಳ ಬಗ್ಗೆಯೂ ಇರುವ ಸಮಗ್ರ ವಿವರಗಳನ್ನು ಕೊಡಲಾರದು.

ಡಾ॥ಶೀಲ: ಇನ್ನು ಮೇಜಿನ ಬಳಕೆಗಾಗಿ ಹುಟ್ಟಿರುವ ಏಕಸಂಪುಟ ವಿಶ್ವಕೋಶಗಳಲ್ಲಿ ವಿಷಯಗಳೆಲ್ಲ ಇರುತ್ತವಾದರೂ ಸಾಕಷ್ಟು ವಿವರಗಳಿರುವುದಿಲ್ಲ. ದಿ ಕೊಲಂಬಿಯ ಎನ್‌ಸೈಕ್ಲೊಪೀಡಿಯ, ದಿ ಕೊಲಂಬಿಯ–ವೈಕಿಂಗ್ ಡೆಸ್ಕ್ ಎನ್ ಸೈಕ್ಲೋಪೀಡಿಯ, ದಿ ಬೇಸಿಕ್ ಎನ್‌ಸೈಕ್ಲೋಪೀಡಿಯ–ಇವು ಇಂಥವಕ್ಕೆ ಒಳ್ಳೆಯ ಉದಾಹರಣೆಗಳು.

ಡಾ॥ರಾಮು: ಕರ್ನಾಟಕ ರಾಜ್ಯದಲ್ಲಿ ಪ್ರಬುದ್ಧ ಸಮಾಜಕ್ಕೆ ಅಗತ್ಯವೆನಿಸಿದ ಹಲವಾರು ಶಾಸ್ತ್ರಗಳ ಸಾರವನ್ನು ಒಂದೇ ಗ್ರಂಥವಾಗಿ ರಚಿಸುವ ಬಗ್ಗೆ ಸುಮಾರು 800ವರ್ಷಗಳಿಂದ ಒಂದಾದಮೇಲೊಂದು ಪ್ರಯತ್ನ ಪ್ರಜ್ಞಪೂರ್ವಕವಾಗಿ ನಡೆದಿದೆ.

ಡಾ॥ಶೀಲ: ಈ ವಿಷಯದಲ್ಲಿ ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಸೋಮೇಶ್ವರದೇವ (1126–1138) ಅಗ್ರಗಣ್ಯನಾಗಿದ್ದಾನೆ. ಈತ ಸಂಸ್ಕೃತ ಭಾಷೆಯಲ್ಲಿ ವಿಶ್ವಕೋಶದಂಥ ಒಂದು ಗ್ರಂಥವನ್ನು ರಚಿಸಿದ್ದಾನೆ. ಅದರ ಹೆಸರು ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥ ಚಿಂತಾಮಣಿ (1120).

ಡಾ॥ರಾಮು: ಈ ಗ್ರಂಥದ ಮೊದಲ ಪ್ರಕರಣಗಳು ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನ ವಿಭಾಗದಿಂದಲೂ (1926) ಪೂರ್ಣಗ್ರಂಥ ಬರೋಡದ ಗಾಯಕವಾಡ್ ಗ್ರಂಥ ಭಂಡಾರದಿಂದಲೂ (1961) ಪ್ರಕಟವಾಗಿವೆ. ಇದರಲ್ಲಿ 5 ಪ್ರಕರಣಗಳೂ 100 ಅಧ್ಯಾಯಗಳೂ ಇವೆ.

ಡಾ॥ಶೀಲ: ಮೊದಲನೆಯ ಪ್ರಕರಣದಲ್ಲಿ ಮತಪದ್ಧತಿ, ಸಮಾಜಸೇವೆ, ವಿಗ್ರಹನಿರ್ಮಾಣ, ರೋಗಗಳ ಕಾರಣ ಮತ್ತು ಪರಿಹಾರ ಇತ್ಯಾದಿ ವಿಷಯಗಳಿವೆ. ಎರಡನೆಯ ಪ್ರಕರಣದಲ್ಲಿ ರಾಜ, ಮಂತ್ರಿ, ಮಿತ್ರರು, ಭಂಡಾರ, ಕೋಟಿಕೊತ್ತಳಗಳು, ನ್ಯಾಯಾಂಗ, ದೇಶವಿದೇಶಗಳ ಬಾಂಧವ್ಯ, ಸಾಮ್ರಾಜ್ಯ ರಕ್ಷಣೆ–ಇತ್ಯಾದಿ ವಿಷಯಗಳಿವೆ. ಡಾ॥ರಾಮು: ನಾಲ್ಕು ಮತ್ತು ಐದನೆಯ ಪ್ರಕರಣಗಳಲ್ಲಿ ಗಣಿತ, ಜ್ಯೋತಿಷ್ಯ, ಹಸ್ತ ಸಾಮುದ್ರಿಕ, ಶಕುನ, ವಿನೋದಗಳು, ಆನೇ ಕುದುರೆ ಮೊದಲಾದುವುಗಳನ್ನು ಪಳಗಿಸುವುದು, ಪಶುವೈದ್ಯ, ಖನಿಜಶಾಸ್ತ್ರ, ರಸವಿಜ್ಞಾನ, ರತ್ನಪರೀಕ್ಷೆ–ಇತ್ಯಾದಿ ಸಂಗತಿಗಳಿವೆ.

ಡಾ॥ಶೀಲ: ಆದರೆ ಈ ಗ್ರಂಥದಲ್ಲಿ ದೇವರು, ಧರ್ಮಶಾಸ್ತ್ರ, ಸಂಧ್ಯಾವಂದನೆ ಮೊದಲಾದ ಮತವಿಚಾರಗಳನ್ನೂ ವೇದಶಾಸ್ತ್ರ ಮೊದಲಾದ ಸಂಗತಿಗಳನ್ನೂ ಕುರಿತು ಹೇಳದಿರುವುದು ಆಶ್ಚರ್ಯ, ವಿವಾಹ, ಶಿಶುರಕ್ಷಣೆ, ಮದ್ಯ ತಯಾರಿಕೆ, ನೃತ್ಯ, ಸುಗಂಧ ದ್ರವ್ಯಗಳು, ವಾಹನಗಳು ಮೊದಲಾದ ವಿಷಯಗಳನ್ನು ಕಡೆಯ ಪ್ರಕರಣದಲ್ಲಿ ಹೇಳಲಾಗಿದೆ.

ಡಾ॥ರಾಮು: ಹದಿನಾರನೆಯ ಆಧ್ಯಾಯದಲ್ಲಿ ಛಂದಃಶಾಸ್ತ್ರದ ಬಗ್ಗೆ ಅನೇಕ ಸಂಗತಿಗಳು ಬರುತ್ತವೆ. ರಾಗಲಕ್ಷಣ ಪ್ರಬಂಧಲಕ್ಷಣಗಳಲ್ಲದೆ ಶ್ಲೋಕ, ವೃತ್ತ ತ್ರಿಪದಿ, ಷಟ್ಪದಿ, ಚೌಪದಿ, ಕಂದ–ಇವುಗಳ ಲಕ್ಷಣವೂ ವಿವರವೂ ಇಲ್ಲಿ ಬಂದಿವೆ.

ಡಾ॥ಶೀಲ: ಇದನ್ನೆಲ್ಲ ಪರಿಶೀಲಿಸಿದರೆ ಆಗಿನ ಕಾಲದಲ್ಲಿ ಇದ್ದ ಜನಾಭಿರುಚಿಯ ವಿಷಯಗಳನ್ನೇ ಸೋಮೇಶ್ವರ ಈ ಗ್ರಂಥದಲ್ಲಿ ತನ್ನ ಆಸ್ಥಾನಪಂಡಿತರ ಸಹಾಯದಿಂದ ಸಂಗ್ರಹಿಸಿ ಹೇಳಿದ್ದಾನೆಂದು ತಿಳಿಯಬಹುದು. ಈ ಅಮೋಘ ಕಾರ್ಯದಿಂದಾಗಿ ಸೋಮೇಶ್ವರ ಸರ್ವಜ್ಞಭೂಪನೆಂಬ ಬಿರುದಿಗೆ ಪಾತ್ರನಾಗಿದ್ದಾನೆ.

ಡಾ॥ರಾಮು: ಅಸತ್ಯ. ಪರದ್ರೋಹ, ಆಗಮ್ಯ ಮತ್ತು ಅಭಕ್ಷ್ಯ ವಸ್ತುಗಳು, ಅಸೂಯಾ, ಪತಿತಸಂಗ, ಕ್ರೋಧ, ಆತ್ಮಸ್ತುತಿ ಇವನ್ನು ವರ್ಜಿಸಬೇಕೆಂದು ಈ ಗ್ರಂಥಧ ಪ್ರಾರಂಭದಲ್ಲೇ ಸೂಚನೆ ಇದೆ. ದಾನ, ಮನೋಹರವಾಕ್ಯ, ಇಷ್ಟಾಪೂರ್ವಪ್ರವರ್ತನಾ, ಗೋವಿಪ್ರಭಕ್ತಿ, ದೇವತಾಭಕ್ತಿ, ಪಿತೃತರ್ಪಣ, ಅತಿಥಿಪೂಜೆ, ಗುರುಶುಶ್ರೂಷೆ, ತಪಸ್ಸು ತೀರ್ಥಸ್ನಾನ ದೀನಾನಾಥರ ಪೋಷಣೆ ಇತ್ಯಾದಿಗಳನ್ನು ಮಾಡಬೇಕೆಂಬ ಬೋಧೆಯೂ ಇಲ್ಲಿದೆ.

ಡಾ॥ಶೀಲ: 2ನೆಯ ಪ್ರಕರಣದಲ್ಲಿ ಅಮಾತ್ಯ, ಸುಹೃತ್, ಪುರೋಹಿತ, ಸೇನಾಪತಿ, ಧರ್ಮಾಧಿಕಾರಿ, ಗಣಕ, ಲೇಖಕ, ಸಾರಥಿ, ಅಡಿಗೆಯವ, ವೈದ್ಯ ಇತ್ಯಾದಿ ವಿಷಯಗಳು ನಿರೂಪಿತವಾಗಿವೆ. ಈ ಗ್ರಂಥದ ಕಟ್ಟ ಕಡೆಯಲ್ಲಿ ಗೀತಾದಿ ವಿನೋದ, ವಾದ್ಯವಿನೋಧ, ನೃತ್ಯವಿನೋದ, ಚಮತ್ಕಾರ ವಿನೋದ ಇತ್ಯಾದಿ ವಿಷಯಗಳೂ ಸ್ವಾರಸ್ಯವಾಗಿ ನಿರೂಪಿತವಾಗಿವೆ. ಭೂಚರಕ್ರೀಡೆ, ವನಕ್ರೀಡೆ, ಅಂದೋಲನ ಕ್ರೀಡೆ, ಸೇಚನಕ್ರೀಡೆ, ವಾನುಕಾಕ್ರೀಡೆ, ತಿಮಿರಕ್ರೀಡೆ, ವೀರಕ್ರೀಡೆ, ರತಿಕ್ರೀಡೆ ಇವುಗಳ ವಿವರಗಳೊಂದಿಗೆ ಗ್ರಂಥ ಮುಕ್ತಾಯವಾಗುತ್ತದೆ. ಈ ವಿಚಾರಗಳು ಅಂದಿನ ಜನಜೀವನ ಸ್ಥಿತಿಗಳನ್ನು ಅಭಿರುಚಿಗಳನ್ನು ತಿಳಿಯಲು ತುಂಬಾ ಸಹಾಯಕವಾಗಿವೆ.

ಡಾ||ರಾಮು: ಅನಂತರ ಕನ್ನಡನಾಡಿನ ತೆಂಕಣ ದಿಕ್ಕಿನಲ್ಲಿ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಶಂಭುಲಿಂಗನ ಬೆಟ್ಟದಲ್ಲಿ (ಚಿಲಕವಾಡಿ ಬೆಟ್ಟ) ಸುಮಾರು 13ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದ ಮಹಾಕವಿಯಾದ ನಿಜಗುಣಶಿವಯೋಗಿ ಕನ್ನಡ ಭಾಷೆಯಲ್ಲಿ ರಚಿಸಿರುವ ವಿವೇಕ ಚಿಂತಾಮಣಿ ಗಮನಾರ್ಹವಾಗಿದೆ. ಇದು ಕನ್ನಡದಲ್ಲಿ ಮೊಟ್ಟ ಮೊದಲು ರಚಿಸಲ್ಪಟ್ಟ ಜ್ಞಾನಕೋಶ.

ಡಾ||ಶೀಲ: ಇಲ್ಲಿ ಕೋಶ ಎಂಬುದನ್ನು ನಿಘಂಟು ಎಂಬರ್ಥದಲ್ಲಿ ಬಳಸದೆ ಸಂಕಲನ ಎಂಬರ್ಥದಲ್ಲಿ ಬಳಸಿದೆ. ಈ ಮಹತ್ತ್ವದ ಗ್ರಂಥವನ್ನು ಸತಾರ ಜಿಲ್ಲೆಯ ಸಿಂಘಣಾಪುರದ ಕಾಂತೇಶ್ವರನೆಂಬ ಕವಿ 16ನೆಯ ಶತಮಾನದಲ್ಲಿ ಮರಾಠಿಗೂ ತಮಿಳುನಾಡಿನಲ್ಲಿ 17ನೆಯ ಶತಮಾನದಲ್ಲಿ ಪ್ರಸಿದ್ಧನಾಗಿದ್ದ ಶಿವಪ್ರಕಾಶನೆಂಬ ಮಹಾಕವಿ ತಮಿಳು ಭಾಷೆಗೂ 18ನೆಯ ಶತಮಾನದಲ್ಲಿ ಮೈಸೂರು ಭಾಗದ ಹರಪುರದ ಲಿಂಗರಾಜ ಸಂಸ್ಕೃತ ಭಾಷೆಗೂ ಭಾಷಾಂತರಿಸಿದರೆಂಬುದು ಇಲ್ಲಿ ಗಮನಾರ್ಹ.

ಡಾ||ರಾಮು: ವೇದ ಪುರಾಣಶಾಸ್ತ್ರದೊಳ್ ನೇಮಿಸಿತೋರ್ಪ ವಿಶ್ವ ವಿಷಯಂಗಳ ಸುಸ್ಥಿತಿಯಂ ವಿವೇಕ ಚಿಂತಾಮಣಿ ಎಂಬ ಪೆಸರಿಟ್ಟು ಪ್ರೇಮದಿ ಪೇಳ್ವೆಂ–ಎಂಬುದಾಗಿ ಕವಿ ಗ್ರಂಥವನ್ನು ಪ್ರಾರಂಭಿಸಿದ್ದಾನೆ. ಈ ಗ್ರಂಥ 10 ಪರಿಚ್ಛೇದಗಳಾಗಿ ವಿಭಾಗಿಸಲ್ಪಟ್ಟಿದೆ. 535 ವಿವಿಧ ವಿಷಯಗಳನ್ನು ಕುರಿತು ಇಲ್ಲಿ ಹೇಳಲಾಗಿದೆ.

ಡಾ||ಶೀಲ: ಈಶ್ವರ, ವೇದ, ವೇದಾಂಗ, ಉಪನಿಷತ್ತು, ಸ್ಮೃತಿಗಳು, ಕರ್ಮಗಳು, ವರ್ಣಧರ್ಮಗಳು, ಗಣಿತ, ತೂಕಪ್ರಮಾಣ, ಪುರಾಣಗಳು, ಇತಿಹಾಸಗಳು, ಚಾರ್ವಾಕ, ಬೌದ್ಧ ಕೌಳಯಾಮಲ, ಶಾಕ್ತೇಯ, ಪಾಂಚರಾತ್ರ, ವೈದಿಕ, ಲೌಕಿಕಶಾಸ್ತ್ರಗಳು, ಮೀಮಾಂಸೆ, ವೈಶೇಷಿಕ, ಸಾಂಖ್ಯ, ಪಾತಂಜಲ, ಮೋಕ್ಷ ಪ್ರತಿಪಾದನೆ, ಸೂತ್ರ, ಭಾಷ್ಯ, ವ್ಯಾಖ್ಯಾನ, ಲಕ್ಷಣಗಳು–ಇತ್ಯಾದಿ ವಿಷಯಗಳಿಂದ ಈ ಗ್ರಂಥ ಮುಂದುವರಿದಿದೆ. ಆಗಮಭೇದ, ಆಗಮ ಸಂಖ್ಯೆ, ಆಗಮಸಾರ, ಶೈವಭೇದಗಳನ್ನು, ವಿಭೂತಿ, ರುದ್ರಾಕ್ಷ, ಲಿಂಗ, ಮಂತ್ರಸಾಧನೆಗಳು, ಸೃಷ್ಟಿಸ್ವರೂಪ, ಅಷ್ಟದಿಗ್ಗಜಗಳು, ಮರಣಸೂಚನೆ, ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಭೂಕೈಲಾಸ, ಹೇಮಕೂಟ, ಸಿದ್ಧವಟ, ಭರತವರ್ಷ, ರಾಜಲಕ್ಷಣ, ಛಂದಸ್ಸು, ಅಲಂಕಾರ, ಮಹಾಕಾವ್ಯ, ಗಮಕಿ, ವಾದಿ, ವಾಗ್ಮಿ, ಪುಣ್ಯಕ್ಷೇತ್ರಗಳು. ಅಹೋರಾತ್ರಿಗಳ ಕಲ್ಪನೆಗಳು, ನಕ್ಷತ್ರಮಂಡಲ, ಉತ್ತಮ ಲೋಕಪ್ರಾಪ್ತಿ, ಪಾಪಿಷ್ಠರಿಗೆ ದುರ್ಗತಿ, ಚತುರ್ಯುಗಗಳು, ಶಾಸ್ತ್ರ ಪ್ರಯೋಜನ–ಇತ್ಯಾದಿ ವಿಷಯಗಳನ್ನು ಕುರಿತು ಗ್ರಂಥಕಾರ ಹೃದಯಂಗಮವಾಗಿ ವಿವೇಚಿಸಿದ್ದಾನೆ. ನಿಜವಾಗಿಯೂ ಇದು ಒಂದು ಕನ್ನಡದ ಜ್ಞಾನಭಂಡಾರವೆಂದು ಹೇಳಬಹುದು. ಮೊಟ್ಟಮೊದಲು ಸಂಗೀತಶಾಸ್ತ್ರವನ್ನು ಕುರಿತು ವಿಸ್ತಾರವಾಗಿ ಹೇಳಿರುವುದು ಈ ಗ್ರಂಥದಲ್ಲಿ ಮಾತ್ರವೆಂಬುದು ಇಲ್ಲಿ ಸ್ಮರಣಾರ್ಹವಾಗಿದೆ.

ಡಾ||ರಾಮು: ಆಮೇಲೆ ಕರ್ಣಾಟಕದ ಮಲೆನಾಡಿನಲ್ಲಿ ರಾಜ್ಯಭಾರ ಮಾಡುತ್ತಿದ್ದ ಕೆಳದಿಯಬಸವರಾಜ (1696–1714) ಸಂಸ್ಕೃತ ಭಾಷೆಯಲ್ಲಿ ಬರೆದಿರುವ ಶಿವತತ್ತ್ವರತ್ನಾಕರಃ ಎಂಬ ಬೃಹದ್‌ಗ್ರಂಥ ಕನ್ನಡನಾಡಿನಲ್ಲಿ ರಚನೆಯಾದ ಒಂದು ಹಿರಿಯ ಜ್ಞಾನಕೋಶವೆಂದು ಹೇಳಬಹುದು.

ಡಾ||ಶೀಲ: ಇದು ಹಿಂದಿನ ಎರಡು ವಿಶ್ವಕೋಶಗಳಿಗಿಂತಲೂ ಬೃಹತ್ತು ಮತ್ತು ಮಹತ್ತುಗಳಿಂದ ಅಧಿಕವಾಗಿದೆ. ಇದರಲ್ಲಿ 9 ಕಲ್ಲೋಲಗಳೂ 108 ತರಂಗಗಳೂ ಇವೆ: ಒಟ್ಟು 13,117 ಶ್ಲೋಕಗಳಿವೆ. ಗ್ರಂಥಕಾರ ಪ್ರತಿಯೊಂದು ತರಂಗದ ಕಡೆಯಲ್ಲಿಯೂ ತಾನು ಯಾವಯಾವ ಪ್ರಾಚೀನ ಗ್ರಂಥಗಳಿಂದ ವಿಷಯವನ್ನು ಸಂಗ್ರಹಿಸಿದ್ದಾನೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ.

ಡಾ॥ರಾಮು: ಇದು ಅವನ ಆಗಾಧವಾದ ಜ್ಞಾನಕ್ಕೂ ಪ್ರಾಮಾಣಿಕತೆಗೂ ನಿದರ್ಶನವಾಗಿದೆ. ಈ ಕೃತಿ 1927ರಲ್ಲಿ ಮದರಾಸಿನಲ್ಲೂ 1964ರಲ್ಲಿ ಮೈಸೂರಿನಲ್ಲೂ ಅಚ್ಚಾಗಿದೆ. ಇತ್ತೀಚೆಗೆ ಕನ್ನಡ ಲಿಪಿಯಲ್ಲಿ ಚಿತ್ರದುರ್ಗ ಮುರುಘಾಮಠದಲ್ಲಿಯೂ ಬೆಳಕಿಗೆ ಬಂದಿದೆ (1965). ಇದರಲ್ಲಿ ಕೆಳದಿಯ ರಾಜರು, ವಿಜಯನಗರ ರಾಜ್ಯಸ್ಥಾಪನೆ, ಬಸವೇಶ್ವರ ಚರಿತ್ರೆ, ಮೊದಲಾದ ಐತಿಹಾಸಿಕ ಸಂಗತಿಗಳಿವೆ.

ಡಾ॥ಶೀಲ: ವೇದ, ವೇದಾಂಗ, ಉಪನಿಷತ್ತು, ಮೀಮಾಂಸೆ, ಪುರಾಣ ಆಗಮಗಳು, ಅಯುರ್ವೇದ, ಧನುರ್ವೇದ ಗಾಂಧರ್ವವೇದ, ಅರ್ಥಶಾಸ್ತ್ರ, ನ್ಯಾಯಶಾಸ್ತ್ರ, 68 ಕಲೆಗಳು ಗುರು, ಭಕ್ತ, ಜಂಗಮ, ಪ್ರಣವ, ಪಂಚಾಕ್ಷರಿ, ಜಗತ್ತು, ಇಪ್ಪತ್ತೈದು ತತ್ತ್ವಗಳು ಇತ್ಯಾದಿಗಳಿವೆಯಲ್ಲದೆ ಬ್ರಹ್ಮಾಂಡ, ನರಕ, ಪಾತಾಳ, ಸಪ್ತ ದ್ವೀಪಗಳು, ಅಷ್ಟದಿಕ್ಪಾಲಕರು, ನವಖಂಡಗಳು, ಸಮುದ್ರ, ಊರ್ಧ್ವಲೋಕ, ನವಗ್ರಹಗಳು, ಗಾಂಧರ್ವಲೋಕ, ನಕ್ಷತ್ರಮಂಡಲ, ಕಾಮಧೇನುಗಳು ಇತ್ಯಾದಿ ವಿಷಯಗಳೂ ಇವೆ. ಅನಂತರ ಭರತವರ್ಷ, ಸಪ್ತಕುಲಾಚಲಗಳು, ಚತುರ್ವರ್ಣಗಳು, ಚತುರಾಶ್ರಮಗಳು, ಶರಭಾವತಾರ, ಪಾಶುಪತಯೋಗ, ವಿಜಯನಗರದ ರಾಜರು ಇತ್ಯಾದಿ ವಿಷಯಗಳನ್ನು ನಿರೂಪಿಸಿ ಗ್ರಂಥ ಮುಂದುವರಿಯುತ್ತದೆ.

ಡಾ॥ರಾಮು: ಮಾನಸೋಲ್ಲಾಸ ಕರ್ಣಾಟಕದ ಉತ್ತರದ ಕಲ್ಯಾಣದಲ್ಲಿಯೂ ವಿವೇಕ ಚಿಂತಾಮಣಿ ದಕ್ಷಿಣದಿಕ್ಕಿನ ಕೊಳ್ಳೇಗಾಲದ ಶಂಭುಲಿಂಗನ ಬೆಟ್ಟದಲ್ಲಿಯೂ ಶಿವತತ್ತ್ವರತ್ನಾಕರ ಪಶ್ಚಿಮ ದಿಕ್ಕಿನ ಕೆಳದಿಯಲ್ಲಿಯೂ ವಿರಚಿತವಾಗಿರುವುದು ಇಲ್ಲಿ ಗಮನಾರ್ಹವಾಗಿದೆ.

ಡಾ॥ಶೀಲ: ಮೇಲ್ಕಂಡ ಗ್ರಂಥಗಳು ಜ್ಞಾನಕೋಶವೆಂಬ ಹೆಸರಿಗೆ ತಕ್ಕವೆನಿಸುವ ಮೂರು ಹೆಬ್ಬೊತ್ತಗೆಗಳು. ಇವಲ್ಲದೆ ಕ್ರಿ.ಶ. ಸುಮಾರು 1145ರಲ್ಲಿ ಇದ್ದ ನಾಗವರ್ಮ ಬರೆದಿರುವ ಲೋಕಾಪಹಾರ ಕ್ರಿ. ಶ. ಸುಮಾರು 1425ರಲ್ಲಿ ವಿಜಯನಗರದಲ್ಲಿ ದಂಡನಾಯಕನಾಗಿದ್ದ ಲಕ್ಕಣ್ಣದಂಡೇಶ ಬರೆದಿರುವ ಶಿವತತ್ತ್ವಚಿಂತಾಮಣಿ 1513ರಲ್ಲಿ ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಜೀವಿಸಿದ್ದ ಮಹಾಕವಿ ಮಲ್ಲಣಾಚಾರ್ಯ ಬರೆದಿರುವ ವೀರಶೈವಾಮೃತ ಮಹಾಪುರಾಣ. ಕ್ರಿ. ಶ. ಸು. 1700ರಲ್ಲಿ ಮೈಸೂರಿನಲ್ಲಿ ಜೀವಿಸಿದ್ದ ವೀರರಾಜ ಬರೆದಿರುವ ಸಕಲವೈದ್ಯ ಸಂಹಿತಾಸಾರಾರ್ಣವ ಎಂಬ ಗ್ರಂಥಗಳು ವಿಶ್ವಕೋಶವನ್ನು ರಚಿಸುವವರಿಗೆ ಹೆಚ್ಚು ವಿಷಯಗಳನ್ನು ಒದಗಿಸಿಕೊಡುವ ಮಹತ್ತ್ವದ ಗ್ರಂಥಗಳಾಗಿವೆ.

ಡಾ॥ರಾಮು: ಜ್ಞಾನ ಭಂಡಾರಗಳೆನಿಸಿದ ಇಂಥ ಗ್ರಂಥಗಳ ರಚನೆ ಈಚಿನ ವಿಶ್ವಕೋಶಗಳ ತಳಹದಿಯಾಯಿತೆನ್ನಬಹುದು. ಶಾಸ್ತ್ರೀಯವಾದ ವಿಶ್ವಕೋಶ ರಚನೆ ಪ್ರಾರಂಭವಾದದ್ದು ಈಚೆಗೆ ಇಪ್ಪತ್ತನೆಯ ಶತಮಾನದ ಎರಡು ಮೂರು ದಶಕಗಳು ಕಳೆದ ಮೇಲೆ.

ಡಾ॥ಶೀಲ: ಶಿವರಾಮಕಾರಂತ: ಶಿವರಾಮ ಕಾರಂತರ ಬಾಲಪ್ರಪಂಚ (1931) ಮೂರು ಸಂಪುಟಗಳ ಮೊದಲ ವಿಶ್ವಕೋಶ. ಸಚಿತ್ರವಾದ ಈ ಗ್ರಂಥ ಮಕ್ಕಳಿಗಾಗಿ ಸೃಷ್ಟಿಯಾದುದು. ಇಲ್ಲಿ ಶಾಸ್ತ್ರ ವಿಷಯಗಳು ಬರುತ್ತವೆ. ನಡುನಡುವೆ ಕಥೆ. ಕವನ ಮುಂತಾದ ರಂಜಕ ವಿಷಯಗಳು ಬರುವುದರಿಂದ ಮಕ್ಕಳು ಆಸಕ್ತಿಯಿಂದ ಇವನ್ನು ಓದಲು ಅನುಕೂಲಕರವಾಗಿದೆ.

ಡಾ॥ರಾಮು: ಇಂಗ್ಲಿಷಿನಲ್ಲಿ ಆರ್ಥರ್ ಮೀಯ ಎಂಬಾತ ಮೊದಲು ಮಕ್ಕಳಿಗಾಗಿ ಒಂದು ವಿಶ್ವಕೋಶವನ್ನು ರಚಿಸಿದ. ಅದರಲ್ಲಿ ಸಾಹಿತ್ಯದಿಂದ ಆಯ್ದ ಅನೇಕಾನೇಕ ಸುಂದರ ಕಥೆಗಳು, ಕವನಗಳು ಇವೆ. ಮಕ್ಕಳು

ಕೇಳಬಹುದಾದ ಸಾವಿರಾರು ಪ್ರಶ್ನೆಗಳು, ಅವಕ್ಕೆ ಸಮಂಜಸವಾದ ಉತ್ತರಗಳು ಇವೆ. ಶಾಸ್ತ್ರವಿಷಯಗಳು ಸಚಿತ್ರವಾಗಿ ಬಂದಿವೆ. ಈ ಮಾದರಿ ಮಕ್ಕಳಿಗೆ ಹೇಳಿಮಾಡಿಸಿದ್ದು, ಪ್ರಕಟವಾದೊಡನೆಯೆ ಆರ್ಥರ್ ಮೀಯ ಈ ಸಂಪುಟಗಳು ಮಕ್ಕಳ ಮತ್ತು ಪೋಷಕರ ಗಮನವನ್ನು ಸೆಳೆದವು. ಅಲ್ಲಿಂದೀಚೆಗೆ ಇದೇ ಮಾದರಿಯ ಅನೇಕಾನೇಕ ಗ್ರಂಥಗಳು ಇಂಗ್ಲಿಷ್‌ನಲ್ಲಿ ಬಂದಿವೆ. ಕಾರಂತರ ಬಾಲಪ್ರಪಂಚ ಕನ್ನಡದಲ್ಲಿ ಇಂಥದೊಂದು ಸಾಹಸ.

ಡಾ॥ಶೀಲ: ಇದಾದ ಮೇಲೆ ಕಾರಂತರು ನಾಲ್ಕು ಸಂಪುಟಗಳಲ್ಲಿ (1959–1964) ವಿಜ್ಞಾನ ಪ್ರಪಂಚವೆಂಬ ವಿಷಯ ವಿಶ್ವಕೋಶವೊಂದನ್ನು ಪ್ರಕಟಿಸಿದ್ದಾರೆ.

ಡಾ॥ರಾಮು: ಮೊದಲ ಭಾಗವಾದ ಈ ಜಗತ್ತು ಎಂಬುದರಲ್ಲಿ ಖಗೋಳ, ಭೂಗೋಳ, ಸಾಗರ, ವಾತಾವರಣ ಮುಂತಾದ ವಿಷಯಗಳೂ ಎರಡನೆಯ ಭಾಗವಾದ ಜೀವ, ಜೀವನದಲ್ಲಿ ಜೀವ ವಿಜ್ಞಾನ, ಸಸ್ಯವಿಜ್ಞಾನ, ಪ್ರಾಗ್‌ಜೀವವಿಜ್ಞಾನ, ಆರೋಗ್ಯಶಾಸ್ತ್ರ. ಮನಃಶಾಸ್ತ್ರ, ಪ್ರಕೃತಿ ವಿಜ್ಞಾನಗಳಿಗೂ ಮೂರನೆಯ ಭಾಗವಾದ ವಸ್ತು, ಚೈತನ್ಯದಲ್ಲಿ ವಿಜ್ಞಾನದ ಇತಿಹಾಸ, ಪರಮಾಣುಚರಿತ್ರೆ, ರಸಾಯನಶಾಸ್ತ್ರ, ಭೌತವಿಜ್ಞಾನ, ಸಾಪೇಕ್ಷ ಸಿದ್ಧಾಂತ ಮೊದಲಾದ ವಿಷಯಗಳೂ ನಾಲ್ಕನೆಯ ಭಾಗವಾದ ವಿಜ್ಞಾನ ಸಾಧನದಲ್ಲಿ ಎಲೆಕ್ಟ್ರಾನಿಕ್ಸ್, ಎಂಜಿನಿಯರಿಂಗ್, ಬದುಕಿನ ಸಮಸ್ಯೆಗಳು, ಸಾಹಸಗಳು, ವಿಜ್ಞಾನಿಗಳು–ಮುಂತಾದ ವಿಷಯಗಳೂ ಬಂದಿವೆ.

ಡಾ॥ಶೀಲ: ಪ್ರೌಢಶಾಲೆಯ ಕೊನೆಯ ಹಂತದಲ್ಲಿರುವ ವಿದ್ಯಾರ್ಥಿ ಶ್ರಮವಿಲ್ಲದೆ ನೇರವಾಗಿ ಕನ್ನಡದ ಮೂಲಕ ವಿಜ್ಞಾನ ವಿಷಯಗಳನ್ನು ತಿಳಿಯಲು ಈ ಗ್ರಂಥಗಳು ಉತ್ತಮ ಸಾಧನಗಳಾಗಿವೆ. ಪಾರಿಭಾಷಿಕ ಶಬ್ದಗಳನ್ನು ಆಯುವಲ್ಲಿ, ಶಾಸ್ತ್ರೀಯ ವಿಷಯವನ್ನು ಪ್ರತಿಪಾದಿಸುವಲ್ಲಿ ಉದ್ದಕ್ಕೂ ಲೇಖಕರು ತಮ್ಮ ಸಹಜ, ಸರಳ ಮನೋಧರ್ಮವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಡಾ॥ರಾಮು: ಉದಾಹರಣೆಗಳು ಕೇವಲ ವಿದೇಶೀಯವಾಗಿಲ್ಲ. ಬೇಕಾದಷ್ಟು ದೇಶೀಯ ನಿದರ್ಶನಗಳೂ ಬರುತ್ತವೆ. ಹತ್ತು ಕಡೆಯಿಂದ ಸಂಗ್ರಹಿಸಿದ ಮಕರಂದವನ್ನಿಲ್ಲಿ ಸ್ವಾನುಭವದಿಂದ ಮಧುವನ್ನಾಗಿ ಮಾಡಲಾಗಿದೆ. ವಿಜ್ಞಾನದ ಸಮಗ್ರ ಆದರೂ ಸಂಕ್ಷೇಪ ನಿರೂಪಣೆಯನ್ನು ಇಲ್ಲಿ ಕಾಣಬಹುದಾಗಿದೆ. ವಿಷಯಕ್ಕೆ ಒಪ್ಪುವ ಹಲವಾರು ಚಿತ್ರಗಳಿವೆ. ಇದೆಲ್ಲವೂ ಒಬ್ಬ ವ್ಯಕ್ತಿಯ ಸಾಧನೆ ಎಂಬ ವಿಷಯವನ್ನು ನೆನೆದಾಗಲಂತೂ ಓದುಗರಲ್ಲಿ ಕೃತಜ್ಞತೆ ಉಕ್ಕುತ್ತದೆ.

ಡಾ॥ಶೀಲ: ಅನುವಾದಿತ ವಿಶ್ವಕೋಶ: ಕನ್ನಡ ವಿಶ್ವಕೋಶ ಚರಿತ್ರೆಯಲ್ಲಿ ಗಮನಾರ್ಹವಾದ ಒಂದು ಗ್ರಂಥ 1927ರಲ್ಲಿ ಪ್ರಕಟವಾಯಿತು. ಬೆಂಗಳೂರಿನ ಟ್ರ್ಯಾಕ್ಟ್ ಅಂಡ್ ಬುಕ್ ಸೊಸೈಟಿಯವರು ಪ್ರಕಟಿಸಿರುವ ಈ ಎರಡು ಸಂಪುಟಗಳ ಹೆಸರು ಹೊಸ ಒಡಂಬಡಿಕೆಯ ವೇದಕೋಶ–ಎಂದು.

ಡಾ॥ರಾಮು: ಇದರಲ್ಲಿ ಕ್ರೈಸ್ತಧರ್ಮ, ಪುರಾಣ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಅಕಾರಾದಿಯಾಗಿ ಕೊಡಲಾಗಿದೆ. ತಮಿಳಿನಲ್ಲಿ ಇದು ಮೊದಲು ಅಚ್ಚಾಗಿದ್ದು ಅನಂತರ ಹೆಚ್ಚಿನ ವಿವರಗಳೊಂದಿಗೆ ಕನ್ನಡಕ್ಕೆ ಅನುವಾದಗೊಂಡಿದೆ. ಸಂಪಾದಕರು ಚಿಂತಾಮಣಿ ಕೇಲೆಬ್ ಮತ್ತು ಇ. ಸ್ಟಾಂಲೆ ಎಡ್ವರ್ಡ್ಸ್. ಇಲ್ಲಿಯವನ್ನು ಬಾಲಪಾಠಗಳು ಎನ್ನಲಾಗಿದೆ. ಅಂದರೆ ಕ್ರೈಸ್ತಧರ್ಮಾದಿಗಳನ್ನು ತಿಳಿಯಬಯಸುವವರಿಗೆ ಇದು ಪ್ರವೇಶಕವಿದ್ದಂತೆ. ಇಲ್ಲಿಯ ಲೇಖನಗಳು ಅಧಿಕೃತವಾಗಿವೆ. ಭಾಷೆ

ಸುಲಲಿತವಾಗಿದೆ. ಪ್ರತಿವಿಷಯಕ್ಕೂ ವಿಪುಲವಾಗಿ ಆಧಾರಗಳನ್ನು ಕೊಡಲಾಗಿದೆ. ಉದಾಹರಣೆಗಾಗಿ ಇಲ್ಲಿಯ ಒಂದು ಶೀರ್ಷಿಕೆಯನ್ನು ನೋಡಬಹುದು.

ಡಾ॥ರಾಮು: ವಿಶ್ವಕೋಶ ತನ್ನದೇ ಆದ ವಿಧಾನವೊಂದನ್ನು ರೂಪಿಸಿ ಕೊಳ್ಳುವುದು ಅವಶ್ಯವಾಗಿತ್ತು. ಆ ವರ್ಷ ಕಳೆಯುವುದರೊಳಗೆ ಕಾರ್ಯದ ಸಮಗ್ರ ಯೋಜನೆ ಸಿದ್ಧವಾಯಿತು. 1969ನೇ ಇಸವಿ ಅಂತ್ಯವಾಗುವ ಮುನ್ನವೇ ವಿಶ್ವಕೋಶದ ಪ್ರಥಮ ಸಂಪುಟವನ್ನು ಜನತೆಯ ಕೈಯಲ್ಲಿಡಬಹುದೆಂಬ ಭರವಸೆ ಮೂಡಿದ್ದು ಆಗ.

ಡಾ॥ಶೀಲ: 1969ರ ನವೆಂಬರ್ 21ರಂದು ಪ್ರಥಮ ಸಂಪುಟದ ಬಿಡುಗಡೆಯಾದದ್ದು. ಕನ್ನಡ ಭಾಷೆಯ ಇತಿಹಾಸದಲ್ಲೊಂದು ಮಹೋಜ್ಜ್ವಲ ಘಟನೆ. ಈ ಕೋಶ ಮತ್ತೊಂದು ವಿಚಾರವನ್ನೂ ಸ್ಪಷ್ಟಪಡಿಸಿದೆ, ವೈಜ್ಞಾನಿಕ, ಮಾನವಿಕ, ತಾಂತ್ರಿಕ–ಯಾವುದೇ ವಿಷಯವನ್ನಾದರೂ ಕನ್ನಡದಲ್ಲಿ ಸರಳವಾಗಿ, ಸುಲಭವಾಗಿ, ಹೃದಯ ವೇದ್ಯವಾಗುವಂತೆ ಹೇಳಬಹುದೆಂಬುದಕ್ಕೆ ಈ ಸಂಪುಟ ಸಾಕ್ಷೀಭೂತವಾಗಿದೆ.

ಡಾ॥ರಾಮು: ಕನ್ನಡ ವಿಜ್ಞಾನ ಭಾಷೆಯಾಗಿ ಬೆಳೆದಿಲ್ಲವೆಂಬ ಸೊಲ್ಲು ಎಷ್ಟು ನಿರರ್ಥಕವಾದುದೆಂಬುದನ್ನು ಈ ಸಂಪುಟ ಪ್ರಮಾಣೀಕರಿಸುತ್ತದೆ–ಎಂದು ಆಗ ಪ್ರಧಾನ ಸಂಪಾದಕರಾಗಿದ್ದ ದೇ. ಜವರೇಗೌಡ ಅವರು ಪೀಠಿಕೆಯಲ್ಲಿ ಬರೆದಿದ್ದಾರೆ.

ಡಾ॥ಶೀಲ: ಪ್ರಥಮ ಸಂಪುಟದ ಮುಖ್ಯ ಲಕ್ಷಣಗಳಿವು: ಗ್ರಂಥದ ಆಕಾರ ಡೆಮಿ ಚತುರ್ಥಾಕಾರದ ಸುಮಾರು 1,000 ಪುಟ; 10 ಪಾಯಿಂಟ್ ಅಕ್ಷರದಲ್ಲಿ ಆಕರ್ಷಕ ಮುದ್ರಣ; ಕನ್ನಡ ವರ್ಣಮಾಲೆಯ ಆಕಾರದಿಂದಾರಂಭವಾಗಿ ಆರ್ಸೆನಿಕ್‌ವರೆಗೆ 1,500 ವಿಷಯಗಳ ಮೇಲೆ ಲೇಖನಗಳು; ಆವಶ್ಯವಿದ್ದೆಡೆಯಲ್ಲೆಲ್ಲ ಚಿತ್ರ (ಇವುಗಳಲ್ಲಿ ಹಲವು ಹೊಳಪು ಕಾಗದದ ಮೇಲೆ ಅಚ್ಚಾಗಿರುವುದಲ್ಲದೆ ಕೆಲವು ವರ್ಣರಂಜಿತ); ಇಂಗ್ಲಿಷಿನ ಬ್ರಿಟಾನಿಕ ವಿಶ್ವಕೋಶದ ಮಾದರಿಯಲ್ಲೆ ಇದರ ವಿನ್ಯಾಸ. ಮಾನವ ಚಂದ್ರನ ಮೇಲೆ, ಅಬು ಸಿಂಬೆಲ್, ಆಧುನಿಕ ಬೀಜಗಣಿತ, ಆಧುನಿಕ ಪಾಶ್ಚಾತ್ಯ ಚಿಂತನೆ ಇವು ಅಲ್ಲಿ ವಿವೇಚಿಸಲಾಗಿರುವ ಪ್ರಮುಖ ವಿಷಯಗಳಲ್ಲಿ ಕೆಲವು.

ಡಾ॥ರಾಮು: ಎರಡನೆಯ ಸಂಪುಟದ ಮೊದಲ ಲೇಖನ ಆಲ; ಕೊನೆಯದು ಎರಟಾಸ್ಥನೀಸ್, ಈ ಎರಡು ಸಂಪುಟಗಳಲ್ಲಿ ಕನ್ನಡದ ಮೊದಲ ಏಳು ಅಕ್ಷರಗಳು ಸಂಪೂರ್ಣವಾಗಿಯೂ ಎಂಟನೆಯದು ಭಾಗಶಃವಾಗಿಯೂ ಬಂದಿವೆ. ಆಕಾರವೇ ಮುಂತಾದ ಎಲ್ಲದರಲ್ಲೂ ಮೊದಲನೆಯ ಸಂಪುಟದಂತೆಯೇ ಎರಡನೆಯದು ಕೂಡ. 1970ರ ಅಕ್ಟೋಬರ್ 12ರಂದು ಎರಡನೆಯ ಸಂಪುಟದ ಬಿಡುಗಡೆಯಾಯಿತು.

ಡಾ॥ಶೀಲ: ಇಸ್ಲಾಂ, ಋಗ್ವೇದ, ಉಪನಿಷತ್, ಎಕ್ಸ್‌ಕಿರಣ ಖಗೋಳಶಾಸ್ತ್ರ, ಎಕ್ಸ್‌ಪೊ, ಇಮ್ಯೂನ್ಯೋ ರಸಾಯನಶಾಸ್ತ್ರ, ಈಜಿಪ್ಟ್, ಇಂಟರ್‌ಫೆರಾನ್–ಇವು ಈ ಸಂಪುಟದಲ್ಲಿ ವಿವೇಚಿಸಲಾದ ಸುಮಾರು 1,000 ಶೀರ್ಷಿಕೆಗಳಿಂದ ಅಲ್ಲಲ್ಲಿ ಹೆಕ್ಕಿ ತೆಗೆದ ಕೆಲವು ಮುಖ್ಯ ವಿಷಯಗಳು.

ಡಾ॥ರಾಮು: ಸಾಮಾನ್ಯ ವಿಶ್ವಕೋಶದಲ್ಲಿ ಈ ಶಾಸ್ತ್ರಗಳೆಲ್ಲ ಅಡಕವಾಗಿವೆ: ಸೌಂದರ್ಯತತ್ತ್ವ ಪಾಶ್ಚಾತ್ಯ ಸಾಹಿತ್ಯ, ಪೌರಸ್ತ್ಯ ಸಾಹಿತ್ಯ, ಜಾನಪದ ಸಾಹಿತ್ಯ, ಕಲೆ, ಜೀವನ, ಅರ್ಥಶಾಸ್ತ್ರ, ತತ್ತ್ವ ಮತ್ತು ಧರ್ಮ, ಸಮಾಜಶಾಸ್ತ್ರ, ಪ್ರಾಕ್ತನಶಾಸ್ತ್ರ, ಇತಿಹಾಸ ಭೂಗೋಳ, ರಾಜ್ಯಶಾಸ್ತ್ರ, ವಾಣಿಜ್ಯ, ವ್ಯಾಪಾರ, ಶಿಕ್ಷಣ, ಸಮರ ವಿಜ್ಞಾನ, ನ್ಯಾಯಶಾಸ್ತ್ರ, ಮನಃಶಾಸ್ತ್ರ, ಲಲಿತಕಲೆ, ಉಪಯುಕ್ತ ಕಲೆ, ಸಂಸ್ಕೃತ ಭಾಷೆ, ಸಾಹಿತ್ಯ, ಕನ್ನಡ ಭಾಷೆ–ಸಾಹಿತ್ಯ,

ಭಾಷಾಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಗಣಿತಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭೂವಿಜ್ಞಾನ, ವೈದ್ಯ, ಆಯುರ್ವೇದ, ಯುನಾನಿ, ಹೋಮಿಯೋಪತಿ, ಕೃಷಿ, ತೋಟಗಾರಿಕೆ, ಪಶುವೈದ್ಯ, ಶಿಲ್ಪಿ, ಕ್ರೀಡೆ, ಪ್ರತಿಕೋದ್ಯಮ, ಗ್ರಂಥಾಲಯ ಶಾಸ್ತ್ರ, ಮುದ್ರಣ, ಸಂಖ್ಯಾಶಾಸ್ತ್ರ ಮತ್ತು ಅರಣ್ಯಶಾಸ್ತ್ರ.

ಡಾ॥ಶೀಲ: ಪ್ರಥಮ ಸಂಪುಟ ಗಳಿಸಿದ ಯಶಸ್ಸಿನ ದೃಷ್ಟಿಯಿಂದ ವಿಷಯ ವಿಶ್ವಕೋಶಗಳನ್ನು ಹೊರತರಲು ಬೃಹದ್ಯೋಜನೆಯೊಂದನ್ನು ತಯಾರಿಸಲಾಗಿದೆ. ಪ್ರಾಣಿಶಾಸ್ತ್ರ, ವೈದ್ಯಶಾಸ್ತ್ರ ಮುಂತಾದ 16 ವಿಜ್ಞಾನ ವಿಷಯಗಳು ಇತಿಹಾಸ. ಕರ್ನಾಟಕ, ತತ್ತ್ವಶಾಸ್ತ್ರ, ಭಾಷಾಶಾಸ್ತ್ರ ಮುಂತಾದ 14 ಮಾನವಿಕ ಶಾಸ್ತ್ರ ವಿಷಯಗಳು–ಹೀಗೆ ಒಟ್ಟು 30 ಸ್ವತಂತ್ರ ಸಂಪುಟಗಳನ್ನು ಹೊರ ತರಲು ಯೋಜನೆಯೊಂದು ಈಗ ಸಿದ್ಧವಾಗಿದೆ. ಕನ್ನಡ ವಿಶ್ವಕೋಶ ಕಚೇರಿಯ ಕಾರ್ಯವಿಧಾನದ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಬರೆಯಬಹುದು. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ವಿಶ್ವಕೋಶದ ಆಧಿಕಾರ ಪ್ರಯುಕ್ತ (ಎಕ್ಸ್–ಅಫಿಷಿಯೊ) ಪ್ರಧಾನ ಸಂಪಾದಕರು, ಈ ಕಾರ್ಯ ನಿರ್ವಹಣೆಯಲ್ಲಿ ಇವರಿಗೆ ನೆರವು ನೀಡುವವರು ನಾಲ್ವರು ಸಂಪಾದಕರು ವಿಜ್ಞಾನಕ್ಕಾಗಿ ಒಬ್ಬರು, ಮಾನವಿಕ ವಿಭಾಗಕ್ಕೊಬ್ಬರು, ಇಡೀ ಸಂಪಾದನ ಕಾರ್ಯದ ಸಂಯೋಜನೆಗಾಗಿ ಒಬ್ಬರು, ಯೋಜನೆಯ ಕಾರ್ಯನಿರ್ವಹಣೆಗಾಗಿ ಒಬ್ಬರು; ಇವರ ಜೊತೆಗೆ ಇಬ್ಬರು ಸಹಾಯಕ ಸಂಪಾದಕರು ಮತ್ತು ಮೂವರು ಉಪಸಂಪಾದಕರು. ವಿವಿಧ ಕ್ಷೇತ್ರಗಳಲ್ಲಿ ಲೇಖನಗಳನ್ನು ಬರೆಯುವ ಕಾರ್ಯವನ್ನು ಸಮರ್ಥ ವಿದ್ವಾಂಸರಿಗೆ ಒಪ್ಪಿಸಲಾಗುತ್ತದೆ.

ಡಾ॥ರಾಮು: ಈ ಲೇಖನಗಳನ್ನು ಅವರು ಕನ್ನಡದಲ್ಲೇ ಬರೆಯಬೇಕೆಂಬ ಕಡ್ಡಾಯವೇನೂ ಇಲ್ಲ. ವಿಷಯ ಗಳನ್ನು ಸರಳಶೈಲಿಯಲ್ಲಿ ನಿಷ್ಕೃಷ್ಟವಾಗಿ ನಿರೂಪಿಸಬೇಕೆಂಬುದು ಮುಖ್ಯ ಉದ್ದೇಶ. ಹೀಗೆ ಸಿದ್ಧವಾದ ಲೇಖನಗಳನ್ನು ಸಂಪಾದಕರು ಪರಿಶೀಲಿಸುವರಲ್ಲದೆ ಸಂಬಂಧಪಟ್ಟ ಕೆಲವನ್ನು ಗೌರವ ಸಮಾಲೋಚಕರ ಅವಗಾಹನೆಗಾಗಿಯೂ ಕಳುಹಿಸಲಾಗುವುದು ವಿಷಯದ ಹೂರಣ, ಅಭಿವ್ಯಕ್ತಿ, ಚಿತ್ರಗಳು, ಅವಶ್ಯವಾದ ಹಾಗೂ ಲಭ್ಯವಿರುವ ಹೊಸ ವಿಚಾರಗಳ ಅಡಕ, ಶೈಲಿ ಮತ್ತು ತಾಂತ್ರಿಕ ಶಬ್ಧಗಳ ಏಕರೂಪತೆ, ಸೂಕ್ತ ಸ್ವರೂಪ–ಇವು ಸಂಪಾದಕರು ಮುಖ್ಯವಾಗಿ ಗಮನಿಸುವ ವಿಚಾರ.

ಡಾ॥ಶೀಲ: ಲೇಖಕರಿಂದ ತರಿಸಿದ ಲೇಖನಗಳೇ ಅಲ್ಲದೆ ಅನೇಕ ಹೊಸ ಲೇಖನಗಳನ್ನೂ ಸಂಪಾದಕವರ್ಗದವರು ಬರೆಯುತ್ತಾರೆ. ಸದಾ ಕಣ್ಣಿಟ್ಟು ವಿಷಯ ವೈವಿಧ್ಯವನ್ನೂ ಅದರ ವಿಭಿನ್ನ ಮುಖಗಳನ್ನೂ ಒದಗಿಸುವುದು ಸಂಪಾದಕ ವರ್ಗದ ವಿಶಿಷ್ಟ ಕಾರ್ಯಭಾರ.

ಡಾ॥ರಾಮು: ಇಂತು ಸಾಗಿದೆ–ಕನ್ನಡ ವಿಶ್ವಕೋಶದ ಮಹಾಕಾರ್ಯ. ಕೋಶದ ಒಂದೊಂದು ಹೊಸ ಸಂಪುಟದ ಬಿಡುಗಡೆಯೊಂದಿಗೂ ಕನ್ನಡಭಾಷೆಗೆ ಒಂದೊಂದು ಹೊಸ ಆಯಾಮ ಲಭ್ಯವಾಗುತ್ತದೆ. ಭಾಷೆಗೆ ದೊರಕಿದ ಈ ಹೊಸ ಸತ್ತ್ವಸಂಪತ್ತಿಯಿಂದ ಕೋಶದ ಮುಂದಿನ ಸಂಪುಟಗಳು ಮತ್ತಷ್ಟು ಶ್ರೀಮಂತವಾಗುತ್ತವೆ.

ಡಾ॥ಶೀಲ: ಜ್ಞಾನಗಂಗೋತ್ರಿ: ಏಳು ಸಂಪುಟಗಳಲ್ಲಿ ಪ್ರಕಟವಾಗಲಿರುವ ಕಿರಿಯರ ವಿಶ್ವಕೋಶವಿದು. ಕನ್ನಡ ವಿಶ್ವಕೋಶ ರಚನೆಯ ಹೊಣೆಯನ್ನು ಮೈಸೂರು ವಿಶ್ವವಿದ್ಯಾಲಯ ವಹಿಸಿಕೊಂಡ ಸರಿ ಸುಮಾರಿನಲ್ಲೆ (1968) ಇದರ ಯೋಜನೆಯೂ ಪ್ರಾರಂಭವಾಯಿತು. ಬೆಂಗಳೂರಿನ ಕರ್ನಾಟಕ ಸಹಕಾರೀ ಪ್ರಕಾಶನದವರಿಗೆ ಈ ಯೋಜನೆಯನ್ನು ವಹಿಸಿಕೊಟ್ಟ ಸರ್ಕಾರ ಇದರ ಬಗ್ಗೆ 34 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತು.

ಡಾ॥ರಾಮು: ಮನುಕುಲದ ಕಥೆ; ಜೀವ ವಿಜ್ಞಾನ; ಭೌತ ವಿಜ್ಞಾನ; ತಾಂತ್ರಿಕಜ್ಞಾನ; ಕಲೆ, ಸಾಹಿತ್ಯ; ಕ್ರೀಡೆ,

ಮನೋಲ್ಲಾಸ; ಭಾರತ–ಹೀಗೆ ಏಳು ಸಂಪುಟಗಳುಳ್ಳ ಜ್ಞಾನ ಗಂಗೋತ್ರಿಯ ಸಂಪಾದಕ ಮಂಡಳಿಗೆ ದೇಜಗೌ ಆಧ್ಯಕ್ಷರು ನಿರಂಜನರು ನಿಯಂತ್ರಕರು ಹಾಗೂ ಪ್ರಧಾನ ಸಂಪಾದಕರು. ಎಲ್. ಎಸ್. ಶೇಷಗಿರಿ ರಾಯರು ಸಂಪಾದಕರು. ಈಗಾಗಲೆ ಪ್ರಥಮ ಸಂಪುಟವಾದ ಮನುಕುಲದ ಕಥೆ ಹೊರಬಿದ್ದಿದೆ (1970). ಡೆಮಿ ಚತುರ್ಥಾಕೃತಿಯ 745 ಪುಟಗಳ ಈ ಬೃಹತ್ ಸಂಪುಟದಲ್ಲಿ 600 ಲೇಖನಗಳಿವೆ.

ಡಾ॥ಶೀಲ: ಮಾನವನ ನಾಗರಿಕತೆ, ಸಂಸ್ಕೃತಿ, ಧರ್ಮ, ದರ್ಶನ, ಶಿಕ್ಷಣ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ–ಇವೆಲ್ಲ ಕ್ಷೇತ್ರಗಳಲ್ಲಿ ಆಗಿರುವ ಮಹತ್ಸಾಧನೆಗಳು ಮತ್ತು ಅವನ್ನು ನಿರ್ವಹಿಸಿದ ಮಹಾಪುರುಷರು–ಈ ವಿಷಯಗಳು ಅಕಾರಾದಿಯಾಗಿ ಇಲ್ಲಿ ಬಂದಿವೆ. ಮೊದಲ 72 ಪುಟಗಳಲ್ಲಿ ಒಟ್ಟು ಮನುಕುಲದ ಕಥೆಯ ವಿಸ್ತಾರವಾದ ಸಮೀಕ್ಷೆ ಬಂದಿದೆ. ಸಂಪಾದಕರಾದ ಶೇಷಗಿರಿರಾಯರು ಈ ಕೆಲಸವನ್ನು ಸಮರ್ಪಕವಾಗಿ ಸುಲಲಿತವಾದ ಶೈಲಿಯಲ್ಲಿ ಬಹು ಸಮರ್ಥವಾಗಿ ನಿರ್ವಹಿಸಿದ್ದಾರೆ. ಈ ಸಂಪುಟವನ್ನು ಸಿದ್ಧಪಡಿಸುವಾಗ ಕನ್ನಡನಾಡಿನ ಪ್ರಸಿದ್ಧ ಲೇಖಕರನೇಕರಿಂದ ಮೂಲ ಸಾಹಿತ್ಯವನ್ನೂ ಸಿದ್ಧ ಲೇಖನಗಳನ್ನೂ ತರಿಸಿಕೊಳ್ಳಲಾಗಿದೆ.

ಡಾ॥ರಾಮು: ಅಂಥ ಲೇಖಕರಲ್ಲಿ ಎಚ್. ಸಿ. ಕಪಿನೀಪತಿಭಟ್ಟ, ಡಿ. ವಿ. ಗುಂಡಪ್ಪ, ಜಿ.ಟಿ. ನಾರಾಯಣರಾವ್, ಹಾ.ಮಾ. ನಾಯಕ, ಎಚ್ಚೆಸ್ಕೆ, ಎಂ. ಚಿದಾನಂದ ಮೂರ್ತಿ, ಎ. ಎನ್. ಮೂರ್ತಿರಾವ್, ಕೋ. ಚನ್ನಬಸಪ್ಪ, ಕೆ.ಎಸ್. ದೇಶಪಾಂಡೆ–ಮೊದಲಾದವರಿದ್ದಾರೆ. 11ರಿಂದ 18ರ ವರೆಗಿನ ವಯಸ್ಸಿನವರನ್ನು ಉದ್ದೇಶದಲ್ಲಿಟ್ಟುಕೊಂಡು ಸಿದ್ಧಮಾಡಿದ ಈ ಗ್ರಂಥದಲ್ಲಿ ಪ್ರತಿಪುಟದಲ್ಲೂ ಚಿತ್ರವಿದೆ.

ಡಾ॥ಶೀಲ: ವರ್ಣ ವೈವಿಧ್ಯವಂತೂ ಆಕರ್ಷಕವಾಗಿದೆ. ಕೊನೆಯಲ್ಲಿರುವ ಸಂದರ್ಭಸೂಚಿ ತುಂಬ ಉಪಯುಕ್ತವಾದ ಅನುಬಂಧವಾಗಿದೆ. ಅನಂತರ ಬರುವ ಶಬ್ದಕೋಶದಲ್ಲಿ ಮುಖ್ಯ ಕನ್ನಡ ಪದಗಳಿಗೆ ಸಂವಾದಿಯಾದ ಇಂಗ್ಲಿಷ್ ಪದಗಳನ್ನು ಅಕಾರಾದಿಯಾಗಿ ಕೊಡಲಾಗಿದೆ. ಕನ್ನಡ ಜ್ಞಾನಸಾಹಿತ್ಯಕ್ಷೇತ್ರದಲ್ಲಿ ಜ್ಞಾನಗಂಗೋತ್ರಿಗೆ ಗಣ್ಯಸ್ಥಾನವಿದೆಯೆಂಬುದನ್ನು ಮನುಕುಲದ ಕಥೆ ಸಿದ್ಧಪಡಿಸಿ ತೋರಿಸುತ್ತದೆ.

# 19.ಆಧುನಿಕ ಸಾಹಿತ್ಯ

ಡಾ॥ರಾಮು: ಹಿಂದಿನ ಕೃತಕಾರರಲ್ಲಿ ಹಾಸ್ಯ ಅಲ್ಲೊಮ್ಮೆ ಇಲ್ಲೊಮ್ಮೆ ಇಣುಕುಹಾಕುತ್ತಿತ್ತು. ಅಷ್ಟೆ. ನವರಸಗಳಲ್ಲಿ ಹಾಸ್ಯವೂ ಒಂದಾದ್ದರಿಂದ, ಜೀವನದಲ್ಲಿ ಹಾಸ್ಯವೂ ಬೆರೆತಿರುವುದರಿಂದ, ಅದೂ ಪ್ರಕಟವಾಗಬೇಕಾದ್ದು ಅನಿವಾರ್ಯ, ಆದರೆ ಶೃಂಗಾರ ವೀರ ಕರುಣಾದ್ಭುತಗಳೇ ಮುಂತಾದ ರಸಗಳನ್ನು ಮುಖ್ಯೋದ್ದೇಶವಾಗಿಟ್ಟುಕೊಂಡು ರಚಿಸಿದ ಕೃತಿಗಳು ಇದ್ದಂತೆ ಹಾಸ್ಯ ಪ್ರಧಾನವಾದ ಕೃತಿಗಳು ಹಿಂದೆ ಇರಲಿಲ್ಲವೆಂದೇ ಹೇಳಬೇಕು.

ಡಾ॥ಶೀಲ: ಅವರು ಹಾಸ್ಯಭರಿತ ಸನ್ನಿವೇಶವನ್ನೋ ವ್ಯಕ್ತಿಯನ್ನೋ ಕಂಡು ಚಿತ್ರಿಸುತ್ತಿದ್ದುದುಂಟಾದರೂ ಪ್ರತಿಯೊಂದು ಸನ್ನಿವೇಶದಲ್ಲೂ ಹಾಸ್ಯವನ್ನು ಕಾಣುವ ದೃಷ್ಟಿಗೇ ಅಷ್ಟಾಗಿ ಪ್ರಾಧನ್ಯ ನೀಡಲಿಲ್ಲ. ಆಧುನಿಕ ಕನ್ನಡ ಸಾಹಿತ್ಯ ಈ ಅರಕೆಯನ್ನು ತುಂಬಿದೆ.

ಡಾ॥ರಾಮು: ಹಾಸ್ಯಪ್ರಧಾನವಾದ ಕಾದಂಬರಿ, ಕಥೆ, ಹರಟೆ, ಕವನಗಳೇ ಮುಂತಾದವು ಹಲವು ಪ್ರಕಟವಾಗಿವೆ. ದಿನ, ವಾರ, ಮಾಸಪತ್ರಿಕೆಗಳೂ ಹಲವು ಪ್ರಕಟನ ಸಂಸ್ಥೆಗಳೂ ಅಚ್ಚಿನ ಮನೆಯ ನೆರವಿನಿಂದ ಹಲವಾರು ಲೇಖಕರ ಕೃತಿಗಳನ್ನು ಹೊರತರುತ್ತಿರುವ ಈ ಕಾಲದಲ್ಲಿ ಇವನ್ನೆಲ್ಲ ವೈಜ್ಞಾನಿಕವಾಗಿ ವಿಂಗಡಿಸಿ ವಿಶ್ಲೇಷಣೆಮಾಡಿ ವಿವೇಚನೆ ನಡೆಸುವುದು ಕಷ್ಟಸಾಧ್ಯವೇ ಸರಿ. ಮುಖ್ಯ ಲೇಖಕರನ್ನೂ ಪ್ರವತ್ತಿಗಳನ್ನೂ ಮಾತ್ರವೇ ಇಲ್ಲಿ ಗುರುತಿಸಬಹುದಾಗಿದೆ.

ಡಾ॥ಶೀಲ: ಕನ್ನಡದಲ್ಲಿ ಮೊಟ್ಟಮೊದಲು ಸ್ವತಂತ್ರ ಕಾದಂಬರಿಯನ್ನು ಸೃಷ್ಟಿಸಿದವರಲ್ಲಿ ಎಂ. ಎಸ್. ಪುಟ್ಟಣ್ಣನವರೊಬ್ಬರು. ಇವರ ಮಾಡಿದ್ದುಣ್ಣೋ ಮಹಾರಾಯದಲ್ಲಿ ಲೇಖಕರಿಗೆ ಹಾಸ್ಯ ಹಸ್ತಗತವಾಗಿದೆ. ಸ್ವಭಾವ ವೈಚಿತ್ರ್ಯ, ಕುರೂಪ, ಅಸಂಬದ್ಧ ಸನ್ನಿವೇಶ ಇವುಗಳ ಸುತ್ತಲೂ ಹಾಸ್ಯದ ತರತಮಗಳೂ ವ್ಯಂಗ್ಯವೈವಿಧ್ಯಗಳೂ ಮಾಲೆಮಾಲೆಯಾಗಿ ಹಬ್ಬಿವೆ.

ಡಾ॥ರಾಮು: ಈ ಕಾದಂಬರಿಯ ಒಂದು ಪಾತ್ರವಾದ ನಕಲಿ ನಾರಣಪ್ಪನಿಗೆ ನಗಿಸುವುದೇ ನಿರಂತರ ಹವ್ಯಾಸ. ಆತನ ಪಂಚಾಂಗ ವೀಕ್ಷಣೆಯ ಪ್ರಮಾದ ಒಂದು ಉದಾಹರಣೆ: ಪ್ರಮಾದ ಸಂವತ್ಸರವಾದ್ದರಿಂದ ಪ್ರಮಾದಗಳು ನಡೆಯುವಂಥದ್ದು; ಮಾರ್ಗಶಿರ ಪಂಚಮಿಯಾದ್ದರಿಂದ, ಮಾರ್ಗಶಿರ-ದಾರಿಯಲ್ಲಿ ಹೋಗತಕ್ಕವರ ತಲೆಯು ಬಹುಳ-ಎಂದರೆ ವಿಶೇಷವಾಗಿ ಪಂಚಮಿ ಎಂದರೆ ಪಂಚತ್ವ ಅಥವಾ ಮರಣವನ್ನು ಹೊಂದುವುದು. ಇಲ್ಲಿ ಶಬ್ದಗಳನ್ನೇ ಅರೆದು, ವಿಚಿತ್ರಾರ್ಥಗಳನ್ನು ಹೊರಡಿಸಿ, ಹಾಸ್ಯವನ್ನು ಹಿಂಡುವ ಪ್ರಯತ್ನವನ್ನು ಕಾಣಬಹುದು. ಅದರೂ ಆಧುನಿಕ ಕನ್ನಡ ಗದ್ಯಸಾಹಿತ್ಯದಲ್ಲಿ ಮೊಟ್ಟಮೊದಲಿಗೆ ಹಾಸ್ಯಕ್ಕೂ ಎತ್ತರದ ಆಸನ ಹಾಕಿ ಚಾಮರ ಬೀಸಿದ ಕೀರ್ತಿ ಪುಟ್ಟಣ್ಣನವರದು.

ಡಾ॥ಶೀಲ: ಕನ್ನಡದಲ್ಲಿ ಮೊಟ್ಟಮೊದಲನೆಯ ಎಂ.ಎ. ಪದವಿ ಪಡೆದ ಆರ್. ನರಸಿಂಹಾಚಾರ್ಯರು ಕರ್ಣಾಟಕ ಕವಿಚರಿತೆಗಷ್ಟೇ ಪ್ರಸಿದ್ಧರಲ್ಲ. ಅವರು ಬರೆದ ನಗೆಗಡಲಿನ ವಸ್ತುವೇನೆಂಬುದು ಅದರ ಹೆಸರಿನಲ್ಲೆ ವ್ಯಕ್ತವಾಗುತ್ತದೆ. ಗಾಂಪರೊಡೆಯರ ಮತ್ತು ಅವರ ಶಿಷ್ಯರ ಪ್ರತಾಪಗಳಲ್ಲಿ ಕಾಣುವುದು ಹುಚ್ಚು ಹಾಸ್ಯ. ಚುಚ್ಚು ಹಾಸ್ಯಪೆದ್ದುತನದ ಲೇವಡಿ.

ಡಾ॥ರಾಮು: ಜನಪದ ಸಾಹಿತ್ಯದಲ್ಲಿಯ ಜಂತದಕ್ಕಯ್ಯಕಥೆ. ಮಂಕುಭಟ್ಟನ ಕಥೆ, ಕಪಿ ಹಾರಿದ ಕಥೆ, ಹೆಂಟೆಗೊದ್ದನ ಕಥೆ. ಮುಂತಾದವುಗಳ ಪರಂಪರೆಗೆ ಇದೂ ಸೇರಿದ್ದೆನ್ನಬಹುದು.

ಅಂತೆಯೇ ತೆನಾಲಿ ರಾಮಕೃಷ್ಣ ಮತ್ತು ಬೀರಬಲರವೆನ್ನಲಾದ ಹಲವಾರು ಕಥೆಗಳು ಇಂಥ ಹಾಸ್ಯವನ್ನು ಕನ್ನಡಿಸಿವೆ.

ಡಾ॥ಶೀಲ: ಇವು ಸಂಬಂಧಪಟ್ಟ ವ್ಯಕ್ತಿಗಳನ್ನು ಕುರಿತು ಚತುರೋಕ್ತಿ ಸನ್ನೀವೇಶಗಳು. ಪಂಜೆ ಮಂಗೇಶರಾಯರು ಮಕ್ಕಳಿಗೆಂದು ಬರೆದ ಕಥೆಗಳಲ್ಲಿ ತಿಳಿಹಾಸ್ಯವನ್ನು ಕಾಣಬಹುದು. ಶ್ರೀನಿವಾಸ ಕೃತ ರಂಗಪ್ಪನ ಕತೆಗಳಂಥ ಹಲವಾರು ಕಥಾಶ್ರೇಣಿಗಳು ತಿಳಿಹಾಸ್ಯದ ಹೊನಲುಗಳು. ಈ ಹಾಸ್ಯ ಹಲವು ವೇಳೆ ಕಣ್ಣೀರು ಬೆರೆತಿದ್ದೂ ಆಗಿರುವುದುಂಟು. ವಿಡಂಬನೆಗೂ ಇಲ್ಲಿ ಕೊರತೆಯಿಲ್ಲ. ಕಥನ ಕವನಗಳಲ್ಲೂ ಭಾವಗೀತೆಗಳಲ್ಲೂ ಮಿಂಚುವುದು ಲಲಿತ ಮಧುರ ಹಾಸ್ಯ. ಶೀಲವಂತ ಜೀವಿ ಕಾಣುವ ಚೊಕ್ಕ ನುಡಿ, ಸನ್ನಿವೇಶ–ಸಂಭಾವಿತರಲ್ಲೂ, ಸುಳಿಯುವ ದುಷ್ಟ ಆಲೋಚನೆಗಳಿಗೆ ಯಥೋಚಿತ ಮುಚ್ಚು ಮರೆ. ತಡೆತಡೆದು ಪುಟ್ಟ ಕಂತುಗಳಲ್ಲಿ ಹೊರಬೀಳುವ ನಗೆಯಿಂದ ಅಜೀರ್ಣವೆಂದೂ ಸಾಧ್ಯವಿಲ್ಲ.

ಡಾ॥ರಾಮು: ಕುವೆಂಪು ಅವರ ವಿಪುಲ ಸಾಹಿತ್ಯದಲ್ಲಿ ಹಾಸ್ಯಕ್ಕೇನೂ ಕೊರತೆಯಿಲ್ಲ. ಅದೊಂದು ಬಲುಸರಕಿನ ಅಂಗಡಿ. ಕಾನೂರು ಹೆಗ್ಗಡಿತಿಯ ಹಲವು ಪಾತ್ರಗಳಿಗೆ ಹಾಸ್ಯರೇಶಿಮೆಯ ತೆಳು ಉಡುಪಿನ ಶೃಂಗಾರವಿದೆ. ನಗೆ ಬಂದಾಗ ನಗಲು ಇವು ಎಂದೂ ಹಿಂದೆ ಮುಂದೆ ನೋಡುವುದಿಲ್ಲ. ಈ ಸಹಜ ಪ್ರಕ್ರಿಯೆಗೇಕೆ ಅತಿಯಾದ ಸಂಕೋಚ? ಮುತ್ತಳ್ಳಿ ಶಾಮಯ್ಯಗೌಡರು ಒಬ್ಬರೇ ಸಾಕು. ಅವರ ಸ್ನಾನ ಪೂಜೆಗಳನ್ನು ವರ್ಣಿಸುವಾಗಲಂತೂ ಕುವೆಂಪು ಅವರಿಗೆ ಹಾಸ್ಯದ್ದೇ ಕುಂಚ.

ಡಾ॥ರಾಮು: ಮಹಾಕಾವ್ಯವಾದ ಶ್ರೀ ರಾಮಾಯಣದರ್ಶನಂನಲ್ಲಿ ಹಾಸ್ಯಕ್ಕೆ ಮೀಸಲಾದ ಪುಟಗಳ ಸಂಖ್ಯೆಯಂತೂ ಲೆಕ್ಕವಿಲ್ಲ. ನೆಲದಂತರಾಳದಲ್ಲಿ ಹರಿಯುತ್ತಿರುವ ಹೊನಲು ಅಲ್ಲಲ್ಲಿ ಮೇಲೆದ್ದು ಬಂದಂತೆ ಈ ಕಾವ್ಯದುದ್ದಕ್ಕೂ ಕಂಗೊಳಿಸುವ ಹಾಸ್ಯದ ಪ್ರಕಾರಗಳನ್ನೆಲ್ಲ ಪಟ್ಟಿ ಮಾಡಿದ್ದಾರೆ,

ಡಾ॥ಶೀಲ: ರಾಮಲಕ್ಷ್ಮಣ ಸೀತೆಯರು ಚಿತ್ರಕೂಟದಲ್ಲಿದ್ದಾಗ ಅವರವರೇ ಹೇಳಿಕೊಂಡು ತಾವು ನಕ್ಕದ್ದಲ್ಲದೆ ಓದುಗರನ್ನೂ ನಗಿಸುವ ಸರಸಸಲ್ಲಾಪ–ಇಂಥ ಹಲವಾರು ಪ್ರಭೇದಗಳನ್ನು ಇಲ್ಲಿ ಕಾಣಬಹುದು. ಇನ್ನು ಅವರ ಸರಳರಗಳೆಗಳಲ್ಲೂ ಕಥನಕವನಗಳಲ್ಲೂ ಭಾವಗೀತೆಗಳಲ್ಲೂ ಹಾಸ್ಯವೂ ತೊರೆಯಾಗಿ ಹರಿದಿದೆ, ಮಡುಗಟ್ಟಿ ನಿಂತಿದೆ. ಕನ್ನಡದ ಇಬ್ಬರು ಮಹಾಲೇಖಕರಾದ ಶ್ರೀನಿವಾಸ, ಕುವೆಂಪು ಇವರ ಹಾಸ್ಯದ ಸಾಮ್ಯ ವೈಲಕ್ಷಣ್ಯಗಳನ್ನು ವಿವೇಚಿಸುವುದು ಸ್ವಾರಸ್ಯವೂ ಪ್ರಯೋಜನಕಾರಿಯೂ ಆದೀತು.

ಡಾ॥ರಾಮು: ಬೇಂದ್ರೆಯವರ ಹಾಸ್ಯದ್ದು ಇನ್ನೊಂದು ಪೀಳಿಗೆ. ಅದರಲ್ಲಿ ಅವರ ವ್ಯಕ್ತಿತ್ವದ ಮುದ್ರೆ ಹೆಚ್ಚು ನಿಚ್ಚಳ. ಬಿಚ್ಚುಮನದಿಂದ ಹಾಸ್ಯಕೊಚ್ಚುವುದು ಅವರ ಸ್ವಭಾವ. ಹಲವೊಮ್ಮೆ ಅದು ವಾಚ್ಯವೂ ಹರಿತವೂ ಆದೀತು. ಜೋಕೆ. ಜನಪದದ ಮೆರಗು ಈ ಹಾಸ್ಯದ ಇನ್ನೊಂದು ವೈಶಿಷ್ಟ್ಯ. ಹುಬ್ಬಳ್ಳಿಯವನಿನ್ನೂ ಬರಲಿಲ್ಲವೆಂದು ಕಾದು ಕುಳಿತ ಹೆಣ್ಣು, ಬಳಿಯಲ್ಲಿ ನಲ್ಲನಿಲ್ಲದಾಗ ಕೈ ಗಲ್ಲ ಹಚ್ಚಿ ಕೂತ ಕನ್ಯೆ– ಮುಂತಾದ ಕವನಗಳ ಕಾಮಕಸ್ತೂರಿಯ ಸೊನೆ ಬೆರೆತ ನಗೆಯಂತಿರಲಿ, ಹರಟೆಗಳಲ್ಲೂ ಅಣಕವಾಡುಗಳಲ್ಲೂ ಹರಿದಿರುವ ಹಾಸ್ಯಕ್ಕೂ ತುಂಬುಹೊಳೆಯ ಆವೇಶ.

ಡಾ॥ಶೀಲ: ಅವರ ನಿರಾಭರಣ ಸುಂದರಿಯೆಂಬುದು ಬಹುತೇಕ ಹಾಸ್ಯ ಬರೆಹಗಳೇ ಇರುವ ಪುಸ್ತಕ. ಕುಯ್ಗುಡುವ ಭಟ್ಟರ ನಾಯಿಯ ವರ್ಣಣೆ, ಕೇರಿಗೊಂದು ಕೆಮ್ಮುವ ಮುದುಕಿ ಇರಲೇಬೇಕೆಂಬ ವಿಚಿತ್ರ ವಾದ.

ಈ ಜಗದ ಶುದ್ಧೀಕರಣಕ್ಕೆಂದು ಧ್ವಜವೆತ್ತಿ ಮೇಲಕ್ಕೆ ಹೊರಟಿರುವ ಕಸ ಪೊರಕೆ, ಹಕ್ಕಿ, ಹಾರುತಿದೆ ನೋಡಿದಿರಾ ಎಂಬ ಕವನವನ್ನು ತಾವೇ ಅಣಕಿಸಿ ಬೆಕ್ಕು ಹಾರುತಿದೆ ನೋಡಿದಿರಾ?–ಎಂದು ಕಟ್ಟಿದ ಪದ್ಯದ ಅಪ್ಪಟ ಹಾಸ್ಯ–ಇವುಗಳದೊಂದು ತೂಕವಾದರೆ, ಅವರ ಹುಚ್ಚಾಟ ಮತ್ತು ನಗೆಯ ಹೊಗೆ ನಾಟಕಗಳ ನಂಜುನಗೆಯದು ಇನ್ನೊಂದು ತೂಕ.

ಡಾ॥ರಾಮು: ವಿಡಂಬನದ ನಾನಾ ಪದರಗಳನ್ನಿಲ್ಲಿ ಕಾಣಬಹುದು. ಕಾರಂತರ ಹಲವಾರು ಕಾದಂಬರಿಗಳಲ್ಲಿ ಸನ್ನಿವೇಶ ಜನ್ಯವಾದ ಹಾಸ್ಯದ ಸೆಲೆಯೇ ಇದೆ. ಆದರೆ ದೇವದೂತರು, ಸ್ನಾನ ಮುಂತಾದವುಗಳಲ್ಲಿ ಜನರ ನಡೆನುಡಿಗಳಿಗೆ ಅವರು ನಗೆಯ ರಾವುಗನ್ನಡಿಯನ್ನೇ ಹಿಡಿದಿದ್ದಾರೆ. ಇಲ್ಲಿ ಬರುವ ಹಾಸ್ಯ ಬಲು ಹರಿತ. ಗರಗಸದಂತೆ ಹೋಗುತ್ತಲೂ ಕೊಯ್ಯುತ್ತದೆ.

ಡಾ॥ಶೀಲ: ಈ ವಿಡಂಬನದ ನಗೆಹಲ್ಲಿಗೆ ತಮ್ಮ ಕತ್ತನ್ನೇ ಒಡ್ಡಿಕೊಂಡವರೂ ನಗುನಗುತ್ತಲೇ ಬಲಿಯಾಗುತ್ತಾರೆ. ವಿಡಂಬನಕ್ಕೆ ಪಟ್ಟಕಟ್ಟಿ, ಹಾಸ್ಯಕ್ಕೆ ಯುವರಾಜ್ಯಾಭಿಷೇಕಮಾಡಿರುವ ಇನ್ನೊಬ್ಬ ಲೇಖಕರೆಂದರೆ ಶ್ರೀರಂಗ, ಅವರ ನಾಟಕಗಳದು ವ್ಯಂಗ್ಯಾನುಭೂತಿ. ಆದರೆ ಮಾತಿನ ಎಸೆದಾಟದಿಂದ, ಚತುರೋಕ್ತಿಯಿಂದ, ಶ್ಲೇಷೆಯ ಬಲದಿಂದ ಉಕ್ಕಿಬರುವ ಹಾಸ್ಯವೂ ಉಂಟು.

ಡಾ॥ರಾಮು: ಇವೆಲ್ಲ ಕನ್ನಡದ ಕೆಲವು ಪ್ರಧಾನ ಲೇಖಕರ ಕೃತಿಗಳಲ್ಲಿಯ ಹಾಸ್ಯವನ್ನು ಕುರಿತ ವಿವೇಚನೆಯಾಯಿತು. ಆದರೆ ಹಾಸ್ಯವನ್ನೇ ಪ್ರಧಾನ ಉದ್ಯೋಗವಾಗಿ ಮಾಡಿಕೊಂಡ ಲೇಖಕರ ಸಂಖ್ಯೆಗೇನೂ ಕನ್ನಡದಲ್ಲಿ ಕೊರತೆಯಿಲ್ಲ.

ಡಾ॥ಶೀಲ: ಕೈಲಾಸಂ ಇವರಿಗೆ ಆದ್ಯಪುರುಷ, ತಿಪ್ಪಾರಳ್ಳಿಯ ಬೋರ, ಕೋಳೀಕೆ ರಂಗ ಮುಂತಾದ ನಗೆವಾಡುಗಳ ದೊಗಲೆಬಗಲೆಯನ್ನೂ, ಟೊಳ್ಳು–ಗಟ್ಟಿ, ಅಮ್ಮಾವ್ರಗಂಡ, ನಂಬ್ರಾಹ್ಮಣ್ಕೆ, ಬಂಡ್ವಾಳ್ವಿಲ್ಲದ ಬಡಾಯಿ, ಹುತ್ತದಲ್ಲಿ ಹುತ್ತ ಮುಂತಾದ ನಾಟಕಗಳಲ್ಲಿ ಮಧ್ಯಮವರ್ಗದ ಒಂದು ಪಂಗಡದ ಜನರ ಮೇಲೆ ಹರಿಸಿದ ಹಾಸ್ಯದ ವೃಷ್ಟಿಯನ್ನೂ ನೋಡಿದಾಗ ಕೈಲಾಸಂ ಎಂಬುದು ಹಾಸ್ಯಕ್ಕೆ ಪರ್ಯಾಯಪದವೆಂದೇ ಹೇಳಬೇಕು.

ಡಾ॥ರಾಮು: ಆಗಿನ ಕಾಲದ ವಿದ್ಯಾವಂತರೆನಿಸಿಕೊಂಡವರ ವೃತ್ತಗಳಲ್ಲಿ ಅತಿಯಾಗಿ ಬೆಳೆದಿದ್ದ ಇಂಗ್ಲಿಷ್ ಮೋಹವನ್ನೂ, ಡಾಂಭಿಕತನವನ್ನೂ, ಸಂಪ್ರದಾಯ ಮೌಢ್ಯವನ್ನೂ ದಾಸ್ಯ ಮನೋವೃತ್ತಿಯನ್ನೂ ಇವರಂತೆ ಬಯಲಿಗೆಳೆದವರು ಇನ್ನೊಬ್ಬರಿಲ್ಲ. ತಾವರೆಕೆರೆ ಪ್ರಬಂಧ ಸಂಕಲನದಲ್ಲೂ ಹಾಸ್ಯದ ಮೆರವಣಿಗೆಯೇ ನಡೆದಿದೆ. ಇವರ ಅನೇಕ ಬಿಡಿನುಡಿಗಳೂ ಹಾಸ್ಯದ ಊಟೆಗಳೇ.

ಡಾ॥ಶೀಲ: ಅಳು–ನಗುಗಳ ನಡುಗೆರೆಯೆಷ್ಟು ಸಪೂರವೆಂಬುದನ್ನೂ ಕೈಲಾಸಂ ಅರಿತಿದ್ದವರು. ಆದ್ದರಿಂದಲೇ ಇವರ ನಗೆಯಲ್ಲಿ ವ್ಯಂಗ್ಯದ್ದು ನೂರಕ್ಕೆ ನಲವತ್ತು ಪಾಲಾದರೆ ಸಹಾನುಭೂತಿಯದು ಅರವತ್ತು ಪಾಲು. ಓದುಗರು ಸ್ವಲ್ಪ ಹೆಚ್ಚು ಹೊತ್ತು ತಮ್ಮ ಮನಸ್ಸನ್ನು ತಂಗಿಸಿದರೆ ಕಾಣುವುದು ನಗೆಯಲ್ಲ, ಕವಿಯ ಕಣ್ಣೀರು. ಹಲವೊಮ್ಮೆ ಇವರ ಹಾಸ್ಯ ಒರಟಾಗುವುದೂ ಉಂಟು.

ಡಾ॥ರಾಮು: ಅತಿಯಾದ ಪ್ರಾಸ ಪ್ರಯೋಗವೂ ತಿಣುಕೂ ಬೇಸರ ಬರಿಸಬಹುದು. ಆದರೂ ಕೈಲಾಸಂ ಕನ್ನಡದ ಹಾಸ್ಯ ಚಕ್ರವರ್ತಿ. ಹಿಂದಿನ ನಾಟಕಗಳಲ್ಲಿ ವಿದೂಷಕನ ಸೆರೆಗಿಗೆ ಕಟ್ಟಿದ್ದ ಹಾಸ್ಯವನ್ನು ಬಿಡಿಸಿ ಭದ್ರಾಸನದ ಮೇಲೆ ಕುಳ್ಳಿರಿಸಿದ ಕೀರ್ತಿ ಕೈಲಾಸಂಗೆ ಸಲ್ಲುತ್ತದೆ.

ಡಾ॥ಶೀಲ: ಕೈಲಾಸಂ ಪೀಳಿಗೆ ಬಲು ದೊಡ್ಡದು. ಅವರ ಅನಂತರ ಬಂದ ಅನೇಕ ನಾಟಕ ಲೇಖಕರು ಈ ಪ್ರಭಾವದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಅತಿಯೆನಿಸುವ ಮಟ್ಟಿಗೆ ಇವರು ಹಳೆಯ ಪ್ರಯೋಗಗಳನ್ನೇ ಬೆಳೆಸಿದರು. ಆದರೂ ತಮ್ಮತನವನ್ನೂ ಉಳಿಸಿಕೊಂಡ ಕೆಲವರ ಹೆಸರನ್ನಾದರೂ ಇಲ್ಲಿ ಹೇಳಬಹುದು. ಕ್ಷೀರ ಸಾಗರ, ಪರ್ವತವಾಣಿ, ಎ. ಎಸ್. ಮೂರ್ತಿ–ಇವು ಮೂರು ಹೆಸರುಗಳು. ಇದೇ ರೀತಿ ಶ್ರೀರಂಗರಿಂದ ಪ್ರಭಾವಿತರಾದವರೆಂದರೆ ಎನ್ಕೆ ಕುಲಕರ್ಣಿ ಮತ್ತು ಬೇಂದ್ರೆ ಲಕ್ಷ್ಮಣರಾವ್.

ಡಾ॥ರಾಮು: ನಗೆಯನ್ನೇ ತಮ್ಮ ಲೇಖನದ ಕಸಬನ್ನಾಗಿ ಮಾಡಿಕೊಂಡ ಇನ್ನೊಬ್ಬರು ನಾ. ಕಸ್ತೂರಿ. ಇವರು ಹರಟೆಗಳನ್ನು ಹೊಸೆದಿದ್ದಾರೆ; ನಾಟಕಗಳನ್ನು ಬರೆದಿದ್ದಾರೆ, ನಗೆ ಕವನಗಳನ್ನು ಬರೆದಿಟ್ಟಿದ್ದಾರೆ, ಪಡಿನುಡಿಗಳನ್ನು ಎರಚಾಡಿದ್ದಾರೆ. ಇಂಗ್ಲಿಷ್ ಹಾಸ್ಯದ ವಿಶ್ವರೂಪವನ್ನು ಕಂಡು ಅನುಭವಿಸಿ ಅದನ್ನು ಕನ್ನಡಿಸಿದ್ದಲ್ಲದೆ, ಕನ್ನಡದಲ್ಲಿಯ ಹಾಸ್ಯಜಾಯಮಾನವನ್ನು ಗುರುತಿಸಿ ಇದನ್ನೂ ಅದನ್ನೂ ಸೇರಿಸಿ ಕಸಿಮಾಡಿ ಹೊಸದೊಂದು ಜಾತಿಯನ್ನೇ ಸೃಷ್ಟಿಸಿದ್ದಾರೆ. ಇವರು ಬರೆದ ಅಣಕವಾಡುಗಳೂ ಹಾಸ್ಯ ಪದ್ಯಗಳೂ ಅನೇಕ.

ಡಾ॥ಶೀಲ: ಗೊರೂರು ರಾಮಸ್ವಾಮಯ್ಯಂಗಾರ್ಯರ ನಮ್ಮ ಊರಿನ ರಸಿಕರದು ಇನ್ನೊಂದು ಜಾತಿ. ತಮ್ಮ ಊರಿನ ನಾನಾ ವ್ಯಕ್ತಿಗಳನ್ನು ಸಹಾನುಭೂತಿಯಿಂದ ನೋಡಿ ಅವರ ಕ್ಷಮ್ಯವಾದ ಕುಂದುಗಳಲ್ಲಿ ಹಾಸ್ಯವನ್ನು ಬಿತ್ತಿ ಬೆಳೆಸಿರುವ ಗೊರೂರವರ ದೃಷ್ಟಿ ವಿಶಿಷ್ಟವಾದದ್ದು. ಇದೇ ಜಾಡಿನ ಇನ್ನೊಂದು ವಿಶಿಷ್ಟ ಕೃತಿಯೆಂದರೆ ಎಚ್. ಎಲ್. ನಾಗೇಗೌಡರ ನನ್ನೂರು.

ಡಾ॥ರಾಮು: ಹಾಸ್ಯಕ್ಕೆ ತಮ್ಮ ಲೇಖನಿಯನ್ನು ಮುಡಿಪು ಮಾಡಿದ ರಾ. ಶಿ. ಯವರು ಸ್ವತಃ ಕೃತಿರಚನೆ ಮಾಡಿದ್ದಲ್ಲದೆ ಹಾಸ್ಯಬರಹಗಾರರ ದೊಡ್ಡ ಪಡೆಯನ್ನೇ ಕಟ್ಟಿದರು. ಇವರು ಇಪ್ಪತ್ತೈದು ವರ್ಷ ನಡೆಸಿದ ಪತ್ರಿಕೆ ಕೊರವಂಜಿ ಇಂಗ್ಲಿಷ್‌ನ ಪಂಚ್ ಮಾದರಿಯದು, ದಾಶರಥಿ ದೀಕ್ಷಿತ್, ಸುನಂದಮ್ಮ, ಅ. ರಾ. ಸೇ, ಅಷ್ಟಾವಕ್ರ, ಹಾ. ರಾ. ಮುಂತಾದ ಹಲವರು ಕೊರವಂಜಿಯ ಗರಡಿಯಲ್ಲಿ ತಯಾರಾದವರು. ವಿಕಟವಿನೋದಿನಿ, ವಿನೋದ ಇವು ಹಾಸ್ಯಕ್ಕೇ ಮೀಸಲಾದ ಇನ್ನೆರಡು ಪತ್ರಿಕೆಗಳು.

ಡಾ॥ಶೀಲ: ರಾಜರತ್ನಂ, ನಾಡಿಗೇರ ಕೃಷ್ಣರಾಯ, ಬೀಚಿ ಇವರ ಹೆಸರು ಹೇಳದೆ ಕನ್ನಡ ಹಾಸ್ಯ ಸಾಹಿತ್ಯದ ಅವಲೋಕನ ಸಂಪೂರ್ಣವಾಗುವುದಿಲ್ಲ. ರತ್ನನ ಪದಗಳಲ್ಲಿ ಅಲ್ಲಲ್ಲಿ ಹಾಸ್ಯದ ಹರಳುಗಳನ್ನು ಚೆಲ್ಲಿರುವ ರಾಜರತ್ನಂ ಅವರ ನರಕದ ನ್ಯಾಯವೆಂಬ ನಾಟಕ ಹಳ್ಳಿಗರ ಮಾತಿನಲ್ಲಿ ಹೆಣೆದು ನೀಡಿದ ಹುಚ್ಚುಹಾಸ್ಯ. ಸತ್ಯವಾನ್ ಸಾವಿತ್ರಿಯರ ಕಥೆಯನ್ನು ರಾಜರತ್ನಂ ಇಲ್ಲಿ ಹಾಸ್ಯಗನ್ನಡಿಯಿಂದ ನೋಡಿದ್ದಾರೆ.

ಡಾ॥ರಾಮು: ಸಾಹಿತ್ಯದ ನಾನಾ ವಕ್ರ ಬೆಳೆವಣಿಗೆಗಳನ್ನೂ ಅರ್ಥವಿಲ್ಲದ ಸಂಪ್ರದಾಯಗಳನ್ನೂ ಗೇಲಿ ಮಾಡಿರುವ ಮಹಾಕವಿ ಪುರುಷ ಸರಸ್ವತಿಯೊಂದು ವಿಡಂಬನ ಕೃತಿ. ನಾಡಿಗೇರರು ತಮ್ಮ ನಗೆಬರಹಗಳಲ್ಲಿ ತಮ್ಮನ್ನೇ ಆದರೂ ಹಾಸ್ಯಕ್ಕೆ ಒಡ್ಡಿಕೊಂಡು ಓದುಗರನ್ನು ನಗೆಯ ಅಲೆಯಡಿಯಲ್ಲಿ ಮುಳುಗಿಸಿ ತೇಲಿಸುವ ಹವ್ಯಾಸದಲ್ಲಿ ತೊಡಗಿದ್ದಾರೆ.

ಡಾ॥ಶೀಲ: ಬೀಚಿಯವರ ಹಾಸ್ಯ ಹಲವೊಮ್ಮೆ ಹೆಚ್ಚು ಮಾರ್ಮಿಕ. ಅವರು ಬಣ್ಣಿಸುವ ತಿಂಮನ ತಲೆ ಯಾರದಾದರೂ ಆಗಿರಬಹುದು. ಅವರು ಸಿಡಿಸಿರುವ ಹಲವಾರು ನಗೆಹನಿಗಳಲ್ಲೂ ಹಾಸ್ಯ ಚಟಾಕಿಗಳಲ್ಲೂ ಕುಹಕ, ಕಟಕಿ, ಬೆಡಗು, ಚುರುಕು, ಚತುರತೆಗಳು ತುಂಬಿವೆ. ದಿನಕರ ದೇಸಾಯಿ, ಜಿ.ಪಿ. ರಾಜರತ್ನಂ ಮುಂತಾದವರು ಬರೆದಿರುವ ಚುಟುಕಗಳು ಸಂಸ್ಕೃತದ ಚಾಟೂಕ್ತಿಗಳಂತೆ, ಸರ್ವಜ್ಞನ ವಚನಗಳಂತೆ ಇಂಗ್ಲಿಷಿನ ಎಪಿಗ್ರಂಗಳಂತೆ–ಪರಮಾಣು ಬಾಂಬುಗಳು.

ಡಾ॥ರಾಮು: ಕನ್ನಡದ ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ನಗೆಹನಿಗಳು, ಪ್ರಬಂಧಗಳು, ರಾಜಕೀಯ ಟೀಕೆ ಟಿಪ್ಪಣಿಗಳನ್ನೊಳಗೊಂಡ ಲಘು ಬರೆಹಗಳು, ಪ್ರಶ್ನೋತ್ತರಗಳು, ಕುಹಕಿಡಿಗಳು, ಉರಿಗಾಳುಗಳು ಇವುಗಳಲ್ಲಿ ಹಾಸ್ಯದ ಒಂದು ವಿಸ್ತೃತ ಶಬ್ದ ಭಂಡಾರವೇ ದಿನದಿನವೂ ಸೃಷ್ಟಿಯಾಗುತ್ತಿದೆ. ಆಧುನಿಕ ಕನ್ನಡದ ಹಾಸ್ಯ ಸಾಹಿತ್ಯದ್ದು ಬಲು ದೊಡ್ಡ ಕುಟುಂಬ.

# 20. ಛಂದಸ್ಸು

ಡಾ॥ರಾಮು: ಛಂದಸ್ಸು ಎಂಬ ಪದಕ್ಕೆ ಪದ್ಯಪಂಕ್ತಿಯ ರಚನಾರೀತಿಯ ವಿವರಣೆಯೆಂದು ಸಾಮಾನ್ಯ ಅರ್ಥ (ಪ್ರಾಸಡೀ). ಅಲ್ಲದೆ ನುಡಿ ಅಥವಾ ಭಾಷೆಯ ಚಲನಾತ್ಮಕ ರೂಪಕ್ಕೆ ಅನ್ವಯಿಸುವ ಘಟಕಾಂಶಗಳ ಮತ್ತು ರಚನಾವಿನ್ಯಾಸಗಳ ಅಧ್ಯಯನ್ನಕ್ಕೂ ಛಂದಸ್ಸು ಎಂದೇ ಹೇಳುವುದು ವಾಡಿಕೆ.

ಡಾ॥ಶೀಲ: ಇದರಲ್ಲಿ ಎರಡು ವಿಧ; ಭಾಷಾ ಸಂಬಂಧಿ ಮತ್ತು ಸಾಹಿತ್ಯ ಸಂಬಂಧಿ. ಅಂಥ ಅಧ್ಯಯನ ಯಾವುದೋ ಒಂದು ಭಾಷೆಗೊ ಸಾಹಿತ್ಯಕ್ಕೊ ಸೀಮಿತವಾಗದೆ ಎಲ್ಲ ಭಾಷೆ ಎಲ್ಲ ಸಾಹಿತ್ಯದ ಕೇವಲ ತಾತ್ತ್ವಿಕ ಪರಿಶೀಲನೆಯಾಗಬಹುದು; ಅಥವಾ ನಿರ್ದಿಷ್ಟ ಭಾಷಾ ಸಾಹಿತ್ಯದ ಚಾರಿತ್ರಿಕ ವರ್ಣನೆಯಾಗಬಹುದು. ವರ್ಣನೆ ಒಂದಕ್ಕೇ ಮೀಸಲಾಗಿರಬಹುದು ಅಥವಾ ಹಲವನ್ನು ಪರಸ್ಪರ ಹೋಲಿಸಬಹುದು.

ಡಾ॥ರಾಮು: ಬೆಲೆ ಕಟ್ಟುವ ಕೆಲಸವನ್ನೂ ಛಂದೋ ವಿಮರ್ಶೆ ವಹಿಸಿಕೊಂಡು ವ್ಯಾಕರಣ ಶುದ್ಧಿ, ಭಾಷಣದ ಪರಿಣಾಮ ಪ್ರಾಬಲ್ಯ, ಕಾವ್ಯ ಪ್ರಕಾರದ ಅಂದಚಂದ–ಇವುಗಳ ಮೇಲೆ ಟೀಕೆ ಮಾಡುವುದೂ ಸಾಧ್ಯ.

ಡಾ॥ಶೀಲ: ಪ್ರಾಚೀನ ಗ್ರೀಕರ ಮತ್ತು ರೋಮನರ ಯುಗಗಳಲ್ಲಿ ಪದಗಳೂ ಮತ್ತು ಉಚ್ಚಾರಾಂಶಗಳೂ ಪದ್ಯ ಪಂಕ್ತಿಗೆ ಯುಕ್ತವಾಗಿ ಹೊಂದಿಕೊಂಡಿವೆಯೊ ಇಲ್ಲವೊ ಎಂಬ ಪರೀಕ್ಷೆ ಸಾಂಪ್ರದಾಯಿಕ ವ್ಯಾಕರಣದ ಒಂದು ಭಾಗವಾಗಿತ್ತು.

ಡಾ॥ರಾಮು: ರೋಮನರ ಕಾಲದಲ್ಲೂ ಮಧ್ಯಯುಗದಲ್ಲೂ ಪದ್ಯಪಂಕ್ತಿಯ ಜೊತೆಗೆ ಗದ್ಯಗತಿಯ ಲಕ್ಷಣವನ್ನೂ ವಿವರಿಸುವುದು ಛಂದಸ್ಸಿನ ಜವಾಬ್ದಾರಿಯಾಯಿತು. ಈಚಿನ ಭಾಷಾಶಾಸ್ತ್ರ ಮುಖ್ಯವಾಗಿ ಶಬ್ದಶಾಸ್ತ್ರವಾದರೂ ಅವಶ್ಯಕವೆಂದು ತೋರಿದಾಗ ಪದ್ಯಗದ್ಯ ರಚನಾವಿಲಾಸವನ್ನೂ ಚರ್ಚಿಸುತ್ತದೆ. ಸ್ಥೂಲವಾಗಿ ಹೇಳುವುದಾದರೆ, ಸಾಹಿತ್ಯವನ್ನು ಛಂದೋವಿಮರ್ಶೆಗೆ ಚರ್ಚಿಸುತ್ತದೆ.

ಡಾ॥ಶೀಲ: ಸ್ಥೂಲವಾಗಿ ಹೇಳುವುದಾದರೆ, ಸಾಹಿತ್ಯಕ ಛಂದೋವಿಮರ್ಶೆಗೆ ಉಚ್ಚಾರಾಂಶ ಪದ ಮಾತ್ರ ಅವಧಾರಣೆ ಮೊದಲಾದ ವಿಷಯಗಳೇ ಸಾಮಗ್ರಿ; ಪದದ ನಾದರೂಪವನ್ನು ಪರಾಮರ್ಶೆ ಮಾಡಬೇಕಾದಾಗ ಅದು ಸಾಧಾರಣವಾಗಿ ಬಿಡಿ ಧ್ವನಿಯಿಂದ ಆಚೆ ವಿವೇಚಿಸುವುದಿಲ್ಲ.

ಡಾ॥ರಾಮು: ಧ್ವನಿಮಾ ಎಂಬ ದ್ರವ್ಯದ ಕಡೆಗೆ ಅದು ಸುಳಿಯುವುದಿಲ್ಲ; ಆ ದ್ರವ್ಯ ಭಾಷಾ ಶಾಸ್ತ್ರಕ್ಕೆ ಒಂದು ಪ್ರಧಾನಾಂಶ.

ಡಾ॥ಶೀಲ: ಹಾಗೆಯೇ ಸಾಹಿತ್ಯದ ಒಂದು ಭಾಗವಾದ ಭಾವಗೀತೆ ವಾಚನಕ್ಕೆ ಬರುವುದರಿಂದ ಹಾಡುವುದಕ್ಕೆ ಬರುವ ಸಂಗೀತ ಕೃತಿಯ ಹತ್ತಿರದಲ್ಲಿ ನಿಂತುಕೊಳ್ಳಬಹುದು; ಆದರೆ ಭಾವಗೀತೆಯ ಪಂಕ್ತಿಗಳ ಪ್ರಸ್ತಾರ ಬೇರೆ, ಗಾನಕೀರ್ತನೆಗಳ ವಿನ್ಯಾಸ ಬೇರೆ. ವಾಚನ ಕಾವ್ಯಕ್ಕೆ ಅನುರೂಪ, ಗಾಯನ ಸಂಗೀತಕ್ಕೆ ಅನುರೂಪ.

ಡಾ॥ರಾಮು: ವಾಗ್ಮೀಂದ್ರಿಯಗಳ ಕರ್ಮದಿಂದ ಉದ್ಭವಿಸಿ ಕರ್ಣೇಂದ್ರಿಯವನ್ನು ತಟ್ಟುವ ಶಬ್ದವೇ ವಾಕ್ಕಿನ ಮೂಲಾಂಶ. ಆ ಶಬ್ದದ ಗುಣಸಂಬಂಧಿ ಮತ್ತು ಕಾಲಸಂಬಂಧಿ ಲಕ್ಷಣಗಳಿಂದ ಶಬ್ದಗತಿ ಅಥವಾ ಲಯ ಉಂಟಾಗುತ್ತದೆಯಾದರೂ ಮೃದೂಚ್ಚಾರ ಮೃದೂಚ್ಚಾರವಿಲ್ಲದಿಕೆ ಆದಿವ್ಯಂಜನಪ್ರಾಸ ಆದಿಸ್ವರಪ್ರಾಸ ಪ್ರಾಸ ಮೊದಲಾದ ಗುಣಗಳ ನೇರ ಪ್ರಭಾವ ಲಯದಮೇಲೆ ಅಷ್ಟೊಂದಿಲ್ಲ.

ಡಾ॥ಶೀಲ: ಧ್ವನಿಯ ತೀವ್ರತೆ (ಇಂಟೆನ್ಸಿಟಿ) ಧ್ವನಿಯ ಅವಧಿ (ಡ್ಯೂರೇಷನ್) ಮತ್ತು ಧ್ವನಿಯ ಶ್ರುತಿ (ಪಿಚ್) ಇವು ಅಳತೆಕ್ಕೆ ಸಿಕ್ಕುವುದರಿಂದ ಯಾವುದೋ ಒಂದು ಬಗೆಯಲ್ಲಿ ಅಳೆದು ನಿಷ್ಕರ್ಷಿಸಬೇಕಾದ ಶಬ್ದಗತಿಗೆ ಮುಖ್ಯವಾಗುತ್ತದೆ.

ಡಾ॥ರಾಮು: ಅದರಲ್ಲೂ ಬಲು ಮುಖ್ಯವಾದದ್ದು ಧ್ವನಿ ತೆಗೆದುಕೊಳ್ಳುವ ಕಾಲ ಅಥವಾ ಮಾತ್ರೆ. ಇಲ್ಲಿ ಒಂದು ಟಿಪ್ಪಣಿ ಅಗತ್ಯ. ಧ್ವನಿಯ ತೀವ್ರತೆ, ಅವಧಿ, ಶ್ರುತಿ ಯಾವುದೇ ಆಗಲಿ ಅದರ ಅಂತರ್ಗತವೂ ಸಹಜವೂ ಆದ ಸ್ವರೂಪ ಸ್ವಾರಸ್ಯ ಛಂದಸ್ಸಿನ ಗಣನೆಗೆ ಅನಾವಶ್ಯಕ; ಅದು ತನ್ನಂಥ ಮತ್ತು ತನ್ನಿಂದ ಭಿನ್ನವಾದ ಇತರ ಧ್ವನಿಯ ತೀವ್ರತೆ, ಅವಧಿ, ಶ್ರುತಿಗಳೊಂದಿಗೆ ಹೊಂದಿರುವ ಅನ್ಯೋನ್ಯ ಸಂಬಂಧ ಅತ್ಯಾವಶ್ಯಕ; ಶಬ್ದಗತಿ ಬಹು ಸೂಕ್ಷ್ಮವೂ ಸಂಕೀರ್ಣವೂ ಆದ ವಿಷಯ. ಎದ್ದು ಕಾಣುವ ಸ್ಪಷ್ಟ ವಿಚಾರಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗುತ್ತದೆ. ಬಿಡಿ ಶಬ್ದ ತನ್ನಷ್ಟಕ್ಕೆ ತಾನೆ ಒಂಟಿಯಾಗಿ ಏನೂ ಕೆಲಸ ಮಾಡಲಾರದು; ಇತರ ಬಿಡಿ ಶಬ್ದಗಳೊಂದಿಗೆ ಕೂಡಿಕೊಂಡು ಉಚ್ಚಾರಾಂಶವೊ ಪದವೊ ಆದಾಗ ಅದಕ್ಕೆ ಧ್ಯೇಯ ಸಾಧನೆ.

ಡಾ॥ಶೀಲ: ಉಚ್ಚಾರಾಂಶಗಳು ಜೊತೆಗೂಡುವಾಗ ಸಬಲವಾದವೂ ದುರ್ಬಲವಾದವೂ ಸರದಿಯಲ್ಲಿ ಬಂದು ಶಬ್ದಗತಿಯಲ್ಲಿ ಏರಿಳಿತ ತೋರಿಬರುತ್ತದೆ; ಅಲ್ಲದೆ ದುರ್ಬಲವಾದವು ಸುಬಲವಾದವುಗಳ ಬಳಿ ಕೂಡಿ ಗುಂಪಾಗಲು ತವಕಿಸುತ್ತವೆ. ಗುಂಪಾಗುವಿಕೆಯೂ ಒಂದು ಮುಖ್ಯ ಸಮಗತಿ. ಏರಿಳಿತ ಗುಂಪುಗಳು ಪುನಃ ಪುನಃ ಒದಗಿ ಶಬ್ದಗತಿಗೆ ಉದ್ದ ಅಥವಾ ಅಳತೆಯ ಪಂಕ್ತಿ ಅಥವಾ ಸಲು ವ್ಯವಸ್ಥಿತವಾಗುವಂತೆ ಮಾಡುತ್ತವೆ.

ಡಾ॥ರಾಮು: ಉಚ್ಚಾರಾಂಶಕ್ಕೆ ಅಂಟಿರುವ ಭಾರ ಅವಧಿ ಮುಂತಾದವುಗಳನ್ನು ಗೌಣವಾಗಿ ಭಾವಿಸಿ, ಎಷ್ಟು ಉಚ್ಚಾರಾಂಶಗಳಿಂದ ಪಂಕ್ತಿ ಆಗಿದೆ ಎಂಬ ಸಂಖ್ಯಸೂತ್ರ ಒಂದರಿಂದಲೇ ಛಂದೋ ಪ್ರಕಾರವನ್ನು ಗೊತ್ತುಮಾಡುವುದು ಜಪಾನೀ ಫ್ರೆಂಚ್ ಭಾಷೆಗಳಿಗೆ ಒಗ್ಗಿಬಂದಿದೆ. ಆದರೆ ಆ ಪದ್ಧತಿ ಬರಿ ಅಂಕಗಣಿತದ ಲೆಕ್ಕದಂತಲ್ಲ; ಹೆಚ್ಚು ಕಡಿಮೆ ಉಚ್ಚಾರಾಂಶಗಳಿಂದಾದ ಸಾಲುಗಳನ್ನು ಜೋಡಿಸುವದಷ್ಟೇ ಅಲ್ಲ. ತೀವ್ರತೆ ಶ್ರುತಿ ಅವಧಿ ವಿರಾಮಗಳೂ ಹಿಂದಿದ್ದುಕೊಂಡು ಪಂಕ್ತಿಗಳ ರಸವಂತಿಕೆಗೆ ಕಾರಣವಾಗುತ್ತವೆ.

ಡಾ॥ಶೀಲ: ಆದರೂ ಸ್ಥೂಲವಾಗಿ ಆ ಭಾಷೆಗಳ ಛಂದಸ್ಸು ಉಚ್ಚಾರಾಂಶಗಳ ಎಣಿಕೆಯ ಮೇಲೆ ನಿಂತಿದೆ ಎಂದರೆ ತಪ್ಪಲ್ಲ. ಚೀನೀ ಭಾಷೆಯಲ್ಲಿ ಶ್ರುತಿಯೇ ಛಂದಸ್ಸಿಗೆ ಆಧಾರವಾಗುವ ಮೂಲಾಂಶ; ಶ್ರುತಿ ವ್ಯತ್ಯಾಸಗಳಿಂದ ಪದಪುಂಜವೂ ಪಂಕ್ತಿಯೂ ರೂಪುಗೊಳ್ಳುತ್ತವೆ. ಪ್ರಾಚೀನ ಗ್ರೀಕರು ಧ್ವನಿಯ ಅವಧಿಗೆ ಪ್ರಾಧಾನ್ಯ ಕೊಟ್ಟರು.

ಡಾ॥ರಾಮು: ಪ್ರಾಚೀನ ರೋಮನರಲ್ಲಿ ಅವರದ್ದೇ ಆದ ಛಂದಸ್ಸಿತ್ತು; ಅದರ ಮೂಲಾಂಶ ಅವಧಾರಣೆ (ಆಕ್ಸೆಂಟ್) ಹಾಗಿದ್ದರೂ ಗ್ರೀಕ್ ಮಾದರಿಗಳಿಂದ ವಿಪರೀತ ಮೋಹಿತರಾದ ರೋಮನರಿಗೆ ಧ್ವನಿಯ ಅವಧಿ ಅಥವಾ ಮಾತ್ರೆ ಸಮಂಜಸವೆಂದು ತೋರಿಬಂತು. ಅದನ್ನು ಉಚ್ಚಾರಾಂಶಗಳ ಮೇಲೆ ಬಲವಂತದಿಂದ ಹೇರಿ, ಮೋರಾ ಎಂಬ ಏಕಮಾನವನ್ನು ನಿರ್ಮಿಸಿ, ಲಯ ಗುಚ್ಛಗಳನ್ನು ಏರ್ಪಡಿಸಿಕೊಂಡರು. ಮೋರಾ ಹ್ರಸ್ವಕಾಲಕ್ಕೆ ಸಮಾನ, ಎರಡು ಮೋರಾ ದೀರ್ಘ ಕಾಲಕ್ಕೆ. ಅಂಥ ಹ್ರಸ್ವ ದೀರ್ಘಗಳ ವರಿಸೆಯೇ ಏರಿಳಿತ–ಪುಂಜಗಳಿಗೂ ಪದ್ಯಪಂಕ್ತಿಗೂ ಆಕರ. ಪದ್ಯಪಂಕ್ತಿಯಲ್ಲಿ ಏರಿಳಿತ–ಪುಂಜ ಒಂದೇ ಬಗೆಯದಾಗಿದ್ದರೆ ಆ ಪದ್ಯ ವಾಚನಕ್ಕೂ ಬೇರೆ ಬೇರೆ ಬಗೆಯದಾಗಿದ್ದರೆ ಗಾಯನಕ್ಕೂ ಬಳಸಬೇಕೆಂಬ ವಿಧಿ ಏರ್ಪಟ್ಟಿತು.

ಡಾ॥ಶೀಲ: ಮೊದಲನೆಯದಕ್ಕೆ ಮೆಟ್ರಮ್ ಎಂದೂ ಎರಡನೆಯದಕ್ಕೆ ನ್ಯೂಮರಸ್ ಎಂದೂ ಹೆಸರು. ಮೆಟ್ರಮ್ಮಿನ ಕ್ರಮ ಬದಲಾವಣೆಯನ್ನೇ ಸಹಿಸದ ಬದ್ಧವೂ ಬಿಗಿಯೂ ಆದ ಕ್ರಮ; ನ್ಯೂಮರಸ್ಸಿನದು ವೈವಿಧ್ಯವುಳ್ಳ ಸಡಿಲ ಕ್ರಮ. ಬರಬರುತ್ತ ಲ್ಯಾಟಿನ್ ಗ್ರೀಕ್ ಎರಡೂ ಛಂದೋಪದ್ಧತಿಗಳು ಅವಧಾರಣೆಗೂ ಕೊನೆಗೆ ಸ್ವರಭಾರಕ್ಕೂ ಆಸ್ಪದವನ್ನಿತ್ತು ಧ್ವನಿಯ ಅವಧಿಯನ್ನು ಹಿಂದಕ್ಕೆ ಒತ್ತರಿಸಿಬಿಟ್ಟುವು.

ಡಾ॥ರಾಮು: ಹೊಸಹುಟ್ಟಿನ ಅವಧಿಯಲ್ಲಿ ಹಳೆಯ ಗ್ರೀಕ್ ಲ್ಯಾಟಿನ್ ಮಾತ್ರಾ ಛಂದಸ್ಸನ್ನು ಯೂರೋಪಿನ ಅರ್ವಾಚೀನ ಭಾಷೆಗಳ ಮೇಲೆ ಹೊರಿಸುವ ಪ್ರಯತ್ನ ನಡೆಯಿತು; ಆದರೆ ಅದು ಪೂರ್ತಿ ನಿರರ್ಥಕವಾಯಿತು. ಗ್ರೀಕ್-ಲ್ಯಾಟಿನ್ ಅಥವಾ ಕ್ಲ್ಯಾಸಿಕಲ್ ಛಂದಸ್ಸಿನ ಅವಶೇಷವಾಗಿ ಉಳಿದಿರುವುದು. ಛಂದೋ ವಿಶ್ಲೇಷಣ ಮತ್ತು ಛಂದೋ ಪ್ರಕಾರಗಳ ಅಂಕಿತ ಮಾತ್ರ. ಇಂದು ಆ ಅಂಕಿತಗಳ ಉಪಯೋಗಕ್ಕೂ ಹಲವು ವಿದ್ವಾಂಸರ ವಿರೋಧವಿದೆ.

ಡಾ॥ಶೀಲ: ಯೂರೋಪಿನ ಮುಖ್ಯ ಭಾಷೆಗಳನ್ನು ಟ್ಯೂಟಾನಿಕ್ ಅಥವಾ ಜರ್ಮ್ಯಾನಿಕ್ ನುಡಿಗಳು, ರೋಮಾನ್ಸ್ ನುಡಿಗಳು ಎಂದು ವಿಂಗಡಿಸುವುದು ರೂಢಿ. ಇಂಗ್ಲಿಷ್ ಜರ್ಮನ್ ನಾರ್ವೀಜಿಯನ್ ಮೊದಲಾದ ಟ್ಯೂಟಾನಿಕ್ ಭಾಷೆಗಳಿಗೆ ಸ್ವರಭಾರ ಅಥವಾ ಒತ್ತು ಮುಖ್ಯ ಲಕ್ಷಣ. ಪದ್ಯ ಛಂದಸ್ಸಿಗೂ ಗದ್ಯ ಛಂದಸ್ಸಿಗೂ ಭಾರವುಳ್ಳ ಉಚ್ಚಾರಾಂಶ ಭಾರವಿಲ್ಲದ ಉಚ್ಚಾರಾಂಶಗಳ ಯಾವುದೋ ರೀತಿಯ ಪರ್ಯಾಯವೇ ಆಧಾರ. ಅವಧಿ ಶ್ರುತಿ ಮೊದಲಾದ ಅಂಶಗಳ ಪ್ರಭಾವ ಸ್ವಲ್ಪ ಇದ್ದರೂ ಅವು ಗೌಣಾಂಶ.

ಡಾ॥ರಾಮು: ಇಟಾಲಿಯನ್ ಸ್ಪ್ಯಾನಿಷ್ ಫ್ರೆಂಚ್ ಮುಂತಾದ ರೊಮಾನ್ ಭಾಷೆಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಉಚ್ಚಾರಾಂಶಗಳನ್ನಿಟ್ಟು ಅವನ್ನು ಅಧ್ಯಕ್ಷರ ಪ್ರಾಸದಿಂದಲೋ ಸಾಮಾನ್ಯ ಪ್ರಾಸದಿಂದಲೋ ಕೂಡಿಸುವುದರಿಂದ ಲಯ ವಿನ್ಯಾಸ ಉತ್ಪತ್ತಿಯಾಗುತ್ತದೆ. ಅಲ್ಲದೆ ವಿರಾಮದ ಸೂಕ್ತ ಸ್ಥಾನದ ನಿರ್ಣಯವೂ ಶಬ್ದಗತಿಯ ಸೊಬಗನ್ನು ಹೆಚ್ಚಿಸಲು ಸಹಕರಿಸುತ್ತದೆ. ಉಚ್ಚಾರಾಂಶದ ಸಬಲತೆ ದುರ್ಬಲತೆಯೂ ಅದೇ ಕಾರ್ಯದಲ್ಲಿ ನೆರವಾಗುತ್ತದೆ.

ಡಾ॥ಶೀಲ: ಮನುಷ್ಯ ಭಾಷೆಯನ್ನು ನಾಲ್ಕು ಕೆಲಸಗಳಿಗೆ ಬಳಸಿಕೊಳ್ಳುತ್ತಾನೆ. ಆಡುಮಾತಿಗೆ, ವೈಜ್ಞಾನಿಕ ಗದ್ಯಕ್ಕೆ, ಸಾಹಿತ್ಯಿಕ ಗದ್ಯಕ್ಕೆ ಅಥವಾ ಗದ್ಯಕಾವ್ಯಕ್ಕೆ ಮತ್ತು ಪದ್ಯ ಕಾವ್ಯಕ್ಕೆ. ವಿಜ್ಞಾನ ಅಪೇಕ್ಷಿಸುವ ಭಾಷೆಗೆ ಭಾವಾವೇಶ ಅಲಂಕಾರ ವ್ಯಂಗ್ಯಾರ್ಥ ಮುಂತಾದವು ಒಂದು ಇರಕೂಡದು; ಖಚಿತವು ಅಸಂದಿಗ್ಧವೂ ಹೆಚ್ಚು ಕಡಿಮೆ ಇಲ್ಲದ್ದು ಆದ ಅಭಿಪ್ರಾಯದ ಅಭಿವ್ಯಕ್ತಿ ಅದರ ಗುರಿ. ಲಯ ಪ್ರಾಸ ಮೊದಲಾದುವು ಎಲ್ಲೂ ಸುಳಿಯಕೂಡದು.

ಡಾ॥ರಾಮು: ಆದರೇನು? ಶಬ್ದಧಾರೆಗೆ ಲಯ ಎಷ್ಟರ ಮಟ್ಟಿಗೆ ಸಹಜವಾಗಿ ಬಿಡದೆ ಅಂಟಿಕೊಂಡಿದೆ ಎಂದರೆ, ಹಲವು ವೈಜ್ಞಾನಿಕ ಹೇಳಿಕೆಗಳೂ ಅನಿರೀಕ್ಷಿತವಾಗಿ ಛಂದೋಬದ್ಧವಾಗಿ ಬಿಟ್ಟಿವೆ; ಒಂದೊಂದು ಪದ್ಯಪಂಕ್ತಿಜಾಲವೂ ಆಗಿಬಿಟ್ಟಿದೆ. ಇದನ್ನು ವೈಜ್ಞಾನಿಕವಾಗಿಯೇ ಎಲ್ಲರೂ ತೆಗೆದುಕೊಳ್ಳುತ್ತಾರೆ; ಸಾಹಿತ್ಯದ ಯೋಚನೆಗೆ ಅವಕಾಶವನ್ನೇ ಕೊಡದೆ ಗ್ರಹಿಸುತ್ತಾರೆ. ಅದರಲ್ಲೊಂದು ಅಚ್ಚರಿ ಮರೆಸಿಕೊಂಡು ಕುಳಿತಿದೆ.

ಡಾ॥ಶೀಲ: ಟೆನಿಸನ್ ಕವಿ ತನ್ನ ಮೆಮೋರಿಯಮ್ ಕಾವ್ಯಕ್ಕೆ ಈ ಪದ್ಯ ಪ್ರಕಾರವನ್ನೇ ರೂಢಿಸಿಕೊಂಡ; ಇನ್ ಮೆಮೋರಿಯಮ್ ಚೌಪದಿಯೆಂದೇ ಅದಕ್ಕೆ ಅಂಕಿತ. ಆದರೆ ಛಂದಸ್ಸನ್ನು ಇಲ್ಲಿ ನಾವು ಬಗೆಯುವುದೇ ಇಲ್ಲ; ಅಥವಾ ನಿರಾಕರಿಸುತ್ತೇವೆ. ಆಡುಮಾತಿನ ಸರಣಿಯಲ್ಲೂ ಛಂದೋಬದ್ಧ ತುಣುಕುಗಳೂ ಪ್ರಾಸ ಮುಂತಾದ

ಲಕ್ಷಣಗಳೂ ಬಂದೇ ಬರುತ್ತವೆ. ಏತಕ್ಕೆಂದರೆ ಆಡುಮಾತು ಕೇವಲ ವ್ಯಾವಹಾರಿಕವಾದರೂ ಆಲೋಚನೆಯ ಜೊತೆಗೆ ಭಾವವನ್ನು ಅಷ್ಟು ಗರ್ಭಿಕರಿಸಿಕೊಳ್ಳುತ್ತದೆ. ಆಡು ಮಾತಿನ ಲಯದಾಟಿಯನ್ನು ಗದ್ಯವಾಗಲಿ ಪದ್ಯವಾಗಲಿ ಅಲಕ್ಷಿಸುವಂತಿಲ್ಲ; ಅದನ್ನು ಹಿನ್ನಲೆಯಾಗಿ ಇರಿಸಿಕೊಂಡೇ ಪದ್ಯದ ಲಯಧಾಟಿಯನ್ನು ಮುಂದೆ ನಡೆಸಿಕೊಳ್ಳಬೇಕು. ಎರಡು ಧಾಟಿಗಳ ಚೆಂದುಳ್ಳ ಮಿಶ್ರಣವೇ ಕಾವ್ಯದ ವಿಶಿಷ್ಟ ಲಾವಣ್ಯ.

ಡಾ॥ರಾಮು: ಲಯ ಅಥವಾ ಶಬ್ದಗತಿಗೆ ಬೇಕಾದದ್ದು ಭಿನ್ನ ಮೌಲ್ಯದ ಎರಡು ಉಚ್ಚಾರಾಂಶಗಳ ಗುಂಪು ಮತ್ತು ಅವುಗಳ ಪುನರಾವರ್ತನ. ಹ್ರಸ್ವ ದೀರ್ಘ ಉಚ್ಚಾರಾಂಶಗಳೊ ಒತ್ತುಳ್ಳ ಒತ್ತಿಲ್ಲದ ಉಚ್ಚಾರಾಂಶಗಳೊ ಆಗಬಹುದು. ಪದ್ಯದಲ್ಲಿ ಸಾಮಾನ್ಯವಾಗಿ ಎರಡರ ಮತ್ತು ಮೂರರ ಗುಂಪು ಬರುತ್ತವೆ; ನಾಲ್ಕರ ಗುಂಪು ಅಪರೂಪ; ಐದರದ್ದು ಇಲ್ಲವೇ ಇಲ್ಲ. ಗದ್ಯದಲ್ಲಿ ಧಾರಾಳವಾಗಿ ಬರಬಹುದು. ಗುಂಪಿನಲ್ಲಿ ದುರ್ಬಲ ಉಚ್ಚಾರಾಂಶಗಳು ಸಬಲ ಉಚ್ಚಾರಾಂಶವನ್ನು ಮೆಟ್ಟಿ ನಿಲ್ಲುತ್ತದೆ. ಗುಂಪಿಗೆ ಒಂದಕ್ಕೂ ಹೆಚ್ಚು ಸಬಲ ಉಚ್ಚಾರಾಂಶವಿದ್ದರೆ ಅವುಗಳಲ್ಲಿ ಒಂದು ಕೇಂದ್ರವಾಗುತ್ತದೆ.

ಡಾ॥ಶೀಲ: ಪದ್ಯ ಛಂದಸ್ಸು ಕ್ಲುಪ್ತ, ಬಿಗಿ, ಪುನರುಕ್ತಿ ಪೂರ್ಣ; ಗದ್ಯ ಛಂದಸ್ಸು ಅನಿಯತ, ಸಡಿಲ; ಅದರಲ್ಲಿಯೂ ಪುನರಾವರ್ತಕ ಬರಲೇಬೇಕು. ಆದರೆ ನಿಯತವಾದ ನಿರೀಕ್ಷಿತ ಸ್ಥಾನದಲ್ಲ. ಗದ್ಯದಲ್ಲಿ ಪದ್ಯಗುಚ್ಚವಾಗಲಿ ಪದ್ಯಪಂಕ್ತಿಯಾಗಲಿ ಬರಕೂಡದು; ಅವು ಬಂದರೆ ಕೇಳುವ ಕಿವಿಗೆ ಅಹಿತ, ಆಶಾಭಂಗ, ಪದ್ಯ ಗದ್ಯ ಎರಡಕ್ಕೂ ಇರುವ ವ್ಯತ್ಯಾಸಗಳಲ್ಲಿ ಒಂದು, ಉದ್ದ ಪದದ ಉಚ್ಚಾರಾಂಶಗಳನ್ನು ಬೇರ್ಪಡಿಸುವ ವಿಚಾರ; ಗದ್ಯದಲ್ಲಿ ಪದವನ್ನು ಪೂರ್ತಿಯಾಗಿಯೇ ಪರಿಗಣಿಸಬೇಕು. ಪದ್ಯದಲ್ಲಿ ಅದನ್ನು ಬೇರೆ ಬೇರೆ ಉಚ್ಚಾರಾಂಶಗಳಾಗಿ ಒಡೆಯಬಹುದು. "**My lonely anguish melts no heart but mine** "

ಡಾ॥ರಾಮು: ಉಸಿರ್ದಾಣ ಮತ್ತು ವಿರಾಮ ಶಬ್ದಗತಿಯ ಒಂದು ಮನನೀಯ ಅಂಗವಾದರೆ ಅವಿಚ್ಛಿನ್ನವಾಗಿಯೂ ಅಖಂಡವಾಗಿಯೂ ನಡೆಯಲಾರದು; ನಡೆದರೆ ಅದು ಸರಿಯಾದ ತಾತ್ಪರ್ಯವನ್ನು ಈಯಲಾರದು. ಭಾಗ ಭಾಗವಾಗಿ ಪುಂಜ ಪುಂಜವಾಗಿ ವಾಕ್ಯಗಳನ್ನು ವಿಭಜಿಸದೇ ಗತ್ಯಂತರವಿಲ್ಲ. ವಿರಾಮದ ಪಾತ್ರ ಹೀಗೆ ಬಲಿಷ್ಠವಾದದ್ದು. ಎಷ್ಟೋ ಕಡೆ ಹ್ರಸ್ವ ಅಥವಾ ಒತ್ತಿಲ್ಲದ ಉಚ್ಚಾರಾಂಶದ ಬದಲು ವಿರಾಮ ಬರಬಹುದು.

ಡಾ॥ಶೀಲ: ದೊಡ್ಡ ಕಂಬ ಸಣ್ಣ ಕಂಬಗಳನ್ನು ಒಂದಾದ ಮೇಲೊಂದರಂತೆ ನೆಟ್ಟರೆ ಸಾಲು ಲಯಾತ್ಮಕವಾಗುತ್ತದೆ; ಒಂದೇ ಎತ್ತರದ ಕಂಬಗಳನ್ನು ಸಾಲಾಗಿಸಿದರೆ ಹೀಗೆ? ಅದೂ ಲಯಾತ್ಮಕ, ಏತಕ್ಕೆಂದರೆ ಕಂಬ–ಕಂಬವಿಲ್ಲದಿಕೆ ಅಥವಾ ಭರ್ತಿ ಬಿಡುವು ಎಂಬ ಎರಡು ಅಂಶ ಸಾಕು ಲಯದ ಪರಿಣಾಮ ಉಂಟು ಮಾಡುವುದಕ್ಕೆ. ಲಯ ಪ್ರಪಂಚವನ್ನು ತುಂಬಿಕೊಂಡಿದೆ; ಮನುಜನ ಬಾಳಿಗೆ ಅದರಿಂದಲೇ ಸ್ವಾರಸ್ಯ, ಸಂತೃಪ್ತ.

# 21. ವಿಮರ್ಶೆ

ಡಾ॥ರಾಮು: ವಿಮರ್ಶೆ ಒಂದು ಬೌದ್ಧಿಕ ಕ್ರಿಯೆ. ಯಾವುದೇ ಕೃತಿಯನ್ನು ತೂಗಿನೋಡಿ ಮೌಲ್ಯ ನಿರ್ಧರಿಸುವ ಸಾಮರ್ಥ್ಯ ಅಥವಾ ಕಲೆ (ಕ್ರಿಟಿಸಿಸಮ್).

ಡಾ॥ಶೀಲ: ಈ ಪದ ಗ್ರೀಕ್ ಮೂಲದ 'ಕ್ರಿನೈನ್'ದಿಂದ ಬಂದದ್ದು. ಅಂದರೆ ಬೇರ್ಪಡಿಸು, ವಿವೇಕಿಸು, ವಿಶ್ಲೇಷಿಸು ಎಂದರ್ಥ.

ಡಾ॥ರಾಮು: ಕ್ರಿಯಾಶೀಲ ಬರೆಹಗಾರರು, ಪ್ರಾರಂಭಿಕ ಬರೆಹಗಾರರು, ವೃತ್ತಿಶೀಲ ವಿಮರ್ಶಕರು ಎಲ್ಲರ ವಿಶ್ಲೇಷಣೆಯನ್ನು ವಿಮರ್ಶೆಯೆಂದೇ ಕರೆಯಲಾಗುತ್ತದೆ. ಇಂದು ಬಳಸುತ್ತಿರುವ 'ವಿಮರ್ಶೆ' ಎಂಬ ಪದ ಇಂಗ್ಲಿಷ್‌ನ 'ಕ್ರಿಟಿಸಿಸಂ' ಪದಕ್ಕೆ ಸಂವಾದಿ.

## ಸ್ವರೂಪ ಮತ್ತು ಲಕ್ಷಣ:

ಡಾ॥ಶೀಲ: ವಿಮರ್ಶೆಯ ಬರೆಹಗಳು ನಾನಾ ರೀತಿಯವು. ಅವು ಪದ್ಯ ಅಥವಾ ಗದ್ಯ ರೂಪದಲ್ಲಿರಬಹುದು. ಸಣ್ಣ ಪ್ರಬಂಧಗಳೋ ಗ್ರಂಥರೂಪವೋ ಇರಬಹುದು. ಆತ್ಮಚರಿತೆಯೋ ಯಾವುದಾದರೂ ಕೃತಿಯನ್ನು ಕುರಿತ ಟೀಕೆಯೋ ವ್ಯಾಖ್ಯಾನವೋ ಭಾಷ್ಯವೋ ಅರ್ಥವಿವರಣೆಯೋ ಕಾವ್ಯಮೀಮಾಂಸೆಯೋ ಆಗಿರಬಹುದು.

ಡಾ॥ರಾಮು: ಸಾಹಿತ್ಯ ಸ್ವರೂಪವನ್ನು ಕುರಿತು ಬರೆದ ಅಭಿಪ್ರಾಯವೋ ಮೌಲ್ಯಮಾಪನವೋ ಅಥವಾ ಕೃತಿಸಂಪಾದನೆಯ ಮುನ್ನುಡಿ ರೂಪವೋ ಆಗಿರಬಹುದು.

ಡಾ॥ಶೀಲ: ಪಾಶ್ಚಾತ್ಯರಲ್ಲಿ ವಿಮರ್ಶೆ ಎಂಬುದು ಸಾಹಿತ್ಯ ಮತ್ತು ಕಲಾಪ್ರಪಂಚವನ್ನು ಕುರಿತ ಯಾವುದೇ ಅಭಿಪ್ರಾಯ ಅಥವಾ ನಿರ್ಣಯ ಕಾರ್ಯವಾಗಿರುತ್ತದೆ. ಅಷ್ಟೇ ಅಲ್ಲ, ಯಾವುದೇ ಅಭಿಪ್ರಾಯ ಖಂಡನೆಯೂ ವಿಮರ್ಶೆಯಾಗ ಬಲ್ಲದು.

ಡಾ॥ರಾಮು: ಉದಾಹರಣೆಗೆ ಕ್ರಾಮ್‌ವೆಲ್‌ಗಾಗಿ ವಿಕ್ಟರ್ ಹ್ಯೂಗೋ ಬರೆದ ಮುನ್ನುಡಿ ರೊಮ್ಯಾಂಟಿಕ್ ಕಲೆಯ ಕುರಿತ ವಿಮರ್ಶೆ ಆಗಿತ್ತು.

ವರ್ಡ್ಸ್‌ವರ್ತ್‌ನ 'ಲಿರಿಕಲ್ ಬ್ಯಾಲೆಡ್ಸ್'ನ ಸ್ವರೂಪ ಮತ್ತು ಅಗತ್ಯವನ್ನು ಕುರಿತ ಸಮರ್ಥನ ಲೇಖನ 'ಎ ಪ್ರಿಫೇಸ್ ಟು ದ ಲಿರಿಕಲ್ ಬ್ಯಾಲೆಡ್ಸ್' ಒಂದು ಕಾವ್ಯಪಂಥದ ವ್ಯಾಖ್ಯಾನವೇ ಆಯಿತು.

ತನ್ನ 'ತೆರೆಸಾರ‍್ಯಾಕ್ವಿನ್' ಕೃತಿಯಲ್ಲಿ ಎಮಿಲಿ ಜೋಲಾ 'ನ್ಯಾಚುರಲಿಸಂ' ಕುರಿತು ಉಪನ್ಯಾಸ ಕೊಟ್ಟದ್ದು–ಇವೆಲ್ಲವೂ ವಿಮರ್ಶೆಯ ಸ್ವರೂಪ ಯಾವತ್ತೂ ಭಿನ್ನರುಚಿ ಹಾಗೂ ಭಿನ್ನಸಾಧ್ಯತೆಗಳನ್ನೊಳಗೊಂಡದ್ದು ಎಂಬುದನ್ನು ಶ್ರುತಪಡಿಸಿವೆ.

ಜಾರ್ಜ್‌ಬರ್ನಾಡ್ ಷಾ ತನ್ನ ನಾಟಕಗಳಿಗೆ ಕೊಡುವಷ್ಟೇ ಪ್ರಾಮುಖ್ಯವನ್ನು ಅದರ ದೀರ್ಘ ವಿವರಣಾತ್ಮಕ ಮುನ್ನುಡಿಗೂ ಕೊಟ್ಟಿದ್ದ. ಅವನ 'ಮ್ಯಾನ್ ಅಂಡ್ ಸೂಪರ್‌ಮ್ಯಾನ್' ಮತ್ತು 'ಮೇಜರ್ ಬಾರ್ಬರಾ' ಕೃತಿಗಳಲ್ಲಿಯ ಪರಿಚಯ ಲೇಖನ ಇದಕ್ಕೆ ಸಾಕ್ಷಿ.

ಡಾ॥ಶೀಲ: ಇದೆಲ್ಲದರಿಂದ ತಿಳಿದು ಬರುವ ಅಂಶವೆಂದರೆ, ಎಷ್ಟೋ ವೇಳೆ ಕೃತಿ ಮುಖ್ಯವಾಗಿರದೆ ಅದರ ಹಿನ್ನೆಲೆಯನ್ನು ರೂಪಿಸಿದ ಸಾಹಿತ್ಯಸ್ವರೂಪ, ಸಾಮಾಜಿಕ, ಧಾರ್ಮಿಕ ಹಿನ್ನೆಲೆ, ಬದುಕು ಮತ್ತು ಸಾಹಿತ್ಯಮಾರ್ಗಗಳು ವಿಮರ್ಶೆಯ ಸ್ವರೂಪವನ್ನು ನಿರ್ಣಯಿಸುತ್ತವೆ ಎಂಬುದು. ಅರಿಸ್ಟಾಟಲ್, ಲಾಂಜೀನಸ್, ಹೊರೇಸ್ ಮೊದಲಾದವರ ಕೃತಿವಿಮರ್ಶೆ, ಮುಂದೆ ಕಾವ್ಯಮೀಮಾಂಸೆಯ ಮೌಲ್ಯ ಗಳಿಸಿದವು.

ಡಾ॥ರಾಮು: ಯಾವುದೇ ಕೃತಿಯ ಖಂಡನೆ, ಮಂಡನೆ, ಸಿದ್ಧಾಂತ, ತತ್ತ್ವಪ್ರತಿಪಾದನೆ-ಹೀಗೆ ಎಲ್ಲ ನಿಟ್ಟಿನಲ್ಲೂ ವಿಮರ್ಶೆ ಎಂಬುದು ವೈವಿಧ್ಯದಿಂದ ಕೂಡಿದ್ದು, ವ್ಯಾಖ್ಯಾನಿಸುವುದು ಅಷ್ಟು ಸುಲಭಸಾಧ್ಯವಲ್ಲ.

ಡಾ॥ಶೀಲ: ಫ್ರಾನ್ಸ್, ಜರ್ಮನಿಯಂಥ ಕಡೆಗಳಲ್ಲಿ ಮೌಲಿಕ ಸಾಹಿತ್ಯ ಚಿಂತನೆ ವಿಮರ್ಶೆಯ ಲಕ್ಷಣವಾಗಿದ್ದರೆ, ಆಂಗ್ಲವಿಮರ್ಶಕರು ಪ್ರಾಯೋಗಿಕ ವಿಮರ್ಶೆಗೆ ಪ್ರಾಧಾನ್ಯ ಕೊಟ್ಟಿದ್ದಾರೆ. ಅಮೆರಿಕದ ವಿಮರ್ಶಾಕ್ರಮದಲ್ಲಿ ಕೃತಿವಿಶ್ಲೇಷಣೆ ಅಥವಾ ಕೃತಿ ವ್ಯಾಖ್ಯಾನ ಹೆಚ್ಚು ಪ್ರಾಶಸ್ತ್ಯಗಳಿಸಿದೆ.

ಡಾ॥ರಾಮು: ಮ್ಯಾಥ್ಯೂ ಆರ್ನಾಲ್ಡ್, ಲೆಸ್ಲೀ ಸ್ಟೀವನ್, ಜಾನ್ ಮಾರ್ಲೇ ಮೊದಲಾದವರು ನೀಡಿರುವ ಸಾಹಿತ್ಯೋಪನ್ಯಾಸಗಳು ಉತ್ತಮ ವಿಮರ್ಶಾ ಸಿದ್ಧಾಂತಗಳಾಗಿ ಪ್ರತಿಪಾದಿತವಾಗಿರುವುದನ್ನು ಗಮನಿಸಬೇಕು.

ಡಾ॥ಶೀಲ: ಪೌರ್ವಾತ್ಯ, ಅದರಲ್ಲೂ ಮುಖ್ಯವಾಗಿ ಭಾರತೀಯ ಚೌಕಟ್ಟಿಗೆ ಬಂದರೆ, ಅಲ್ಲಿ ಕಾವ್ಯಮೀಮಾಂಸೆಗೆ ಮೊದಲಸ್ಥಾನ ಹಾಗೂ ಕೊನೆಯಸ್ಥಾನ. ಸಾಹಿತ್ಯ ವಿಮರ್ಶೆ ಇತ್ತೀಚಿನದು.

ಡಾ॥ರಾಮು: ಅಧ್ಯಯನಗಳಿಂದ ತಿಳಿದು ಬರುವ ಸಂಗತಿಯೆಂದರೆ, ಸುಮಾರು 3ನೆಯ ಶತಮಾನದ ಭರತನಿಂದ ಮೊದಲುಗೊಂಡು ಹದಿನೈದನೆಯ ಶತಮಾನದ ವಿಶ್ವನಾಥನವರೆಗೂ ಸುಮಾರು ಸಾವಿರ ವರ್ಷಗಳ ಅವಧಿಯ ಇತಿಹಾಸದಲ್ಲಿ ಕಾಣಸಿಗುವವರು ಲಾಕ್ಷಣಿಕರು, ವ್ಯಾಖ್ಯಾನಕಾರರು, ಟೀಕಾಕಾರರು ಹಾಗೂ ಮೀಮಾಂಸಕರೇ ಹೊರತು ಸಾಹಿತ್ಯ ವಿಶ್ಲೇಷಕರಲ್ಲ.

ಡಾ॥ಶೀಲ: ಎಷ್ಟೋ ವೇಳೆ ಟೀಕೆಯ ಅಥವಾ ವ್ಯಾಖ್ಯಾನ ಸ್ವರೂಪದ ಶ್ಲೋಕ ಹಾಗೂ ಪದ್ಯಭಾಗಗಳನ್ನು ಚರ್ಚಿಸಲಾಗಿದೆಯಾದರೂ ಅದು ಕೃತಿವಿಮರ್ಶೆ ಯಾಗಿಲ್ಲ.

ಡಾ॥ರಾಮು: ಆದರೆ ಭಾರತೀಯ ಕಾವ್ಯಮೀಮಾಂಸೆ ಎಂಬ ಆಲೋಚನಾ ಕ್ರಮ ಅಥವಾ ಮಂಥನಕ್ರಿಯೆ ಶಿಸ್ತುಬದ್ಧವಾದ ಚಿಂತನೆಗೆ, ಸಿದ್ಧಾಂತ ತತ್ತ್ವಗಳಿಗೆ, ತಾರ್ಕಿಕಜ್ಞಾನಕ್ಕೆ ಒತ್ತುಕೊಟ್ಟಿದೆ.

ಡಾ॥ಶೀಲ: ಕೃತಿರಚನೆಯನ್ನು ಅಭಿಜಾತ ಕಲೆಯೆಂದು ಭಾವಿಸುತ್ತಿದ್ದ ಪ್ರಾರಂಭದ ಕಾಲದಲ್ಲಿ ಪಾಶ್ಚಾತ್ಯರಲ್ಲೂ ಕಾವ್ಯಮೀಮಾಂಸೆಯೇ ಪ್ರಧಾನವಾಗಿತ್ತು. ಅರಿಸ್ಟಾಟಲ್, ಲಾಂಜೀನಸ್ ಬರೆಹಗಳನ್ನು ಗಮನಿಸಿದರೆ, ಅವರ ಸಾಹಿತ್ಯದ ಸ್ವರೂಪ ತತ್ತ್ವಪ್ರತಿಪಾದನೆಗಳಲ್ಲಿ ಪ್ರಧಾನವಾಗಿರುವುದು ತಿಳಿಯುತ್ತದೆ.

ಡಾ॥ರಾಮು: ಆದರೆ 15ನೆಯ ಶತಮಾನದಿಂದ ಈಚೆಗೆ ರೆನೈಸಾನ್ಸ್ ಕಾಲಕ್ಕೆ ಕ್ರಮೇಣ ಮೀಮಾಂಸೆಯೊಂದಿಗೆ ವಿಮರ್ಶೆಯ ತತ್ತ್ವಗಳು ರೂಪುಗೊಂಡವು. 18–19ನೆಯ ಶತಮಾನಗಳಿಗೆ ಕಾಲಿಡುತ್ತಿದ್ದಂತೆ ಈ ಪರಿಕ್ರಮ ವಿಮರ್ಶಾತತ್ತ್ವಗಳ ಆಧಾರದಲ್ಲಿ ಕೃತಿಯನ್ನು ಒರೆಹಚ್ಚುವಲ್ಲಿಗೆ ಬಂದು ಮುಟ್ಟಿತು.

ಡಾ॥ಶೀಲ: 19ನೆಯ ಶತಮಾನದಿಂದೀಚೆಗೆ ರಮ್ಯ ಅಥವಾ ರೊಮ್ಯಾಂಟಿಕ್ ಯುಗದ ವಿಮರ್ಶಕರಾದ ಲೆಸಿಂಗ್, ವರ್ಡ್ಸ್‌ವರ್ತ್, ಕೋಲ್‌ರಿಜ್, ಹ್ಯೂಗೋ ಮೊದಲಾದವರು ಮೀಮಾಂಸೆಯೊಂದಿಗೆ ಸರಿಸಮವಾಗಿ ಹಾಗೂ ಸ್ಪಷ್ಟ ತತ್ತ್ವಗಳಿಗನುಗುಣವಾಗಿ ವಿಮರ್ಶಾತತ್ತ್ವಗಳನ್ನು ಪ್ರತಿಪಾದಿಸತೊಡಗಿದರು.

ಡಾ॥ರಾಮು: ಹೀಗೆ ನಿರ್ದಿಷ್ಟ ತತ್ತ್ವಗಳಡಿಯಲ್ಲಿ ಕೃತಿಗಳನ್ನು ಒರೆಹಚ್ಚುವ ಕ್ರಮದಲ್ಲೂ ಸ್ಪಷ್ಟವಾಗಿ ಬೆಳವಣಿಗೆಯ ಸ್ವರೂಪವನ್ನು ಗುರುತಿಸಬಹುದು. ಹಿಂದೆ ವಿಮರ್ಶೆಯನ್ನು ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಅಥವಾ ಆತ್ಮನಿಷ್ಠ ಎಂದು ಪ್ರಧಾನವಾಗಿ ಎರಡು ವರ್ಗಗಳಡಿಯಲ್ಲಿ ಗುರುತಿಸಲಾಗುತ್ತಿತ್ತು.

ಡಾ॥ಶೀಲ: ಆತ್ಮನಿಷ್ಠ ವಿಮರ್ಶೆಯನ್ನು 'ಮಹಾಕೃತಿಗಳಲ್ಲಿಯ ಚೈತನ್ಯವನ್ನು ಗ್ರಹಿಸುವ ಸಾಹಸಯಾತ್ರೆ' ಎಂದೇ ವ್ಯಾಖ್ಯಾನಿಸಲಾಗುತ್ತಿತ್ತು. ಒಬ್ಬ ವಿಮರ್ಶಕ ತಾನು ಒಳಹೊಕ್ಕು ನೋಡುವ ಕೃತಿಯಲ್ಲಿ ತನ್ನ ಗ್ರಹಿಕೆಗೆ ನಿಲುಕಿದ

ಅಂಶಗಳನ್ನು ಹಾಗೂ ಅದರಿಂದ ತನ್ನ ಮೇಲಾದ ಪ್ರಭಾವವನ್ನು ಓದುಗರೆದುರು ತೆರೆದಿಡುವ ಕ್ರಮವೇ ವ್ಯಕ್ತಿನಿಷ್ಠ ವಿಮರ್ಶೆಯೆನಿಸುತ್ತಿತ್ತು,

ಡಾ॥ರಾಮು: ಬಹುತೇಕ ಪುಸ್ತಕ ವಿಮರ್ಶೆ ಈ ಕ್ರಮದಲ್ಲಿ ದಾಖಲಾಗುತ್ತಿತ್ತು. ವ್ಯಕ್ತಿನಿಷ್ಠ ವಿಮರ್ಶೆ ಒಂದು ಕೃತಿಯ ವಸ್ತು, ವಿಷಯ, ಪ್ರಮಾಣಗಳಿಗನುಗುಣವಾಗಿ ವಿಮರ್ಶಕ ಮೌಲ್ಯನಿರ್ಧಾರ ಮಾಡುತ್ತಿದ್ದ. ಇಂದು ವಿಮರ್ಶೆಯ ದಾರಿ ಹಲವು ಕವಲುಗಳಾಗಿದೆ.

ಡಾ॥ಶೀಲ: ಆಧುನಿಕ ವಿಮರ್ಶಾ ಪ್ರಸ್ಥಾನಗಳೆಂದೇ ವಿದ್ವಾಂಸರು ಇದನ್ನು ಗ್ರಹಿಸಿದ್ದಾರೆ. ಕಾಲದಿಂದ ಕಾಲಕ್ಕೆ ವಿಮರ್ಶಾ ಪ್ರಸ್ಥಾನಗಳು ಬದಲಾಗುತ್ತವೆ. ಅದು ಸಮಕಾಲೀನ ದೃಷ್ಟಿ, ಧೋರಣೆಗಳಿಗನುಸಾರವಾಗಿ ವಿಮರ್ಶೆಯ ಸ್ವರೂಪ ಬದಲಾಗುವುದರ ಸಂಕೇತವಾಗಿದೆ.

ಡಾ॥ರಾಮು: ಅವುಗಳಲ್ಲಿ ಪ್ರಧಾನ ಮಾರ್ಗಗಳನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದು: ಮನೋವೈಜ್ಞಾನಿಕ ವಿಮರ್ಶೆ (ಸೈಕೊಲಾಜಿಕಲ್ ಕ್ರಿಟಿಸಿಸಮ್), ಚಾರಿತ್ರಿಕ ವಿಮರ್ಶೆ (ಹಿಸ್ಟಾರಿಕಲ್ ಕ್ರಿಟಿಸಿಸಮ್), ಮಾರ್ಕ್ಸ್‌ವಾದಿ ವಿಮರ್ಶೆ (ಮಾರ್ಕ್ಸಿಸ್ಟ್ ಕ್ರಿಟಿಸಿಸಮ್), ಸ್ತ್ರೀನಿಷ್ಠ ವಿಮರ್ಶೆ (ಫೆಮಿನಿಸ್ಟ್ ಕ್ರಿಟಿಸಿಸಮ್), ಸ್ವರೂಪ ವಿಮರ್ಶೆ (ಜಾನರ್ ಕ್ರಿಟಿಸಿಸಮ್), ರೂಪನಿಷ್ಠ ವಿಮರ್ಶೆ (ಫಾರ್ಮಲಿಸಮ್), ವಾಚಕಕೇಂದ್ರಿತ ವಿಮರ್ಶೆ, ರಾಚನಿಕ ವಿಮರ್ಶೆ ಮುಂತಾದುವು.

ಡಾ॥ಶೀಲ: ವಿಮರ್ಶೆ ಈ ಮೇಲಿನ ಯಾವುದೇ ಕವಲಿಗೆ ಸಂಬಂಧಿಸಿರಬಹುದು. ಆದರೆ ಕೆಲವು ಲಕ್ಷಣಗಳಿರಬೇಕೆಂದು ವಿದ್ವಾಂಸರು ಒಂದಲ್ಲ ಒಂದು ರೀತಿಯಿಂದ ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಟಿ.ಎಸ್.ಎಲಿಯಟ್‌ನ ಪ್ರಕಾರ ವಿಮರ್ಶೆ 'ಕಲಾಕೃತಿಗಳನ್ನು ಅರ್ಥೈಸಬೇಕು ಹಾಗೂ ಓದುಗನ ಅಭಿರುಚಿಯನ್ನು ತಿದ್ದಬೇಕು.'

ಡಾ॥ರಾಮು: ಎಫ್.ಆರ್.ಲೀವಿಸ್‌ನ ಪ್ರಕಾರ 'ಉನ್ನತವಾದ ನೈತಿಕ ಪ್ರಜ್ಞೆಯನ್ನು ನಿರೂಪಿಸಬೇಕು ಹಾಗೂ ಕೃತಿಯಲ್ಲಿಯ ಮೌಲ್ಯಗಳು ಬದುಕಿನ ಪರವಾಗಿವೆಯೇ ಎಂದು ನಿರೂಪಿಸಬೇಕು'.

ಡಾ॥ಶೀಲ: ಮ್ಯಾಥ್ಯೂ ಆರ್ನಾಲ್ಡ್‌ನ ಪ್ರಕಾರ 'ಮಾನವ ಮೌಲ್ಯಗಳನ್ನು ಪ್ರತಿಪಾದಿಸುವಂಥದಾಗಿರಬೇಕು ಹಾಗೂ ಸಾಹಿತಿ ತನ್ನ ಕೃತಿಯಲ್ಲಿ ಅಭಿವ್ಯಂಜಿಸಿದ ಅನುಭವಗಳ ಮಟ್ಟವನ್ನು ಪರಿಶೀಲಿಸಿ ಮೌಲ್ಯನಿರ್ಧರಿಸಬೇಕು.

ಡಾ॥ರಾಮು: 1941ರ ಅನಂತರ, ಅಮೆರಿಕದ ಕವಿ, ವಿಮರ್ಶಕ ಜಾನ್‌ಕ್ರೋ ರ‍್ಯಾನ್‌ಸಮ್ 'ನವ್ಯವಿಮರ್ಶೆ'ಯೆಂಬ (ನ್ಯೂ ಕ್ರಿಟಿಸಿಸಮ್) ಗ್ರಂಥವನ್ನು ಹೊರತರುವುದರ ಮೂಲಕ ವಿಮರ್ಶಾಕ್ಷೇತ್ರದಲ್ಲಿ ಹೊಸದೊಂದು ಹಂತವನ್ನು ರೂಪಿಸಿದ.

ಡಾ॥ಶೀಲ: ಅವನ ಹಾದಿಯಲ್ಲೇ ಬಂದ ಇತರ ಮಹತ್ತ್ವದ ವಿಮರ್ಶಕರಾದ ಕ್ಲಿಯಂತ್ ಬ್ರೂಕ್ಸ್, ರಾಬರ್ಟ್ ಪೆನ್ ವಾರನ್ ಮತ್ತು ರಾಬರ್ಟ್ ಹೇಲ್ಮನ್ ಮೂವರು ಒಟ್ಟಿಗೆ ರಚಿಸಿದ ಅಂಡರ್‌ಸ್ಟ್ಯಾಂಡಿಂಗ್ ಪೊಯೆಟ್ರಿ (ಕಾವ್ಯಾಸ್ವಾದ), ಅಂಡರ್‌ಸ್ಟ್ಯಾಂಡಿಂಗ್ ಫಿಕ್ಷನ್ (ಕಟ್ಟುಕಥನದ) ಮತ್ತು ಅಂಡರ್‌ಸ್ಟ್ಯಾಂಡಿಂಗ್ ಡ್ರಾಮ (ನಾಟಕದ ಆಸ್ವಾದ) ಕೃತಿಗಳು ಒಂದು ಕೃತಿಯನ್ನು ಅಭ್ಯಸಿಸುವಾಗ ಅವುಗಳ ಶಿಲ್ಪ ಮತ್ತು ಬಂಧ ಕರ್ಷಣ (ಟೆನ್ಶನ್) ವ್ಯಂಗ್ಯ ಮತ್ತು ವಿರೋಧಾಭಾಸ (ಐರನಿ ಅಂಡ್ ಪ್ಯಾರಡಾಕ್ಸ್), ಆಂಗಿಕ ಸಂಜ್ಞೆ(ಲ್ಯಾಂಗ್ವೇಜ್ ಆಫ್ ಗೆಶ್ಚರ್), ಭ್ರಮೆ (ಫ್ಯಾಲಸಿ) ಮುಂತಾದ ವಿಷಯಗಳನ್ನು ಗ್ರಹಿಸಿ ವಿಮರ್ಶಿಸಬೇಕೆಂದು ಪ್ರತಿಪಾದಿಸುತ್ತಾರೆ.

ಡಾ॥ರಾಮು: ನವ್ಯವಿಮರ್ಶೆ ಬ್ರಿಟಿಷ್ ಅಮೆರಿಕನ್ ರೂಪನಿಷ್ಠೆಯನ್ನು ಹೋಲುತ್ತದಾದರೂ ಕನ್ನಡ ಸಂದರ್ಭಕ್ಕೆ ಹೊಂದುವುದೆಂದು ವಿದ್ವಾಂಸರು ನಂಬುತ್ತಾರೆ. ಏಕೆಂದರೆ ರೂಪನಿಷ್ಠ ವಿಮರ್ಶೆಯನ್ನು ಈಗಾಗಲೇ ಭಾರತೀಯ ಕಾವ್ಯಮೀಮಾಂಸೆಯೂ ಎತ್ತಿಹಿಡಿದಿದೆ.

ಡಾ॥ಶೀಲ: ಈ ನಿಟ್ಟಿನಲ್ಲಿ ಎಂ.ಜಿ.ಕೃಷ್ಣಮೂರ್ತಿ, ಗಿರಡ್ಡಿ ಗೋವಿಂದರಾಜ, ಎಚ್.ಎಮ್.ಚನ್ನಯ್ಯ, ಯು.ಆರ್.ಅನಂತಮೂರ್ತಿ, ಗೋಪಾಲಕೃಷ್ಣ ಅಡಿಗ, ಕೀರ್ತಿನಾಥ ಕುರ್ತಕೋಟಿ, ಜಿ.ಎಸ್.ಆಮೂರ ಮೊದಲಾದವರಿಂದ ನವ್ಯವಿಮರ್ಶೆ ವಿಪುಲವಾಗಿಯೇ ಬೆಳೆದಿದೆ.

ಡಾ॥ರಾಮು: ಕೃತಿಗಳ ಮೇಲೆ ವಿಮರ್ಶೆಯ ಪ್ರಭಾವ: ಇದು ನಿಜಕ್ಕೂ ಬೆರಗುಗೊಳಿಸುವಂಥ ಹಾಗೂ ಗಂಭೀರವಾಗಿ ಚಿಂತಿಸಬೇಕಾದಂಥ ಸಂಗತಿ. ಕಾಲಕಾಲಕ್ಕೆ ಕೃತಿಗಳು ಹೆಚ್ಚು ಪಾಂಡಿತ್ಯಪೂರ್ಣವಾಗಿಯೂ ಸಮಾಜಮುಖಿಯಾಗಿಯೂ ವೈಚಾರಿಕವಾಗಿಯೂ ರೂಪುಗೊಳ್ಳುವುದಕ್ಕೆ ಹಾಗೂ ಹೊಸ ಹೊಸ ಚಿಂತನಾಕ್ರಮಗಳನ್ನು ರೂಢಿಸಿಕೊಳ್ಳುವುದಕ್ಕೆ ವಿಮರ್ಶೆ ತನ್ನದೇ ಆದ ರೀತಿಯಲ್ಲಿ ಪ್ರಭಾವ ಬೀರುತ್ತದೆ.

ಡಾ॥ಶೀಲ: ಫ್ರಾನ್ಸನ್ನೇ ಉದಾಹರಿಸುವುದಾದರೆ, 1500–1700 ಅವಧಿಯಲ್ಲಿ ಪ್ರತಿಭಾವಂತ ವಿಮರ್ಶಕರು "ನಾಟಕಕಾರರು ಕಾಲ, ಸ್ಥಳ ಮತ್ತು ಕ್ರಿಯೆಗಳನ್ನು ಪರಿಗಣಿಸಿ ನಿರ್ದಿಷ್ಟ ತತ್ತ್ವ ಹಾಗೂ ನಿಯಮಗಳನ್ನು ರೂಪಿಸಬೇಕು" ಎಂದು ಒತ್ತಾಯಿಸಿದರು. ಅದು ಅಂದಿನ ನಾಟಕಗಳ ರಚನೆಯ ಮೇಲೆ ಎಂಥ ಪ್ರಭಾವ ಬೀರಿತೆಂಬುದು ಇತಿಹಾಸ.

ಡಾ॥ರಾಮು: ಈ ದಿನಗಳಲ್ಲಿ ವಿಮರ್ಶಾ ಶೈಲಿ ವ್ಯಾಪಾರಕೇಂದ್ರಿತವಾದ ಆತಂಕಕಾರಿ ಮಜಲನ್ನೂ ಸೃಷ್ಟಿಸಿಕೊಂಡಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. "ಕಲೆ ಇಂಥ ನಿರ್ದಿಷ್ಟ ಮೌಲ್ಯಗಳನ್ನು ಪ್ರತಿಪಾದಿಸಬೇಕು" ಎಂದು ಒತ್ತಾಯಿಸುವುದನ್ನು ವಿಮರ್ಶೆ ಬಹುತೇಕ ಮಾಡುತ್ತಿಲ್ಲ. ಬಹಳ ವಿಮರ್ಶೆಗಳು ವ್ಯಕ್ತಿಕೇಂದ್ರಿತವೂ ಪತ್ರಿಕಾನೀತಿಯುಳ್ಳವೂ ಆಗಿವೆ.

ಡಾ॥ಶೀಲ: ಅಂದರೆ ಸಾರ್ವಜನಿಕರನ್ನು ಪ್ರಭಾವಿಸುವುದು, ಕೃತಿಗಳು ಮಾರಾಟವಾಗುವಂತೆ ವಿಮರ್ಶಿಸುವುದು ಅಥವಾ ಕಲಾಕೃತಿಯಾದಲ್ಲಿ ಅದರ ಪ್ರದರ್ಶನಕ್ಕೆ ಜನರು ಸೇರುವಂತೆ ಪ್ರಭಾವಿಸುವ ಕೆಲಸಮಾಡುವುದು ಬಹುತೇಕ ವಿಮರ್ಶೆಗಳ ಜಾಯಮಾನವಾಗಿದೆ.

# 22. ಸೌಂದರ್ಯ

ಡಾ॥ಶೀಲ : ಸೌಂದರ್ಯವೆಂದರೇನು ?

ಡಾ॥ರಾಮು: ಯಾವುದು ಸತ್ಯವನ್ನೂ, ಪ್ರಕೃತಿ ಸತ್ವವನ್ನೂ, ಧ್ಯೇಯವನ್ನೂ ವಿಶ್ವಸಾಮಾನ್ಯವಾದುದನ್ನೂ ಮಾದರಿಯಾದುದನ್ನೂ ಪ್ರಕಾಶಪಡಿಸುತ್ತದೆಯೋ ಮತ್ತು ಯಾವುದು ವ್ಯಕ್ತಿಯನ್ನು ಹಿತವಾದ ಸಾಮಾಜಿಕ ಪರಿಣಾಮಗಳ ಕಡೆಗೆ ಒಯ್ಯುವುದೋ, ಯಾವುದು ಕಲೆಯ ಮೂಲಕ ಚೈತನ್ಯೋತ್ಕರ್ಷವನ್ನು ಸಾಧಿಸು ವುದೋ ಅದೇ ಸೌಂದರ್ಯ.

ಗಯಟೆ, ಕೋಲ್‌ರಿಜ್, ರಸ್ಕಿನ್, ಟಾಲ್‌ಸ್ಟಾಯ್ ಮುಂತಾದವರು ಮೇಲಿನ ಅಭಿಪ್ರಾಯಗಳನ್ನೇ ಅನುಮೋದಿಸಿದ್ದಾರೆ.

ಡಾ॥ಶೀಲ : ಸೌಂದರ್ಯಮೀಮಾಂಸೆ ಎಂದರೇನು ?

ಡಾ॥ರಾಮು: ಸೌಂದರ್ಯವನ್ನು ಕುರಿತು ಅಧ್ಯಯನ ಮಾಡುವ ಒಂದು ಶಾಸ್ತ್ರ (ಈಸ್ಥೆಟಿಕ್ಸ್).

ಡಾ॥ರಾಮು: ಎಲ್ಲ ಲಲಿತ ಕಲೆಗಳಿಗೂ ಸಮಾನ ವಿಷಯವಾಗಿರುವ, ಪ್ರಕೃತಿಯಲ್ಲೂ ಕಂಡುಬರುವ ಸೌಂದರ್ಯದ ಸ್ವರೂಪವನ್ನು ಇದು ವಿವೇಚಿಸುತ್ತದೆ.

ಡಾ॥ಶೀಲ : ಇದು ಕಾವ್ಯಮೀಮಾಂಸೆಯ ಒಂದು ಅಂಗವಾಗಿ ಬೆಳೆದು ಬಂದಿದೆ.

ಡಾ॥ರಾಮು: ಸೌಂದರ್ಯಮೀಮಾಂಸೆಯ ಪರಿಶೀಲನೆಗೆ ಎರಡು ಮಾರ್ಗಗಳಿವೆ. ಒಂದು ತಾತ್ತ್ವಿಕ ವಿಧಾನ, ಮತ್ತೊಂದು ವೈಜ್ಞಾನಿಕ ವಿಧಾನ. ಮೊದಲನೆಯದು ಈ ವಿಶ್ವದ ಸ್ವರೂಪವೇನು ಎನ್ನುವ ವಿಚಾರದಿಂದ ಹೊರಟು, ಈ ಲೋಕದ ಸೌಂದರ್ಯವನ್ನು ಕಲೆಯ ಸಹಾಯದಿಂದ ವಿವರಿಸುತ್ತದೆ.

ಮತ್ತೊಂದು ಈ ನಾಮರೂಪಲೋಕದ ವಸ್ತುಸತ್ಯಗಳನ್ನು ವಿಮರ್ಶಿಸಿ, ಸೌಂದರ್ಯ ಸ್ವರೂಪವನ್ನು ವಿವರಿ ಸುತ್ತದೆ.

ಡಾ॥ಶೀಲ : ಸೌಂದರ್ಯವನ್ನು ಕುರಿತು ಆಧ್ಯಾತ್ಮಿಕ ವಿವೇಚನೆಯನ್ನು ನೀಡಿದವರಲ್ಲಿ ಬಹುಶಃ ಭಾರತೀಯ ಋಷಿಗಳೇ ಮೊದಲಿಗರು.

ಡಾ॥ರಾಮು: ಇದೇ ಮತವನ್ನು ಪಾಶ್ಚಾತ್ಯರಲ್ಲಿ ಮೊದಲು ಸಾರಿದವನು ಸೌಂದರ್ಯ ಪ್ರವಾದಿ ಪ್ಲೇಟೋ. ಇವನ ಶಿಷ್ಯ ಅರಿಸ್ಟಾಟಲ್, ಈತನ 'ಅನುಕರಣೆ' ತತ್ತ್ವವನ್ನು ಒಪ್ಪಿದ್ದರೂ ಅದನ್ನು ಬೇರೆ ಅರ್ಥದಲ್ಲಿ ವಿವರಿಸಿದ. ಕ್ರಮಬದ್ಧವಾದ ಅಂಗ ಸಾಮರಸ್ಯವುಳ್ಳ ವಸ್ತು ಸುಂದರವಾದದ್ದು ಎಂದು ಹೇಳಿ, ಚೆಲುವಿಗೆ ಒಂದು ಪರಿಮಿತಿ ನಿರ್ಮಿಸಿದ.

ಡಾ॥ಶೀಲ : ಮನಸ್ಸನ್ನು ರಂಜಿಸಿ, ಸಂತೋಷಪಡಿಸಿ, ಮಾನವನಲ್ಲಿ ನೈತಿಕಭಾವ ಮೂಡಿಸಿ, ಅವನಲ್ಲಿ ಭಾವ ಸಂಸ್ಕಾರವನ್ನುಂಟು ಮಾಡಿ, ಉನ್ನತಸ್ಥಿತಿಗೆ ಏರಿಸುವುದೇ ಕಲೆ.

ಡಾ॥ರಾಮು: ಕ್ಯಾಂಟನ ವಿಚಾರಧಾರೆ ಪಾಶ್ಚಾತ್ಯ ಸೌಂದರ್ಯಮೀಮಾಂಸೆಯಲ್ಲಿ ಅತಿ ಮುಖ್ಯವಾದ ಘಟ್ಟ. ನಿರ್ಲಿಪ್ತ ಮನಸ್ಥಿತಿಯಿಂದ ಲೋಕದಲ್ಲಿ ಕಾಣುವ ವಸ್ತುಗಳನ್ನು ನೋಡಿದಾಗ ಅವು ಒಂದು ರೀತಿಯ ಸಂತೋಷವನ್ನು ಕೊಡುತ್ತವೆ. ಈ ರೀತಿ ಸಂತೋಷವನ್ನು ನೀಡುವುದರಿಂದ ಅವು ಸುಂದರವಾಗುತ್ತವೆ ಎಂದು ಈತ ಹೇಳುತ್ತಾನೆ.

ಡಾ॥ಶೀಲ : ವಸ್ತುವೊಂದು ಸುಂದರವಾಗಿದೆ ಎಂದು ತಿಳಿಯುವುದು ಕೇವಲ ಇಂದ್ರಿಯಾನುಭವದಿಂದ ಅಲ್ಲ; ವೈಜ್ಞಾನಿಕ ವಿಧಾನದಿಂದಲೂ ಅಲ್ಲ; ತರ್ಕದಿಂದಲೂ ಅಲ್ಲ; ಪ್ರತಿಭಾನದಿಂದ ಎಂದು ಈತ ಹೇಳುತ್ತಾನೆ.

ಡಾ॥ರಾಮು: ಅಂದರೆ ವಸ್ತುವನ್ನು ಪದಾರ್ಥದ ಹೊರಗಡೆಗಿಂತಲೂ ಅದರ ಅಂತರಂಗದಲ್ಲಿ ಹೊಕ್ಕು ನೋಡಿದಾಗ ಸೌಂದರ್ಯ ದೊರೆಯುತ್ತದೆ.

ಡಾ॥ಶೀಲ : ಸೌಂದರ್ಯವೇನಿದ್ದರೂ ಮಾನಸಿಕ ಕ್ರಿಯೆಯ ಪ್ರತಿಬಿಂಬ.

ಡಾ॥ರಾಮು: ಕಲಾ ಸೌಂದರ್ಯ ಯಶಸ್ವಿಯಾದ ಮಾಧ್ಯಮದಲ್ಲಿ ನಮ್ಮನ್ನು ಮರುಳುಗೊಳಿಸುವ, ತನ್ಮೂಲಕ ನಮ್ಮನ್ನು ನಾವೇ ಮೈಮರೆಯುವಂತೆ ಮಾಡುವ ಶಕ್ತಿ.

ಡಾ॥ಶೀಲ : ಆಧುನಿಕರಲ್ಲಿ ಸೌಂದರ್ಯವನ್ನು ಕುರಿತು ಒಂದು ಸಮನ್ವಯ ದೃಷ್ಟಿ ಬೆಳೆಯಿತು. ವಸ್ತು ಮನಸ್ಸನ್ನು ಸೌಂದರ್ಯದಿಂದ ತಣಿಸುವುದೇ ಮೊದಲಕ್ರಿಯೆ. ಸುಂದರವಾದ ವಸ್ತುವಿಗೆ ಮನಸ್ಸನ್ನು ಸಂತೋಷಪಡಿಸುವ ಶಕ್ತಿಯಿದೆ. ಅದೇ ಅದರ ಮೌಲ್ಯ ಎಂದರೆ 'ಆನಂದ'ವೇ ಸೌಂದರ್ಯದ ಮೌಲ್ಯ.

ಡಾ॥ರಾಮು: ಆದರೆ ಇದು ಕೇವಲ ವಸ್ತುಗಳಲ್ಲಿದೆ ಎಂದಾಗಲಿ, ವ್ಯಕ್ತಿಗಳಲ್ಲಿದೆ ಎಂದಾಗಲಿ ಅರ್ಥವಲ್ಲ. ವಸ್ತು ಮತ್ತು ವ್ಯಕ್ತಿಯ ಸಂಬಂಧದಿಂದ ಉದ್ಭವಿಸುವ ಮೂರನೆಯದಾದ ಒಂದು ಗುಣ ಈ ಸೌಂದರ್ಯ.

ಡಾ॥ಶೀಲ : ಸೌಂದರ್ಯವನ್ನು ಸಾಹಿತ್ಯ ವಿಮರ್ಶೆಯ ಭಾಗವಾಗಿ ಪರಿಗಣಿಸಲಾಗಿದೆ. 'ಸೌಂದರ್ಯಾನುಭ' (ಈಸ್ತೆಟಿಕ್ ಪ್ಲೆಶರ್) ಇಂಥ ಒಂದು ಪರಿಭಾಷೆ. ಇದು ಬದುಕಿನಲ್ಲಿ ದೊರೆಯುವ ಇತರ ಬಗೆಯ ಆನಂದಗಳಿಂದ ಭಿನ್ನ ಸ್ವರೂಪವನ್ನು ಪಡೆದಿದೆ.

ಡಾ॥ರಾಮು: ನೈತಿಕ–ಅಲ್ಲದ, ಉಪಯೋಗಿ ಅಲ್ಲದ, ಸಂಗ್ರಹಶೀಲವಲ್ಲದ ಸೌಂದರ್ಯ ಆನಂದಗಳಲ್ಲಿ ಅತ್ಯಂತ ಪರಿಶುದ್ಧವಾದದ್ದು. ಕಲಾಕೃತಿಯ ಹೊರಗಿನ ಪೂರ್ವಾಗ್ರಹಗಳಿಗೆ ಅತಿ ಅಲ್ಪವಾಗಿ ಬದ್ಧವಾಗಿರುವಂಥದ್ದು (ಈಸ್ತೆಟಿಕ್ ಅಪ್ರಿಸಿಯೇಷನ್).

ಡಾ॥ಶೀಲ : 'ಸೌಂದರ್ಯದ ಪರಿಭಾವನೆ' ಸೌಂದರ್ಯಾನುಭವದ ಆನಂದಕ್ಕಿಂತ ಭಿನ್ನವಾದದ್ದು. ಸೌಂದರ್ಯಾನುಭವದ ಆನಂದ ಕೃತಿಯೊಂದರಿಂದ ಪಡೆಯುವ ಅನುಭವವನ್ನು ಕುರಿತದ್ದು. ಸೌಂದರ್ಯದ ಪರಿಭಾವನೆ ಕೃತಿಯ ಲಕ್ಷಣಗಳ ಮೇಲೆ ಹೆಚ್ಚಿನ ಒತ್ತನ್ನು ಸೂಚಿಸುತ್ತದೆ.

ಡಾ॥ರಾಮು: ಸೌಂದರ್ಯವನ್ನು ಕುರಿತ ಎಚ್ಚರ ಉಳಿಯಬೇಕಾದರೆ ಕೃತಿಯಲ್ಲಿ ತಲ್ಲೀನರಾಗದೆ ಒಂದು 'ದೂರ' (ಈಸ್ತೆಟಿಕ್ ಡಿಸ್ಟೆನ್ಸ್) ವನ್ನು ಉಳಿಸಿಕೊಳ್ಳಬೇಕಾಗುತ್ತದೆ. (ಈಸ್ತೆಟಿಕ್ ಮೆರಿಟ್) 'ಸೌಂದರ್ಯದ ಯೋಗ್ಯತೆ'ಯನ್ನು ಸೌಂದರ್ಯದ ಗುಣ ಮತ್ತು ಅದಕ್ಕೆ ತೋರುವ ಪ್ರತಿಕ್ರಿಯೆಗಳಿಂದ ಬೇರ್ಪಡಿಸಬೇಕಾದದ್ದು ಅಗತ್ಯ.

ಡಾ॥ಶೀಲ : ಒಂದು ಕೃತಿಯಲ್ಲಿ ಸೌಂದರ್ಯಾಂಶಗಳು ಇದ್ದು, ಅದನ್ನು ಪರಿಭಾವಿಸಿ ಮೆಚ್ಚಿಕೊಂಡರೂ ಆ ಕೃತಿಯು ಆ ಪ್ರಕಾರದ ಕಳಪೆಯಾದ ಪ್ರತಿನಿಧಿಯಾಗಿರುವುದೂ ಸಾಧ್ಯ.

ಡಾ॥ರಾಮು: ಸೌಂದರ್ಯಗ್ರಹಿಕೆ ಸಾಮಾನ್ಯವಾಗಿ ಸೌಂದರ್ಯಾನುಭವದ ಆನಂದ ಮತ್ತು ಪರಿಭಾವನೆಗಳ ಸಂಮ್ಮಿಲನವಾಗಿರುತ್ತದೆ.

ಡಾ॥ರಾಮು: ಸೌಂದರ್ಯದ ಗ್ರಹಿಕೆ ಮೂರು ವಿಧವಾಗಿರಲು ಸಾಧ್ಯ.

1. ಕೃತಿಯ ಸ್ವರೂಪವನ್ನು ಕುರಿತು ಗಮನಿಸಿ ವಿವಿಧ ಅಂಗಗಳ ನಡುವೆ ಅಥವಾ ವಿವಿಧ ಅಂಗಗಳು ಮತ್ತು ಕೃತಿಯ ಒಟ್ಟು ಸ್ವರೂಪಕ್ಕೆ ಇರುವ ಸಾಂಗತ್ಯವನ್ನು ಗ್ರಹಿಸುವ ಮೂಲಕ ಬರುವ ಸೌಂದರ್ಯದ ಗ್ರಹಿಕೆ. ಇದು ಸಾಹಿತ್ಯಕ್ಕಿಂತ ಹೆಚ್ಚಾಗಿ ಇತರ ಕುಶಲ ಕಲೆಗಳಿಗೆ ಅನ್ವಯವಾಗುತ್ತದೆ.

2. ಕೃತಿಯ ವಸ್ತು ಮತ್ತು ಸ್ವರೂಪದ ಸಂಗತತೆಯ ಅರಿವಿನಿಂದ ಉಂಟಾಗುವ ಸೌಂದರ್ಯಗ್ರಹಿಕೆ.

3. ಕೃತಿಯ ಯಾವುದಾದರೂ ಒಂದು ಅಂಗದ ಸೌಂದರ್ಯಾಂಶಗಳನ್ನು ಗುರುತಿಸುವ ಮೂಲಕ ಆಗುವ ಸೌಂದರ್ಯ ಗ್ರಹಿಕೆ.

ಸೌಂದರ್ಯಮೀಮಾಂಸೆಯಲ್ಲಿ ಸೌಂದರ್ಯವೆಂದರೇನು ಎಂದು ಅರಿಯುವುದರ ಜೊತೆಗೆ ಅದನ್ನು ಗ್ರಹಿಸುವ ವಿಧಾನವನ್ನು ಕುರಿತ ಅಧ್ಯಯನವೂ ಸೇರಿದೆ.

## 11. ಕನ್ನಡ ನಾಡಿನ ಭೂ ಸ್ವರ್ಗದಲ್ಲಿ ಡಾ॥ ರಾಮು–ಡಾ॥ ಶೀಲ ! ! !

ಕಣಿವೆ ದಾರಿಯಲ್ಲಿ ಡೊಂಕುಡೊಂಕಾಗಿ ನಾಗರಹಾವಿನಂತೆ ಕಾರು ತಿರುಗಿ ತಿರುಗಿ ಹೋಗುತ್ತಿತ್ತು. ದಾರಿಯುದ್ದಕ್ಕೂ ಕಾಫಿ ತೋಟಗಳು, ಅವುಗಳ ನಡುವೆ ಬೆಳೆದ ಕಿತ್ತಲೆ ಗಿಡಗಳು ಜೊತೆಗೆ ಏಲಕ್ಕಿ ಮತ್ತು ಮೆಣಸಿನ ಗಿಡಗಳು ಸೊಂಪಾಗಿ ಬೆಳೆದು ಮಲೆನಾಡಿನ ಹಿರಿಮೆಯನ್ನು ಎತ್ತಿ ತೋರಿಸುತ್ತಿದ್ದುವು.

ಹಚ್ಚಹಸುರಿನ ಗಿಡಗಳು ಗುಂಪು ಗುಂಪಾಗಿ ಬೆಳೆದಿರುವುದನ್ನು ದೂರದಿಂದ ನೋಡಿದರೆ ಗಿಡ ಗಳದ್ದೇ ಗುಡ್ಡವೇನೋ ಬೆಟ್ಟವೇನೋ ಎನ್ನಿಸುತಿತ್ತು. ಅಲ್ಲಲ್ಲೇ ಮೂರು ನಾಲ್ಕು ಮನೆಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ಇದ್ದವು. ಏನೇ ಆದರೂ 'ಕರ್ನಾಟಕದ ಕಾಶ್ಮೀರ' ಎಂದು ನಿಸರ್ಗ ಸೌಂದರ್ಯಕ್ಕೆ ಹೆಸರಾದ ಈ ಮಲೆನಾಡಿನ ಸೌಂದರ್ಯ, ತಣ್ಣನೆಯ ಹವಾ ವರ್ಣನಾತೀತವಾಗಿತ್ತು.

ಕಾರು ತಿರುವುಗಳಲ್ಲಿ ಹೋದಾಗಲೆಲ್ಲ ಡಾ॥ರಾಮುವಿನ ಮೇಲೆ ಬಿದ್ದಾಗ ಡಾ॥ಶೀಲಳಿಗೆ ನಾಚಿಕೆ ಯಾಗುತ್ತಿತ್ತು. ಇಕ್ಕೆಲದ ಮರಗಳ ನಡುವೆ ಕೊಂಕಿ, ಬಳುಕಿ ಹರಿದು ಹೋಗಿ ಕಣ್ಮರೆಯಾಗುತ್ತಿದ್ದ ರಸ್ತೆ ಯನ್ನು ಸಲಸಲವೂ ಬಯಕೆಯ ನಯನಗಳಿಂದ ಡಾ॥ಶೀಲ ನಿರೀಕ್ಷಿಸುತ್ತ ಕುಳಿತಿದ್ದಳು.

ಅಂಕುಡೊಂಕಾದ ಈ ರಸ್ತೆಗಳಲ್ಲಿ ಗುಡ್ಡಗಳನ್ನು ಹತ್ತಿ ಇಳಿಯುವುದೇ ಮೋಜು. ಅವರು ಒಬ್ಬರ ಮುಖವನ್ನೊಬ್ಬರು ನೋಡಿದರು. ನೋಟ ಬೆರೆಯಿತು. ಹೃದಯಗಳನ್ನು ಒಲುಮೆ ಬಂಧಿಸುವ ರೀತಿಯೇ ಅದು.

ದಾರಿಯಲ್ಲಿದ್ದ ಹೋಟಲ್‌ನಲ್ಲಿ ಕಾಫಿ ಮುಗಿಸಿದ ಮೇಲೆ ಕಾರು ತಲಕಾವೇರಿಯ ಕಡೆಗೆ ಹೊರಟಿತು. ಮೊದಲು ಸಿಕ್ಕಿದ್ದು ತಗ್ಗಿನ ಪ್ರದೇಶವಾದ ಭಾಗಮಂಡಲ. ಪವಿತ್ರಾತ್ಮರಾದ ಮಹಾಋಷಿಗಳು ತಪಸ್ಸನ್ನು ಆಚರಿಸಿದ ಸ್ಥಳ. ಅಲ್ಲಿ ಕೆಲವು ದೇವಸ್ಥಾನಗಳನ್ನು ದರ್ಶನಮಾಡಿ ಹೊರಟಾಗ ಡಾ॥ಶೀಲ ಸ್ಥಳ ಮಹಿಮೆ ಯನ್ನು ಡಾ॥ರಾಮುವಿಗೆ ವಿವರಿಸತೊಡಗಿದಳು.

ಹಿಂದೆ ಈ ಕ್ಷೇತ್ರಕ್ಕೆ ಭಾಗಮಂಡಲವೆಂದೂ, ಷಣ್ಮುಖಸ್ವಾಮಿಯಿಂದ ಅನುಗ್ರಹ ಪಡೆದು ಈ ಭೂಭಾಗವನ್ನು ಕೊಡುಗೆಯಾಗಿ ಸ್ವೀಕರಿಸಿದುದರಿಂದ ಮಲೆನಾಡಿನ ಈ ಭೂಭಾಗಕ್ಕೆ ಕೊಡಗು ಎಂಬ ಹೆಸರು ಬಂದಿದೆ. ಜೊತೆಗೆ ಕಡಿದಾದ ಬೆಟ್ಟಗಳಲ್ಲಿ ದಟ್ಟವಾದ ಅಡವಿ ಪ್ರದೇಶವನ್ನು ಹೊಂದಿರುವುದರಿಂದ ಇದಕ್ಕೆ 'ಕೊಡಗು' ಎಂಬ ಹೆಸರು ಬಂದಿತ್ತೆಂದು ಹೇಳುವವರು ಇದ್ದಾರೆ. ಒಟ್ಟಿನಲ್ಲಿ ಇದು ಕೋಟಿ ಬೆಟ್ಟಗಳ ನಾಡು.

ತಲಕಾವೇರಿಯತ್ತ ಮಲೆನಾಡ ಅಡವಿಯಲ್ಲಿ ಪ್ರಕೃತಿ ತಾಯಿಯ ಮಡಿಲಲ್ಲಿ ಕಾರು ವೇಗವಾಗಿ ಹೋಗುತ್ತಿತ್ತು. ಅತ್ತಕಾಡು, ಇತ್ತಕಾಡು, ದಟ್ಟವಾದ ಅರಣ್ಯಶ್ರೇಣಿ. ಎತ್ತರವಾಗಿದ್ದ ಮರಗಳಿದ್ದೆಡೆ ಆಕಾಶವೇ ಒಂದು ನೀಲಿಯ ಓಣಿ! ನಿಸರ್ಗ ಸೌಂದರ್ಯಕ್ಕೆ ರಮಣೀಯತೆಯನ್ನು ಲೇಪಿಸಿದಂತೆ ಇಲ್ಲಿ ಪ್ರಕೃತಿ ಅವರ್ಣನೀಯವಾಗಿ ಕಂಗೊಳಿಸುತ್ತಿತ್ತು. ಕಣ್ಣು ಹರಿಸಿದಲ್ಲೆಲ್ಲ ಈ ಚೆಲುವು ಚೆಲ್ಲುವರಿದು ಹಬ್ಬಿಕೊಂಡಿತು.

ಒಟ್ಟಿನಲ್ಲಿ ಈ ಪ್ರಾಂತ್ಯ ಸೃಷ್ಟಿಸೌಂದರ್ಯದಲ್ಲಿ, ಬೆಟ್ಟ, ಗುಡ್ಡ, ಪರ್ವತ, ನದಿ, ಕೊಳಗಳು, ವನ, ಫಲ-ಪುಷ್ಪ ಹಾಗೂ ಪಕ್ಷಿ - ಪ್ರಾಣಿಗಳಿಂದ ತುಂಬಿದ ಆವಾಸಸ್ಥಾನವೋ ಎಂಬಂತೆ ಶೋಭಿಸುತ್ತಿತ್ತು. ಸ್ವರ್ಗಎನ್ನುವುದು ಭೂಮಿಯ ಮೇಲೆ ಎಲ್ಲಿಯಾದರೂ ಇದ್ದರೆ ಕಾಶ್ಮೀರವನ್ನು ಬಿಟ್ಟರೆ ಅದು ಮಲೆನಾಡಿನಲ್ಲಿ ಮಾತ್ರ ಎಂದು ನಿಸ್ಸಂದೇಹವಾಗಿ ಹೇಳಬಹುದಿತ್ತು.

ದಾರಿಯಲ್ಲಿ ಡಾ॥ಶೀಲ ಡಾ॥ರಾಮುವಿಗೆ ತಲಕಾವೇರಿಯ ಇತಿಹಾಸವನ್ನು ಹೇಳ ತೊಡಗಿದಳು. ಕಾವೇರನೆಂಬ ಬ್ರಾಹ್ಮಣನು ಬ್ರಹ್ಮಗಿರಿಯಲ್ಲಿ ತನಗೆ ಸಂತತಿಯಾಗಬೇಕೆಂಬ ಬಯಕೆಯಿಂದ ಬ್ರಹ್ಮದೇವ ನನ್ನು ಕುರಿತು ತಪಸ್ಸು ಮಾಡಿದನಂತೆ. ಬ್ರಹ್ಮನು ತನ್ನ ಮಾನಸ ಪುತ್ರಿಯಾದ ಲೋಪಾಮುದ್ರೆಯನ್ನು ಕಾವೇರನಿಗೆ ದತ್ತು ಪುತ್ರಿಯಾಗಿ ಕಾವೇರಿಯೆಂಬ ನಾಮಾಂಕಿತದಿಂದ ಕೊಟ್ಟನಂತೆ. ಅವಳು ಆಶ್ರಮದಲ್ಲಿ ಬೆಳೆದು ದೊಡ್ಡವಳಾದಾಗ ಅಗಸ್ತ್ಯ ಮಹಾಋಷಿಗಳು ಅಲ್ಲಿಗೆ ಬಂದು ದೇವ ದೇವತೆಗಳ ಸಮ್ಮುಖದಲ್ಲಿ ವೇದೋಕ್ತವಾಗಿ ವೈಭವದಿಂದ ವಿವಾಹವಾದರಂತೆ.

ಒಂದು ದಿನ ಅಗಸ್ತ್ಯರು ಕಾವೇರಿಯನ್ನು ಜಲರೂಪವಾಗಿ ತನ್ನ ಕಮಂಡಲದಲ್ಲಿ ಆಹ್ವಾನಿಸಿ ಹೋಗುತ್ತಿದ್ದಾಗ, ದೈವ ಸಂಕಲ್ಪದ ಮೇರೆಗೆ ಕಾವೇರಿ ಜಲರೂಪವಾಗಿ ಹರಿದು ಭಾಗಮಂಡಲದ ಕಡೆ ಹೊರಟಳಂತೆ, ಅಲ್ಲಿಂದ ಬಲುಂಬುರಿಯಲ್ಲಿ ರಭಸವಾಗಿ ಹರಿಯ ತೊಡಗಿದಾಗ ಕದಂಬರಾಜಪುತ್ರ ರಾಜ ಚಂದ್ರವರ್ಮನ ಸಂತತಿಗೆ ಸೇರಿದ ಸ್ತ್ರೀಯರ ಸೀರೆ ನೆರಿಗಿಯು ಹಿಂಬಂದಿಗೆ ಸರಿದು ಹೋಯ್ತಂತೆ, ಆಗ ಕಾವೇರಿಯು ತಾನು ನದಿಯಾಗಿ ಹರಿದಿದುರ ಜ್ಞಾಪಕಾರ್ಥವಾಗಿ ಆ ದಿನ ಹಿಂದೆ ಸರಿದ ಸೆರಗು ಮುಂದೆಯೂ ಹೀಗೆಯೇ ನೆರಿಗೆ ಕ್ರಮವಾಗಿ ಸ್ತ್ರೀಯರಿಂದ ನಿತ್ಯಾಚರಣೆಯಲಲ್ಲಿ ಅನುಸರಿಸುವಂತಾಗಲಿ ಎಂದು ಹರಿಸಿದಳಂತೆ. ಅದಕ್ಕೆ ಮಲೆನಾಡಿನ ಈ ಭಾಗದ ಸ್ತ್ರೀಯರು ಸೀರೆಯ ನೆರಿಗೆಯನ್ನು ಈ ರೀತಿ ಕಟ್ಟುವುದು ಎಂದು ಹೇಳಿ ಕಾರನ್ನು ನಿಲ್ಲಿಸಿ ಲಜ್ಜೆಯಿಂದ ಡಾ॥ರಾಮುವಿನ ಕಡೆ ನೋಡಿದಳು. ಆ ವೇಳೆಗೆ ಕಾರು ತಲಕಾವೇರಿಯನ್ನು ತಲುಪಿತು.

ತಲಕಾವೇರಿಯು ದಟ್ಟಡವಿಯ ವನದೇವತೆಯ ಸೌಂದರ್ಯದಿಂದ ಕಂಗೊಳಿಸುತ್ತಿತ್ತು. ಅದು ಮನಮೋಹಕ ನಿಸರ್ಗರಮಣೀಯ ಸ್ಥಳ. ಗಾಂಭೀರ್ಯ ಸೌಂದರ್ಯಗಳಿಂದ ಕೂಡಿ ನೆಲೆ ನಿಂತಿರುವ ಬ್ರಹ್ಮಗಿರಿ, ಗಜರಾಜಗಿರಿ, ವಾಯುಗಿರಿ, ಅಗ್ನಿಗಿರಿ ಎಂಬ ನಾಲ್ಕು ಬೆಟ್ಟಗಳ ನಡುವಿನ ಕಣಿವೆಯಲ್ಲಿ "ಶ್ರೀ ಕ್ಷೇತ್ರ ಕಾವೇರಿ" ಯು ಕಂಗೊಳಿಸುತ್ತಿತ್ತು. ಪರ್ವತಶ್ರೇಣಿಯ ಇಡೀ ವಾತಾವರಣ ಬ್ರಹ್ಮತತ್ವದಿಂದ ಸುಸ್ಪಂದಿಸುತ್ತಿದ್ದಂತೆ ಅನುಭವವಾಗುತ್ತಿತ್ತು.

ಡಾ॥ರಾಮು, ಡಾ॥ಶೀಲ ಮೆಟ್ಟಲುಗಳನ್ನು ಹತ್ತುತ್ತ ಬ್ರಹ್ಮಗಿರಿಯ ನೆತ್ತಿಗೆ ಹೋದರು. ರಮಣೀಯವೂ, ಶಾಂತವೂ ಆದ ಆ ಸ್ಥಳದಲ್ಲಿ ಭೂಮಿಯೂ ಆಕಾಶವೂ ಒಂದು ಹಾಲ್ಗಡಲಂತೆ ಕಿನ್ನರ ಪ್ರಪಂಚದಲ್ಲಿ ಇದ್ದಂತೆ ತೋರಿತು. ಡಾ॥ಶೀಲ ರಾಮುವಿನ ಹತ್ತಿರ ಸರಿದು ಕುಳಿತಳು.

ಆ ಕಾಡಿನ ಹಿನ್ನೆಲೆಯಲ್ಲಿ, ಆ ವನ್ಯಪಕ್ಷಿ ಕೂಜನದ ಸಮ್ಮೋಹಕತೆಯಲ್ಲಿ, ಆ ಜಾಗ ಎಷ್ಟು ಏಕಾಂತವಾಗಿತ್ತು ಎಂದರೆ ಹೊಚ್ಚ ಹೊಸ ಗಂಡಹೆಂಡಿರ ಶೃಂಗಾರ ಜೀವನವನ್ನೂ ಪ್ರಣಯ ಚೇಷ್ಟೆ ಗಳನ್ನು ಉದ್ದೀಪಿಸಿದಷ್ಟು ಉದಾರವಾಗಿತ್ತು. ಅನೇಕ ಮಧುರ ಸುಮಧುರ ಸಾಹಸಮಯ ಪೂರ್ವಾನುಭ ಗಳಿಗೆ ಕಾರಣವಾಗಿದ್ದ ಆ ತಾಣದ ಮಹಾತ್ಮೆಯಿಂದಲೊ ಏನೊ ಡಾ॥ಶೀಲಳ ಭಾವಕೋಶ ತುಂಬಿ ಅರಳಿದಂತಾಗಿ ಸಂಸ್ಕಾರ ರೂಪದಲ್ಲಿದ್ದ ಅವಳ ಕನ್ಯತ್ವ ಹೊರಕ್ಕೆ ಹಾರಿತು.

ಸ್ನೇಹ, ಪ್ರೀತಿ, ಸೌಹಾರ್ದ, ಆದರಗಳಿಂದ ಆವಳ ಕೈಗಳು ಅವನನ್ನು ಬಿಗಿದುವು. ಆಗ ಭೂಷಣಗಳು ಅಲುಗಾಡಿ ಝಣಝಣತ್ಕಾರ ಮಾಡಿದವು. ಅವನ ತೋಳು ಅವಳನ್ನು ಬಳಸಿತ್ತು. ಅವರಿಬ್ಬರು ಪ್ರೇಮ ಬಂಧನದಿಂದ ಬಂಧಿತರಾಗಿದ್ದರು. ತನ್ನ ಪ್ರೀಯಕರನ ದೇಹವನ್ನು ಡಾ॥ಶೀಲ ಶ್ರೀಗಂಧದ ಮರವನ್ನು ಸುತ್ತಿಕೊಂಡಿರುವ ಸರ್ಪವೂ ಎಂಬಂತೆ ತನ್ನ ಎರಡು ಕೋಮಲವಾದ ಬಾಹುಲತೆಗಳಿಂದ ಅತ್ಯಂತ ಗಾಢವಾಗಿ ಬಿಗಿದಪ್ಪಿದ್ದಳು.

ಬೆರಳಿನಿಂದ ಮಿಡಿದರೆ ಸಾಕು ಬಿರಿಯುವಂತೆ ಇರುವ ಸುವರ್ಣದ ಕೊಡಗಳಂತಿರುವ ಡಾ॥ಶೀಲಳ ಸ್ತನಗಳು ಡಾ॥ರಾಮುವಿನ ವಿಶಾಲವಾದ ಮತ್ತು ಧೃಡವಾದ ಎದೆಯ ಗಾಢಾಲಿಂಗನದ ಒತ್ತುವಿಕೆಯಿಂದ

ಸ್ರವಿಸುತ್ತಿರುವ ಹಾಲಿನ ಬಿಂದುಗಳೊ ಎಂಬಂತೆ ಕಂಠಾಹಾರ ಕಿತ್ತುಹೋಗಿ ಅದರ ಮುತ್ತುಗಳು ಒಂದೊಂದಾಗಿ ಸುರಿದು ಬೀಳುತ್ತಿದ್ದವು.

ಡಾ||ಶೀಲ ವಿಭ್ರಮೆ, ವಿಲಾಸ, ಬೆಡಗು, ಬಿನ್ನಾಣಗಳ ಮಾಧುರ್ಯವನ್ನು ಸೂಸುವ ಪ್ರೇಮ ಕಟಾಕ್ಷ ವನ್ನು ಬೀರಿದಳು. ಅವನ ಎದೆಯ ಮೇಲೆ ಒರಗಿದಳು. ಕೆಂಪನೆಯ ಗಲ್ಲಗಳು ಇನ್ನೂ ಕೆಂಪಾದವು. ಎಷ್ಟು ಮುದ್ದಿಸಿದರೂ ಸಾಲದು ಎನ್ನಿಸುತ್ತಿತ್ತು. ಅದೇನೋ ಉದ್ವೇಗ, ಅದೇನೋ ಆತುರ, ವಸಂತ ಕಾಲದ ಇಂಚರ, ಬಾನಾಡಿಯ ಹಾರಾಟ, ನವಿಲಿನ ನಲಿದಾಟ, ಹೂದುಂಬಿಯ ಚೆಲ್ಲಾಟಗಳು ಕಾರ್ಗತ್ತಲಲ್ಲಿ ಮಿಣುಕು ಹುಳುಗಳಂತೆ ಅವಳ ಸ್ಮೃತಿಪಟಲದಲ್ಲಿ ಹಾದು ಹೋಗುತ್ತಿದ್ದಂತಾಯಿತು.

ಡಾ||ಶೀಲ ತನ್ನ ದೇಹವನ್ನು ಅವನನ್ನು ಕೆಣಕುವಂತೆ ಬಾಗಿಸಿ ಅವನ ಹೃದಯವನ್ನು ಮೀಟು ವಂತಹ ಮೃದುವಾದ ಧ್ವನಿಯಲ್ಲಿ "ಈ ಲಕ್ಷ್ಮಿಗೆ ವಿಷ್ಣುವಿನ ಹೃದಯದಲ್ಲಿ ಶಾಶ್ವತ ಸ್ಥಾನವಿರುವುದು ತಾನೇ?" ಎಂದು ಕೇಳಿದಳು. "ಮೌನವೇ ವಿಷ್ಣುವಿನ ಪ್ರೇಮದ ಭಾಷೆ, ಪ್ರೇಮಕ್ಕೆ ಯಾವ ಭಾಷೆಯ ಅಗತ್ಯವಿದೆ? ಕಣ್ಣು ಪ್ರೇಮದ ಭಾಷೆಯನ್ನಾಡುವ ನಾಲಿಗೆಯಲ್ಲವೇ ಲಕ್ಷ್ಮೀ?" ಎಂದು ಹೇಳಿ ಅವನು ಅವಳನ್ನು ರಮಿಸುವಂತೆ ಮಾತನಾಡಿದನು. ಅವನ ಮಾತು ಅವಳ ಹೃದಯದಲ್ಲಿ ಹರಿದಾಡಿತು. ಮಾತಿನ ರಸಿಕತೆಯ ಮೋಡಿಯಿಂದ ಸುರಸುಂದರಿಯಂತೆ ಕಾಣುತ್ತಿದ್ದಳು.

ಡಾ||ರಾಮುವಿನ ಭರವಸೆ ಅವಳಿಗೆ ಉತ್ಸಾಹ ನೀಡಿತು. ಅತನ ಉಕ್ಕಿನಂತಹ ತೋಳುಗಳ ಬಂಧನದಲ್ಲಿ ಆರೋಗ್ಯ ಸೂಸುವ ಮುಖದಲ್ಲಿ ಜೇನುಬಣ್ಣದ ಮೈಕಾಂತಿಯ ಹೊಳಪಿನ ವಿಸ್ತಾರವಾದ ಎದೆಯ ಮೇಲೆ ಒರಗಿದಳು. ಆಗ ಆ ಶೋಭನೆ ತನ್ನ ರಮಣನ ದೇಹವೆಂಬ ಕಲ್ಪವೃಕ್ಷವನ್ನು ಸುತ್ತಿ ಕೊಂಡು ಹಬ್ಬಿರುವ ಬಳ್ಳಿಯಂತೆ ಕಾಣುತ್ತಿದ್ದಳು.

ಕೋಮಲ ಕಪೋಲಗಳ ಮೇಲೆ ಪ್ರೇಮದ ಧ್ವನಿಗಳು ಚೆಲ್ಲುತ್ತಿದ್ದವು. ತನ್ನ ಹೃದಯಾಂತ ರಾಳದಲ್ಲಿ ತೂರಿ ಬರುತ್ತಿದ್ದ ಸಂತಸಕ್ಕೆ ಡಾ||ಶೀಲ ಏನೆಂದು ಹೇಳಬೇಕು? ಆಕೆಯ ಹೃದಯದ ಹದಿನಾರು ಸಾವಿರ ಬಾಗಿಲುಗಳೆಲ್ಲವೂ ತೆರೆದು ಒಂದೊಂದರಿಂದಲೂ ತನ್ನ ಪ್ರಿಯತಮನನ್ನು ಎದುರು ನೋಡಿ ಆತನ ಒಲುಮೆಯನ್ನು ಬರಮಾಡಿಕೊಳ್ಳುತ್ತಿದ್ದವು.

ಆಕೆ ಓಡೋಡಿ ಬಂದು ಡಾ||ರಾಮುವನ್ನು ಅಪ್ಪಿ ಮುದ್ದಾಡಿ ಮುತ್ತು ಕೊಟ್ಟು ದಿವ್ಯಪ್ರೇಮ ಲೋಕಕ್ಕೆ ಎಳೆದೊಯ್ದು ಅವನನ್ನು ಅಲಿಂಗಿಸಿ, ಚುಂಬಿಸಿ ಒತ್ತಿಕೊಂಡು ಪುಲಕಿತೆಯಾಗಿ ಆನಂದ ಮಗ್ನೆಯಾಗಿ ದ್ದಳು. ಅಲ್ಲಿ ಪ್ರೇಮದ ರಸ ಜೇನೇ ತುಂಬಿತು. ಮಧುರ ಮನಸ್ಸುಗಳ ಮಿಲನದಲ್ಲಿ ಸುಂದರ ಕನಸುಗಳ ಸ್ವರ್ಗಧಾಮವೇ ಸೃಷ್ಟಿಯಾಗಿತ್ತು. ಶತಕೋಟಿ ತಾರೆಗಳೇ ಚಲಿಸಿದವು. ಪ್ರಪೂರ್ಣ ಚಂದ್ರನೇ ಆಗ ಮುಖ ಲೋಕದಲ್ಲಿ ವಿಜೃಂಭಿಸಿದ್ದ. ರಾಗ-ರಸ-ಭಾವಗಳೇ ಮೈಗೂಡಿ ಬಂದಿದ್ದವು. ಸನ್ನಿವೇಶ ರತಿ-ಮನ್ಮಥರ ಮಧುರರಸ ಸಮಯವನ್ನು ನೆನಪಿಗೆ ತರುತ್ತಿತ್ತು. ಪ್ರಕೃತಿ ಪುರುಷನ ಸಂಗಮವಾಗುತ್ತಿರುವಂತೆ ತೋರುತ್ತಿತ್ತು.

ಡಾ||ಶೀಲಳಿಗೆ ತನ್ನ ಜೀವನ ಸಾರ್ಥಕವೆನ್ನಿಸಿತು. ಆಕೆಯ ಹೃದಯ ಈಗ ಸುಮಧುರವಾಗಿ ಹಾಡುತ್ತಿತ್ತು. ತಾನೆಂದೂ ಪ್ರೀತಿ ಪ್ರೇಮಗಳಿಂದ ತುಂಬಿರುವ ಹೊಸ ಸ್ವರ್ಗೀಯ ಪ್ರಪಂಚಕ್ಕೆ ಬಂದಿದ್ದೇನೆಂದು ಕೊಂಡಳು.

ತಲಕಾವೇರಿಯ ದರ್ಶನದಿಂದ ಪುಳಕಿತಳಾಗಿ ಆ ಬನದಲ್ಲಿ ಅವರು ಸ್ವಚ್ಛಂದವಾಗಿ ಅಲೆದು ಓಡಾಡಿ, ಕುಣಿದು ಕುಪ್ಪಳಿಸುತ್ತ ವಿನೋದ, ತಮಾಷೆಗೆ ಅನೇಕ ಚಲನಚಿತ್ರಗಳ ಯುಗಳಗೀತೆ (ಡ್ಯೂಯಲ್‌ಸಾಂಗ್ಸ್)ಗಳ ಪದಪುಂಜಗಳ ಪಂಕ್ತಿಗಳನ್ನು ಒಲವಿನಿಂದ ಹಾಡಿ ನಲಿದಾಡತೊಡಗಿದರು.

ಡಾ||ರಾಮು: ಕೊಡಗಿನ ಕಾವೇರಿ ........... ಕಾವೇರಿ ನೀ ಬೆಡಗಿನ ವೈಯ್ಯಾರಿ ।
ನೀ ಕನ್ನಡ ಕುಲನಾರಿ ... ಗಂಧದ ಸೀಮೆಯ ಸೌಂದರ್ಯಲಹರಿ ।

ಡಾ||ಶೀಲ : ಕಾವೇರಿ ತಾಯಿಯೇ ನಮ್ಮವ್ವ । ನಾವು ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು ।

ಡಾ||ರಾಮು: ಕನ್ನಡ ಭಾಷೇನೆ ನನ್ ಜೀವ । ನಾವು ಮೆಟ್ಟಿದರೆ ಕನ್ನಡ ಮಣ್ಣನ್ ಮೆಟ್ಟಬೇಕು ।

ಡಾ||ಶೀಲ : ಈ ಮಲೆನಾಡ ಮಣ್ಣು ಅಂದರೆ ಚಿನ್ನಾ । ಇಲ್ಲಿ ಹೆಣ್ಣು ಬಲು ಚೆನ್ನ ।

ಡಾ||ರಾಮು: ಈ ಕನ್ನಡ ನಾಡಿನಲ್ಲಿ ಹುಟ್ಟೋದು ರನ್ನ । ಇಲ್ಲಿ ನಡೆ ಅಂದ ನುಡಿ ಚಂದ ।

ಡಾ||ಶೀಲ : ಇಲ್ಲಿ ಬಂಡೆಯ ಕೆತ್ತಿದರೆ ಬೇಲೂರು ಶಿಲಾಬಾಲಿಕೆ । ಪ್ರೇಮಕ್ಕೆ ಸ್ವರ್ಗ ಇದು ।

ಡಾ||ರಾಮು: ಇಲ್ಲಿ ಬೆಟ್ಟವ ಸುಲಿದರೆ ಬೆಳಗೊಳದ ಗೊಮ್ಮಟೇಶ್ವರ । ಧ್ಯಾನಕ್ಕೆ ಭೂಮಿ ಇದು ।

ಇಬ್ಬರೂ : ಈ ಭೂಮಿಮ್ಯಾಗೆ ಯಾರೋ ತೋಟಗಾರನು । ಮಲೆನಾಡ ಮಾಡಿಹೋಗ್ಯಾನೆ । ಈ ಹಾಲಿನ ಹೊಳೆಯಾಗಿ ಹರಿಯುವ ನೀರಲ್ಲಿ । ಬೆಳ್ಳಿಯ ಹಕ್ಕಿಯಾಗಿ ಹಾರಿಹೋಗಿ ನಾವು ಸಂಚಾರ ಮಾಡುವ ಬಾರ ।।

ಡಾ||ಶೀಲ : ಹೂವು ಚೆಲುವಾಗಿ ಅರಳಿ ದುಂಬಿ ಸೆಳೆಯೋದು ಸಹಜ ।

ಡಾ||ರಾಮು: ಹೆಣ್ಣು ಸೊಗಸಾಗಿ ಬೆಳೆದು ಗಂಡು ಬಯಸೋದು ಸಹಜ ।

ಡಾ||ಶೀಲ : ಯಾವುದೋ ನಂಟು । ನಮ್ಮಿಬ್ಬರ ನಡುವೆ ವಿಧಿ ಬೆಸೆದ ಗಂಟು ।

ಡಾ||ರಾಮು: ಯಾರಿಗೆ ಯಾರುಂಟು । ಈ ಸಂಸಾರ ನೀರಿನ ಮೇಲಿನ ಗುಳ್ಳೆಗಳ ಗಂಟು ।

ಡಾ||ಶೀಲ : ಮನವ ಕದ್ದ ರಾಜ ಮನಸ್ಸು ಕೊಡೆನು ಎಂದ । ಅನುಮಾನ ತೊರೆದಾಗ ಅನುರಾಗ ಬೆರೆತಾಗ ಜೀವನವೇ ಅಂದ ಚೆಂದ ಮಕರಂದ ।

ಡಾ||ರಾಮು: ಈ ನನ್ನ ಜೀವನವೂ ಸಂಘರ್ಷವು । ಇದು ನನ್ನ ಜೀವನ ಮಹಾಸಂಗ್ರಾಮವು ।

ಡಾ||ಶೀಲ : ಬಾಳ ಬಂಗಾರ ನೀನು । ಹಣೆಯ ಸಿಂಗಾರ ನೀನು । ನಿನ್ನ ಕೈಲಾಡೋ ಬೊಂಬೆ ನಾನಯ್ಯ । ಬೇಡೆಂದು ಜರಿದು ನೀ ದೂರ ಹೋದರೂ । ಬಿಡದಂತೆ ನಿನ್ನ ನೆರಳಾಗಿ ಬರುವೆ । ನೂರಾರು ಜನುಮ ನೀ ತಾಳಿ ಬಂದರೂ । ಸತಿಯಾಗಿ ನಿನ್ನ ಜೊತೆಯಲ್ಲೆ ಇರುವೆ ।

ಡಾ||ರಾಮು: ಏನ್ ಹುಡ್ಗೀರೋ ಇದ್ಯಾಕಿಂಗಾಡ್ತೀರೋ । ಲವ್ವು, ಲವ್ವು ಅಂತ ಕಣ್ಣೀರಿಡ್ತೀರೋ ।

ಡಾ||ಶೀಲ : ಪ್ರೀತಿ ಮಾಡು ತಪ್ಪೇನಿಲ್ಲ । ಅಂತಾ ಎಲ್ಲ ಹೇಳ್ತಾರಲ್ಲ । ನಾ ಮೆಚ್ಕೊಂಡಿರೋ ನಾ ಹಚ್ಕೊಂಡಿರೋ ದೇವರು ಕಲ್ಲಾ ।

ಡಾ||ರಾಮು: ಹೂವು ಎಂದೂ ತಾನಾಗಿ ಅರಳಬೇಕಮ್ಮ ಪ್ರೀತಿ ಎಂದೂ ತಾನಾಗಿ ಹುಟ್ಟಬೇಕಮ್ಮ ಎಡವಿದ ಮೇಲೆ ನೋವುಂಟು । ದುಡುಕಿದ ಮೇಲೆ ವ್ಯಥೆಯುಂಟು ।

ಡಾ||ಶೀಲ : ಲೋಕವೆ ಹೇಳಿದ ಮಾತಿದು । ವೇದದ ಸಾರವೇ ಕೇಳಿದು । ನಾಳಿನ ಚಿಂತೆಯಲಿ ಬಾಳಬಾರದು । ಬಾಳಿನ ಮೂಲವ ಇಲ್ಲಿ ಕೇಳಬಾರದು ।

ಡಾ||ರಾಮು: ಅಂತಿಂಥ ಗಂಡು ನಾನಲ್ಲ । ನಾನೇ ಬೇರೆ ನನ್ನ ಸ್ಟೈಲೇ ಬೇರೆ ।

ಡಾ||ಶೀಲ : ಅಂತಿಂಥ ಹೆಣ್ಣು ನಾನಲ್ಲ । ನನ್ನಂಥ ಹೆಣ್ಣು ಭೂಲೋಕದಲ್ಲಿ ಬೇರಿಲ್ಲ ।

ಇಬ್ಬರೂ : ಮನವೇ ಸುಖಸಾಧನ ಅನುದಿನ ನಗುತಿರೆ ಆನಂದ ಜೀವನ ಆತ್ಮ ಅವಲೋಕನ ।

ಡಾ॥ಶೀಲ : ಚೆಲುವೆ ಒಂದು ಕೇಳ್ತಿನಿ । ಇಲ್ಲ ಅಂದ್ರೆ ಕೊಡ್ತೀಯ । ನಿನ್ನ ಪ್ರೀತಿ ಮಾಡ್ತಿನಿ । ಮನಸ್ಸು ಹೃದಯ ಕೊಡ್ತೀಯಾ ।

ಡಾ॥ರಾಮು: ನಿನ್ನ ಪ್ರೀತಿ ಮಾಡ್ತಿನಿ । ನಿಜವಾದ ಹೆಣ್ಣೆ ಆದ್ರೆ ನೀನು ಗಂಡನ್ನ ಗೆಲ್ಲೆ ನೀನು । ಮನಸ್ಸನ್ನು ಕದಿಯೇ ನೀನು । ಆಮೇಲೆ ಪ್ರೀತಿ ಅಲ್ಲವೇನು ।

ಡಾ॥ಶೀಲ : ಸ್ವಾಭಿಮಾನದ ನಲ್ಲ ಸಾಕು ಸಂಯಮ ಬಲ್ಲೆ ।

ಡಾ॥ರಾಮು: ತುಂಬು ಹರೆಯದ ಹೊಸ ಹೆಣ್ಣೆ । ಒಲೆಯ ಮೇಲಿನ ಹಸಿ ಬೆಣ್ಣೆ ।

ಡಾ॥ಶೀಲ : ಕೀಟಲೆ ಮಾಡುವ ಹೀರೋ ನಿನ್ನಾಟಕೆ ಗೋಲಿ ಮಾರೋ ।

ಡಾ॥ರಾಮು: ದುಡ್ಡಿನ ಜಂಭದ ಕೋಳಿ । ನಿಲ್ಲಿಸೆ ನಿನ್ನ ಚಾಳಿ ।

ಡಾ॥ಶೀಲ : ಈ ಘಾಟಿ ಹೆಣ್ಣಿನ ಮುಂದೆ ಈ ತುಂಟಾಟವು ಬೇಡಪ್ಪ ।

ಡಾ॥ರಾಮು: ಈ ಭರ್ಜರಿ ಗಂಡಿನ ಮುಂದೆ ಬಂಡಾಟವು ಬೇಡಮ್ಮ ।

ಡಾ॥ಶೀಲ : ನೀನೊಂದು ಸಲ ನಕ್ಕು ಎನ್ನನ್ನೂ ನಗಿಸು । ನಿನ್ನ ನಗು ಮೊಗದಲ್ಲಿ ಎನ್ನ ಮೈ ಮರೆಸು । ಜನುಮ ಜನುಮದಲ್ಲಿ ಈ ಜೀವ ನಿನಗೆ ಮುಡುಪಾಗಿದೆ ।

ಡಾ॥ರಾಮು: ನಿಜವ ನುಡಿಯಲೆ ನನ್ನಾಣೆ ನಲ್ಲೆ । ಪ್ರೀತಿಯ ರಂಗು ನೀ ಚೆಲ್ಲಿದೆ । ಪ್ರೇಮದ ಗುಂಗು ನನ್ನಲ್ಲಿ ಮೂಡಿದೆ ।

ಡಾ॥ಶೀಲ : ನನ್ನೆದೆ ಹೊಸ ನಗೆಯ ಕಂಡಿದೆ । ಬಾಳಿಗೆ ಭರವಸೆ ತಂದಿದೆ । ಆಸೆಯು ಅಲೆ ಅಲೆಯಾಗಿ ಕೂಗಿದೆ ।

ಡಾ॥ರಾಮು: ನನ್ನಲ್ಲಿ ಪ್ರೀತಿ ತಂದೋಳು ನೀನೆ । ಇದು ಪ್ರೀತಿಯ ಸ್ಪಂದನ । ಪ್ರೇಮದ ಬಂಧನ ।

ಇಬ್ಬರು : ಬದುಕೆಲ್ಲ ಒಂಟಿಯಾಗಿ ಅಲೆದಾಡಿ । ಇನ್ನೆಂದು ಒಂಟಿಯಿಲ್ಲ ನಮ್ಮ ಜೋಡಿ । ಸ್ವರಗಳ ಮಾಧುರ್ಯ ಮೃಗಗಳ ತಣಿಸೆ । ರಾಗದ ಸೌಂದರ್ಯ ಖಗಗಳ ಸೆಣಸೆ । ಲತೆಗಳು ಓಲಾಡಿವೆ ಹೂಗಳು ತೂಗಾಡಿವೆ । ನಮ್ಮ ನಯನದಿ ನಯನ ಬೆರೆತು ಮನ ತಣಿಯಿತು ಮನ ಕುಣಿಯಿತು ಇದು ಎನೂ ಮಾಯವ್ರೋ ।।

ಡಾ॥ಶೀಲ : ಈ ಕಣ್ಣಿಗೂ ಗಂಡಿಗೂ ಎನೂ ಸ್ನೇಹವ್ರೋ । ಹೊಸ ಸ್ನೇಹದಲ್ಲಿ ನವಜೀವನ ಸವಿಕಂಡೆ । ಹೊಸ ಪ್ರೇಮದಲ್ಲಿ ಹೊಸ ಬಾಳಿನ ಆನಂದ ಕಂಡೆ ।

ಡಾ॥ರಾಮು: ಈ ಹೆಣ್ಣಿಗೂ ಪ್ರೀತಿಗೂ ಎನೂ ಬಂಧನವ್ರೋ । ಜೀವನವೇ ಆಸೆಗಳ ಸರಮಾಲೆ । ಯೌವನವೇ ಆದರೊಳಗೆ ಮುತ್ತಿನ ಮಣಿಮಾಲೆ । ಎದೆಯಲ್ಲಿ ಸಾವಿರ ವೀಣೆಯ ನಾದ ಇದೇ ತಾನೇ ಅನುರಾಗ ।

ಡಾ॥ಶೀಲ : ಇಂಪಾಗಿ ಹಾಡಿದೆ ಪ್ರೇಮದ ಮೃದಂಗ ಇದೇ ತಾನೇ ಶುಭಯೋಗ ।

ಡಾ॥ರಾಮು: ಸುಳಿ ಮಿಂಚೊಂದು ಬಾನಿಂದ ಜಾರಿ ನಿನ್ನ ಮೈಯಲ್ಲಿ ಹರಿದಾಡಿತೇನು ।

ಡಾ॥ಶೀಲ : ನನ್ನ ಉಸಿರಾಟ ಬಿಗಿಯಾಗಿ ಹೋಗಿ ತನು ಅರಳುತ್ತ ಹೂವಾಯಿತೇನು ।

ಡಾ||ರಾಮು: ಹೆಣ್ಣಿನ ಗಮ್ಮತ್ತು ನಿನಗೇರಿದೆ ಇವತ್ತು ।

ಡಾ||ಶೀಲ : ಅದೆ ಗಂಡನ್ನು ಮೈ ಮರೆಸುವ ಮ್ಯಾಜಿಕ್ಕು ।

ಡಾ||ರಾಮು: ಹೃದಯ ಪ್ರೀತಿಯ ಹಾಡನು ಹಾಡಿದೆ । ನಯನ ಪ್ರೇಮದ ಬಯಕೆ ಹೇಳಿದೆ ।

ಡಾ||ಶೀಲ : ಬಾಳು ಸಂಗಾತಿಯ ಜೊತೆ ಬೇಕೆಂದಿದೆ । ಮನವು ನಲ್ಲನ ಕೂಡಲು ಕಾದಿದೆ ।

ಡಾ||ರಾಮು: ರಾಗ ತಾಳ ಬೆರೆತ ಹಾಗೆ ಇನ್ನೆಷ್ಟು ಜನುಮ ಈ ಪ್ರೀತಿ ಕೊಡುವೆ ।

ಡಾ||ಶೀಲ : ಜೀವಭಾವ ಸೇರಿದ ಹಾಗೆ ಈ ನಿನ್ನ ಸ್ನೇಹಕೆ ಮರುಜನ್ಮ ಪಡೆವೆ ।

ಇಬ್ಬರೂ : ನಮ್ಮ ಆಸೆ ಅನುರಾಗದ ಆನಂದ ಬೇಕೆಂದಿದೆ । ಸಂಸಾರ ಸತ್ಯ ಅರಿತಾಗ ಬಾಳು ಬಂಗಾರವು ದಾಂಪತ್ಯ ಆದರ್ಶವು ।।

ಡಾ||ರಾಮು: ಸರಸಿ ಚೆಲುವಿನ ಆರಿಸಿ ಬಂದಳು ನನ್ನರಸಿ । ಕವನ ಕಾವ್ಯ ನಾಟ್ಯ ಗಮಕ ಕಲೆಗಳ ಸಿಂಗರಿಸಿ । ನೋಡಲು ಮೋಹಕ ಕೂಡಲು ಪ್ರೇರಕ ಏನೂ ಮಾಯವ್ರೋ ।

ಡಾ||ಶೀಲ : ಲಲಿತೇ ಶ್ರೀ ಲಲಿತೆ ನೀ ನನ್ನ ಸೌಭಾಗ್ಯಧಾತೆ ದೇವಿ । ಶಂಕರಿ ಶುಭಕರಿ ಸೌಂದರ್ಯ ಲಹರಿ ಕೈ ಹಿಡಿದು ನಡೆಸೆನ್ನ ಸರ್ವೇಶ್ವರಿ ।

ಇಬ್ಬರೂ : ಪ್ರೇಮಲೋಕದಿಂದ ಬಂದ ಪ್ರೇಮದ ಸಂದೇಶ ಭೂಮಿಯಲ್ಲಿ ಹಾಡಿ ತಿಳಿಸೋಣ । ಪ್ರೀತಿ ಹಂಚೋಣ ಆನಂದ ಪಡೆಯೋಣ ಪ್ರೇಮದ ರಹಸ್ಯ ಹೇಳೋಣ ।।

ಡಾ||ಶೀಲ : ಕನ್ನಡಾಂಬೆಗೆ ಜಯವೆನ್ನಿ ಕನ್ನಡ ಕುಲಕೆ ಶುಭವೆನ್ನಿ ।

ಕನ್ನಡ ನುಡಿಯ ಬೆಳಗಲು ಒಂದು ಗೂಡಿ ಬನ್ನೀ ।

ಡಾ||ರಾಮು: ಹಚ್ಚೇವು ಕನ್ನಡದ ದೀಪ ಕರುನಾಡ ದೀಪ ಸಿರಿನುಡಿಯ ದೀಪ । ಚಿರಕಾಲ ಬೆಳಗಲಿ ಕನ್ನಡದ ದೀಪ ।

ಡಾ||ಶೀಲ : ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ।

ಡಾ||ರಾಮು: ಸಂಗೀತ ಕನ್ನಡ, ಸಾಹಿತ್ಯ ಕನ್ನಡ । ಸಂಸ್ಕೃತಿ ಕನ್ನಡ, ಜಾಗೃತಿ ಕನ್ನಡ । ಧಾರ್ಮಿಕ ಚೇತನ ನಿಲುವೆಲ್ಲ ಕನ್ನಡ । ಎಂದೆಂದು ಮೆರೆಯಲಿ ಈ ನಮ್ಮ ಕನ್ನಡ ।

ಇಬ್ಬರೂ : ನಡೆ ಮುಂದಕೆ ನಡೆ ಮುಂದಕೆ ಬಂದಿದೆ ವೇಳೆ । ಈ ವೈಭವ ವಿಜಯೋನ್ನತಿ ರಾಜೇಶ್ವರಿ ಲೀಲೆ । ಬೆಳಗಲಿ ಬೆಳಗಲಿ ಸುವರ್ಣ ಕರ್ನಾಟಕ ಸಾಮ್ರಾಜ್ಯ । ಧ್ವಜ ಪತಾಕೆ ಬೆಳಗಲಿ । ಕನ್ನಡ ಕೀರ್ತಿ ಕಹಳೆ ಎಲ್ಲೆಡೆಯು ಮೊಳಗಲಿ ।

ಡಾ||ಶೀಲ : ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ । ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲೇ ಹಾಡು ಬಾ ಕೋಗಿಲೆ । ಕನ್ನಡದ ಕಸ್ತೂರಿ ತಿಲಕವಿಟ್ಟೂ । ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ ।

ಡಾ||ರಾಮು: ಕನ್ನಡ ಕಾವ್ಯಗಳ ಮಾಲೆ ತೊಟ್ಟು । ಕನ್ನಡದ ಕಾಲ್ಗೆಜ್ಜೆ ನಾದ ತೊಟ್ಟು । ಹೊನ್ನೊಡೆ ಭೂಮಿಯಲಿ ಹೆಜ್ಜೆಯಿಟ್ಟೂ । ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ । ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲೇ ಹಾಡು ಬಾ ಕೋಗಿಲೆ ।

ಡಾ॥ಶೀಲ : ಇದೇ ಹೊಸ ಹಾಡು । ಹೃದಯ ಸಾಕ್ಷಿ ಹಾಡು । ಹೃದಯಾಸೆ ಭಾಷೆ ಈ ಹಾಡು । ಚಂದ್ರಕಾಂತಿ ಚಿಮ್ಮಿದ ಹಾಡು ಜನ್ನ ಜನ್ನದ ಪುಣ್ಯದ ಹಾಡು । ಕನ್ನಡಾಂಬೆ ಕಲಿಸಿದ ಹಾಡು ಎಂದು ಯಾರು ಮರೆಯದ ಹಾಡು ।

ಡಾ॥ರಾಮು: ಸತ್ಯ ಧರ್ಮಗಳೆರಡು ನಮ್ಮ ಬಾಳಿನ ಕಣ್ಣಾಗಿರಲಿ । ಶಾಂತಿಯೆ ಉಸಿರಾಗಿರಲಿ । ಸೇವೆಯೆ ಗುರಿಯಾಗಿರಲಿ ।

ಡಾ॥ಶೀಲ : ಒಂದೇ ನಾಡು ಒಂದೇ ಕುಲವು ಒಂದೇ ದೈವವು । ಒಮ್ಮನದಿಂದ ಎಲ್ಲರು ದುಡಿದರೆ ಜಗವನೆ ಗೆಲ್ಲುವೆವು ।

ಡಾ॥ರಾಮು: ಹುಟ್ಟಿದ್ದರೇ ಕನ್ನಡ ನಾಡಿಲ್ಲಿ ಹುಟ್ಟಬೇಕು । ಮೆಟ್ಟಿದರೇ ಕನ್ನಡ ಮಣ್ಣನು ಮೆಟ್ಟಬೇಕು । ಬದುಕಿದು ಜಟಕೀ ಬಂಡೀ । ಇದು ವಿಧಿ ಓಡಿಸುವ ಬಂಡೀ । ಇದು ವಿಧಿ ಅಲೆದಾಡಿಸುವಾ ಬಂಡೀ । ಇದು ವಿಧಿ ದಡ ಸೇರಿಸುವಾಬಂಡೀ ।

ಇಬ್ಬರೂ : ಆ.. ಆಹ... ಆಹ.. ಆಹಹಾ.... ಓಹೋಹೋ... ಒಓಹೋ.. ನಾವಾಡುವ ನುಡಿಯೇ ಕನ್ನಡ ನುಡಿ ಚಿನ್ನದ ನುಡಿ ಸಿರಿಗನ್ನಡ ನುಡಿ । ನಾವಿರುವಾ ತಾಣವೆ ಗಂಧದ ಗುಡಿ.. ಅಂದದಗುಡಿ.. ಚಂದದಗುಡಿ.. ।

ಡಾ॥ಶೀಲ : ಇದು ಯಾರ ತಪಸಿನ ಫಲವೋ ಈ ಕಂಗಳು ಮಾಡಿದ ಪುಣ್ಯವೋ । ನಾವಿರುವಾ ತಾಣವೆ ಗಂಧದಗುಡಿ.. ಅಂದದಗುಡಿ.. ಚಂದದಗುಡಿ.. ।

ಡಾ॥ರಾಮು: ಕನ್ನಡದ ರವಿ ಮೂಡಿಬಂದ ಮುನ್ನಡೆವ ಬೆಳಕನ್ನು ತಂದಾ । ಕನ್ನಡ ರಾಜ್ಯೋತ್ಸವ ನಮ್ಮ ಕರ್ನಾಟಕ ರಾಜ್ಯೋತ್ಸವ ।

ಡಾ॥ಶೀಲ : ಶ್ರೀಗಂಧ ಸೌಗಂಧ ತುಂಬಿರುವ ನಾಡಿದು । ಶಿಲ್ಪಕಲೆಯ ಜೀವಂತ ಸ್ವರ್ಗವಾದ ಗೂಡಿದು ।

ಡಾ॥ರಾಮು: ಕರ್ನಾಟಕ ಸಂಗೀತ ಸಮ್ಮೋಹಿನಿ । ಕನ್ನಡದ ಸಾಹಿತ್ಯ ಸುಧೆ ವಾಹಿನಿ । ಕನ್ನಡದ ಕಣ ಕಣವು ಸಂಜೀವಿನಿ । ರಸಜೀವಿ ನೀನಾಗು ಬಾ.ಬಾ.ಬಾ.ಬಾ. ।

ಡಾ॥ಶೀಲ : ಜೇನಿನ ಹೊಳೆಯೋ ಹಾಲಿನ ಮಳೆಯೋ । ಸುಧೆಯೋ ಕನ್ನಡ ಸವಿ ನುಡಿಯೋ ।

ಡಾ॥ರಾಮು: ಕವಿ ನುಡಿ ಕೋಗಿಲೆ ಹಾಡಿದ ಹಾಗೆ । ಮಲ್ಲಿಗೆ ಹೂಗಳು ಅರಳಿದ ಹಾಗೆ । ಸುಮಧುರ ಸುಂದರ ಈ ಕನ್ನಡ ನುಡಿಯೋ ।

ಡಾ॥ಶೀಲ : ಅಪಾರ ಕೀರ್ತಿಗಳಿಸಿ ಮೆರವ ಭವ್ಯನಾಡಿದು । ಕರ್ನಾಟಕ ವಿದುವೇ ನೃತ್ಯ ಶಿಲ್ಪಕಲೆಯ ಬೀಡಿದು ।

ಡಾ॥ರಾಮು: ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ । ಬಾ ಕನ್ನಡಿಗ, ಲೋಕ ಸನ್ಮಾನಿತ ಹೊಸ ಚರಿತ್ರೆ ಬರೆಯುವ । ಭಾರತಾಂಬೆ ಮುಕುಟಮಣಿ ಕನ್ನಡಿಗನೆ ಎನ್ನಿಸುವ ।

ಇಬ್ಬರೂ : ಜಯ ಭಾರತ ಜನನಿಯ ತನುಜಾತೆ । ಜಯಹೇ ಕರ್ನಾಟಕ ಮಾತೆ । ಸರ್ವಜನಾಂಗದ ಶಾಂತಿಯ ತೋಟ । ಜಯಹೇ ಕರ್ನಾಟಕ ಮಾತೆ । ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ । ಜಯಹೇ ಕರ್ನಾಟಕ ಮಾತೆ । ಜಯಹೇ ಕರ್ನಾಟಕ ಮಾತೆ ।

ಡಾ॥ರಾಮು: ಕನ್ನಡ ಹೊನ್ನುಡಿ ದೇವಿಯನ್ನು ನಾ ಪೂಜಿಸುವೆ ಆರಾಧಿಸುವೆ । ನಾ ಎಂದು ಬರೆಯುತ ಬಾಳುವೆ ನಾ ಕನ್ನಡ ಡಿಂಡಿಮ ಬಾರಿಸುವೆ ।

ಡಾ॥ಶೀಲ : ಸಿರಿಗನ್ನಡದ ಚರಿತೆಯ ನಾವು ಸ್ವರ್ಣಾಕ್ಷರದಲ್ಲಿ ಬರೆಯೋಣ । ಕರ್ನಾಟಕ ಮಾತೆಯ ಹರಕೆಯ ಹೊತ್ತು ರಚಿಸುವ ನವಯುಗ ನಿರ್ಮಾಣ ।

ಅವರ ಪರಿಹಾಸ್ಯದಿಂದ ಸುತ್ತಣ ಅರಣ್ಯ ಅವರ ನಗೆಯ ಅಲೆಯಿಂದ ನಲಿಯಿತು. ನವಯೌವ್ವನ, ರೂಪುಲಾವಣ್ಯ ಭೂಷಿತರಾಗಿ ಶೋಭಿಸುತ್ತ, ಆ ಉಪವನದ ಸರೋವರದಲ್ಲಿ ಡಾ॥ರಾಮು, ಡಾ॥ಶೀಲ ಆಡುತ್ತಿದ್ದ ಜಲಕೇಳಿ ರಸಿಕ ಮನವನ್ನು ಭ್ರಾಂತಿಗೊಳಿಸುತ್ತ ಮೋಹಗೊಳಿಸುತ್ತಿತ್ತು.

ಕಣ್ಣುಗಳೋ ಮರಿಮೀನುಗಳೋ, ಮುಖವ್ರೋ, ತಾವರೆ ಹೂವ್ರೋ, ತ್ರಿವಲಿಗಳೋ ನೀರಿನ ಅಲೆಗಳೋ, ಕುತ್ತಿಗೆಯೋ ದಕ್ಷಿಣಾವರ್ತದ ಶಂಖವ್ರೋ, ಕುಚಗಳೋ ತಾವರೆಯ ಮೊಗ್ಗುಗಳೋ, ನಿತಂಬ ಪ್ರದೇಶವ್ರೋ ಮರುಳು ದಿಣ್ಣೆಗಳೋ, ಮೈ ಬಣ್ಣವ್ರೋ ತಿಳಿನೀರೋ, ಸೊಂಟವ್ರೋ ತಾವರೆದಂಟೋ ಎಂಬಂತೆ ಡಾ॥ಶೀಲ ಜಲಕ್ರೀಡೆ ಆಡುತ್ತಿರಲು ಡಾ॥ರಾಮು ಸರಸ ಸಲ್ಲಾಪವನ್ನಾಡುತ್ತ, ಶೃಂಗಾರ ರಸ ಭಾವಗಳನ್ನು ಪ್ರಕಟಿಸುತ್ತ ವಿನೋದದಿಂದ ಓಕುಳಿಯಾಟವಾಡುತ್ತ, ಡಾ॥ಶೀಲಳೊಡನೆ ಕಾಲಕಳೆಯ ತೊಡಗಿದನು. ಅವರು ಮೇಲಕ್ಕೆ ಎಸೆದ ತಿಳಿನೀರು ಕೆಳಕ್ಕೆ ತುಂತುರು ತುಂತುರು ಹನಿಗಳಾಗಿ ಬೀಳುತ್ತಿರುವ ನೋಟವು ಹೃದಯಸಂಗಮವಾಗಿತ್ತು. ನೋಟಕರ ಕಣ್ಮನಗಳನ್ನು ತಣಿಸುತ್ತಿತ್ತು.

ಡಾ॥ಶೀಲ ಸೌಂದರ್ಯದ ಸೌರಭವನ್ನು ಮೀರಿಸುವ ಅಂಗಾಂಗಗಳನ್ನು ಪಡೆದು ರೂಪ ಸಾಮ್ರಾಜ್ಞಿಯಾಗಿ ಆಗ ತೋರತೊಡಗಿದಳು. ಅವಳ ಪ್ರೀತಿ ಉಕ್ಕುವಂತಿತ್ತು. ಎವೆಯಿಕ್ಕದೆ, ಪ್ರಶಂಸನೀಯ ದೃಷ್ಟಿಯಿಂದ ಡಾ॥ರಾಮುವನ್ನೇ ನೋಡಿದಳು. ''ಇಂಥ ಚೆಲುವರು ಇನ್ನಿದ್ದಾರೆಯೇ ?'' ನಾನೆಂಥ ಪುಣ್ಯವಂತೆ ಎಂದು ಕೊಂಡಳು.

ಕಾಡಿನ ಹಸಿರು ಅಲ್ಲಲ್ಲಿ ಹೊಂಬಿಸಿಲಿನ ರಂಗಿನಲ್ಲಿ ಸುಮನೋಹರವಾಗಿ ಮನಮೋಹಿಸುವಂತಿತ್ತು. ಅಲ್ಲೇ ತೋಟ ಒಂದರ ಮೂಲೆಯಲ್ಲಿ ಇದ್ದ ಒಂದು ಪಾರಿಜಾತದ ಹೂವಿನ ಮರದಲ್ಲಿ ಕೋಟಿ ಕೋಟಿ, ಮಿಣುಕು ಹುಳುಗಳು ಕಿಕ್ಕಿರಿದು ಮುತ್ತಿ ಬೆಳಕನ್ನು ಚಿಮ್ಮಿ ಚಿಮ್ಮಿ ಚಿಮುಕಿಸುತ್ತಿದದ್ದು ಚೆತೋಹಾರಿ ದೃಶ್ಯವಾಗಿತ್ತು! ಅದನ್ನು ನೋಡಿ ನೋಡಿ ಡಾ॥ರಾಮು ಡಾ॥ಶೀಲ ಮೈ ಮರೆತು ತಣಿದರು.

ಆ ದಿವ್ಯ ವಾತವರಣದ ದೃಶ್ಯದ ಆಸ್ವಾದನೆಯಲ್ಲಿ ಬಹಳ ಹೊತ್ತು ಮಗ್ನರಾದರು. ಹಗಲಿಗೂ, ಇರುಳಿಗೂ ನಡುವಣ ಸಂಧಿಸಮಯದ ಸೌಂದರ್ಯ ಕಾಂತಿ ಮಲೆನಾಡನ್ನು ಅಪ್ಪಿಕೊಂಡಂತಿತ್ತು. ಯಾರ ಪರಿವೆಯೂ ಇಲ್ಲದೆ ಅವರಿಬ್ಬರೂ ಆಟ, ನೋಟ, ಓಟಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ಹಾಡ ತೊಡಗಿದರು.

ಆ ರಾತ್ರಿ ಎಸ್ಟೇಟ್‌ನಲ್ಲೇ ಅವರು ತಂಗಿದ್ದರು. ರಾತ್ರಿಯೆಲ್ಲ ಮಳೆಯೋ ಮಳೆ! ''ಭೋ', ರೆಂಬ ಗಾಳಿಯ ಸದ್ದು! ಬೆಳಗ್ಗೆ ಮಂಜು, ಮೋಡ, ಗಾಳಿ, ಛಳಿ! ಬಾಗಿಲು ತೆರೆದರೆ ಸಾಕು ಮೋಡ ಕೊಠಡಿಯೊಳಗೆ ಬೆಳ್ಳಿಯ ಹೊಗೆಯಂತೆ ನುಗ್ಗುತಿತ್ತು. ಹೊರಗೆ ಬಂದ ಡಾ॥ರಾಮು ಡಾ॥ಶೀಲ ಆ ಮಂಜಿನಲ್ಲಿ, ಮೋಡದ ಮಂಜಿನಲ್ಲಿ, ಆ ಚಳಿ ಉಡುಲಿನಲ್ಲಿ, ಆ ಗಾಳಿಯಲ್ಲಿ ಗಡಗಡ ನಡುಗಿದರು. ಆಗ ಅವರ ಬಾಯಿಂದ 'ಹಾ ಸೃಷ್ಟಿಯೇ! ಹಾ ಜೀವನವೇ!' ಎಂಬ ಉದ್ಗಾರದ ಮಾತು ಹೊರಬಂತು.

ಮಾರನೆಯ ದಿನ ಬೆಳಗ್ಗೆ ಕಾರು ಕ್ರೂರ ಮೃಗಗಳಿಂದ ಕೂಡಿದ ಕಾಡು ಕಣಿವೆ ಮಲೆಗಳಲ್ಲಿ ಸಂದಿ ಸಂದಿಗೊಂದಿಗಳಲ್ಲಿ, ಹಳ್ಳ, ಕೊಳ್ಳ ಹೊಳೆಗಳನ್ನು ದಾಟಿ ದುರ್ಗಮವಾದ ದಾರಿಯಲ್ಲಿ ಹಾದು ಶೃಂಗೇರಿಯ ಕಡೆಗೆ ಹೊರಟಿತು.

ಡಾ॥ರಾಮು ಮಲೆಯ ಕಣಿವೆಗಳ ಕಡೆ ಕಣ್ಣು ಹಾಯಿಸಿ, ಕಣ್ಣರಳಿಸಿ ಹಿಗ್ಗಿ ವಿಸ್ಮಯದಿಂದ ನೊರೆ ನೊರೆ ಹಾಲು ನಿಂತಲ್ಲಾಂಗೆ ನಿಂತ ಕಾವಣ ಕಂಡು ಅದು ಕಾಡನ್ನೆಲ್ಲ ಮುಚ್ಚಿರುವುದನ್ನು ಮೆಚ್ಚಿ "ಏನು ಚೆಂದವಾಗಿ ಕಾಣುತ್ತದೆ ಡಾ॥ಶೀಲ! ನಾನು ಇಂಥಹ ಪ್ರಕೃತಿ ಸೌಂದರ್ಯದ ಸೊಬಗಿನ ಸೌರಭವನ್ನು ನೋಡೇ ಇರಲಿಲ್ಲ. ಸವಿದೂ ಇರಲಿಲ್ಲ!" ಎಂದು ಅಚ್ಚರಿಗೊಂಡು ಹೇಳಿದನು. "ಬರೀ ಬೆಂಗಳೂರಿನಲ್ಲೇ ಕೂತುಕೊಂಡಿದ್ರೆ ಇದೆಲ್ಲ ಹೇಗೆ ಕಾಣುತ್ತದೆ. ಎಲ್ಲಿ ಕಾಣುತ್ತದೆ. ನೋಡಿದಿರಾ ನನ್ನ ಜೊತೆ ಬಂದಿದಕ್ಕೆ ಏನೇನ್ನೆಲ್ಲ ಕಾಣುತ್ತದೆ ? ಎಂದು ವೈಯಾರದಿಂದ ಕೇಳಿದಳು.

ಆ ವೇಳೆಗೆ ಪೂರ್ವ ದಿಂಗತದಿಂದ ಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೆಳುತ್ತಿದ್ದನು. ಆಗ ಕಣಿವೆಗಳನ್ನು ತುಂಬಿದ ಆ ಮಂಜಿನ ನೊರೆ ನೊರೆಯ ಸಮುದ್ರ, ಹಸಿರು ದ್ವೀಪಗಳಂತೆ, ನಡುನಡುವೆ ತಲೆಯೆತ್ತಿದ್ದ ಮಲೆನೆತ್ತಿಗಳು ಮೂಡಿ ಬಾನಿನಲ್ಲಿ ಸಾಗುತ್ತಿದ್ದ ಆ ಮೋಡಗಳ ವರ್ಣಲೀಲೆ ಡಾ॥ರಾಮುವಿನ ಹೃದಯದಲ್ಲಿ ಭೂಮಾನುಭೂತಿ ಸಂಚಾರವಾಗುವಂತೆ ಮಾಡಿತು.

ಆಗ ಡಾ॥ರಾಮು "ಎಂತಹ ದೃಶ್ಯ ಸ್ವರ್ಗವಿರುವುದು! ಇದನ್ನು ನೋಡಲು ತಕ್ಕ ಕಣ್ಣಿರಬೇಕು" ಎಂದನು. ಆಗ ಡಾ॥ಶೀಲ "ನಮಗಾಗಿಯೇ ಪ್ರಕೃತಿ ಮಾತೇ ದೃಶ್ಯ ಸೌದರ್ಯಗಳನ್ನು ಮಂಜಿನ ಪರದೆ ಗಳ ಸಹಾಯದಿಂದ ವಿರಚಿಸಿ ತೋರಿಸುತ್ತಿದ್ದಾಳೆಯೋ ಏನೋ" ಎಂದು ವಿಸ್ಮಯ ಆನಂದದಿಂದ ನಲಿದು ನಕ್ಕು ಹೇಳಿದಳು. "ಇರಬಹುದು" ಎಂದು ಒಪ್ಪಿ ಹೇಳಿದ ಡಾ॥ರಾಮು.

ದಾರಿಯಲ್ಲಿ ಡಾ॥ಶೀಲ ಡಾ॥ರಾಮುವಿಗೆ ಶೃಂಗೇರಿಯ ಇತಿಹಾಸವನ್ನು ಹೇಳ ತೊಡಗಿದಳು. "ಶೃಂಗೇರಿಯ ನಿಜವಾದ ಹೆಸರು ಋಷ್ಯಶೃಂಗಗಿರಿ. ದಿನ ಬಳಕೆಯ ಉಪಯೋಗದಲ್ಲಿ ಶೃಂಗೇರಿ ಯಾಯಿತಂತೆ. ಹಿಂದೆ ಅಲ್ಲಿ ತಪಸ್ಸು ಮಾಡುತ್ತಿದ್ದ ವಿಭಾಂಡಕನೆಂಬ ಋಷಿಗೆ ಋಷ್ಯಶೃಂಗನೆಂಬ ಮಗ ನಿದ್ದನಂತೆ. ಅವನು ಕಾಡಿನಲ್ಲಿ ಮನುಷ್ಯ ಸಂಪರ್ಕವಿಲ್ಲದೇ ಬೆಳೆದು ಯೌವ್ವನಕ್ಕೆ ಬಂದಿದ್ದರೂ ಒಬ್ಬ ಹೆಂಗಸನ್ನೂ ನೋಡಿರಲಿಲ್ಲವಂತೆ.

ಆಗ ಅಂಗ ರಾಜ್ಯದಲ್ಲಿ ಮಳೆ ಇಲ್ಲದೆ ಕ್ಷಾಮಡಾಮರಗಳು ಉಂಟಾದಂತೆ. ಋಷ್ಯಶೃಂಗನನ್ನು ಹೇಗಾ ದರೂ ಮಾಡಿ ಅಂಗರಾಜ್ಯಕ್ಕೆ ಕರೆತಂದರೆ ಆ ರಾಜ್ಯದಲ್ಲಿ ಸುಭಿಕ್ಷವಾಗುವುದೆಂದು ದೊರೆ ಲೋಮಪಾದ ನಿಗೆ ಅವನ ಗುರುಗಳು ಸಲಹೆ ಮಾಡಿದರಂತೆ. ದೊರೆಯ ಮಗಳು ರಾಜಪುತ್ರಿ ಶಾಂತಾ ಋಷ್ಯಶೃಂಗನನ್ನು ಹೇಗಾದರೂ ಮೋಹಿಸಿ ಕರತರಬೇಕೆಂದು ನಿರ್ಣಯವಾಯಿತಂತೆ. ಒಮ್ಮೆ ಶಾಂತ ಮತ್ತು ಆಕೆಯಗೆಳತಿ ಯರು ತಪೋವನವಾಸಿಗಳಂತೆ ವೇಷಧರಿಸಿ ಋಷಿ ವಿಭಾಂಡಕ ನಿಲ್ಲದ ವೇಳೆಯಲ್ಲಿ ಋಷ್ಯಶೃಂಗನಲ್ಲಿಗೆ ಹೋಗಿ ತಮ್ಮ ಕ್ರೀಡಾ ವಿನೋದಗಳಿಂದ ಅವನ ಗಮನವನ್ನು ಸೆಳೆದರಂತೆ. ಆಗ ಅವನು ಅವರನ್ನು ತನ್ನ ಆಶ್ರಮಕ್ಕೆ ಕರೆದೊಯ್ದು ಎಲ್ಲರಿಗೂ ಆತಿಥ್ಯ ನೀಡಿದನಂತೆ. ಮರುದಿನ ಅವರು ತಮ್ಮ ಆಶ್ರಮಕ್ಕೆ ಬರ ಬೇಕೆಂದು ಋಷ್ಯಶೃಂಗನನ್ನು ಆಕರ್ಷಣೆಯಿಂದ ಮರುಳುಮಾಡಿ ಮನ ಪ್ರೊಲಿಸಿದರಂತೆ. ಮಾರನೇಯ ದಿನ ತನ್ನ ಸುಂದರ ಸಹಯಾತ್ರಿಕರೊಂದಿಗೆ ನದಿಯಲ್ಲಿ ಹೂವಿನ ತೆಪ್ಪ ಏರಿ ಅಂಗರಾಜ್ಯಕ್ಕೆ ತೆರಳಿದನಂತೆ.

ಅವನು ಅಂಗ ರಾಜ್ಯದಲ್ಲಿ ಕಾಲಿರಿಸಿದೊಡನೆಯೇ ಅಲ್ಲಿ ಮಳೆ ಸುರಿದು ಮರಳಿ ಸುಭಿಕ್ಷ ಉಂಟಾಯಿ ತಂತೆ. ಸಂತಸಗೊಂಡ ಲೋಮಪಾದ ಮಗಳನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡಿದನಂತೆ. ಇದೇ ಋಷ್ಯಶೃಂಗ. ಅಯೋಧ್ಯೆಯ ರಾಜ ದಶರಥನ ಆಚಾರ್ಯನಾಗಿ ಅಶ್ವಮೇಧ ಯಾಗವನ್ನು ನೆರವೇರಿ ಸಿದನಂತೆ. ಅದರ ಫಲವಾಗಿ ದಶರಥನಿಗೆ ಸಂತಾನ ಪ್ರಾಪ್ತಿಯಾಗಿ ರಾಮಾಯಣಕ್ಕೆ ಕಾರಣವಾಯಿ ತಂತೆ" ಎಂದು ಡಾ॥ಶೀಲ ಸ್ಥಳದ ಇತಿಹಾಸದ ಹಿನ್ನಲೆಯನ್ನು ತಿಳಿಸಿದಳು.

ಆ ನಿಬಿಡಾರಣ್ಯಗಳ ಮಧ್ಯೆ ನೀರವ ನಿರ್ಜನವಾದ ರಸ್ತೆಯಲ್ಲಿ ಕತೆ ಹೇಳುವ ಮತ್ತು ಕತೆ ಕೇಳುವ ಸ್ವಾರಸ್ಯದಲ್ಲಿ ಮಗ್ನರಾಗಿ ಅದುವರೆಗೆ ಕುಳಿತ್ತಿದ್ದ ಡಾ॥ಶೀಲ ಮತ್ತು ಡಾ॥ರಾಮು ಸ್ವಲ್ಪಹೊತ್ತು ಏನನ್ನೂ

ಮಾತನಾಡದೆ ಕಾಡಿನ ದಾರಿಯ ಆಜುಬಾಬುಗಳನ್ನು ವಿಕ್ಷೀಸುತ್ತಿದ್ದರು. ನವಿಲ ಹಿಂಡು ಗುಡ್ಡದ ಇಳಿಜಾರಿನಲ್ಲಿ ಮೇಯುತ್ತಿದ್ದು ಇವರನ್ನು ಕಂಡು ಓಡಿ ಹೋದವು.

ಕಾಡೆಲ್ಲಾ ಗಿಲಿಗಿಚ್ಚಿ ಆಡಿಸಿದ ಹಾಗೆ ತರತರದ ಹಕ್ಕಿಗಳು ಒಂದೊಂದರ ಕೂಗು ಒಂದೊಂದು ತರ ವಾಗಿ ಧ್ವನಿಸುತ್ತಿದ್ದವು. ಆಗ ರಾಮು ಎಷ್ಟು ಹಕ್ಕಿಗಳಿವೆ? ಎಷ್ಟು ಬಣ್ಣಬಣ್ಣದವು? ಎಂದು ಕೊಂಡನು. ಕಾಡಿನ ಅಂಚುಗಳಲ್ಲಿ ಗೂಡಿಗೊ ಗೊತ್ತಿಗೊ ಹಾರಿ ಹೋಗುವ ವಿವಿಧ ಹಕ್ಕಿಗಳ ನಾನಾಕಲರವ ಸುಮಧುರವಾಗಿತ್ತು.

ಹೋರಿಮಿಗವೊಂದು ತನ್ನ ಕೊಂಬುಗಳನ್ನು ನಿಮಿರಿ ಹಿಂಡಿನ ಜೊತೆ ನೆಗೆದು ಚಿಮ್ಮಿ ಮಿಂಚಿ ಹೋಗುತ್ತಿತ್ತು. ದಾರಿಯ ಪಕ್ಕದಲ್ಲೇ ಇದ್ದ ಒಂದು ಮೊಲ ಎದ್ದು ಬಾಣದ ಮೇಗದಿಂದ ಬಳುಕಿ, ಚಿಮ್ಮಿ ಚಂಗಚಂಗನೆ ಓಡಿಹೋಯಿತು. ಒಂದೆರಡು ಕಡೆ ಹಾವುಗಳು ಹಾದಿಗಡ್ಡ ಓಡಿಹೋದವು.

ರಸ್ತೆಯ ಅಂಚಿನಿಂದಲೆ ಆಕಾಶಮುಟ್ಟುವಂತೆ ಬೆಳೆದು ನಿಂತಿದ್ದ ಮರಗಳಿಂದ ದಟ್ಟವಾದ ಆ ಕಗ್ಗಾಡಿ ಗೆ ಒಂದು ಭವ್ಯ ಭೂಷಣೆಯ ಭಂಗಿ ಒದಗಿತ್ತು. ಸೂರ್ಯರಶ್ಮಿಗಳು ಆ ಮರಗಳ ಸಂಧಿಯಲ್ಲಿ ತೂರಿ ಬಂದು ಕೋಲು ಕೋಲಾಗಿದ್ದ ದೃಶ್ಯ ಸುಮನೋಹರವಾಗಿತ್ತು.

ಅಲ್ಲಲ್ಲಿ ಜೀರುಂಡೆಗಳ ಕರೆಕರೆಯ ಜೀರ್ದನಿ ಆ ನೀರವತೆಯನ್ನು ತನ್ನ ಗರಗಸದಿಂದ ಕೊಯ್ಯು ವಂತಾಗಿ ಕಿವಿಗೆ ಕರ್ಕಶವಾಗಿತ್ತು. ಗಾಳಿ ಜೋರಾಗಿ ಬೀಸಿದಾಗ ಗಗನಚುಂಬಿಗಳಾದ ವೃಕ್ಷ ಶಿಖರಗಳು ಬಳ್ಳಿಗಳಂತೆ ಬಳುಕಿ ಭಯಂಕರವಾಗಿ ತಲೆದೂಗಿದುವು. ಬೆಟ್ಟವಿಳಿದು ಕಾರು ತಗ್ಗಿನ ಪ್ರದೇಶಕ್ಕೆ ಬಂದಾಗ ಒಂದು ಕಾಮಳ್ಳಿಯ ಹಿಂಡು ಉಲಿಯುತ್ತಾ ರೆಕ್ಕೆ ಸದ್ದೂ ಕಿವಿಗೆ ಬರುವಷ್ಟು ಸಮೀಪದಲ್ಲಿ ಹಾರಿ ಹೋಯಿತು. ದೂರದಿಂದ ಕೋಗಿಲೆಗಳ ಇಂಚರ ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಬರುತ್ತಿತ್ತು. ಮತ್ತೊಂದು ತಾಣದಲ್ಲಿ ಹೂವು ತುಂಬಿ ಅಲಂಕೃತವಾದ ಮರಗಳ ಸಾಲೂ ಸಜೀವ ಸಂತೋಷದಂತಿದ್ದ ವಾಯು ಮಂಡಳದ ವೈಭವ ಪ್ರದರ್ಶಿಸುತ್ತಿದ್ದವು. ಹಕ್ಕಿಗಳು ಬಾನಿನಲ್ಲಿ ತೇಲಾಟವಾಡುತ್ತಿದ್ದುವು.

ದಾರಿಯಲ್ಲಿ ಸಿಕ್ಕ ಒಂದು ಪುಟ್ಟ ಹಳ್ಳಿಯಲ್ಲಿ ಏನೇನೋ ತಿನಸುಗಳನ್ನು ತೆಗೆದುಕೊಂಡು ಜಗಿಯುತ್ತಾ ಹೊರಟರು. ಅಲ್ಲಿ ಮನೆಗಳ ಮೇಲೆ ಪುಟ್ಟ ಗುಬ್ಬಚ್ಚಿಗಳು ಚಿಲಿಪಿಲಿ ಗುಟ್ಟುತ್ತಾ ಗುಂಪು ಗುಂಪಾಗಿ ಹಾರಾಡು ತ್ತಿದ್ದವು. ದಾರಿಯಲ್ಲಿ ಸಿಕ್ಕ ಕೋಟಿ ಪಕ್ಷಿಗಳ ಮಧುರಗಾನವನ್ನು ಕೇಳಿದರು. ಪುಷ್ಪಾನೃತ ವೃಕ್ಷಗಳನ್ನು ನೋಡಿ ಮೆಚ್ಚಿದರು. ಆ ದೃಶ್ಯಗಳು ಅದ್ಭುತವಾಗಿದ್ದುವು. ಕಾಡು ಬೆಟ್ಟಗಳು ಮನಮೋಹಕ. ಅಲ್ಲಲ್ಲಿ ಕಾಣಿ ಸುತ್ತಿದ್ದ ಕಾಡು ಪ್ರಾಣಿಗಳ ಹಿಂಡು ಹಿಂಡುಗಳಲ್ಲಿ ವೈವಿಧ್ಯಮನ್ನು ನೋಡಿ ನೋಡಿ ರೋಮಾಂಚಿತರಾದರು.

ತೆರೆ ಮೇಲೆ ತೆರೆಯೆದ್ದು ಹರಿದಂತೆ ದೂರ ದೂರಕೆ ಹಬ್ಬಿದ ಪರ್ವತ ದಿಗಂತ ಶೈಲಿ, ದೃಷ್ಟಿ ದಿಗಂತದ ಮೇಲ್ಮೆಯ ದಾಟಿ ಮಲೆನಾಡಿನ ಕಾಡು ಕಣಿವೆಯ ಮಂಜಿನ ಲೀಲೆಗಳು ಹೃದ್ಗೋಚರವಾಗುವ ಸ್ವರ್ಗೀಯ ಸೌಂದರ್ಯಸ್ವಾದನೆ ಜೊತೆಗೆ ಹಕ್ಕಿಗಳಿಂಚರವನ್ನಾಲಿಸುತ್ತಾ ಅವರು ಹೊರಟರು. ಡಾ॥ರಾಮು ಈ ಕಾಡು ಬೆಟ್ಟ ಕಣಿವೆಗಳ ವೈಚಿತ್ರ ಸೌಂದರ್ಯಗಳನ್ನು ನೋಡಿ "ಕಾಡು ಮುತ್ತು ಕೊಡುತ್ತಲಿರುವ ಸೊಬಗಿನ ಬೀಡು " ಎಂದು ಉದ್ಗರಿಸಿದನು. ದಾರಿ ಉದ್ದಕ್ಕೂ ಅವರ ಸುಸಂಸ್ಕೃತಿಯ ಹಾಸ್ಯ ಪರಿಹಾಸ್ಯದ ನಗೆ, ಮಾತು ಮನಸ್ಸನ್ನು ವಿನೋದಕರವಾಗಿಸಿತು.

ಮಹೋನ್ನತವೂ, ಸುರಸುಂದರವೂ, ಚಿರಶ್ಯಾಮಲವೂ ಆಗಿರುವ ಮಲೆನಾಡಿನ ಪರ್ವತಶ್ರೇಣಿ ಗಳಲ್ಲಿ, ಹಸುರು ಮುದ್ದೆಮುದ್ದೆಯಾಗಿ ಎದ್ದಿರುವ ಮಲೆಗಳಲ್ಲಿ, ಮಧುರವಾಗಿ ಯಾವುದೋ ಒಂದು ಘನೀ ಭೂತವಾದ ಸಾಕಾರ ಆನಂದವೇ ಅವರ ಹೃದಯ ಪ್ರವೇಶ ಮಾಡಿ ಇಡೀ ಜಗತ್ತೇ ಬದಲಾಯಿಸಿದಂತೆ ಭಾಸವಾಗುತ್ತಿತ್ತು. ಅವರ ಸಮಸ್ತ ಚೇತನವನ್ನು ಒಂದು ಅಲೌಕಿಕತೆ ಆಕ್ರಮಿಸಿಕೊಂಡಿತು. ನಿಸರ್ಗದ

ವಿವಿಧ ಮುಖಗಳಲ್ಲಿ ಸೌಂದರ್ಯಸ್ವಾದನೆ ಮಾಡುವ ಡಾ॥ಶೀಲ ಮತ್ತು ಡಾ॥ರಾಮುವಿನ ಚೇತನಗಳಿಗೆ ಬ್ರಹ್ಮ ಸಂಸ್ಪರ್ಶವಾಯಿತು.

ಆ ವೇಳೆಗೆ ಕಾರು ಶೃಂಗೇರಿ ತಲುಪಿತು. ಶೃಂಗೇರಿಯ ಆಕರ್ಷಣಿಯ ಸುಮನೋಹರವಾಗಿ ಅಲ್ಲಿಗೆ ಹೋಗುವುದೆಂದರೆ ಎಲ್ಲರಿಗೂ ಖುಷಿ, ಸಂಭ್ರಮ. ಡಾ॥ರಾಮು ಡಾ॥ಶೀಲ ಶೃಂಗೇರಿಯ ತುಂಗಾ ನದಿಯಲ್ಲಿ ಸ್ನಾನವನ್ನು ಮುಗಿಸಿ ಶಾರದ ದೇವಸ್ಥಾನಕ್ಕೆ ಹೋಗಿ ದೇವಿಯನ್ನು ಪೂಜಿಸಿ ಪುನೀತರಾದರು. ತುಂಗೆಯ ನದಿಯ ದೊಡ್ಡ ದೊಡ್ಡ ಮೀನುಗಳಿಗೆ ಕಳ್ಳೇಪುರಿ ಹಾಕಿ ಸಂತಸಗೊಂಡರು. ನದಿಯ ಎರಡು ದಡಗಳಲ್ಲಿ ದಟ್ಟವಾಗಿ ಬೆಳದಿದ್ದ ಅರಣ್ಯ ಶ್ರೇಣಿಗಳ ವೃಕ್ಷಮಾಲೆಯ ಸುಂದರ ದೃಶ್ಯ ನೋಡಿ ಮೋಹಗೊಂಡರು. ಮಂಜುಳನಾದದಿಂದ ಮಂದಗಮನೆಯಾಗಿ ಮಂಗಳ ತುಂಗೆ ಪ್ರವಹಿಸುತ್ತಿದ್ದಳು.

ಮಿಂಚಿನ ಚಟುವಟಿಕೆಯಿಂದ ಕೂಡಿದ ಮಿಾಂಚುಳ್ಳಿಗಳಿಂದ, ವಸಂತೋನ್ಮಕ್ತ ಕೋಗಿಲೆಗಳ ಹುಚ್ಚು ಹಿಡಿಸುವ ಚೀರಿಂಚರದಿಂದ ಕೂಡಿದ ನದಿಯ ಮೇಲುಗಡೆಯ ದೇವಾಲಯ ಸ್ವರ್ಗೀಯವಾಗಿ ಶೋಭಿಸುತ್ತಿತ್ತು. ಹಿಂದೂ ಧರ್ಮಕ್ಕೆ ಪುನರ್ಜನ್ಮ ನೀಡಿದ ರಸಿಕ ತತ್ವಜ್ಞ ಆದಿಶಂಕರಾಚಾರ್ಯರ ಮನಸ್ಸನ್ನು ಪ್ರತಿಬಿಂಬಿಸುತ್ತಿದ್ದ ಶೃಂಗೇರಿಯ ಈ ಮನೋಹರವಾದ ಕ್ಷೇತ್ರ ನೋಡಿ ಅವರು ಆನಂದದಿಂದ ಪುಳಕಿತರಾದರು.

ದಾರಿಯಲ್ಲಿ ಮುಳುಗುತ್ತಿರುವ ಸೂರ್ಯನ ಮನೋಹರತೆಯನ್ನು ಸವಿಯಲು ಸ್ವಲ್ಪ ಹೊತ್ತು ನಿಂತರು. ಆ ಸುಂದರ ದೃಶ್ಯ ನಿಜವಾಗಿಯೂ ಚೇತೋಹಾರಿಯಾಗಿತ್ತು. ಅತ್ಯದ್ಭುತವಾಗಿತ್ತು. ಸ್ವಲ್ಪ ಹೊತ್ತು ನಿಂತ ಮೇಲೆ ಮಿಣುಕು ಹುಳುಗಳು ಬನದ ಕಗ್ಗತ್ತಲಲ್ಲಿ ಚಿಮಿಕಿಸಿ ಚೆಲ್ಲಿ ಸೂಸುತ್ತಿದ್ದ ಮಿಂಚಿನ ಹನಿಗಳನ್ನು ನೋಡಿ ನೋಡಿ ಮೈಮರೆತರು. ಅಷ್ಟರಲ್ಲೇ ಇದ್ದಕ್ಕಿಂದ್ದಂತೆ ಡಾ॥ರಾಮು ಡಾ॥ಶೀಲ ಇಬ್ಬರಿಗೂ ಮಿಂಚು ಮುಟ್ಟಿದಂತಾಗಿ ಎದೆ ಧಿಗ್ಗೆಂದಿತು. ಕಾಡು ಕಂಪಿಸಿತು. ಹೆಮ್ಮರಗಳು ತರತರನೆ ನಡುಗಿದವು. ಇಡೀಕಾಡು ಬೆಟ್ಟಗುಡ್ಡ ಭೂಮಿಯೆಲ್ಲ ಕಂಪಿಸುತ್ತಿರುವ ಪ್ರತ್ಯಕ್ಷಕ್ಕಿಂತಲೂ ಪ್ರತ್ಯಕ್ಷವಾದ ಅನುಭವದೊಡನೆ ಕಿವಿ ಬಿರಿಯುವಂತೆ ತರಂಗ ತರಂಗವಾಗಿ ಎದೆ ನಡುಗಿಸುವ ಹೆಬ್ಬುಲಿಯ ಅಬ್ಬರಿಕೆಯ ಆರ್ಭಟ ಕಿವಿಗೆ ಅಪ್ಪಳಿಸತೊಡಗಿತು. ವಾಸ್ತವವಾಗಿ ಅದು ಎಲ್ಲ ದಿಕ್ಕುಗಳಿಂದಲೂ ಏಕ ಪ್ರಕಾರವಾಗಿ ಹೊಮ್ಮಿ ಬಂದು ಅಪ್ಪಳಿಸುತ್ತಿತ್ತು.

ಅವರಿಬ್ಬರ ಇಡೀ ದೇಹ ಭಾವಿಕವಾಗಿ ಭೌತಿಕವಾಗಿ ಅದುರುತ್ತಿತ್ತು. ಮೈ ಬಿಸಿಯೇರಿ ಉಸಿರಾಟ ಸೋದ್ವಿಗ್ನವಾಯಿತು. ಬಾಯಿಗಿಂತಲೂ ಹೆಚ್ಚಾಗಿ ಅವರ ಕಣ್ಣುಗಳೇ ಮಾತಾಡಿಕೊಂಡವು. 'ಹುಲಿಯ ಅಬ್ಬರಿಕೆಗೆ ಕಾಡು ನಡುಗುತ್ತದೆ' ಎಂಬರ್ಥದ ವಾಕ್ಯ ಕಾವ್ಯದ ರೀತಿಯ ಅಲಂಕಾರ ಉಕ್ತಿ ಎಂದು ತಿಳಿದಿದ್ದ ಡಾ॥ರಾಮು ಡಾ॥ಶೀಲರಿಗೆ ಈಗ ಅದು ಅಲಂಕಾರದಲ್ಲ. ಅತ್ಯಂತ ಲೋಕ ನಿಷ್ಠವಾದ ವೈಜ್ಞಾನಿಕ ಸತ್ಯದ್ದು ಎಂಬುದು ಅನುಭವಕ್ಕೆ ಬಂದಿತು.

ಅಷ್ಟರಲ್ಲೇ ರಸ್ತೆಯ ಪಕ್ಕದ ಪೊದೆಯ ಹತ್ತಿರದಲ್ಲಿ ನಿಂತಿದ್ದ ಹೆಬ್ಬುಲಿಯ ಕಣ್ಣುಗಳು ಗೋಲಿಯ ಗಾತ್ರದ ಮಿಣುಕು ಹುಳುಗಳಂತೆ ಹೊಳೆಯುತ್ತಿರುವುದನ್ನು ನೋಡಿ ಡಾ॥ಶೀಲ ಪಿಳಪಿಳನೆ ಕಣ್ಣುಬಿಟ್ಟು ಭೀತಿ ಯಿಂದ ಡಾ॥ರಾಮುವಿನ ಕಡೆಗೆ ನೋಡಿದಳು. "ಹೆದರಬೇಡ ಡಾ॥ಶೀಲ ಕಾರಿನ ವೇಗ ಬೇಗ ಏರಿಸು" ಎಂದು ಹೇಳಿದ, ಕಾರು ಶರವೇಗದಲ್ಲಿ ಚಲಿಸತೊಡಗಿತು. ಅಷ್ಟರಲ್ಲೇ ಢಾಂ! ಎಂದು ಒಂದು ತೋಟಾ ಕೋವಿಯ ಈಡು ಕಾಡನ್ನೇ ಕಲಕಿಬಿಟ್ಟಿತು. ನಡೆದ ಘಟನೆಯ ಭೀಷಣ ಭವ್ಯಾನುಭವಕ್ಕೆ ಸ್ತಂಭೀಭೂತವಾದಂತೆ ಡಾ॥ರಾಮು ಡಾ॥ಶೀಲ ಕೆಲವು ನಿಮಿಷ ಮೌನವಾಗಿದ್ದರು.

ಆ ರಮಣೀಯವಾದ ವನ ನಿರ್ಝರಿಣಿಯ ಸೃಷ್ಟಿ ಸೌಂದರ್ಯದ ರಸಲೋಕದಲ್ಲಿ ದೂರ ಬಹು ದೂರ ವಿವರಿಸತೊಡಗಿದರು. ಡಾ॥ರಾಮು ಡಾ॥ಶೀಲರಿಗೆ ಅದೇನೋ ಉಲ್ಲಾಸ! ಅದೇನೋ ಉತ್ಸಾಹ! ಅದೇನೋ ಉನ್ಮೇಷ! ಏನೋ ಸ್ನೇಹ ಮಾಧುರ್ಯ! ಅದೆಷ್ಟೋ ಬಾಂಧವ್ಯ! ಅವರ ಮೈ ನಿವಿರುನಿಮಿರಿ

ಅಂಗಾಂಗ ಸೆಡೆತು ನಿಂತವು. ಆ ಅರಣ್ಯ ಸನ್ನಿವೇಶದಲ್ಲಿ ಆ ಪ್ರಕೃತಿದಾರಿ ಅಷ್ಟು ಸ್ವಾದನೀಯ. ಅಷ್ಟು ಹಿತವಾಗಿತ್ತು. ಅವರಿಬ್ಬರಿಗೂ ಅದೊಂದು ಭಾಷಾತೀತವಾದ ಭಾವಮಯವಾದ ಮಹಾನಂದದ ದಿವ್ಯ ಮೂಹೂರ್ತವಾಗಿತ್ತು. ಮಹಾಕವಿ ಮಹಾಛಂದಸ್ಸಿನ ನಾದ ವಿನ್ಯಾಸವನ್ನು ಸವಿಯುವಂತೆ ಸವಿದು ಸುಖಿಸುತ್ತಲೂಇದ್ದರು. ಕಾರು ಶೃಂಗೇರಿ ಹತ್ತಿರದ ''ಮಧುಧಾಮ ಎಸ್ಟೇಟ್'' ತಲುಪಿದಾಗ ಸುರಸುಂದರಿ ಯರೂ, ಸುಸಂಸ್ಕೃತರೂ, ನಯಜೀವಿಗಳೂ ಅತಿಥಿ ಸತ್ಕಾರ ಲೋಲುಪೆಯರೂ ಆದ ಮಲೆನಾಡಿನ ಲಲನೆಯರೂ ಡಾ॥ರಾಮು ಡಾ॥ಶೀಲರಿಗೆ ಅದ್ಭುತ ಸ್ವಾಗತ ನೀಡಿದರು.

ಅದ್ಧೂರಿಯಿಂದ, ಆಡಂಬರದಿಂದ ಬೆಡಗಿನಿಂದ, ಮದುವೆಯ ಶಾಸ್ತ್ರಗಳು ಮಂಗಳ ವಾದ್ಯಗಳಿಂದ ಪ್ರಾರಂಭವಾದವು. ಪುರೋಹಿತರು ದೊಡ್ಡ ಧ್ವನಿಯಲ್ಲಿ ಮಂತ್ರಗಳನ್ನು ಹೇಳುತ್ತಿದ್ದರು. ಹೆಣ್ಣು ತನ್ನ ಸುಕೋಮಲವಾದ ಕೈಗಳನ್ನೆತ್ತಿ ಹೂಮಾಲೆಯನ್ನು ಗಂಡಿನ ಕೊರಳಿಗೆ ಹಾಕಿದಳು. ಬ್ರಾಹ್ಮಣೋತ್ತಮರು ಉಚ್ಚರಿಸುವ ಮಂತ್ರ ವಿಧಾನಗಳಿಗೆ ಅನುಸಾರವಾಗಿ ಅಗ್ನಿದೇವನ ಸಮ್ಮುಖದಲ್ಲಿ ಹೆಣ್ಣು ಗಂಡಿನ ಕೈ ಹಿಡಿದಳು. ಆಗ ವೈದಿಕ ಸಂಪ್ರದಾಯದಂತೆ ಪಾಣಿಗ್ರಹಣ, ಸಪ್ತಪದಿ, ಲಾಜಾ ಹೋಮ, ಆಜ್ಯಹೋಮ ಮೊದಲಾದ ವಿವಾಹ ಮಹೋತ್ಸವದ ವಿವಿಧ ಕಾರ್ಯಕಲಾಪಗಳು ವೇದಘೋಷದೊಂದಿಗೆ ನಡೆದುವು.

ಆ ಮಂಗಳ ಮುಹೂರ್ತದಲ್ಲಿ ಮಂಗಳವಾದ್ಯಗಳನ್ನು ಮೃದುವಾಗಿ, ಮನೋಹರವಾಗಿ, ಮಂಜುಳ ವಾಗಿ ಭಾರಿಸಿ ಧ್ವನಿ ಮಾಡಿದರು. ಮುತ್ತೈದೆಯರು ಮಂಗಳಕರವಾದ ಶೋಭಾನ ಹಾಡುಗಳನ್ನು ಹಾಡುತ್ತ ಮದುವೆಗೆ ಕಳೆಯೇರುವಂತೆ ಮಾಡಿದರು. ಗಂಡು ಹೆಣ್ಣು ರತಿಮನ್ಮಥರಂತೆ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದರು. ಮಕ್ಕಳಿಗೆ ಸಂಭ್ರಮವೋ ಸಂಭ್ರಮವಾಗಿ ಹೋಯ್ತು. ಅವರು ಇಂಥ ಅದ್ದೂರಿಯ ಮದುವೆಯನ್ನು ಎಂದೂ ನೋಡಿಯೂ ಇರಲಿಲ್ಲ. ಕೇಳಿಯೂ ಇರಲಿಲ್ಲ. ಈ ಸಂದರ್ಭಕ್ಕಾಗಿ ಹೆಣ್ಣಿನ ಹೃದಯ ಅದೆಷ್ಟು ಕನಸುಗಳನ್ನು ಕಂಡಿತ್ತೋ? ಅದೆಷ್ಟು ಹಿಗ್ಗಿನಿಂದ ಆ ಮಂಗಳ ಮುಹೂರ್ತಕ್ಕೆ ಕ್ಷಣವೊಂದು ಯುಗವಾಗಿ ಕಾಯುತ್ತಿತ್ತೋ? ಅವಳ ಹೃದಯದ ಹಿಗ್ಗನು ಅಳಿಯುವವರಾರು? ಅವಳ ಹೃದಯದಲ್ಲಿ ಮಿಡಿಯುತ್ತಿರುವ ಭಾವನೆಗಳನ್ನು ಹಿಡಿದಿಡುವಷ್ಟು ಶಬ್ದ ಸಾಮಗ್ರಿಗಳು ಯಾವ ಕವಿ ಸಾಮ್ರಾಟನಲ್ಲಿವೆ ?

ನೆರೆದಿದ್ದವರೆಲ್ಲರೂ ಚಿರೋಟಿ, ಹೋಳಿಗೆ, ಲಾಡು, ಪಾಯಸ, ಚಿತ್ರಾನ್ನ, ಮೊಸರನ್ನ, ಹಣ್ಣುಹಂಪಲು ಇತ್ಯಾದಿ ಭಕ್ಷ್ಯ ಭೋಜ್ಯಗಳ ಔತಣವನ್ನು ಗಡದ್ದಾಗಿ ಉಂಡರು. ಆಳುಕಾಳುಗಳೆಲ್ಲ ತಿಂದು ಕುಡಿದು ತಣಿದು ತೇಗುತ್ತಾ ಹೋದರು.ಮದುವೆಯ ಭೋಜನದಿಂದ ಸಂತೃಪ್ತರಾದ ಡಾ॥ರಾಮು ಡಾ॥ಶೀಲ ಕೂಡ ಮದುಮಗಳಿಗೂ, ಮದುಮಗನಿಗೂ ಉಡುಗೊರೆ ನೀಡಿ, ಶುಭ ಹಾರೈಸಿ ಬೆಂಗಳೂರಿಗೆ ಹೊರಟು ನಿಂತಾಗ ಬಹುದೂರದಿಂದ ಬಂದಿದ್ದ ಡಾ॥ರಾಮು, ಡಾ॥ಶೀಲರಿಗೆ, ಡಾ॥ವ್ಯಾಸರಾಯರು ಮತ್ತು ಕುಟುಂಬದವರೆಲ್ಲರೂ ಕೂಡಿ ಕೃತಜ್ಞತೆ ವ್ಯಕ್ತಪಡಿಸಿದರು. ಅವರನ್ನು ಇನ್ನೂ ನಾಲ್ಕು ದಿನ ತಮ್ಮ ಎಸ್ಟೇಟ್‌ನಲ್ಲಿ ತಂಗಿದ್ದು ಅತಿಥಿ ಸತ್ಕಾರ ಸ್ವೀಕರಿಸಬೇಕೆಂದು ಒತ್ತಾಯಿಸಿದರು.

ಹಾಸ್ಪಿಟಲ್‌ನಿಂದ ತೆಗೆದುಕೊಂಡ ರಜಾ ನಾಳೆಯೇ ಮುಗಿಯುವುದರಿಂದ ಅನಿವಾರ್ಯವಾಗಿ ತಾವು ಹೋಗಲೇಬೇಕೆಂದು ತಿಳಿಸಿ, ಕಾರಿನಲ್ಲಿ ಡಾ॥ರಾಮು ಡಾ॥ಶೀಲ ಕುಳಿತರು, ಗುಡ್‌ಬೈ ಹೇಳಿ ಕಾರು ಬೆಂಗಳೂರಿನತ್ತ ಹೊರಟಾಗ ಡಾ॥ವ್ಯಾಸರಾಯರು, ಡಾ॥ರಾಮು, ಡಾ॥ಶೀಲಳ ಕರ್ತವ್ಯ ನಿಷ್ಠೆಯನ್ನು ನೆನೆದು " ಕರ್ತವ್ಯವೇ ದೇವರು " (Duty is God) ಎಂದು ಉದ್ಗರಿಸಿದರು.

ಅದೇ ವೇಳೆಗೆ ಹಾಸ್ಟಲ್ ರೂಂ ಗಡಿಯಾರದ ಢಣ, ಢಣ ಎಂಬ ಶಬ್ಧ ಡಾ॥ಶೀಲಳನ್ನು ಎಚ್ಚರಗೊಳಿಸಿ ಪ್ರಜ್ಞಾಲೋಕಕ್ಕೆ ಕರೆತಂದಿತು. ಎಚ್ಚೆತ್ತ ಡಾ॥ಶೀಲ ವಿಸ್ಮಯ, ನಾಚಿಕೆ, ಆನಂದದಲ್ಲಿ ಮುಳುಗಿಹೋದಳು.

